೬. ವಿಟ್ಲದಿಂದ ಮಂಗಳೂರಿನವರೆಗೆ ವಿದ್ಯಾರ್ಥಿ, ವಿದ್ಯಾರ್ಥಿನಿಗಳಿಗೆ ರಸ್ತೆ ಸಾರಿಗೆ ಇಲಾಖೆಯವರು ರಿಯಾಯಿತಿ ಬಸ್ ಪಾಸ್ ಕೊಡುವಂತೆ ಒತ್ತಾಯ

ಶ್ರೀ ಎ. ರುಕ್ಮಯ್ಯ ಪೂಜಾರಿ(ವಿಟ್ಲ).—ಮಾನ್ಯ ಅಧ್ಯಕ್ಷರೇ, ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಯವರು ೪೦ ಕಿ.ಮಿ. ದೂರದವರೆಗೆ ಮಾತ್ರ ಪಾಸು ಕೊಡುತ್ತಾರೆ ಆದರೆ ಅದರಿಂದ ದೂರ ಹೋಗುವವರಿಗೆ ಇದರಿಂದ ಪ್ರಯೋಜನವಾಗುವುದಿಲ್ಲ. ಉದಾ : ಮಂಗಳೂರಿನಿಂದ ವಿಟ್ಲಕ್ಕೆ ಸುಮಾರು ೪೫ ಕಿ.ಮೀ. ದೂರವಿರುತ್ತದೆ. ವಿಟ್ಲ ಕೂಡಾ ನನ್ನ ಕ್ಷೇತ್ರದ ಕೇಂದ್ರವಾಗಿರುತ್ತದೆ, ಆದ್ದರಿಂದ ೪ ಯಾ ೫ ಕಿ.ಮೀ. ಗೆ ಟಿಕೇಟು ಕೊಡಬೇಕಾಗುತ್ತದೆ. ಮತ್ತು ಅದಕ್ಕೆ ೪೦ ಕಿ.ಮೀ ದೂರಕ್ಕಿಂತ ಜಾಸ್ತಿ ಹಣ ತರಬೇಕಾಗುತ್ತದೆ. ಆದ್ದರಿಂದ ಎಲ್ಲಾ ಮಕ್ಕಳಿಗೆ ಅನುಕೂಲವಾಗುವ ದೃಷ್ಟಿಯಿಂದ ಬಸ್ಸಿನ ರಿಯಾಯಿತಿ ದರವನ್ನು ೪೦ ಕಿ.ಮೀ. ನಿಂದ ೫೦ ಕಿ.ಮೀ. ವರೆಗೆ ಮುಂದುವರಿಸಬೇಕಾಗಿ ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್(ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ೪೦ ಕಿಲೋ ಮೀಟರ್ ದೂರ ಪ್ರಯಾಣಿಸುವ ವಿದ್ಯಾರ್ಥಿಗಳಿಗೆ ಮಾತ್ರ ರಿಯಾಯಿತಿ ದರದಲ್ಲಿ ಪಾಸುಗಳನ್ನು ಕೊಡಲಾಗುತ್ತಿದೆ. ಈ ರೀತಿಯ ರಿಯಾಯಿತಿಯಿಂದ ಸಂಸ್ಥೆಯು ಈಗಾಗಲೇ ಸಾಕಷ್ಟು ನಷ್ಟವನ್ನು ಅನುಭವಿಸುತ್ತಿದೆ. ಮಾನ್ಯ ಸದಸ್ಯರು ಕೇಳಿರುವಂತೆ ೫೦ ಕಿಲೋ ಮೀಟರ್ ದೂರದವರೆಗೆ ರಿಯಾಯಿತಿಯನ್ನು ವಿಸ್ತರಿಸಿದರೆ ಕರ್ನಾಟಕ ರಾಜ್ಯದ ಎಲ್ಲಾ ಊರುಗಳಿಗೂ ಈ ರೀತಿಯ ರಿಯಾಯಿತಿಯನ್ನು ಕೊಡಬೇಕಾಗುವುದು. ಆದುದರಿಂದ ಸಂಸ್ಥೆಯು ಇನ್ನೂ ಹೆಚ್ಚು ನಷ್ಟವನ್ನು ಅನುಭವಿಸಬೇಕಾಗುತ್ತದೆ.

ಈಗ ಕೊಟ್ಟಿರುವ ೪೦ ಕಿಲೋಮೀಟರ್ ಮಿತಿ ಶಾಲಾ ಕಾಲೇಜುಗಳಿಗೆ ಹೋಗುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಿರುತ್ತದೆ, ಏಕೆಂದರೆ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ೪೦ ಕಿಲೋ ಮೀಟರ್ ಮಿತಿಯೊಳಗೆ ಶಾಲಾ ಕಾಲೇಜುಗಳು ಇರುತ್ತವೆ ಮತ್ತು ಬಹುತೇಕ ಸ್ಥಳಗಳಲ್ಲಿ ಕಿರಿಯ ಕಾಲೇಜುಗಳು ಮತ್ತು ಹಿರಿಯ ಕಾಲೇಜುಗಳು ಸಹ ಇರುವುದರಿಂದ ಈಗ ಕೊಟ್ಟಿರುವ ೪೦ ಕಿಲೋ ಮೀಟರ್ ಮಿತಿಯು ಸೂಕ್ತವೆಂದು ಕಂಡು ಬರುತ್ತದೆ.

ಆದುದರಿಂದ, ದೂರದ ಮಿತಿಯನ್ನು ವಿಸ್ತರಿಸಲು ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.—ಶ್ರೀ ಪಿ. ಸಿ. ಸಿದ್ದನಗೌಡರ್.

(ಶ್ರೀ ಪಿ. ಸಿ. ಸಿದ್ದನಗೌಡರ್‌ರವರು ಗೈರುಹಾಜರು)

ವಿತ್ತೀಯ ಕಾರ್ಯ ಕಲಾಪಗಳು

೧೯೯೦-೯೧ನೇ ಸಾಲಿನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ

ಸಮಾಜ ಕಲ್ಯಾಣ, ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗಳು

ಅಭಿಯಾಚನೆ ಕ್ರಮಾಂಕ ೬–ಗಣಿಗಳು ಮತ್ತು ಭೂವಿಜ್ಞಾನ

† ಶ್ರೀ ಬಿ. ಶಿವಣ್ಣ (ಗಣಿ ಮತ್ತು ಭೂವಿಜ್ಞಾನ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರು) :—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೪೨,೬೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತಾ ನಾನು ಬೇಡಿಕೆಯನ್ನು ಸಭೆಯ ಮುಂದೆ ಚರ್ಚೆಗೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ ೬೦—ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦೨,೦೮,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೫೯,೨೫.೦೦೦ ರೂ.ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತಾ ನಾನು ಬೇಡಿಕೆಯನ್ನು ಸಭೆಯ ಮುಂದೆ ಚರ್ಚೆಗೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ ೬೧—ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨೩,೫೦,೫೮,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತಾ ನಾನು ಬೇಡಿಕೆಯನ್ನು ಸಭೆಯ ಮುಂದೆ ಚರ್ಚೆಗೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸಲಾಯಿತು.

† ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆ ಮತ್ತು ಗಣಿ. ಭೂವಿಜ್ಞಾನ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸಚಿವರು ಈ ಸದನದ ಒಪ್ಪಿಗೆಯನ್ನು ಪಡೆಯಲಿಕ್ಕೆ ಎಂದು ಹೇಳಿ ನಮ್ಮ ಮುಂದೆ ಬಂದಿದ್ದಾರೆ. ಈ ಸಂದರ್ಭದಲ್ಲಿ ನಾನು ಈ ಇಲಾಖೆಯ ಕಾರ್ಯ ವೈಖರಿಯ ಬಗ್ಗೆ ಕೆಲವು ಮಾತುಗಳನ್ನು ಹೇಳಲಿಕ್ಕೆ ಬಯಸಿ ಕೆಲವು ಸಲಹೆಗಳನ್ನು ಸಹಿತ ಸರ್ಕಾರದ ಗಮನಕ್ಕೆ ನಾನು ತರಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಒಂದೆರಡು ವಿಷಯಗಳಲ್ಲಿ ಈ ಸರ್ಕಾರ ಎಡವಿದೆ ಎಂದು ಹೇಳಿ ನನಗಾದರೂ ಅನಿಸುತ್ತದೆ. ಮೊದಲನೆಯದಾಗಿ ಈ ಇಲಾಖೆ ಒಂದು ಬಹಳ ಮಹತ್ವದ ಇಲಾಖೆ. ೮೦ ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರತಕ್ಕಂಥ ಒಂದು ಜನಗಳ ಆಗುಹೋಗುಗಳನ್ನು ತೀರ್ಮಾನ ಮಾಡತಕ್ಕಂಥದ್ದು ಈ ಸಮಾಜಕಲ್ಯಾಣ ಇಲಾಖೆ. ಶೇಕಡ ೨೦ರಷ್ಟು ಜನಸಂಖ್ಯೆ ಅಂದರೆ ನಮ್ಮ ರಾಜ್ಯದಲ್ಲಿ ಹರಿಜನರು ಮತ್ತು ಗಿರಿಜನ ವರ್ಗದವರು ಇವತ್ತಿನ ಅಂಕಿಅಂಶಗಳ ಪ್ರಕಾರವಾಗಿ ಇದ್ದಾರೆ. ಆದರೆ ಈ ಒಂದು ಇಲಾಖೆಗೆ ಒಂದು ದೊಡ್ಡ ಶಾಪ ಇದ್ದ ಹಾಗೆ ಕಾಣುತ್ತದೆ. ಅದೇನೆಂದರೆ this is the most neglected Department. ಯಾರಾದರು ಒಬ್ಬ ಅಧಿಕಾರಿ ನಾವು ಹೇಳಿದ ಹಾಗೆ ಕೇಳಲಿಲ್ಲ, ಅಥವಾ ಯಾರಾದರು ಒಬ್ಬ ಅಧಿಕಾರಿ ಸರಿಯಾಗಿ ಕೆಲಸ ಮಾಡಲಿಲ್ಲವೆಂದರೆ ಅವನನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಹಾಕಿಬಿಡಿ ಎಂದು ಹೇಳುತ್ತಾರೆ. ಬೇಕಾದರೆ ೪೦ ವರ್ಷಗಳ ರೆಕಾರ್ಡ್‌ಗಳನ್ನು ತೆಗೆದು ನೋಡಿ. ಇದನ್ನು ನಾವು ನೀವು ಮಾಡಿರತಕ್ಕಂಥದ್ದು ಅಲ್ಲ ಏಕೆಂದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಮಿನಿಸ್ಟರ್ ಹರಿಜನ–ಗಿರಿಜನದವರೇ ಆಗಬೇಕು ಎನ್ನತಕ್ಕಂಥ ಪದ್ಧತಿಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಈ ಇಲಾಖೆಯನ್ನು ಕೊಟ್ಟ ತಕ್ಷಣ ಸಾರ್ವಜನಿಕವಾಗಿ ಶಿವಣ್ಣನವರು ಬಹಳ ನೆಗ್ಲೆಕ್ಟೆಡ್ ಮಿನಿಸ್ಟರ್ ಅವರಿಗೆ ಈ ಸರ್ಕಾರದಲ್ಲಿ ಏನು ಮಹತ್ವ ಇಲ್ಲವೇನೋ ಎನ್ನುವ ಭಾವನೆ ಜನರಲ್ಲಿ ಬರುತ್ತದೆ. ಇನ್ನು ಕಾರ್ಯದರ್ಶಿಗಳ ಬಗ್ಗೆ ಇತ್ತೀಚೆಗೆ ಒಂದು ತೀರ್ಮಾನ ಬದಲಾವಣೆ ಮಾಡಿದ ಹಾಗೆ ಕಾಣುತ್ತದೆ. ಈಗ ಇರತಕ್ಕಂಥ ಕಾರ್ಯದರ್ಶಿಗಳು ಬಹುಶಃ ಅವರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು ಅಲ್ಲ ಎಂದು ನಾನು ತಿಳಿದಿದ್ದೇನೆ. ಅದೊಂದೇ ಒಳ್ಳೆಯ ಕೆಲಸವನ್ನು ನೀವು ಮಾಡಿರುವುದು. ಆದರೆ ದುರ್ದೈವದಿಂದ ಈ ನಲವತ್ತು ವರ್ಷಗಳ ಕಾಲದಲ್ಲಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಡೈರೆಕ್ಟರ್, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಸೆಕ್ರೆಟರಿ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಮಂತ್ರಿಗಳು ಇವರೆಲ್ಲರೂ ಸಹಿತ ಅದೇ ವರ್ಗದ ಜನ ಮತ್ತು ಅದೇ ವರ್ಗಕ್ಕೆ ಸೇರಿರುತ್ತಾರೆ. ಮತ್ತೆ ಈ ನಲವತ್ತು ವರ್ಷಗಳಲ್ಲಿ ಆಗಿರತಕ್ಕಂಥ ಸಾಧನೆಯನ್ನು ವೀಕ್ಷಣೆ ಮಾಡಿ ನೋಡಿದರೆ ನಮ್ಮ ಕೈಗೆ

ಸಿಗುವುದು ಮಾತ್ರ ಸೊನ್ನೆ, ಮಾನ್ಯ ಬಸವಲಿಂಗಪ್ಪನವರು ಈ ಚರ್ಚೆಯ ಸಂದರ್ಭದಲ್ಲಿ ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ನಾನು ತಿಳಿದ ಹಾಗೆ ಆ ಜನಾಂಗದ ಬಗ್ಗೆ ಬಹಳ ಅನುಕಂಪವನ್ನು ಅವರು ವ್ಯಕ್ತಪಡಿಸುತ್ತಾರೆ. ಅವರೇ ಸ್ವತಃ ಈ ಡಿಪಾರ್ಟ್‌ಮೆಂಟನ್ನು ಕೇಳಿ ತೆಗೆದುಕೊಳ್ಳುತ್ತಾರೆ ಈ ಸರ್ಕಾರದಲ್ಲಿ ಎಂದು ನಾನು ತಿಳಿದುಕೊಂಡಿದ್ದೆ. ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಎಡವಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದೆ.

ವಿರೋಧಪಕ್ಷದಿಂದ ನಾವು ೨೪ ಜನ ಮತ್ತು ಜೊತೆಗೆ ೫-೬ ಜನ ಗೆದ್ದು ಬಂದಿದ್ದೇವೆ. ಬಹುತೇಕ ಈ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಗಳಿಗೆ ತೀರ ನಿರಾಶೆಯಾಗಿದೆ. ನೀವು ಆರು ತಿಂಗಳ ಕಾಲದಲ್ಲಿ ನಿಮ್ಮ ಸರ್ಕಾರ ಯಾವ ಹೆಜ್ಜೆಯನ್ನು ಇಡುತ್ತಿದೆ, ಇದರಿಂದ ಈ ವರ್ಗದ ಜನಗಳಿಗೆ ಸಮಾಧಾನವಾಗಿಲ್ಲ. ನಮ್ಮಲ್ಲಿ ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆ ಮಾತನ್ನು ಹೇಳುತ್ತಾರೆ, ಹಾಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಮುಟ್ಟದೆ ಇರತಕ್ಕಂಥ ಇಲಾಖೆ ಇಲ್ಲ. ಇದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಹೈಪವರ್ ಕಮಿಟಿ ಇದೆ. ಇದು ತಮಗೂ ಗೊತ್ತಿದೆ. ಕಳೆದ ಆರು ತಿಂಗಳ ಕಾಲದಲ್ಲಿ ಈ ಹೈಪವರ್ ಕಮಿಟಿ ಮೀಟಿಂಗ್ ಏನಾದರೂ ಆಗಿದೆಯೇ, ಒಂದು ಸಾರಿ ಏನಾದರೂ ಮೀಟ್ ಮಾಡಿದೆಯೇ ? ಒಂದು ಸಾರಿ ಮೀಟ್ ಮಾಡಿ ಈ ವರ್ಗದ ಜನಗಳ ಕಾರ್ಯಕ್ರಮಗಳು ಹೇಗೆ ಅನುಷ್ಠಾನಕ್ಕೆ ಬಂದಿದೆ, ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡಿದ್ದೀರ ? ಒಂದು ಸಾರಿ ರಿವ್ಯೂ ಮಾಡಿದ್ದೀರ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ಇದಕ್ಕೆ ಒಂದು ಕಮಿಟಿ ಮಾಡಿದ್ದೇವೆ, ನಾನು ನಿಮ್ಮನ್ನು ಬರೀ ವರ್ಗಾವಣೆಗಳನ್ನು ಮಾಡಿಕೊಂಡು ಕುಳಿತಿದ್ದೀರಿ ಎನ್ನತಕ ಂಥ ಮಾತನ್ನು ಹೇಳುವುದಿಲ್ಲ. ವರ್ಗಾವಣೆ ನಮ್ಮ ಕಾಲದಲ್ಲೂ ಮಾಡಿದ್ದೇವೆ, ನಿಮ್ಮ ಕಾಲದಲ್ಲೂ ಮಾಡಿದ್ದೀರಿ. ಆದರೆ ಈ ವರ್ಗಾವಣೆಯಲ್ಲಿ ಸಹ ಸಾಮಾಜಿಕ ನ್ಯಾಯವನ್ನು ಒದಗಿಸುವ ದೃಷ್ಟಿಯಿಂದಾಗಿ ಸಚಿವ ಸಂಪುಟದಲ್ಲಿ ಈ ವರ್ಗಕ್ಕೆ ಸೇರಿದ ನಾಲ್ಕು ಜನ ಮಂತ್ರಿಗಳಿದ್ದೀರಿ. ನೀವೆಲ್ಲಾ ಮುಖಂಡರುಗಳೇ. ಅದು ಹಿಂದುಳಿದ ವರ್ಗದವರು ಇರಬಹುದು, ಪರಿಶಿಷ್ಟ ಜಾತಿ ಜನಗಳು ಇರಬಹುದು ಪರಿಶಿಷ್ಟ ವರ್ಗದ ಜನಗಳು ಇರಬಹುದು. ಅವರಿಗೆ ನ್ಯಾಯವನ್ನು ಒದಗಿಸುವ ದೃಷ್ಟಿಯಿಂದಾಗಿ ನಾವು ಮಾಡಲಿಕ್ಕೆ ಆಗದೇ ಇರತಕ್ಕದ್ದನ್ನು ನೀವು ಏನಾದರೂ ಆರು ತಿಂಗಳಲ್ಲಿ ಮಾಡಿದ್ದೀರ ? ಖಂಡಿತ ಸಹ ಇಲ್ಲ. ಇವತ್ತು ನಾನು ಬಹಳ ದುಃಖದಿಂದ ಈ ಮಾತನ್ನು ಹೇಳುತ್ತೇನೆ. ಪರಿಶಿಷ್ಟ ಜಾತಿಗೆ ಸೇರಿರತಕ್ಕ ಒಬ್ಬ ದಕ್ಷ ಡಿಐಜಿ ಅಧಿಕಾರಿಯನ್ನು ಅಡೀಷನಲ್ ಎಸ್.ಪಿ. ಯಾಗಿ ಕೆಲಸ ಮಾಡತಕ್ಕಂಥ ಸ್ಥಾನಕ್ಕೆ ನೀವು ಅವರನ್ನು ಹಾಕಿದ್ದೀರಿ. ಇದನ್ನು ನೀವು ಏಕೆ ಪ್ರತಿಭಟನೆ ಮಾಡಲಿಲ್ಲ. ಕೇವಲ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಅಂದರೆ ಹಣವನ್ನು ಮಾರ್ಚಿ ತಿಂಗಳಲ್ಲಿ ಹಂಚತಕ್ಕಂಥ ಕಾರ್ಯಕ್ರಮ ಅಲ್ಲ, ಸಾಮಾಜಿಕ ನ್ಯಾಯವನ್ನು ಒದಗಿಸಲಿಕ್ಕೆ ಒಂದು ಪ್ರತಿಕ್ರಿಯೆ ರೂಪದಲ್ಲಿ ಕೆಲಸ ಮಾಡಿದರೆ ಸಾಧ್ಯವಾಗತಕ್ಕಂಥಾದ್ದು. ನಾವು ಆ ಕಡೆ ಕುಳಿತಿದ್ದಾಗ, ಈ ಕಡೆ ಇದ್ದಂಥ ನಿಮ್ಮ ಸ್ನೇಹಿತರುಗಳು ನಮ್ಮ ಕಾಲದಲ್ಲಿ ಬಹಳ ದೌರ್ಜನ್ಯಗಳು ಆಗುತ್ತಿವೆ ಎನ್ನತಕ್ಕಂಥ ದೊಡ್ಡ ಮಾತನ್ನು ಎಲ್ಲರೂ ಸಹಿತ ಹೇಳುತ್ತಿದ್ದಿರಿ. ನಾವು ಬಹಳ ಅನ್ಯಾಯ ಮಾಡಿದ್ದೇವೇನೋ ಎಂದು ಅನೇಕ ಸಾರಿ ಅನಿಸುತ್ತಿತ್ತು. ನಾನು ಬಿಚ್ಚು ಮನಸ್ಸಿನಿಂದ ನೊಂದ ಮನಸ್ಸಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇದು ಒಂದು ಸಾಮಾಜಿಕ ಸಮಸ್ಯೆ ಎಂಬುದನ್ನು ನಾವು ಮರೆತೆವು. ಇದಕ್ಕೆ ಒಂದು ರಾಜಕೀಯ ಲೇಪನವನ್ನು ಹಾಕಿಕೊಂಡು ಬಂದಿರಿ. ನೀವು ಅಧಿಕಾರಕ್ಕೆ ಬಂದು ೬ ತಿಂಗಳಾಗಿದೆ. ಈ ವರ್ಗದ ಜನಗಳ ಮೇಲೆ ದೌರ್ಜನ್ಯಗಳು ನಿಂತಿದೆಯೇ ಎಂದು ದಯವಿಟ್ಟು ತಿಳಿಸಿ. ತಮ್ಮ ಭಾಗದಲ್ಲಿ ದೌರ್ಜನ್ಯಗಳು ವಿಪರೀತವಾಗಿವೆ. ಆದ್ದರಿಂದ ಇವತ್ತು ಆ ಕಡೆ ಇರತಕ್ಕಂಥ ಅನೇಕ ಸದಸ್ಯರಿಗೆ ಮಾತನಾಡುವುದಕ್ಕೆ ಆಗುವುದಿಲ್ಲ. ಅದು ನನಗೆ ಗೊತ್ತಿದೆ. ಆಳಂದದಲ್ಲಿ ಹರಿಜನರ ಮೇಲೆ ದೌರ್ಜನ್ಯವಾಗಿದೆ. ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳೆರಡರ ಜೊತೆಯಲ್ಲಿ ಬಹಳ ಸಂಪರ್ಕ ಇಟ್ಟುಕೊಂಡಿರತಕ್ಕ ಮಂತ್ರಿಗಳು ತಾವು. ಆದರೆ ದೌರ್ಜನ್ಯಗಳು ನಿಂತಿದೆಯೇ ? ಕಡಿಮೆಯಾಗಿದೆಯೇ ಎನ್ನುವುದನ್ನು ದಯವಿಟ್ಟು ಹೇಳಿ. ಅಂತಹ ಒಂದು ವಾತಾವರಣ ನಿರ್ಮಾಣವಾಗಿದೆಯೇ ಎನ್ನುವುದನ್ನು ದಯವಿಟ್ಟು ಹೇಳಿ. ಆಳಂದದಲ್ಲಿ ಏನು ದೌರ್ಜನ್ಯದ ಪ್ರಕರಣ ಆಗಿತ್ತು ಅದೇ ತರಹದ ಪ್ರಕರಣ ಬಳ್ಳಾರಿಯ ಸಂಗನಕಲ್‌ನಲ್ಲಿ ನಡೆಯಿತು. ತಾವು ಸಚಿವರಾದ ತಕ್ಷಣ ಅಲ್ಲಿಗೆ ಹೋಗಿ ಬಂದಿದ್ದೀರಿ. ಅಲ್ಲಿ ಮನೆಗಳನ್ನು ಕಟ್ಟಿಸಲಿಕ್ಕೆ ಸಹ ತಾವು ಆಜ್ಞೆ ಮಾಡಿ, ಕೆಲಸ ಮಾಡಿಸುತ್ತಿದ್ದೀರಿ ಎಂದು ನನಗೆ ಕೇಳಿಬಂತು. ಅಲ್ಲಿಗೆ ನಾನೂ ಕೂಡ ಹೋಗಿ ಬಂದೆ. ಸಂಗನಕಲ್‌ನಲ್ಲಿ ನಿಜವಾಗಲೂ ಇಡೀ ಮಾನವ ಜನಾಂಗವೇ ತಲೆತಗ್ಗಿಸತಕ್ಕ ಕೆಲಸ ಆಗಿದೆ. ಆ ಘಟನೆಯನ್ನು ನೋಡಿದ ಮೇಲೆ ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೆಯೇ ಎಂದು ಅನಿಸುತ್ತದೆ, ಬಹಳ ನೋವಾಗುತ್ತದೆ. ಸುಮಾರು ೧೦೦ ಮನೆಗಳನ್ನು ಸಂಪೂರ್ಣವಾಗಿ ಸುಟ್ಟು

ಹಾಕಿದ್ದಾರೆ. ಗುಡಿಸಲುಗಳಲ್ಲ, ಮನೆಗಳನ್ನು ಸುಟ್ಟು ಹಾಕಿದ್ದಾರೆ. ಅದಕ್ಕೆ ಸರ್ಕಾರ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದೆ. ಆದ್ದರಿಂದ ಆಳಂದ ಮತ್ತು ಸಂಗನಕಲ್‌ನಲ್ಲಿ ನಡೆದಂಥ ಪ್ರಕರಣಗಳ ಬಗ್ಗೆ ಸರಿ ಅಥವಾ ತಪ್ಪು ಎಂದು ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ, ನಾನು ವಾದ ಮಾಡಬಾರದು. ಏಕೆಂದರೆ, ೧೮ನೇ ತಾರೀಖು ಉಪವಾಸ ಸತ್ಯಾಗ್ರಹ ಮಾಡುತ್ತೇವೆ ಎಂದು ನಾವು ಎಲ್ಲರೂ ಹೇಳಿದ್ದೆವು. ಆಗ ತಾವು ನ್ಯಾಯಾಂಗ ತನಿಖೆ ಮಾಡಲಿಕ್ಕೆ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದ್ದೇವೆಂದು ಹೇಳಿದಿರಿ, ತಾವು ಹೇಳಿದಂತೆ ನ್ಯಾಯಾಂಗ ತನಿಖೆಯ ವರದಿ ಹೊರಗಡೆ ಬರಲಿ, ಅದರ ಬಗ್ಗೆ ನಾನು ಈಗ ಮಾತನಾಡುವುದಿಲ್ಲ, ಆದರೆ ಈ ದೌರ್ಜನ್ಯಗಳಿಗೆ ಇತಿಶ್ರೀ ಹಾಡಲಿಕ್ಕೆ ಏನು ಪ್ರಯತ್ನ ಮಾಡಿದ್ದೀರಿ ಎನ್ನುವುದನ್ನು ದಯವಿಟ್ಟು ಹೇಳಿ. ಮಾನ್ಯ ಅಧ್ಯಕ್ಷರೆ, ತಮ್ಮ ಜಿಲ್ಲೆ ಬಗ್ಗೆ ಈಗಾಗಲೇ ತಮ್ಮ ಕಿವಿಗೆ ವಿಚಾರ ಬಿದ್ದಿರಬಹುದು ಕಾಡುಕೊತ್ತನಹಳ್ಳಿ ಪ್ರಕರಣದ ಬಗ್ಗೆ ನಾನು ಕಾಲಿಂಗ್ ಅಟೆನ್‌ಷನ್ ಕಳಿಸಿದ್ದೇನೆ. ಈ ಇಲಾಖೆ ಬಹಳ ದೊಡ್ಡದು ಇರುವುದರಿಂದ, ಸರ್ವವ್ಯಾಪಿಯಾಗಿರುವುದರಿಂದ ಇದರ ಬಗ್ಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಮಾನ್ಯ ಶಿವಣ್ಣನವರೇ, ಈ ಕಾಡುಕೊತ್ತನಹಳ್ಳಿಯಲ್ಲಿ ಪರಿಶಿಷ್ಟ ವರ್ಗದ ಜನ ಯಾರಿದ್ದಾರೆ ಅವರು ಭಯಭೀತರಾಗಿದ್ದಾರೆ. ಇವತ್ತು ಅವರ ಜೀವಕ್ಕೆ ಭಯ ಇದೆ. ನಮಗೆ ಗನ್ ಲೈಸೆನ್ಸ್ ಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ತಾವು ಅದರ ಬಗ್ಗೆ ಯೋಚನೆ ಮಾಡಬೇಕು. ನಡೆದಿರತಕ್ಕ ದೌರ್ಜನ್ಯಗಳ ಬಗ್ಗೆ ರಾಜಕೀಯ ಬೆರೆಸುವುದಕ್ಕೆ ನಾನು ತಯಾರಿಲ್ಲ. ಇದರಿಂದ ದೇಶಕ್ಕೆ ಮತ್ತು ಸಮಾಜಕ್ಕೆ ದೊಡ್ಡ ಶಾಪವಾಗುತ್ತದೆ. ಇದು ದೇಶದ ಭದ್ರತೆಯನ್ನೇ ಅಲ್ಲಾಡಿಸುವುದಕ್ಕೆ ಹೊರಟಿರತಕ್ಕ ಒಂದು ಶಾಪ ಇದು. ನಾನು ತಾವು ಏನೂ ಮಾಡಿಲ್ಲವೆಂದು ಟೀಕೆ ಮಾಡುವುದಿಲ್ಲ, ಮಾಡುವುದು ಅಷ್ಟು ಸುಲಭ ಕೂಡ ಅಲ್ಲ, ಆದರೆ ತಾವು ಯಾವ ದಿಕ್ಕಿನಲ್ಲಿ ಹೆಜ್ಜೆ ಹಾಕುತ್ತಿದ್ದೀರಿ ಎನ್ನುವುದಕ್ಕೆ ಈ ನಿದರ್ಶನ ಕೊಟ್ಟೆ. ಈ ಒಂದು ವರ್ಗದ ಜನರಲ್ಲಿ ಕಾನ್‌ಫಿಡೆನ್ಸ್ ಎಂಬುದನ್ನು ನಿರ್ಮಾಣ ಮಾಡಬೇಕಾಗಿದೆ. ನಿಮ್ಮ ಸಚಿವಾಲಯದಲ್ಲಿ ಎಷ್ಟು ಜನ ಎಸ್‌ಸಿ ಮತ್ತು ಎಸ್‌ಟಿ ಅಧಿಕಾರಿಗಳು ಇದ್ದಾರೆಂಬ ಬಗ್ಗೆ ವಿವರ ಕೊಡಿ. ರೆಗ್ಯೂಲರ್ ಡಿ.ಐ.ಜಿ. ಒಬ್ಬರನ್ನು ತೆಗೆದುಕೊಂಡು ಹೋಗಿ ಅಡಿಷನಲ್ ಎಸ್.ಪಿ. ರೇಂಜ್‌ಗೆ ಹಾಕಿದ್ದೀರಿ, ಎಲ್ಲಾ ನಾನ್–ಎಕ್ಸಿಕ್ಯೂಟೀವ್ ಪೋಸ್ಟ್‌ಗಳಿಗೆ ಈ ಒಂದು ವರ್ಗದ ಜನರನ್ನು ಹಾಕಿದ್ದೀರಿ ಎಂಬ ಗೂಬೆಯನ್ನು ಕೂರಿಸುವುದಕ್ಕೆ ಕೆಲವರು ಪ್ರಯತ್ನ ಮಾಡುತ್ತಿದ್ದಾರೆಂದು ನೀವು ಹೇಳುತ್ತೀರಿ, ಆದರೆ, ಅಂಕಿಸಂಖ್ಯೆಗಳನ್ನು ನೋಡಿದಾಗ, ಇದು ನಿಜವೇನೋ ಎಂದು ನಮಗೂ ಅನ್ನಿಸುತ್ತದೆ. ತಮ್ಮ ಗಮನಕ್ಕೆ ಮತ್ತೊಂದು ವಿಚಾರ ತರುವುದಾದರೆ, ಈ ಒಂದು ವರ್ಗಾವಣೆಯಲ್ಲಿ ಈ ಒಂದು ವರ್ಗದ ಜನ ಏನಿದ್ದಾರೆ, ತುಳಿತಕ್ಕೆ ಒಳಗಾದ ಜನ ಏನಿದ್ದಾರೆ, ಅವರನ್ನು ಹೇಗೆ ಮನೆಗಳಿಗೆ ಕಳಿಸಿದ್ದೀರಿ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಇತ್ತೀಚೆಗೆ ಒಬ್ಬ ಸ್ಪೆಷಲ್ ಡಿ.ಸಿ. ಯಾಗಿ ಟ್ರಾನ್ಸ್‌ಫರ್ ಆಗಿತ್ತು. ನಿಮ್ಮ ಸರ್ಕಾರ ಬಂದ ಮೇಲೆ, ಅವರ ಮೇಲೆ ಎನ್‌ಕ್ವೈರಿ ಮಾಡಿಸಿದ್ದೀರಿ. ಬೆಂಗಳೂರಿನಲ್ಲಿ ಸುಮಾರು ಒಂದು ಕೋಟಿಗೂ ಹೆಚ್ಚು ಹಣವನ್ನು ದುರುಪಯೋಗ ಮಾಡಿದ್ದಾರೆ, ಸರ್ಕಾರಕ್ಕೆ ನಷ್ಟ ಆಗಿದೆ ಎಂದು ಆಪಾದನೆ ಮಾಡಿ, ಎನ್‌ಕ್ವೈರಿ ಇನ್‌ಸ್ಟಿಟ್ಯೂಟ್ ಮಾಡಿದ್ದೀರಿ. ಇದರ ತನಿಖೆಯನ್ನು ಯಾರು ಮಾಡಬೇಕು ? ಎನ್‌ಕ್ವೈರಿ ಆಫೀಸರಾಗಿ ಯಾರನ್ನು ಪೋಸ್ಟ್ ಮಾಡಿದ್ದೀರಿ, ಯಾರೂ ತಪ್ಪಿತಸ್ಥ ಅಧಿಕಾರಿ ಇದ್ದರು, ಅಪರಾಧಿ ಇದ್ದರು ಅವರನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ. ಏಕೆ ? ಬೇರೆ ವರ್ಗದವರು ಆ ಜಾಗದಲ್ಲಿದ್ದರು ಎಂಬ ಕಾರಣದಿಂದಲೇ ? ಇದರ ಬಗ್ಗೆ ತಾವು ಉತ್ತರ ಕೊಡಬೇಕು. ಯಾರ ಹೆಸರಿನಲ್ಲಿ ತಾವು ಅಧಿಕಾರಕ್ಕೆ ಬಂದು ಕುಳಿತಿದ್ದೀರಿ, ಯಾರಿಗೆ ಸಹಾಯ ಮಾಡಬೇಕೆಂದು ಸಂಕಲ್ಪ ತೊಟ್ಟಿದ್ದೀರಿ, ಅವರಿಗೆ ನ್ಯಾಯ ಒದಗಿಸುವುದಕ್ಕೆ ತಾವು ಏನು ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಕಳೆದ ೪೦ ವರ್ಷಗಳಲ್ಲಿ ಈ ಒಂದು ವರ್ಗದವರಿಗೆ ಕೊಟ್ಟಿರತಕ್ಕ ಕಾರ್ಯಕ್ರಮಗಳು ಏನಿವೆ, ಅವು ಎಷ್ಟು ಮುಟ್ಟಿವೆ ಎಂಬುದರ ಬಗ್ಗೆ ಕೂಡ ವಿಚಾರ ಮಾಡಬೇಕಾಗಿದೆ. ನನಗನ್ನಿಸುತ್ತದೆ, ತಾವು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾದ ಮೇಲೆ ಈ ಇಲಾಖೆ ಬಗ್ಗೆ ತಾವು ಜಿಲ್ಲಾವಾರು ರಿವ್ಯೂ ಮಾಡಿದ್ದೀರಿ ಎಂದು ನಾನು ಅಂದುಕೊಂಡಿಲ್ಲ. ನನಗೆ ಗೊತ್ತಿರುವ ಹಾಗೆ ಮಾಡಿಲ್ಲ. ತಾವು ಮಾಡಿದ್ದರೆ ದಯವಿಟ್ಟು ಅದನ್ನು ಹೇಳಿ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲವು ಇಲಾಖೆಗಳು ಇವೆ. ಈ ಇಲಾಖೆಗಳ ಹಣವೆಲ್ಲಾ ಮಾರ್ಚಿ ತಿಂಗಳಲ್ಲಿ ಖರ್ಚಾಗುತ್ತದೆ. ಅದೂ ಕೂಡ ಮಾರ್ಚಿ ಕೊನೇ ವಾರದಲ್ಲಿ ಖರ್ಚಾಗುತ್ತದೆ. ನಮ್ಮ ಅಧಿಕಾರಿಗಳು ವಾರದಲ್ಲಿ ೫ ದಿವಸ ಕೆಲಸ ಮಾಡುವುದು ಕಷ್ಟ. ೬ ಗಂಟೆ ಕೆಲಸ ಮಾಡತಕ್ಕಂಥಾದ್ದು ಇನ್ನೂ ಕಷ್ಟ, ಇದು ತಮಗೂ ಗೊತ್ತು. ಆದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಮಾರ್ಚಿ ಕೊನೇ ವಾರದಲ್ಲಿ ಅವರ ಮನೆಯಲ್ಲಿ ಒಂದು ಸಾವಾಗಿರಲಿ, ನೋವಾಗಿರಲಿ, ತೊಂದರೆಯಾಗಿರಲಿ ಇಲಾಖೆಗೆ ಬಂದು ೨೪ ಗಂಟೆ ಕೆಲಸ ಮಾಡಿ ಕೋಟ್ಯಾಂತರ ರೂಪಾಯಿಗಳ ಬಿಲ್‌ಗಳನ್ನು ಹಾಕಿ ಹಣವನ್ನು ಹಂಚಿ

ಕೊಳ್ಳುತ್ತಾರೆ. ಇದನ್ನು ತಡೆಗಟ್ಟಲಿಕ್ಕೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಏನು ತೆಗೆದು ಕೊಳ್ಳುವುದಕ್ಕಾಗಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಚೊಚ್ಚಲ ಭಾಷಣದಲ್ಲಿ ಈ ಸದನ ದಲ್ಲಿ ಮಾತನಾಡುವಾಗ ಅಡ್ಮಿನಿಸ್ಟ್ರೇಷನ್‌ನ್ನು ಟೋನಪ್ ಮಾಡುತ್ತೇವೆಂದು ಹೇಳಿದ್ದರು ಈ ರಾಜ್ಯ ದಲ್ಲಿ ಅಡ್ಮಿನಿಸ್ಟ್ರೇಷನ್ ಟೋನಪ್ ವಿಚಾರದಲ್ಲಿ ಹೇಳುವುದಾದರೆ, ವರ್ಗಾವಣೆಗಳಲ್ಲಿ ಆಗಿರತಕ್ಕ ಅನ್ಯಾಯ ಸಾಮಾಜಿಕವಾಗಿ ಆಗಿರುವಂತ ಅನ್ಯಾಯವನ್ನು ಸರಿಪಡಿಸಲಿಕ್ಕೆ ತಾವು ಏನು ಪ್ರಯತ್ನ ಮಾಡಿದ್ದೀರಿ. ಸಾಮಾಜಿಕ ನ್ಯಾಯ ಒದಗಿಸುವ ದಿಕ್ಕಿನಲ್ಲಿ ತಾವು ಹೋಗದೆ ಈ ಒಂದು ವಿಚಾರಕ್ಕೆ ಇತಿಶ್ರೀ ಹಾಡಿದ್ದೀರಿ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ತಮಗೆ ಗೊತ್ತಿದೆ, ವಿಶೇಷ ಘಟಕ ಯೋಜನೆಯಲ್ಲಿ ಯಾವ ಕಾರ್ಯಕ್ರಮಕ್ಕೋಸ್ಕರ ಎಂದು ಹಣ ಇಟ್ಟಿರುತ್ತೇವೆ ಆ ಒಂದು ಕಾರ್ಯಕ್ರಮಕ್ಕೆ ನಾವು ಹಣ ಖರ್ಚು ಮಾಡುವುದಿಲ್ಲ. ನನಗೆ ಜ್ಞಾಪಕವಿರುವಂತೆ ನಮ್ಮ ಮುಖ್ಯ ಮಂತ್ರಿಗಳು ನನ್ನನ್ನು ೬ ತಿಂಗಳು ಮಾತ್ರ ಈ ಇಲಾಖೆಯಲ್ಲಿಟ್ಟಿದ್ದರು.

೧-೦೦ ಪಿ. ಎಂ.

ಆಗ ಸೌತ್ ಕೆನರಾ ಜಿಲ್ಲೆಯಲ್ಲಿ ನಾನು ರಿವ್ಯೂ ಮಾಡಿದೆ. ಬಹಳ ಪ್ರಜ್ಞಾವಂತರು ಇರತಕ್ಕ ಜಿಲ್ಲೆ ಅದು ಅಲ್ಲಿಯ ಶಾಸಕರು, ಅಲ್ಲಿಯ ಮಂತ್ರಿಗಳು, ಅಲ್ಲಿಯ ಸಾಮಾನ್ಯ ಜನರು ಹೀಗೆ ಎಲ್ಲರೂ ಪ್ರಜ್ಞಾವಂತರು ಇರತಕ್ಕ ಜಿಲ್ಲೆಯಲ್ಲಿಯೇ ಈ ಸ್ಪೆಷಲ್ ಟ್ರೈಬ್ ಪ್ರೋಗ್ರಾಮ್‌ನಲ್ಲಿ ಇರತಕ್ಕ ಹಣ ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಏತಕ್ಕೆ ಉಪಯೋಗಿಸಿಕೊಂಡಿದ್ದಾರೆ ಅಂದರೆ ಅಲ್ಲಿರತಕ್ಕ ಅಧಿಕಾರಿಗಳಿಗೆ ವಾಹನ ಇಲ್ಲ ಎಂದು ಎಂಟು ವಾಹನಗಳನ್ನು ತೆಗೆದುಕೊಂಡಿದ್ದಾರೆ. ಇನ್ನು ಈ ಸ್ಪೆಷಲ್ ಕಾಂಪೋನೆಂಟ್ ಪ್ರೋಗ್ರಾಮ್ ದುಡ್ಡಿನಲ್ಲಿ ಎಷ್ಟೊಂದು ಏರ್‌ಕಂಡೀಷನ್ ರೂಮುಗಳು ಆಗಿವೆ, ಎಷ್ಟು ಕಾರ್‌ಪೆಟ್ ಗಳನ್ನು ಹಾಕಿಸಿಕೊಂಡಿದ್ದಾರೆ ಎಷ್ಟು ಸ್ಕ್ರೀನ್‌ಗಳನ್ನು ಹಾಕಿಸಿಕೊಂಡಿದ್ದಾರೆ, ಎಷ್ಟು ವೆಲ್‌ವೆಟ್ ಬಟ್ಟೆಗಳನ್ನು ಸೋಫಾ ಹಾಕಿಕೊಂಡಿದ್ದಾರೆ, ಎಂಬ ಬಗ್ಗೆ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಯಾವರೀತಿ ಕೆಲಸ ಮಾಡಬೇಕು ಅದನ್ನು ಹೇಳುವುದಾದರೆ, ನಗರಸಭೆಗಳಲ್ಲಿ ೧೮ ಪರ್ಸೆಂಟ್ ಹಣ ಖರ್ಚುಮಾಡಬೇಕೆಂದು ಕಾನೂನು ಇದೆ. ಪುರಸಭೆಗಳಲ್ಲಿ ೧೮ ಪರ್ಸೆಂಟ್ ಖರ್ಚುಮಾಡಬೇಕೆಂದು ಕಾನೂನು ಇದೆ. ವಿಶ್ವವಿದ್ಯಾನಿಲಯಗಳಲ್ಲಿ ರೋಸ್ಟರ್ ಸಿಸ್ಟಮ್ ಇಂಪ್ಲಿಮೆಂಟ್ ಆಗಿದೆಯೇ, ಇಲ್ಲವೇ ಅದನ್ನು ನೋಡುವವರು ನೀವೇ ಆಗಿದ್ದೀರಿ. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಇದು ಒಂದುಕಡೆ ಆಯಿತು. ಸರ್ಕಾರದ ಬೋರ್ಡ್‌ಗಳು, ಕಾರ್ಪೊರೇಷನ್‌ಗಳನ್ನು ನೋಡಿದರೆ ನಾವೆಲ್ಲರೂ ತಲೆ ತಗ್ಗಿಸತಕ್ಕ ವಿಚಾರ. ನಾವು ಆರು ವರ್ಷಗಳ ಕಾಲ ಇದ್ದೆವು. ತಾವು ೨೫ವರ್ಷ ಇದ್ದೀರಿ ಆದರೆ ಈ ವರ್ಗದ ಜನರಿಗೆ ನ್ಯಾಯ ಸಿಕ್ಕಿದೆಯೇ ಅಂದರೆ, ಖಂಡಿತ ಸಿಕ್ಕಿಲ್ಲ. ತಮಗೆ ಹೇಳತ್ತೇನೆ. ಈ ನಗರಸಭೆ ಮತ್ತು ಪುರಸಭೆಯ ೧೮ ಪರ್ಸೆಂಟ್ ಹಣದಲ್ಲಿ ಮಾರ್ಚಿಯಲ್ಲಿ ತಪ್ಪಲೆ, ಚೆಂಬು ಹಂಚತಕ್ಕ ಕಾರ್ಯಕ್ರಮ ನಡೆಯುತ್ತದೆ. ಇದರಿಂದ ಯಾರಿಗೆ ಅನುಕೂಲವಾಗುತ್ತದೆ ಅಂದರೆ. ಕಂಟ್ರಾಕ್ಟ್‌ದಾರರು ಮತ್ತು ಅದನ್ನು ಎತ್ತಿಕೊಂಡು ಹೋಗುವವನಿಗೆ ಅನುಕೂಲವಾಗುತ್ತದೆ. ಇದನ್ನು ಹೇಗೆ ಹಂಚುತ್ತಾರೆ ಅಂದರೆ, ಒಂದು ಸಾರಿ ಹಂಚಿಕೆ ಆದಮೇಲೆ ಮತ್ತೆ ಅದನ್ನು ವಾಪಸ್ಸು ತೆಗೆದುಕೊಂಡು ಹೋಗು ತ್ತಾರೆ. ಇದನ್ನು ನಾನು ೬ ತಿಂಗಳಲ್ಲಿ ರಿವ್ಯೂ ಮಾಡಿದ್ದೇನೆ. ೧೭೦ ಪುರಸಭೆಗಳ ಪೈಕಿ ೬ ಕಾರ್ಪೊರೇಷನ್‌ಗಳ ಪೈಕಿ ಬಹುತೇಕ ನಗರಸಭೆ ಪುರಸಭೆಗಳನ್ನು ನಾನು ರಿವ್ಯೂ ಮಾಡಿದ್ದೇನೆ. ಇವುಗಳಲ್ಲಿ ೧೮ ಪರ್‌ಸೆಂಟ್ ಇಟ್ಟಿರತಕ್ಕ ಹಣವನ್ನು ಸರಿಯಾಗಿ ಖರ್ಚು ಮಾಡಲಿಕ್ಕೆ ಆಗಿಲ್ಲ. ಇದು ಒಂದು ಅಂದರೆ ಮತ್ತೊಂದು ವಿಷಯ ಅಂದರೆ ವಿಶ್ವವಿದ್ಯಾನಿಲಯಗಳ ರಿಸರ್ವೇಷನ್ ಬಗ್ಗೆ ಹೇಳಬೇಕಾಗುತ್ತದೆ ಮಾನ್ಯ ಕೆ ಹೆಚ್. ರಂಗನಾಥ್ ಅವರು ಸರ್ಕಾರದ ಶಿಕ್ಷಣ ಮಂತ್ರಿಗಳಾಗಿ ಕೊಟ್ಟಿರತಕ್ಕಂಥ ಉತ್ತರವನ್ನು ತಮಗೆ ಕಳುಹಿಸಿಕೊಡುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಟೀಚಿಂಗ್ ಸ್ಟಾಫ್. ಎಸ್. ಸಿ ಎಸ್. ಟಿ, ಎಷ್ಟು ಜನ ಇದ್ದಾರೆ ಅಂದರೆ ೧೦.೬೩ ಪರ್‌ಸೆಂಟ್. ನಾನ್ ಟೀಚಿಂಗ್ ಸ್ಟಾಫ್ ಅಂದರೆ ಕಸ ಗುಡಿಸುವವರು ೧೨ ಪರ್‌ಸೆಂಟ್. ಕಸವನ್ನು ಗುಡಿಸಲಿಕ್ಕೂ ಈ ವರ್ಗದ ಜನರು ಸಿಕ್ಕುವುದಿಲ್ಲವೇ? ಅವರು ವಿಷವನ್ನು ಕುಡಿಯಬೇಕೇನು ? ಹಾಗೆಯೇ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಾನ್ ಟೀಚಿಂಗ್ ಸ್ಟಾಫ್ ೫ ಪರ್‌ಸೆಂಟ್ ಮಾತ್ರ ಈ ವರ್ಗದ ಜನರು ಇರುವಂತಾದ್ದು. ಇನ್ನು ಬೆಂಗಳೂರು ವಿಶ್ವವಿದ್ಯಾನಿಲಯ ತೆಗೆದುಕೊಂಡರೆ, ಟೀಚಿಂಗ್ ಸ್ಟಾಫ್ ೫ ಪರ್‌ಸೆಂಟ್, ನಾನ್ ಟೀಚಿಂಗ್ ಸ್ಟಾಫ್ ೮ ಪರ್‌ಸೆಂಟ್. ಇನ್ನು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಅದೇ ಗತಿ. ಟೀಚಿಂಗ್ ಸ್ಟಾಫ್ ೬ ಪರ್‌ಸೆಂಟ್ ನಾನ್ ಟೀಚಿಂಗ್ ಸ್ಟಾಫ್

೭ ಪರ್ಸೆಂಟ್ ಇದನ್ನು ಸರಿಮಾಡಬೇಕು. ಕಾಂಗ್ರೆಸ್ ಸರ್ಕಾರವಿದ್ದಾಗ ಒಬ್ಬೊಬ್ಬರೂ ಮಂತ್ರಿಗಳು ಹೋಗಿ ರೆವ್ಯೂ ಮಾಡಿರತಕ್ಕದ್ದು ಬಿಟ್ಟರೆ ಈ ವಿಶ್ವವಿದ್ಯಾನಿಲಯಗಳಲ್ಲಿ ರಿಸರ್ವೇಷನ್ ಸಿಸ್ಟಮ್ ಅನ್ನು ರೆವ್ಯೂ ಮಾಡಿರತಕ್ಕ ಮಂತ್ರಿಗಳೇ ಇಲ್ಲ. ನಾನು ರೆವ್ಯೂ ಮಾಡಿದ್ದೇನೆ. ಮತ್ತು ನಾನು ಇದ್ದಾಗ ಡೈರೆಕ್ಷನ್ ಕೂಡ ಕೊಟ್ಟಿದ್ದೇನೆ. ಇನ್ನು ಗುಲ್ಬರ್ಗ ಯೂನಿವರ್ಸಿಟಿಯಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಅದು ಒಂದು ಯೂನಿವರ್ಸಿಟಿಯನ್ನು ಬಿಟ್ಟರೆ ಬೇರೆ ಎಲ್ಲಿಯೂ ಸಹಿತ ಈ ಕೆಲಸ ಚೆನ್ನಾಗಿ ಆಗಿಲ್ಲ. ತಾವು ಈ ವರ್ಗದ ಜನರಿಗೆ ಪಂಗನಾಮ ಹಾಕಿದ್ದೀರಿ. ಆದ್ದರಿಂದ, ಇದನ್ನು ತಡೆಗಟ್ಟಲಿಕ್ಕೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಪುರಸಭೆ ಮತ್ತು ನಗರಸಭೆಗಳಲ್ಲಿ ಯಾವರೀತಿ ೧೮ ಪರ್ಸೆಂಟ್ ಹಣವನ್ನು ಖರ್ಚುಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರದಿಂದ ಹೋಗತಕ್ಕ ಡೈರೆಕ್ಷನ್ ಏನಿದೆ. ಈ ಡೈರೆಕ್ಷನ್ ಚೆನ್ನಾಗಿ ಇಲ್ಲ. ಸರಿಯಾಗಿಲ್ಲ. ಇದರಲ್ಲಿ ಬಹಳ ಗೊಂದಲ ಇದೆ. ಅಲ್ಲಿರತಕ್ಕ ಲೋಯರ್ ಲೆವೆಲ್ ಆಫೀಸರ್ಸ್ ಯಾವರೀತಿ ಬೇಕೋ ಆ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು. ಆದ್ದರಿಂದ, ತಾವು ಇದರ ಬಗ್ಗೆ ಹೊಸ ಗೈಡ್‌ಲೈನ್ಸ್ ಕಳುಹಿಸಿಕೊಟ್ಟು, ಯಾವರೀತಿ ಈ ಹಣವನ್ನು ಖರ್ಚುಮಾಡಬೇಕು ಏತಕ್ಕೋಸ್ಕರ ಖರ್ಚು ಮಾಡಬೇಕು ಎನ್ನುವುದನ್ನು ತಿಳಿಸಬೇಕು. ಅಸೆಟ್ ಕ್ರಿಯೇಟ್ ಮಾಡುವಂತಾದ್ದು ಆಗಬೇಕು. ಅದರ ಬಗ್ಗೆ ಒಂದು ಕಾನೂನು ಮಾಡಿ. ಈಗ ಯಾವ ನಗರಸಭೆ, ಯಾವ ಪುರಸಭೆಗಳಲ್ಲಿ ೧೮ ಪರ್ಸೆಂಟ್ ಹಣವನ್ನು ಖರ್ಚು ಮಾಡುವುದಿಲ್ಲ, ಅವರಿಗೆ ಶಿಕ್ಷೆ ಕೊಡತಕ್ಕ ಒಂದು ಕಾನೂನನ್ನು ತಾವು ಮಾಡಿ. ಅದನ್ನು ತಾವು ಮಾಡಬೇಕಾಗುತ್ತದೆ. ಆ ಒಂದು ವರ್ಗದ ಜನರಿಗೆ ನ್ಯಾಯ ಸಿಕ್ಕಬೇಕಾದರೆ ಆ ಕಾನೂನನ್ನು ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮಂಡಲ್‌ಪಂಚಾಯತ್ ಮತ್ತು ಜಿಲ್ಲಾಪರಿಷತ್‌ನಲ್ಲಿ ಸಹ ಈ ಬಗ್ಗೆ ಬಹಳ ದೊಡ್ಡ ಸಾಧನೆಯಾಗಿದೆ ಎಂದು ತಿಳಿದಿಲ್ಲ. ಗ್ರಾಮೀಣ ಅಭಿವೃದ್ಧಿ ಸಚಿವರು ಅವರ ಹೇಳಿಕೆಯನ್ನು ಕೊಟ್ಟಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲೂ ಸಹ ರೆವ್ಯೂ ಮಾಡುತ್ತೇನೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಸಾಧ್ಯವಾದರೆ ಕಾನೂನನ್ನು ಕೂಡ ಬದಲಾವಣೆ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಮಂಡಲ ಪಂಚಾಯತಿಯಲ್ಲಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಈ ವರ್ಗದ ಜನಗಳಿಗೆ ಆಗುತ್ತಿರತಕ್ಕಂತಹ ಅನ್ಯಾಯ ಏನು ಇದೆ. ಅದನ್ನು ಸರಿ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇನ್ನು ಈ ವರ್ಗದ ಜನಗಳಿಗೋಸ್ಕರ ಕೊಡತಕ್ಕಂತಹ ವಿದ್ಯಾರ್ಥಿ ವೇತನವನ್ನು ಅರ್ಧಕ್ಕರ್ಧ ಗುಳುಂ ಆಗುತ್ತಿದೆ. ಅವರಿಗೆ ತಲುಪುವುದೇ ಇಲ್ಲ. ಮಾಸ್ಟರ್‌ಗಳೇ ತಿಂದು ಹಾಕುತ್ತಾರೆ ಅದು ಸಾಲುವುದಿಲ್ಲವೆಂಬಂತೆ ಇನ್ಸ್‌ಪೆಕ್ಟರ್‌ಗಳು ಏಜಂಟಗಳೂ ಕೂಡ ಈ ಕೆಲಸ ಮಾಡುತ್ತಾರೆ. ದಯಮಾಡಿ ಈ ಹಣವನ್ನು ಆಯಾಯ ವಿದ್ಯಾರ್ಥಿಗಳಿಗೆ ಚೆಕ್ ಮೂಲಕ ಹೋಗತಕ್ಕಂತಹ ಸಿಸ್ಟಂ ಅನ್ನು ಜಾರಿಗೆ ತೆಗೆದುಕೊಂಡು ಬರಬೇಕು. ಖಾಸಗೀ ಶಾಲೆಗಳಾಗ ಬಹುದು ಇಲ್ಲವೇ ಸರಕಾರಿ ಶಾಲೆಗಳಿಗಾಗಬಹುದು ಯಾವುದಕ್ಕೇ ಆಗಲೀ ಇಂತಹ ಸಿಸ್ಟಂ ಅನ್ನು ಜಾರಿಗೆ ತೆಗೆದುಕೊಂಡು ಬನ್ನಿ ಈ ಹಣ ದುರುಪಯೋಗ ಹಾಗೂ ಲೂಟಿಯಾಗುತ್ತಿದೆ. ಇದನ್ನು ನೀವು ತಡೆಗಟ್ಟಬೇಕು. ಇನ್ನು ವಿದ್ಯಾರ್ಥಿ ವೇತನವನ್ನು ನಾವು ಅಧಿಕಾರದಲ್ಲಿದ್ದಾಗ ಹೆಚ್ಚು ಮಾಡುತ್ತೇವೆಂದು ಹೇಳಿದ್ದೆವು. ನೀವು ೨೫ ರೂಪಾಯಿಗಳು ಹೆಚ್ಚು ಮಾಡಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಅದು ಸಾಕಾಗುವುದಿಲ್ಲ ಎನ್ನುವುದು ತಮಗೂ ಗೊತ್ತಿರತಕ್ಕಂತಹ ವಿಚಾರ. ಇದನ್ನು ಇನ್ನೂ ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಿ. ಮಾನ್ಯ ಶಿವಣ್ಣನವರೇ ತಾವು ಹಿಂದೆ ಕೂಡ ಮಂತ್ರಿಗಳಾಗಿದ್ದಿರಿ. ನಾನು ನಿಮ್ಮ ಜಿಲ್ಲೆಗೆ ಹೋಗಿ ರೆವ್ಯೂ ಮಾಡಿದ್ದೇನೆ ತಮ್ಮ ಜಿಲ್ಲೆಯಲ್ಲಿ ಸಾಕಷ್ಟು ವಿದ್ಯಾರ್ಥಿ ನಿಲಯಗಳು ಅಲ್ಲಿ ಇಲ್ಲ, ರಾಯಚೂರಿನ ಸಿಂಧನೂರಿನ ಒಂದು ಹಾಸ್ಟೆಲ್‌ನಲ್ಲಿ ೧೦೦-೧೫೦ ಜನ ಒಳ್ಳೆ ಪ್ರಾಣಿಗಳ ರೀತಿ ಅಲ್ಲಿ ಇದ್ದಾರೆ. ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಲಿಕ್ಕೆ ಏನು ದುಡ್ಡನ್ನು ಇಟ್ಟಿದ್ದೀರಿ. ಅದು ಏನೇನೂ ಸಾಲದು ತಮ್ಮ ವರದಿಯ ಪ್ರಕಾರ ಏನು ಇಟ್ಟಿದ್ದೀರಿ ಅದು ಯಾವ್ಯಾವುದಕ್ಕೂ ಸಾಕಾಗುವುದಿಲ್ಲ. ಇದಕ್ಕೆ ವಿಶೇಷವಾದಂತಹ ಯೋಜನೆಯನ್ನು ಹಾಕಿಕೊಳ್ಳಬೇಕು. ಮುಖ್ಯವಾಗಿ ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿಸಬೇಕಾಗುತ್ತದೆ. ಮುಖ್ಯವಾಗಿ ಆಗಬೇಕಾಗಿರತಕ್ಕಂಥಾದ್ದು ಹಾಸ್ಟೆಲ್‌ಗಳು ಜೊತೆಗೆ ಬೋರ್ಡಿಂಗ್ ಫೀಸ್ ಅನ್ನು ಹೆಚ್ಚು ಮಾಡುವುದರ ಜೊತೆಗೆ ಹುಡುಗರ ಶಿಕ್ಷಣಕ್ಕೆ ಏನಾದರೂ ಅನುಕೂಲವಾಗಬೇಕೆಂದು ಇದ್ದರೆ ಮತ್ತು ಆ ಪರಿಸರದಲ್ಲಿ ಏನಾದರೂ ಬದಲಾವಣೆಯಾಗಬೇಕೆಂದರೆ ಮೊದಲು ಕಟ್ಟಡಗಳನ್ನು ಕಟ್ಟಿಸುವಂತಹ ಕೆಲಸವನ್ನು ಮಾಡಬೇಕು. ಇದಕ್ಕೋಸ್ಕರ ವಿಶೇಷವಾದ ಯೋಜನೆ ಹಾಕಿಕೊಳ್ಳಬೇಕೆಂದು ವಿನಂತಿಸುತ್ತೇನೆ. ಇನ್ನು ಆಶ್ರಮ ಶಾಲೆಗಳು ಇವತ್ತು ಚೆನ್ನಾಗಿ ಕೆಲಸ ಮಾಡುತ್ತಿವೆ. ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳನ್ನು ಸೇರಿಸುವುದರಿಂದ ಅವರಿಗೆ ಅನುಕೂಲವಾಗುತ್ತದೆ ಅಲ್ಲಿ ೭-೮ ವರ್ಷಗಳ ಕಾಲ ಶಿಕ್ಷಣವನ್ನು ಕೊಡುತ್ತಾರೆ. ಆದರೆ ಅದನ್ನು ಹೆಚ್ಚು ಮಾಡುತ್ತೀರಾ. ಎಂದ್ರ

ನಾವು ಅಂದುಕೊಂಡಿದ್ದೆವು. ಆದರೆ ಅದನ್ನು ಹೆಚ್ಚು ಮಾಡಿಲ್ಲದಿರುವುದರಿಂದಾಗಿ ನಮಗೆ ಬಹಳ ನಿರಾಸೆಯಾಗಿದೆ, ಒಂದು ತಾಲ್ಲೂಕಿಗೆ ಒಂದರಂತೆ ಆಶ್ರಮ ಶಾಲೆಗಳನ್ನು ತೆರೆಯಬೇಕೆಂಬುದು ದಲಿತ ಸಂಘರ್ಷ ಸಮಿತಿಯವರ ಬೇಡಿಕೆ ಕೂಡ ಆಗಿದೆ. ಅದರಂತೆ ಈ ವರ್ಷವೇ ಮಾಡಬೇಕು. ಇದರಿಂದ ನಿಜಕ್ಕೂ ಈ ವರ್ಗದ ಜನರಿಗೆ ಹೆಚ್ಚು ಉಪಯೋಗವಾಗುತ್ತದೆ. ಇನ್ನು ನಿಮ್ಮ ವರದಿಯಲ್ಲಿ ಮಹಿಳೆಯರಿಗೆ ವೃತ್ತಿ ಶಿಕ್ಷಣ ತರಬೇತಿ ಬಗ್ಗೆ ಹೇಳಿದ್ದೀರಿ. ಇದರಲ್ಲಿ ತೆಂಗಿನ ನಾರಿನ ೭ ತರಬೇತಿ ಕೇಂದ್ರಗಳ ೬೦ ಹೊಲಿಗೆ ಯಂತ್ರಗಳ ತರಬೇತಿ ಕೇಂದ್ರಗಳು ಮತ್ತು ಒಂದು ಬಣ್ಣದ ಆಟಿಕ್ ತರಬೇತಿ ಕೇಂದ್ರ ಎಂದು ಮಾಡಿದ್ದೀರಿ. ತಾವು ಸಚಿವರಾದ ಮೇಲೆ ಇವುಗಳಲ್ಲಿ ಒಂದಕ್ಕಾದರೂ ಭೇಟಿ ನೀಡಿದ್ದೀರಾ? ನನ್ನ ಊಹೆ ಪ್ರಕಾರ ತಾವು ಎಲ್ಲಕ್ಕೂ ಭೇಟಿ ಮಾಡಿದ್ದೀರಿ ಎಂದು ನಾನು ಅಂದು ಕೊಂಡಿದ್ದೇನೆ. ಈ ವರದಿಯನ್ನು ತಾವೂ ಕೂಡ ಓದಿರುತ್ತೀರಿ. ಹೊಲಿಗೆ ಯಂತ್ರಗಳು ತರಬೇತಿ ಕೇಂದ್ರಗಳ ಪೈಕಿ ಹಾಗೂ ತೆಂಗಿನ ನಾರಿನ ಕೇಂದ್ರಗಳ ಪೈಕಿ ಶೇಕಡ ೯೦ ರಷ್ಟು ಕೆಲಸ ಮಾಡುವುದಿಲ್ಲ. ಕೇವಲ ಅಟೆಂಡೆನ್ಸ್ ರಿಜಿಸ್ಟರ್ ಮೇಲೆ ಹೆಸರುಗಳು ಇರುತ್ತವೆ. ಇದಕ್ಕೋಸ್ಕರ ೮೮–೮೯ರಲ್ಲಿ ೭೪.೮೨ ಲಕ್ಷ ಅಂದರೆ ಸುಮಾರು ಮುಕ್ಕಾಲು ಕೋಟಿಯನ್ನು ಇದಕ್ಕಾಗಿ ಖರ್ಚು ಮಾಡಿದ್ದೇವೆ. ಆದರೆ ಏನು ಉಪಯೋಗವಾಗುವುದಿಲ್ಲ. ಅವರು ಸಿದ್ಧಪಡಿಸಿದ ಬಟ್ಟೆಗಳನ್ನು ಹಾಕಿಕೊಳ್ಳುವವರು ಈ ದೇಶದಲ್ಲಿ ಯಾರು ಇದ್ದಾರೆ. ೧೦–೧೫ ವರ್ಷದ್ದು ನಾನು ಹೇಳುವುದಿಲ್ಲ ದಕ್ಷ ರಾಜ್ಯಪಾಲರ ಆಳ್ವಿಕೆ ಮತ್ತು ನಿಮ್ಮ ಸರಕಾರದ ೬ ತಿಂಗಳ ಆಳ್ವಿಕೆ ಅಂದರೆ ಒಟ್ಟು ೧೨ ತಿಂಗಳಲ್ಲಿ ತಾವು ಎಷ್ಟು ಹೊಲಿಗೆ ಯಂತ್ರಗಳನ್ನು ಹಂಚಿದ್ದೀರಿ, ಅವುಗಳ ಪೈಕಿ ಎಷ್ಟು ಯಂತ್ರಗಳು ಅಂಗಡಿಗಳಿಗೆ ವಾಪಸ್ ಬಂದಿದೆ ಎಷ್ಟು ಬಂದಿಲ್ಲ ಎಂಬುದನ್ನು ಲೆಕ್ಕಾಚಾರ ಹಾಕಿಸಿದರೆ ತಮಗೇ ಗೊತ್ತಾಗುತ್ತದೆ. ಇನ್ನು ನಾರು ಕೇಂದ್ರಗಳ ಬಗ್ಗೆ ಹೇಳುವುದಾದರೆ ಖಾಸಗಿಯಾಗಿ ನಾರು ಕೇಂದ್ರಗಳು ಸರಿಯಾಗಿ ಕೆಲಸ ಮಾಡುವುದು ಕಷ್ಟವಾಗಿದೆ. ಈಗಿರುವಂತಹ ತೆಂಗಿನ ನಾರು ಕೇಂದ್ರವೇ ಚೆನ್ನಾಗಿ ನಡೆದರೆ ಸಾಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆ, ತುಮಕೂರು ಜಿಲ್ಲೆ ಈ ಎರಡು ಕಡೆ ಇದರ ಉಪಯೋಗ ಒದಗಬಹುದು, ಅದನ್ನು ಬಿಟ್ಟರೆ ಇದು ಬಾಕಿ ಎಲ್ಲೂ ಕೂಡ ಉಪಯೋಗವಾಗುವುದಿಲ್ಲ.

ನಾರು ಸಿಕ್ಕದೇ ಇರತಕ್ಕ ಕಡೆಗಳಲ್ಲಿ ನಿಮ್ಮ ಇಲಾಖೆಯ ಅಧಿಕಾರಿಗಳು ನಾರಿನ ಕೇಂದ್ರಗಳನ್ನು ತೆರೆಯುತ್ತಿದ್ದಾರೆ. ನನ್ನ ಕ್ಷೇತ್ರದಲ್ಲೂ ಕೂಡ ಒಂದನ್ನು ಮಾಡಿದ್ದಾರೆ. ಬಹುಶಃ ನನ್ನ ಮನಸ್ಸಿಗೆ ಸಮಾಧಾನವನ್ನು ಮಾಡಬೇಕೆಂಬ ಉದ್ದೇಶದಿಂದ ಮಾಡಿದ್ದಾರೆಂದು ನನಗನಿಸುತ್ತದೆ. ಸ್ವಾಮಿ, ನಾನಾದರೂ ಹೇಳುತ್ತೇನೆ ಈ ನಾರಿನ ಕೇಂದ್ರಗಳನ್ನು ತೆರೆದಿರುವುದರಿಂದ ಮೂರು ಕಾಸಿನ ಉಪಯೋಗವೂ ಈ ಜನರಿಗೆ ಆಗುತ್ತಿಲ್ಲ. ಇದು ಅನ್ ಪ್ರೊಡಕ್ಟೀವ್ ಎಕ್ಸ್‌ಪೆಂಡೀಚರ್. ಆದ್ದರಿಂದ ಇದರ ಬದಲು ಪರ್ಯಾಯ ಯೋಜನೆಯನ್ನು ತಾವು ತಯಾರು ಮಾಡಬೇಕು. ಇವರು ಇನ್ನೂ ಒಂದು ಏನು ಹೇಳಿದ್ದಾರೆಂದರೆ, ''ಗೃಹ ನಿರ್ಮಾಣಕ್ಕೆ ಸಹಾಯಧನ ಎಂದು 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನ ಬೆಂಕಿ, ಪ್ರವಾಹ, ನೈಸರ್ಗಿಕ ಆಕಸ್ಮಿಕಗಳಲ್ಲಿ ಮನೆಗಳನ್ನು ಕಳೆದುಕೊಂಡವರಿಗೆ ಪುನರ್ವಸತಿಗೆ'' ಎಂದು ಇದೆ. ಈ ಪುನರ್‌ವಸತಿ ನಿರ್ಮಾಣಕ್ಕಾಗಿ ೧ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆಂದು ಹೇಳಿದ್ದೀರಿ. ನಾನಾದರೂ ಮಾನ್ಯ ಅಧ್ಯಕ್ಷರ ಮುಖಾಂತರ ಸಮಾಜ ಕಲ್ಯಾಣ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈ ಹರಿಜನ ಗಿರಿಜನರಿಗೆ ನೀವು ಏನಾದರೂ ಸಹಾಯವನ್ನು ಮಾಡಬೇಕೆಂದಿದ್ದರೆ ದಯವಿಟ್ಟು ಈ ರೀತಿ ಹಣ ಕೊಡುವುದಕ್ಕೆ ಹೋಗಬೇಡಿ. ಅವರಿಗೆ ಬೇಕಾಗಿರತಕ್ಕ ಮನೆಗಳನ್ನು ಕಟ್ಟಿಸಿಕೊಡಿ. ಈ ಜನರು ಬಹಳ ಕಷ್ಟಪಟ್ಟು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಇಡೀ ರಾಜ್ಯದಲ್ಲಿ ೧ ಕೋಟಿ ಇರತಕ್ಕ ಎಸ್. ಸಿ, ಎಸ್. ಟಿ, ಜನಗಳಿಗೆ ನೀವು ಕೇವಲ ೧ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರೆಂದರೆ ಒಬ್ಬೊಬ್ಬರಿಗೆ ಒಂದೊಂದು ರೂಪಾಯಿ ಕೂಡ ಬರುವುದಿಲ್ಲ. ಇದರಿಂದ ಅವರಿಗೆ ಏನು ಅನುಕೂಲ ಮಾಡಿಕೊಟ್ಟಂತಾಗುತ್ತದೆಂಬುದನ್ನು ನೀವೇ ಯೋಚನೆ ಮಾಡಿ. ತಮಗೇ ಗೊತ್ತಿರುವಂತೆ ಪ್ರತಿವರ್ಷ ಲಕ್ಷಾಂತರ ಗುಡಿಸಲುಗಳು ಈ ರಾಜ್ಯದಲ್ಲಿ ಸುಟ್ಟು ಹೋಗುತ್ತಿರುತ್ತವೆ. ಅವು ಸುಟ್ಟು ಹೋದಾಗ ಅವರಿಗೆಲ್ಲಾ ಪರಿಹಾರಧನ ಎಂದು ಕೊಡುತ್ತೀರಿ. ಆ ರೀತಿ ಕೊಡುವುದರಲ್ಲೂ ಕೂಡ ಸಾಕಷ್ಟು ಹಣ ಪೋಲಾಗುತ್ತದೆ. ನಾನು ತಮಗೆ ಹೇಳುತ್ತಿದ್ದೇನೆ, ಕೇವಲ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನ ಜನರು ಮಾತ್ರ ಈ ಗುಡಿಸಲುಗಳಲ್ಲಿ. ಇನ್ನೂ ಬೇರೆ ಬೇರೆ ಜಾತಿಯ ಜನರೂ ಕೂಡ ಇದೇ ರೀತಿ ಗುಡಿಸಲುಗಳಲ್ಲೇ ವಾಸ ಮಾಡುತ್ತಿದ್ದಾರೆ. ಅವರಿಗೆಲ್ಲಾ ಇನ್‌ಷ್ಯೂರೆನ್ಸ್ ಅನ್ನು ಮಾಡಿಸುವ ವ್ಯವಸ್ಥೆ ಮಾಡಿ. ಇದರಿಂದ ಎಲ್ಲ ಜಾತಿಯವರಿಗೂ ಬಹಳ ಉಪಕಾರವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ವಿಶೇಷ ಘಟಕ ಯೋಜನೆಯ ಬಗ್ಗೆ ಹೇಳುವುದಾದರೆ ಇದು ಸ್ಪೆಷಲ್ ಕಾಂಪೊನೆಂಟ್ ಸ್ಕೀಂ ಆಗಿದೆ. ಇದು ಇರತಕ್ಕದ್ದೇ ಕೆಲವರು ದುಡ್ಡನ್ನು ಹೊಡೆಯುವುದಕ್ಕೆ ಈ ಯೋಜನೆಯಲ್ಲಿ

ಕೋಟಿ ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿದ್ದಾರೆ. ಯಾವ ಜನರಿಗೆ ಈ ಯೋಜನೆಯ ಉಪಯೋಗ ಸಿಕ್ಕಬೇಕೋ ಅದು ಇವತ್ತು ಸಿಕ್ಕುತ್ತಿಲ್ಲ. ಈ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಪ್ರತಿವರ್ಷವೂ ಕೂಡ ಈ ಹಣವನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಕಾರ್ಪೊರೇಷನ್‌ನ ಮುಖಾಂತರ ಕೊಡಲಾಗುತ್ತಿದೆ. ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ. ಸ್ಪೆಷಲ್ ಕಾಂಪೊನೆಂಟ್ ಸ್ಕೀಂಗೋಸ್ಕರ ಎಸ್. ಸಿ, ಎಸ್. ಟಿ, ಕಾರ್ಪೊರೇಷನ್‌ನಿಂದ ಸುಮಾರು ೮–೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ, ಅದರಲ್ಲಿ ಅವರು ೧೦ ಸಾವಿರ ಬೋರ್‌ವೆಲ್‌ಗಳನ್ನು ಈ ವರ್ಗದ ಜನರಿಗೆ ಹಾಕಿದ್ದೇವೆ ಎಂದು ಹೇಳುತ್ತಾರೆ. ಇದು ತಮಗೂ ಗೊತ್ತಿದೆ, ಎಸ್.ಸಿ.,ಎಸ್.ಟಿ. ನವರಿಗೆ ಇರತಕ್ಕ ಜಮೀನು ಎಲ್ಲವೂ ಕೂಡ ಕೇವಲ ಖರಾಬು ಜಮೀನು. ಒಳ್ಳೆಯ ಜಾಗ ಎಂದರೆ ಎಲ್ಲೋ ಬೆಟ್ಟದಲ್ಲಿ ಸ್ವಲ್ಪ ಇರುತ್ತದೆ. ಖರಾಬು ಜಮೀನಿನಲ್ಲಿ ಇವರು ಬೋರ್ ಹಾಕುವುದಕ್ಕೆ ಹೋದರೆ ಇದರ ಹೆಸರಿನಲ್ಲಿ ಪಕ್ಕದ ಜಮೀನಿನವನು ಆ ಬೋರ್‌ನ್ನು ಹಾಕಿಸಿಕೊಂಡಿರತಕ್ಕ ಉದಾಹರಣೆ ಇವೆ. ತಮ್ಮ ನಿಯಮದ ಪ್ರಕಾರ ಒಂದು ಬೋರ್‌ನಿಂದ ಇನ್ನೊಂದು ಬೋರ್‌ಗೆ ೪೫೦ ಮೀಟರ್ ದೂರ ಇರಬೇಕೆಂದಿದೆ.........

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಿಂಧ್ಯರವರು ಹಿಂದೆ ಈ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದರು. ಅವರು ಬಹಳ ಆಸಕ್ತಿಯಿಂದ ಕೆಲಸ ಮಾಡಿದ್ದಾರೆ. ಆದರೆ ಹೆಚ್ಚಿಗೆ ದಿವಸ ಅವರು ಸಚಿವರಾಗಿರಲಿಲ್ಲ. ಏಕೆಂದರೆ ಅಷ್ಟರಲ್ಲಿ ಅವರ ಸರ್ಕಾರ ಹೋಯಿತು. ಈಗ ಅವರು ಬಹಳ ಪ್ರಾಮುಖ್ಯವಾದ ವಿಚಾರವನ್ನು ಹೇಳಿದ್ದಾರೆ. ಅದೂ ವಿಶೇಷ ಘಟಕ ಯೋಜನೆಯ ಬಗ್ಗೆ ಹೇಳಿದ್ದಾರೆ. ಅವರು ಸ್ಪಷ್ಟವಾದ ವಿವರವನ್ನು ಈ ಯೋಜನೆಗೆ ಸಂಬಂಧಿಸಿದಂತೆ ಕೊಟ್ಟರೆ ಅದರ ಪ್ರಕಾರ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಲು ಅನುಕೂಲವಾಗುತ್ತದೆ. ಈ ವಿಶೇಷ ಘಟಕ ಯೋಜನೆ ಪ್ರಾರಂಭವಾದುದ್ದು ದಿ॥ ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ. ದಲಿತರು ಯಾರಿದ್ದಾರೆ ಅವರಿಗೆ ಹೆಚ್ಚಿನ ಅನುಕೂಲವಾಗಲಿ ಎಂಬ ಉದ್ದೇಶದಿಂದ ಈ ವಿಶೇಷ ಘಟಕ ಯೋಜನೆಯನ್ನು ಜಾರಿಗೆ ತಂದು ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಆಸಕ್ತಿ ಮತ್ತು ಹಣವನ್ನೊದಗಿಸುವುದಕ್ಕೆ ಪ್ರಾರಂಭ ಮಾಡಿದರು. ಅವರ ಉದ್ದೇಶದ ಪ್ರಕಾರ ಈ ಕಾರ್ಯಕ್ರಮ ನಡೆದಿದ್ದರೆ ನಿಜವಾಗಿಯೂ ಈ ವರ್ಗದ ಜನರ ಅಭಿವೃದ್ಧಿ ಆಗುತ್ತಿತ್ತು. ವಿಶೇಷ ಘಟಕ ಯೋಜನೆಗೆ ಸಂಬಂಧಿಸಿದಂತೆ ನಾನು ೨–೩ ಸಭೆಗಳಲ್ಲಿ ಈ ವಿಶೇಷ ಘಟಕ ಯೋಜನೆಗೆ ಎಷ್ಟು ಹಣವನ್ನೊದಗಿಸಲಾಗಿದೆ, ಏನಾದರೂ ಇದರ ಪ್ರತಿಫಲ ಈ ಹರಿಜನರಿಗೆ ಮುಟ್ಟಿದೆಯೋ ಎಂದು ಸಮೀಕ್ಷೆ ಮಾಡಿ ಇನ್ನೇನು ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು ಎನ್ನುವಾಗ ನನ್ನ ಖಾತೆ ಬದಲಾವಣೆ ಆಯಿತು. ಇದನ್ನು ಈಗ ಘೋರ್ಪಡೆಯವರು ಸಾಕಷ್ಟು ಪರಿಶ್ರಮ ವಹಿಸಿ ಈಡೇರಿಸುತ್ತಾರೆಂದು ನಾನು ಅಂದುಕೊಂಡಿದ್ದೇನೆ. ವಿಶೇಷ ಘಟಕ ಯೋಜನೆಯಡಿಯಲ್ಲಿ ನೀವು ೧೬೮ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಎಲ್ಲ ಇಲಾಖೆಗಳಲ್ಲೂ ವಿಶೇಷ ಘಟಕ ಯೋಜನೆಗೆ ಈ ಹಣವನ್ನೊದಗಿಸಿದರೂ ಇದು ಸರಿಯಾಗಿ ವಿನಿಯೋಗವಾಗದೆ ಅಧಿಕಾರಿಗಳು ಇದು ತಮ್ಮ ಹಣ ಎಂದು ತಿಳಿದುಕೊಂಡು ತಮ್ಮ ಮನಸ್ಸಿಗೆ ಬಂದಂತೆ ಖರ್ಚು ಮಾಡುತ್ತಿದ್ದಾರೆ. ಇದು ಬಡವರ ಹಣ, ಅವರಿಗೋಸ್ಕರ ನಾವು ಖರ್ಚು ಮಾಡಬೇಕೆಂಬ ಮನಸ್ಸಿಲ್ಲ. ವಿಶೇಷ ಘಟಕ ಯೋಜನೆಗೆ ಖರ್ಚು ಮಾಡಬಹುದಾದ ಎಲ್ಲ ಹಣವನ್ನೂ ಕೂಡ ಒಂದೇ ಏಜೆನ್ಸಿಯ ಮುಖಾಂತರ ಖರ್ಚು ಮಾಡಲು ವ್ಯವಸ್ಥೆ ಮಾಡಬೇಕೆಂಬ ತೀರ್ಮಾನವನ್ನು ನಮ್ಮ ಸರ್ಕಾರದಲ್ಲಿ ತೆಗೆದುಕೊಳ್ಳುತ್ತೇವೆ. ಆಗ ಈ ಜನರಿಗೆ ಅನುಕೂಲ ಆಗಬಹುದು. ಇದಕ್ಕೆ ಸಂಬಂಧಪಟ್ಟಂತೆ ತಾವು ಒಂದು ಸ್ಪಷ್ಟವಾದ ಬೆಳಕನ್ನು ಚೆಲ್ಲಬೇಕು. ೧೬೮ ಕೋಟಿ ರೂಪಾಯಿ ಹಣ ಏನಿದೆ, ಇದೆಲ್ಲವನ್ನೂ ನಾವು ಯಾವ ರೀತಿ ಖರ್ಚು ಮಾಡಬೇಕೆಂಬುದರ ಬಗ್ಗೆ ಉತ್ತಮ ಸಲಹೆ ಸೂಚನೆಗಳನ್ನು ನೀಡಿದರೆ ಅದರ ಪ್ರಕಾರ ನಾವು ಖರ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನನ್ನ ಅನಿಸಿಕೆ.

ನನ್ನ ದೃಷ್ಟಿಯಲ್ಲಿ ಇದಕ್ಕೆ ಒಂದು ಏಜೆನ್ಸಿ ಆಗಬೇಕು. ೧೬೮ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಇದರ ಮೂಲಕ ಅವರ ಅಭಿವೃದ್ಧಿಗಾಗಿ ಖರ್ಚು ಮಾಡಬೇಕೆಂದು ಮತ್ತು ಈ ಒಂದು ಏಜೆನ್ಸಿಯಿಂದಲೇ ಅವರ ಅಭಿವೃದ್ಧಿಯನ್ನು ಸಾಧನೆ ಮಾಡಬೇಕೆಂದು ನಿರ್ಣಯ ತೆಗೆದುಕೊಳ್ಳಲಿದ್ದೇವೆ. ಈಗ ನಾನು ಹೇಳಿದ್ದು ಅವರಿಗೆ ಸಹಾಯವಾದರೆ ನಾನು ಸಂತೋಷಪಡುತ್ತೇನೆ.

ಅಧ್ಯಕ್ಷರು.— ಮಾನ್ಯ ಸಿಂಧ್ಯರವರೇ, ತಾವು ಇನ್ನು ಎಷ್ಟು ಟೈಮ್ ತೆಗೆದುಕೊಳ್ಳುತ್ತೀರಿ? ಏತಕ್ಕೆಂದರೆ ನಾವು ಈವತ್ತಿನ ದಿವಸವೇ ಈ ಬೇಡಿಕೆಯ ಮೇಲಿನ ಚರ್ಚೆಯನ್ನು ಮುಗಿಸಬೇಕಾಗಿದೆ. ಅದಕ್ಕೋಸ್ಕರವಾಗಿ ಇನ್ನು ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ, ಆದ್ದರಿಂದ ನಾನು ಈ ಸದನದ ಅಭಿಪ್ರಾಯವನ್ನು ಕೇಳಲಿಕ್ಕೆ ಇಚ್ಛೆಪಡುವುದೇನೆಂದರೆ ಇವತ್ತಿನ ದಿವಸದ ಮಟ್ಟಿಗೆ ಲಂಚ್

ಬ್ರೇಕ್‌ನ್ನು ಮನ್ನ ಮಾಡಿ ಈ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಂದುವರಿಸಿಕೊಂಡು ಹೋಗಬಹುದು ಎಂದು,

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಆಗಬಹುದು.

ಒಬ್ಬ ಸದಸ್ಯರು.— ಮಾನ್ಯ ಅಧ್ಯಕ್ಷರೇ ಇದು ಬಹಳ ಮುಖ್ಯವಾದ ಖಾತೆ ಆಗಿದೆ. ಆದ್ದರಿಂದ ಪ್ರತಿಯೊಂದು ಹಂತದಲ್ಲೂ ಈ ಜನಾಂಗವನ್ನು ಡೆವಲಪ್ ಮಾಡಬೇಕೆಂದು ಇರುವುದರಿಂದ ಎಲ್ಲರೂ ಮಾತನಾಡಿ ಇದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿ ಅದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕಾಗಿರುವುದರಿಂದ, ಇದರ ಚರ್ಚೆಗೆ ಹೆಚ್ಚು ಸಮಯವನ್ನು ಕೊಟ್ಟರೆ ಅನುಕೂಲವಾಗುತ್ತದೆ. ಆದ್ದರಿಂದ ಹೆಚ್ಚು ಸಮಯವನ್ನು ಕೊಡಬೇಕೆಂದು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಶ್ರೀಮತಿ ಮೋಟಮ್ಮ.— ಮಾನ್ಯ ಅಧ್ಯಕ್ಷರೇ, ಈ ಇಲಾಖೆಯ ಬಗ್ಗೆ ಒಂದು ದಿವಸದಲ್ಲಿ ಚರ್ಚೆಯನ್ನು ಮಾಡಿ ಮುಗಿಸುವುದಕ್ಕೆ ಆಗುವುದಿಲ್ಲ. ಇದು ಬೇರೆ ಇಲಾಖೆಗಳಿಗಿಂತ ಬಹಳ ಮುಖ್ಯವಾದ ಇಲಾಖೆಯಾಗಿದೆ. ಆದ್ದರಿಂದ ಸಾಕಷ್ಟು ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ನಾಳೆಯೂ ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈಗ ಮಾನ್ಯ ಸದಸ್ಯರು ಚರ್ಚೆಯನ್ನು ಮುಂದುವರಿಸಲಿ. ಇದನ್ನು ಒಂದು ದಿವಸದಲ್ಲಿ ಮುಗಿಸಲು ಸಾಧ್ಯವೇ ಹೇಗೆ ಎಂಬುದನ್ನು ನಂತರ ನೋಡೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಬಸವಲಿಂಗಪ್ಪನವರು ನನ್ನ ಬಗ್ಗೆ ಬಹಳ ಒಳ್ಳೆಯ ಮಾತುಗಳನ್ನು ಆಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ನಾಳೆಯೂ ಇದೇ ರೀತಿ ಲಂಚ್ ಬ್ರೇಕ್ ಇಲ್ಲದೆ ಸಭೆ ನಡಿಸುತ್ತೀರಾ ಹೇಗೆ ?

ಅಧ್ಯಕ್ಷರು.— ಇವತ್ತಿನಮಟ್ಟಿಗೆ ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇನೆ. ನಾಳೆ ನೋಡೋಣ ಏನಾಗುತ್ತದೆ ಎಂದು, ಈಗ ಚರ್ಚೆ ಮುಂದುವರೆಯುತ್ತದೆ.

(ಮಾನ್ಯ ಉಪಾಧ್ಯಕ್ಷರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಬಸವಲಿಂಗಪ್ಪನವರು ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಅವರು ಈ ಸಂದರ್ಭದಲ್ಲಿ ಇರಬೇಕಾಗಿತ್ತು. ಅವರು ಹೇಳಿಬಿಟ್ಟು ಹೊರಟು ಹೋದರು. ಅವರೇ ಈ ಇಲಾಖೆಯನ್ನು ಕೇಳಿ ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಮಾನ್ಯ ಶಿವಣ್ಣನವರು ತಾವು ಗಮನಿಸಬೇಕು. ೧೯೮೦ನೇ ಇಸವಿಯಲ್ಲಿ ಈ ಕಾರ್ಯಕ್ರಮ ಪ್ರಾರಂಭವಾಯಿತು. ಪ್ರತಿ ವರ್ಷವೂ ಸಹಿತ ಕೇಂದ್ರ ಮತ್ತು ರಾಜ್ಯಸರ್ಕಾರದಿಂದ ಕೊನೆ ಪಕ್ಷ ೬೦ ಕೋಟಿ ರೂಪಾಯಿಗಳ ಹಣದಿಂದ ಹಿಡಿದು ೧೦೦ ಕೋಟಿ ರೂಪಾಯಿಗಳವರೆಗೆ ಹಣವನ್ನು ನಾವು ಖರ್ಚು ಮಾಡಿಕೊಂಡು ಬಂದಿದ್ದೇವೆ. ಇದರ ಮೌಲ್ಯ ಮಾಪನ ಇದುವರೆವಿಗೆ ಏನಾದರೂ ನಡೆದಿದೆಯೇ ? ಇಂಪ್ಲಿಮೆಂಟಿಂಗ್ ಏಜೆನ್ಸಿ ಯಾವುದಾದರು ಇರಲಿ, ಅದು ಜಿಲ್ಲಾಪರಿಷತ್ ಆಗಲಿ ಅಥವಾ ಮಂಡಲ್ ಪಂಚಾಯತ್ ಆಗಲಿ. ಇವು ಜಾರಿಗೆ ಬಂದು ಎರಡು ವರ್ಷಗಳಾಯಿತು. ಎಂಟುವರ್ಷಗಳ ಹಿಂದೆ ಇದರ ಮೌಲ್ಯಮಾಪನ ಮಾಡಲಿಕ್ಕೆ ಏನಾದರು ಕ್ರಮ ತೆಗೆದುಕೊಂಡಿದ್ದೀರಾ. ಈಗ ಇದು ತಕ್ಷಣ ಆಗಬೇಕಾಗಿದೆ. ಮಾನ್ಯ ಉಪಾಧ್ಯಕ್ಷಿಣಿಯವರೇ, ಇವರು ಏನು ಮಾಡುತ್ತಾರೆಂದರೆ ತೋಟಗಾರಿಕೆ ಮಾಡಲಿಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅವಕಾಶ ಕೊಡುತ್ತಾರೆ. ಒಂದು ಎಕರೆಗೆ ೪೦ ಸಸಿಗಳನ್ನು ತೆಂಗಿನ ತೋಟ ಬೆಳೆಸುವುದಕ್ಕೆ ಕೊಡುತ್ತಾರಂತೆ. ನಾನು ರಾಯಚೂರು ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ರೆವ್ಯೂ ಮಾಡಿದೆ. ಪಾಪ, ಮಂಜುನಾಥ್ ಅವರು ಇಲ್ಲಿಲ್ಲ. ತುಮಕೂರಿನಲ್ಲೇ ತೆಂಗಿನಕಾಯಿ ಬೆಳೆಸುವುದು ಕಷ್ಟವಾಗಿದೆ. ದೊಡ್ಡ ದೊಡ್ಡ ವ್ಯಾಪಾರಸ್ಥರು, ಬೆಳೆಗಾರರು ಇರುವ ಕಡೆ ತೆಂಗಿನಕಾಯಿ ಬೆಳೆಸುವುದು ಕಷ್ಟವಾಗಿದೆ. ಇನ್ನು ಬೀದರ್ ಗುಲ್ಬರ್ಗದಲ್ಲಿ, ರಾಯಚೂರಿನಲ್ಲಿ ಅವರು ಬೆಳೆಸುವುದಕ್ಕೆ ಸಾಧ್ಯವೇ ಯೋಚನೆ ಮಾಡಿ ದಯವಿಟ್ಟು. ನಾನು ರಾಯಚೂರು ಬೀದರ್ ಗುಲ್ಬರ್ಗಕ್ಕೆ ಹೋಗಿದ್ದಾಗ ರಾಯಚೂರು ಜಿಲ್ಲೆಯ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಅಧಿಕಾರಿಯನ್ನು ಕೇಳಿದೆ ಎಷ್ಟು ಎಕರೆಯಲ್ಲಿ ತೋಟಗಾರಿಕೆ ಬೆಳೆ ಬೆಳೆಸಿದ್ದೀರಿ ಹೋದ ವರ್ಷ ಎಂದು. ೮ ನೂರು ಎಕರೆಗೆ ಸಸಿಗಳನ್ನು ಕೊಟ್ಟಿದ್ದೇವೆ, ಅದರಲ್ಲಿ ೮ ಎಕರೆಗಳಲ್ಲಿ ಸಸಿಗಳು ಉಳಿದಿರಬಹುದು ಅಷ್ಟೇ ಎಂದು ಹೇಳಿದರು. ಅಂದರೆ ಸಸಿಗಳನ್ನು ತೆಗೆದುಕೊಂಡು ಬೇರೆಯವರು ಹಂಚಿಕೊಳ್ಳುತ್ತಾರೆ. ಇಲ್ಲಿ ನಮಗೆ ಪುಸ್ತಕದಲ್ಲಿ ಇಷ್ಟು ಸಸಿಗಳನ್ನು ಕೊಟ್ಟಿದ್ದೇವೆಂಬ ಅಂಕಿಅಂಶ ಕೊಡುತ್ತಾರೆ.

ಶ್ರೀ ರಂಗದೇವ ರಾಯಲು.— ನಮ್ಮ ರಾಯಚೂರು ವಿಷಯ ಹೇಳುತ್ತಿದ್ದಾರೆ. ಅದು ನಮ್ಮ ಜಿಲ್ಲೆ ವಿಷಯವಾಗಿರುವುದರಿಂದ...

ಉಪಾಧ್ಯಕ್ಷರು.— ಅವರು ಈಲ್ಡ್ ಆಗಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮತ್ತೆ ಪಶುಸಂಗೋಪನೆಯಲ್ಲಿ ಕುರಿ, ಕೋಣ, ಎಮ್ಮೆಗಳನ್ನು ಹಂಚುತ್ತಾರೆ. ಐ.ಆರ್.ಡಿ.ಪಿ. ಕಾರ್ಯಕ್ರಮಕ್ಕೂ ಸ್ಪೆಷಲ್ ಕಾಂಪೊನೆಂಟ ಪ್ರೋಗ್ರಾಂಗೂ ಏನೇನೂ ವ್ಯತ್ಯಾಸ ಇಲ್ಲ. ಇದನ್ನು ತಾವೂ ಸಹ ಒಪ್ಪುತ್ತೀರಿ ಅಂದುಕೊಂಡಿದ್ದೇನೆ. ಅದೇ ಕೋಣ, ಅದೇ ಕುರಿ, ಅದೇ ಎಮ್ಮೆ, ಅದೇ ಹಸು. ಆದರೆ ಕಿವಿಗೆ ಏನೋ ಹಾಕುತ್ತಾರಲ್ಲ, ಅದನ್ನು ಮಾತ್ರ ಬದಲಾವಣೆ ಮಾಡುತ್ತಾರೆ.

ಶ್ರೀ ಕೆ. ಎಚ್. ರಂಗನಾಥ್.— ಕೋಣ ಕೊಡುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಎಮ್ಮೆ ಕೊಡುತ್ತಾರೆ. ಅದೇ ಪ್ರಾಣಿಗಳನ್ನು ರೊಟೇಟ್ ಮಾಡುತ್ತಿರುತ್ತಾರೆ. ಆ ಸಂತೆಯಲ್ಲಿ ಮಾರಾಟ ಮಾಡಿದ್ದನ್ನು ಈ ಸಂತೆಯಲ್ಲಿ, ಈ ಸಂತೆಯಲ್ಲಿ ಮಾಡಿದ್ದನ್ನು ಇನ್ನೊಂದು ಕಡೆ ತೆಗೆದುಕೊಂಡು ಹೋಗಿ ತೋರಿಸುತ್ತಾರೆ. ದುಡ್ಡುಗಳನ್ನು ಇವರು ಹಂಚಿಕೊಳ್ಳುತ್ತಾರೆ. ಆದ್ದರಿಂದ ಈ ಕಾರ್ಯಕ್ರಮ ತಕ್ಷಣ ರದ್ದು ಮಾಡಿ. ಇಲ್ಲದಿದ್ದರೆ ಇದರಿಂದ ಏನೂ ಉಪಯೋಗವಾಗುವುದಿಲ್ಲ. ಮತ್ತೆ ಎತ್ತಿನಗಾಡಿ ಕಾರ್ಯಕ್ರಮ ಇದೆ. ನಾನು ಮೈಸೂರು ಜಿಲ್ಲೆಯಲ್ಲಿ ರೆವ್ಯೂ ಮಾಡಿದ್ದೇನೆ. ಇದರಲ್ಲಿ ಏನು ಮಾಡಿದ್ದಾರೆಂದರೆ ಯಾರಿಗೆ ಗಾಡಿ ಕೊಟ್ಟಿದ್ದಾರೆ ಅವರಿಗೆ ಎತ್ತು ಕೊಡುವುದಿಲ್ಲ ಯಾರಿಗೆ ಎತ್ತು ಕೊಟ್ಟಿದ್ದಾರೆ ಅವರಿಗೆ ಗಾಡಿ ಕೊಡುವುದಿಲ್ಲ. ದೊಡ್ಡ ದೊಡ್ಡ ಮೇಳಗಳನ್ನು ಇವುಗಳನ್ನು ಹಂಚುವ ಸಲುವಾಗಿ ಮಾಡುತ್ತಾರೆ. ನಿಮಗೆಲ್ಲಾ ಏನೇನು ಬೇಕೋ ಆ ವ್ಯವಸ್ಥೆಗಳನ್ನು ಮಾಡಿ ಚೆನ್ನಾಗಿ ನೋಡಿಕೊಂಡು...

ಶ್ರೀ ಬಿ. ಶಿವಣ್ಣ.— ನಾನು ಇನ್ನೂ ಹೋಗಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ— ನೀವು ಬೇಗ ಹೋಗಿ ನೋಡಿ. ಆದರೆ ನೀವು ವಿದೇಶಕ್ಕೆ ಹೊರಟಿದ್ದೀರಿ. ವಿದೇಶಕ್ಕೆ ಆಮೇಲೆ ಹೋಗುವಿರಂತೆ. ೧೮೦ ಜನ ಇದ್ದೀರಿ. ನಿಮ್ಮ ಸರ್ಕಾರ ಉರುಳುವುದಿಲ್ಲ ಎಂದು ನಾವು ಅಂದುಕೊಂಡಿದ್ದೇನೆ. ಇಲ್ಲಿ ಅರಣ್ಯ ಮಂತ್ರಿಗಳಿಲ್ಲ. ಸೋಷಿಯಲ್ ಫಾರೆಸ್ಟ್ರಿ ನಾವು ಈ ಬಗ್ಗೆ ಚರ್ಚೆ ಮಾಡಿದೆವು. ರೆಗ್ಯುಲರ್ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರೇ ಇದನ್ನು ಸರಿಯಾಗಿ ಮಾಡುವುದಕ್ಕಾಗುತ್ತಿಲ್ಲ. ಇನ್ನು ಎಸ್.ಸಿ. ಎಸ್.ಟಿ.ಯವರಿಗೆ ಸೋಷಿಯಲ್ ಫಾರೆಸ್ಟ್ರಿ ಅಭಿವೃದ್ಧಿ ಮಾಡಿ ಎಂದು ಹೇಳಿದರೆ ಹೇಗಾಗುತ್ತದೆ ? ಸತ್ತು ಹೋಗುವ ಹೆಣಕ್ಕೆ ಮದ್ದು ಕೊಡುವ ಪ್ರಯತ್ನ ಇದು. ನಾನು ಮಾನ್ಯ ಉಪಾಧ್ಯಕ್ಷರ ಗಮನವನ್ನು ಎಸ್.ಸಿ.ಎಸ್.ಟಿ. ಕಾರ್ಪೊರೇಷನ್ ಬಗ್ಗೆ ಸೆಳೆಯುತ್ತೇನೆ. ೧೯೮೮ರಲ್ಲಿ ಸಮಾಜ ಕಲ್ಯಾಣ ಇಲಾಖೆ ಮಂತ್ರಿಯಾದ ತಕ್ಷಣ ನಾನು ಎಸ್. ಸಿ. ಎಸ್. ಟಿ. ಕಾರ್ಪೊರೇಷನ್ ರೆವ್ಯೂ ಮಾಡುವುದಕ್ಕೆ ಹೋಗಿದ್ದೆ. ಅಲ್ಲಿ ಒಬ್ಬ ಅಧಿಕಾರಿ ರಿಟೈರ್ ಆಗುವುದಕ್ಕೆ ೮ ದಿನ ಇತ್ತು. ಅಡ್ವಾನ್ಸಾಗಿ ೧೫೦ ಜನರಿಗೆ ಕೆಲಸಕ್ಕೆ ತೆಗೆದುಕೊಂಡಿದ್ದೇನೆಂದು ಅಪಾಯಿಂಟ್‌ಮೆಂಟ್ ಆರ್ಡರ್ ಕಳುಹಿಸಿ ಬಿಟ್ಟರು. ಆದರೆ ಈ ಬಗ್ಗೆ ಕೆಲವರು ಕೋರ್ಟಿಗೆ ಹೋಗಿ ಸ್ಟೇ ತಂದರು. ಅವರೂ ಷೆಡ್ಯೂಲ್ಡ್ ಕ್ಯಾಸ್ಟಿನವರು. ಈಗ ಪೆನ್‌ಷನ್ ತೆಗೆದುಕೊಳ್ಳುತ್ತಿದ್ದಾರೆ. ಅವರಿಗೆ ಶಿಕ್ಷೆ ಆಗಬೇಕು, ಸೂಪರ್ ಟೈಂ ಸ್ಕೇಲ್ ಅಧಿಕಾರಿ ಅವರು. ೧೫೦ ಜನರಿಗೆ ಯಾವರೀತಿ ಮಾಡಿದ್ದಾರೆಂದರೆ ಯಾವುದೇ ಇಂಟರ್‌ವ್ಯೂ ಮಾಡದೆ, ಅಪ್ಲಿಕೇಷನ್ ಕಾಲ್‌ಫರ್ ಮಾಡದೆ ಮೇನೇಜರ್ ಪೋಸ್ಟ್‌ವರೆಗೆ ಅಪಾಯಿಂಟ್ ಮಾಡಿಕೊಂಡಿದ್ದಾರೆ. ಅವರ ಜಾತಿಯವರನ್ನಾದರೂ ಮಾಡಿದ್ದರೆ ನಾನು ಸುಮ್ಮನಿರುತ್ತಿದ್ದೆ. ಬೇರೆ ಜಾತಿಯವರಿಂದ ದುಡ್ಡು ತೆಗೆದುಕೊಂಡು ಅಪಾಯಿಂಟ್ ಮಾಡಿದ್ದಾರೆ. ೧೦-೧೫ ಲಕ್ಷ ರೂಪಾಯಿ ಸಂಗ್ರಹ ಮಾಡಿಕೊಂಡಿದ್ದಾರೆ. ನಾನು ಅವರ ಹಿಂದೆ ಬಿದ್ದಿದ್ದೆ, ಆದರೆ ಏನು ಮಾಡುತ್ತೀರಾ ? ಆಗ ನಮ್ಮನ್ನು ಕೆಲವರು ರಾಜಕೀಯವಾಗಿ ಕಾಲೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಮತ್ತೊಂದು ಕಡೆ ಅವರು ನಿವೃತ್ತಿ ಆದರು. ಇದರಿಂದ ಕ್ರಮ ತೆಗೆದುಕೊಳ್ಳಲು ನನಗೆ ಆಗಲಿಲ್ಲ. ಆಮೇಲೆ ಕೋರ್ಟ್‌ನಲ್ಲಿ ಕೆಲವರು ಸ್ಟೇ ತಂದರು. ಎಸ್.ಸಿ ಎಸ್.ಟಿ, ಕಾರ್ಪೊರೇಷನ್‌ನಲ್ಲಿ ಒಂದು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಇದೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಆಫೀಸರ್ ಇದ್ದಾರಲ್ಲಾ, ಅವರನ್ನು ಮೊದಲು ಸಸ್ಪೆಂಡ್ ಮಾಡಿ.

ಅವರು ಈ ಜನರ ವಿರುದ್ಧ ಇದ್ದಾರೆ. ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಎಸ್ ಇಪಿ ಬೋರ್‌ವೆಲ್ಸ್ ಹಾಕಿಕೊಡಬೇಕೆಂದು ಮಾಡಿದ್ದಾರೆ. ೮ ಜಿಲ್ಲೆಗಳಲ್ಲಿ ಕಾರ್ಪೊರೇಷನ್‌ನವರು ಮಿಕ್ಕ ಜಿಲ್ಲೆಗಳಲ್ಲಿ ಜಿಲ್ಲಾ ಪರಿಷತ್‌ನವರು ಮಾಡಬೇಕೆಂದು ಇದೆ. ಈ ಯೋಜನೆ ೮ ವರ್ಷ ಆಯಿತು ಪ್ರಾರಂಭ ಆಗಿ. ಇಲ್ಲಿಯವರೆಗೆ ೧೨ ಸಾವಿರ ಕೊಳವೆ ಬಾವಿ ತೋಡಿದ್ದೇವೆಂದು ಹೇಳಿದ್ದಾರೆ. ನಾನು ಹೇಳುವುದಕ್ಕೆ

ಬೇಜಾರು ಮಾಡಿಕೊಳ್ಳಬೇಡಿ. ಏಕೆಂದರೆ ಇವುಗಳ ಪೈಕಿ ೧ ಸಾವಿರ ಬೋರ್ವೆಲ್ ಕೂಡಾ ಫಂಕ್ಷನ್ ಆಗುತ್ತಾ ಇಲ್ಲ. ಬೇಕಾದರೆ ಈ ಬಗ್ಗೆ ನಾನು ಛಾಲೆಂಜ್ ಮಾಡುತ್ತೇನೆ. ಏಕೆ ಈ ರೀತಿ ಆಗುತ್ತದೆ ? ತಾವು ವಿಚಾರ ಮಾಡಿ. ಎಸ್‌ಸಿ ಎಸ್‌ಟಿ ಕಾರ್ಪೊರೇಷನ್‌ನಲ್ಲಿ ಸಾಲ ಕೊಡುತ್ತೇವೆಂದು ಹೇಳಿದ್ದೀರಿ. ಇವತ್ತೇ ನೀವು ಯಾವುದಾದರೂ ಒಂದು ಜಿಲ್ಲೆಗೆ ಆಕಸ್ಮಿಕವಾಗಿ ಹೋಗಿ, ಎಷ್ಟು ಜನರಿಗೆ ಯಾವ ಯಾವ ಕೇರಿಯಲ್ಲಿ ಸಾಲ ಕೊಟ್ಟಿದ್ದಾರೆಂದು ಲೆಕ್ಕ ಹಾಕಿ. ಅಲ್ಲಿ ಸಾಲ ತೆಗೆದು ಕೊಂಡಿರುವವರು ಯಾರೂ ಇರುವುದಿಲ್ಲ. ಆಕಸ್ಮಾತ್ ಸಾಲ ಕೊಟ್ಟಿದ್ದರೆ ಅವರ ನೆಂಟರಿಷ್ಟರಿಗೆ, ಹಾಗೂ ಚೆನ್ನಾಗಿರುವವರಿಗೆ ಕೊಟ್ಟಿರುತ್ತಾರೆ. ಇವತ್ತು ಎಸ್‌ಸಿಎಸ್‌ಟಿ ಕಾರ್ಪೊರೇಷನ್‌ನಲ್ಲಿ ಕೋಟ್ಯಾಂತರ ರೂಪಾಯಿ ದುರ್ವ್ಯವಹಾರ ಆಗಿದೆ. ಅದನ್ನು ತಡೆಗಟ್ಟುವುದಕ್ಕೆ ನೀವು ಕಾರ್ಯಕ್ರಮ ಹಾಕಿಕೊಳ್ಳಬೇಕು. ಎಸ್‌ಇಪಿ ಯಲ್ಲಿ ಏನು ಬೋರ್ವೆಲ್ ಹಾಕಿಸುವ ಕಾರ್ಯಕ್ರಮ ಇದೆ ಅದನ್ನು ತಾವು ತಕ್ಷಣ ರಿವ್ಯೂ ಮಾಡಬೇಕು. ಇವತ್ತು ಖಾಸಗಿಯವರು ಒಂದು ಬೋರ್ವೆಲ್ ಹಾಕಿದರೆ ೨೫ ಸಾವಿರ ರೂಪಾಯಿಯಾಗುತ್ತದೆ. ಅದೇ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರಾಗಲೀ, ಎಸ್‌ಸಿಎಸ್‌ಟಿ ಕಾರ್ಪೊರೇಷನ್‌ರವರಾಗಲೀ ಹಾಕುವ ಬೋರ್ವೆಲ್‌ಗೆ ೪೫ ಸಾವಿರ ರೂಪಾಯಿಯಾದರೂ ಸಾಲುವುದಿಲ್ಲ. ಏಕೆ ? ಇದನ್ನು ಚೆಕ್ ಮಾಡುವುದು ಯಾರು ? ಇವತ್ತು ಇಲ್ಲಿ ವಿದ್ಯುತ್ ಮಂತ್ರಿಗಳು ಇಲ್ಲ, ಇವತ್ತು ಎಸ್‌ಇಪಿ ಮುಖಾಂತರ ಎಷ್ಟು ಬೋರ್ವೆಲ್ ಆಗಿವೆ ಇವಕ್ಕೆ ೧ ವರ್ಷ ೨ ವರ್ಷಗಳಾಗಿದ್ದರೂ ವಿದ್ಯುತ್ ಸಿಕ್ಕಿಲ್ಲ. ಇವರ ಗೋಳನ್ನು ಯಾರ ಹತ್ತಿರ ಹೇಳಬೇಕು. ಇವರ ಹೆಸರಿನಲ್ಲಿ ರಸ್ತೆಗಳನ್ನು ನಾವು ಮಾಡಿಕೊಳ್ಳುತ್ತೇವೆ. ಬ್ರಿಡ್ಜ್‌ಗಳನ್ನು ನಾವು ಮಾಡಿಕೊಳ್ಳುತ್ತೇವೆ. ನಾನೂ ಕೂಡಾ ನಿಮ್ಮ ಜಿಲ್ಲೆಯ ಇಸ್‌ಇಪಿ ಕಾರ್ಯಕ್ರಮಗಳನ್ನು ಇನ್ಸ್‌ಪೆಕ್ಷನ್ ಮಾಡಿದ್ದೇನೆ. ಯಾರೋ ಮುಖಂಡರ ಮನೆಗೆ ದಾರಿ ಮಾಡಿ ಕೊಡಲು ಆಗುವ ಖರ್ಚನ್ನು ಎಸ್‌ಇಪಿ ಖರ್ಚಿನಲ್ಲಿ ಸೇರಿಸಿ ಎಂದು ಹೇಳುತ್ತಾರೆ. ಇದು ಬಹಳ ಸುಲಭ. ಇವತ್ತು ಗಿರಿಜನರ ಯೋಜನೆಗಳು ಬೇರೆ ಇವೆ. ಇವತ್ತು ಎಷ್ಟು ಜನ ಗಿರಿಜನರು ಇದ್ದಾರೆಂಬ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಂಕಿ ಸಂಖ್ಯೆ ಇಲ್ಲ. ಇವತ್ತು ಗಿರಿಜನರ ಕುಟುಂಬಗಳು ನಮ್ಮ ರಾಜ್ಯದಲ್ಲಿ ಎಷ್ಟು ಇವೆ ? ಮುಖ್ಯವಾಗಿ ಕೊಡಗು, ಮೈಸೂರು, ದಕ್ಷಿಣಕನ್ನಡ, ಚಿಕ್ಕಮಗಳೂರು ಹಾಗೂ ಬೆಂಗಳೂರಿನಲ್ಲಿ ಇದ್ದಾರೆಂದು ಹೇಳಿದ್ದೀರಿ: ಇನ್ನೂ ಕೆಲವು ಜಿಲ್ಲೆಗಳಲ್ಲಿ ಕೆಲವು ಬುಡಕಟ್ಟಿನ ಜನಾಂಗದವರು ಇದ್ದಾರೆಂದು ಹೇಳಿದ್ದಾರೆ. ಇವರ ನಿಜವಾದ ಸಮಸ್ಯೆಗಳು ಏನಿವೆ ಆ ಸಮಸ್ಯೆಗಳ ತೃಣವನ್ನು ಸಹಾ ಇವರು ಮುಚ್ಚುವುದಕ್ಕೆ ಆಗಿಲ್ಲ. ಟ್ರೈಬಲ್ ವೆಲ್‌ಫೇರ್ ಪ್ರೋಗ್ರಾಮ್‌ನಲ್ಲಿ ಖರ್ಚು ಆಗಿರುವುದರಲ್ಲಿ ಅರ್ಧ ಹಣ ಕೂಡಾ ಸದುಪಯೋಗ ಆಗಿಲ್ಲ. ಎಲ್ಲಾ ಅಧಿಕಾರಿಗಳ ಹತ್ತಿರ ಇವೆ. ಟ್ರೈಬಲ್ ವೆಲ್‌ಫೇರ್ ಸ್ಕೀಮ್ ಜಾರಿಗೆ ತರುವ ನಿರ್ದೇಶಕರ ಕಛೇರಿಯಲ್ಲಿ ಕೆಲಸ ಮಾಡಿರುವವರ ಮನೆಯನ್ನು ಜಪ್ತಿ ಮಾಡಿ, ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಿ, ಆಗ ಎಲ್ಲಾ ಹಣ ವಾಪಸ್ಸು ಬರುತ್ತದೆ. ಎಲ್ಲಿ ಈ ಗಿರಿಜನರು ಇದ್ದಾರೆ ? ಅವರು ಕಾಡಿನಲ್ಲಿ ಇದ್ದಾರೆ. ಅವರಿಗೆ ನೀವು ಎತ್ತು ಗಾಡಿ ಕೊಡುತ್ತೀರಾ ? ನಾನೂ ಕೂಡಾ ಸಚಿವನಾಗಿದ್ದಾಗ ಒಂದು ದೊಡ್ಡ ಮೇಳ ಮಾಡಿ ನನಗೆ ಕಾಡಿಗೆ ಕರೆದುಕೊಂಡು ಹೋಗಿದ್ದರು. ಅವರಿಗೆ ಎತ್ತು ಕೊಡುತ್ತಾರೆ, ಆದರೆ ಅವರಲ್ಲಿ ಗಾಡಿ ಇರುವುದಿಲ್ಲ. ಇವತ್ತು ಅವರಿಗೆ ಈ ಎರಡನ್ನು ಕೊಟ್ಟರೂ ಸಹ ಉಪಯೋಗ ಇಲ್ಲ. ಇವತ್ತು ಅವರ ಜಮೀನು ಮುಂಚೆ ಐಡೆಂಟಿಫೈ ಆಗಬೇಕಾಗಿದೆ. ತಾವು ಅರಣ್ಯ ಖಾತೆ ಸಚಿವರ ಜೊತೆ ಕಂದಾಯ ಖಾತೆ ಸಚಿವರ ಜೊತೆ ನೀವು ಕುಳಿತುಕೊಂಡು ಚರ್ಚೆ ಮಾಡಿ. ಈಗಲಾದರೂ ಇದಕ್ಕೆ ಏನಾದರೂ ಪರಿಹಾರ ಹುಡುಕಿ. ನಾನು ಮಂತ್ರಿಯಾಗಿದ್ದಾಗ ಈ ಬಗ್ಗೆ ಕಾರ್ಯಕ್ರಮ ಹಾಕಿಕೊಂಡೆ. ಆದರೆ ನನಗೆ ಆಗ ಸಮಯ ಸಿಗಲಿಲ್ಲ ಕಾರಣ ನಾನು ಕೇವಲ ೭ ತಿಂಗಳು ಇದ್ದೆ. ಇವತ್ತು ಫಾರೆಸ್ಟ್ ಲ್ಯಾಂಡ್ ರಿಲೀಸ್ ಮಾಡಿ ಎಂದು ತಾವು ಕೇಂದ್ರ ಸರ್ಕಾರಕ್ಕೆ ಹೇಳಬೇಕು. ದಯಮಾಡಿ ಈ ವಿಷಯವನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ಹುಣಸೂರು ತಾಲ್ಲೂಕಿನ ಹೆಗ್ಗಡದೇವನ ಕೋಟೆಯಲ್ಲಿ ವಿಶೇಷವಾಗಿ ಈ ಜನರಿಗೆ ಅನ್ಯಾಯವಾಗಿದೆ, ಇವರ ಹೆಸರಿನಲ್ಲಿ ಮೋಸ ನಡೆದಿದೆ. ಇದು ನಿಲ್ಲಬೇಕಾದರೆ ಸ್ವತಃ ತಾವೇ ಅಲ್ಲಿಗೆ ಹೋಗಬೇಕು. ತಾವು ಈ ಬಗ್ಗೆ ಅಧಿಕಾರಿಗಳನ್ನು ಕಳುಹಿಸುವುದು ಅಲ್ಲ. ನೀವೇ ಹೋಗಿ ಅಥವಾ ನಿಮ್ಮ ಕಾರ್ಯದರ್ಶಿಯವರನ್ನು ಅಲ್ಲಿಗೆ ಕಳುಹಿಸಿ. ಅವರು ನಂಬಿಕೆ ಇರುವ ಮನುಷ್ಯರು. ಇವತ್ತು ಈ ಗಿರಿಜನರಿಗೆ ಏನು ಭೂಮಿ ಸಿಗಬೇಕಾಗಿದೆ ಅದರ ಬಗ್ಗೆ ತಾವು ಸರ್ವೇ ಮಾಡಿಸಿ.

೧.೩೦ ಪಿ.ಎಂ

ಒಟ್ಟಿನಲ್ಲಿ ಈ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ನಾನು ಕೆಲವು ಸಲಹೆಗಳನ್ನು ಈಗಾಗಲೇ ಕೊಟ್ಟಿದ್ದೇನೆ. ಗುಡಿಸಲುಗಳ ಇನ್ಸೂರೆನ್ಸ್ ಸ್ಕೀಮನ್ನು ತಾವು ಜಾರಿಗೆ ತರಬೇಕು. ಪೆಡ್ಯೂಲ್ಡ್ ಟ್ರೈಬ್ಸ್ ಜನರ ಬಗ್ಗೆ ಸರ್ವೆ ಮಾಡಬೇಕು ಪ್ರತಿ ತಾಲ್ಲೂಕಿನಲ್ಲಿ ಆಶ್ರಮ ಶಾಲೆಗಳನ್ನು ಪ್ರಾರಂಭ

ಮಾಡಬೇಕು. ಈ ಕಾರ್ಪೊರೇಷನ್ ಮತ್ತು ನಗರಸಭೆಗಳಲ್ಲಿ ಹಾಗೂ ಮುನಿಸಿಪಾಲಿಟಿಗಳಲ್ಲಿ ಶೇಕಡ ೧೮ ರಷ್ಟು ಹಣವನ್ನು ಅವರಿಗಾಗಿ ಖರ್ಚು ಮಾಡಿ ಇಂಪ್ಲಿಮೆಂಟ್ ಮಾಡದಿದ್ದರೆ ಶಿಕ್ಷೆ ಮಾಡುತ್ತೇವೆಂದು ತಾವೊಂದು ಕಾನೂನನ್ನು ಮಾಡಬೇಕು. ಅದರ ಜೊತೆಗೆ ಲಂಬಾಣಿ ತಾಂಡಗಳ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳಾದ ಕೆ.ಹೆಚ್. ಪಾಟೀಲ್‌ರವರು ಕೆಲವು ಮಾತುಗಳನ್ನು ಹೇಳಿದ್ದಾರೆ. ೧೯೯೧ ರವರೆಗೆ ಲಂಬಾಣಿ ತಾಂಡಗಳ ಬಗ್ಗೆ ಏನೂ ಮಾಡುವುದಿಲ್ಲವೆಂದು ಹೇಳಿದ್ದಾರೆ. ನಮ್ಮ ಕೈಯಲ್ಲಿ ಮಾಡಲಿಕ್ಕೆ ಇದು ಆಗಲಿಲ್ಲ. ನಾವು ಪ್ರಯತ್ನ ಮಾಡಿದ್ದೇವೆ. ಮಾನ್ಯ ಶಿವಮೂರ್ತಿಯವರಿಗೆ ಇದು ಚೆನ್ನಾಗಿ ಗೊತ್ತಿದೆ. ಕೆಲವು ಕಡೆಗಳಲ್ಲಿ ಏನು ಮಾಡಿದ್ದಾರೆಂದರೆ, ಈ ಖಾಸಗಿ ಜಮೀನುಗಳಲ್ಲಿ ಇವರು ತಾಂಡಗಳನ್ನು ಕಟ್ಟಿಕೊಂಡಿದ್ದಾರೆ ಈಗ ಅವರು ಜಾಗ ಬಿಡಿ ಇಲ್ಲದಿದ್ದರೆ ದುಡ್ಡು ಕೊಡಿಯೆಂದು ಕೇಳುತ್ತಿದ್ದಾರೆ. ಇದರಿಂದ ತಾಂಡಗಳಿಗೆ ರಸ್ತೆ, ದೀಪ, ಸ್ಕೂಲು, ಮುಂತಾದ ಯಾವುದೇ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಅವು ರೆವಿನ್ಯೂ ಗ್ರಾಮಗಳಾಗಿರುವುದಿಲ್ಲ. ಈ ತರಹ ೪ ಸಾವಿರ ತಾಂಡಗಳಿವೆ. ಅವುಗಳಿಗೆ ಖಾತೆ ಪಹಣಿ ಇವುಗಳೆಲ್ಲ ಅವರಿಗೆ ಕನಸಿನ ಮಾತು. ಅದನ್ನು ಮಾಡಿದರೆ ನಿಮಗೆ ದೊಡ್ಡ ಕೀರ್ತಿ ಬರುತ್ತದೆ. ಲಂಬಾಣಿ ತಾಂಡಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಮಾಡುವುದರಿಂದ ಈ ತಾಂಡಗಳ ಅಭಿವೃದ್ಧಿಯಾಗುತ್ತದೆ. ಅದನ್ನು ಮಾಡುವುದಕ್ಕೆ ಏನಾದರೂ ತಾಂಡಕಿದ್ದರೆ ಕಾನೂನು ಬದಲಾವಣೆ ಮಾಡಿ, ಸಾಧ್ಯವಾದರೆ ತಿದ್ದುಪಡಿ ಕಾನೂನನ್ನು ಈ ಸದನದಲ್ಲಿ ತಂದು ಕಾನೂನು ಬದಲಾವಣೆ ಮಾಡಿ

ಇನ್ನು ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಸರ್ಟಿಫಿಕೇಟಿನ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಎಜುಕೇಶನ್ ಪರ್ಪಸ್‌ಗೋಸ್ಕರ ನಾಯಕ, ವಾಲ್ಮೀಕಿ, ಬೇಡ ಜನಾಂಗದವರಿಗೆ ಷೆಡ್ಯೂಲ್ಡ್ ಟ್ರೈಬ್ಸ್ ಎಂದು ಮಾಡಿದೆವು. ಆದರೆ ನನಗೆ ತಿಳಿದ ಹಾಗೆ ನಾಯಕ ಜನಾಂಗದವರು ಮಾತ್ರವಲ್ಲ, ಬೇರೆಯವರು ಸಹ ಫಾರಂ-೧ ಕೇಳುತ್ತಿದ್ದಾರೆ ಕೆಲವು ಕಡೆ ಇಂತಹವರು ಫಾರಂ-೧ ಮೂಲಕ ಮಂಡಲ ಪಂಚಾಯತಿ ಸದಸ್ಯರು ಸಹ ಆಗಿದ್ದಾರೆ.

ಶ್ರೀ ಹರ್ಷಕುಮಾರಗೌಡ.— ಮಾನ್ಯ ಉಪಾಧ್ಯಕ್ಷಿಣೀಯವರೆ. ಈ ಸಭೆಯಲ್ಲಿ ಎಷ್ಟು ಜನ ಇರಬೇಕೋ ಅಷ್ಟು ಜನ ಸದಸ್ಯರುಗಳು ಕಾಣಿಸುತ್ತಿಲ್ಲ. ವಿರೋಧಪಕ್ಷದ ಕಡೆಗೂ ಇಬ್ಬರು ಮಾತ್ರ ಇದ್ದಾರೆ ಮಿನಿಮಮ್ ೨೫ ಜನ ಇರಬೇಕೆಂದು ಕಾಣುತ್ತದೆ. ಅದರ ಬಗ್ಗೆ ತಾವು ನಮಗೆ ಹೇಳಿದರೆ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು.— ಈಗ ಊಟದ ಸಮಯ. ಎಲ್ಲರೂ ಈಗ ಬರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಪೋಟಾ ನಾಯಕ, ಚೋಲಿ ನಾಯಕ, ನಾಯಿಕಡ, ಚೋಟಾ ನಾಯಕ ಇವರೆಲ್ಲಾ ಒಂದು ಗುಂಪಿಗೆ ಸೇರಿದವರು. ಕೇಂದ್ರ ಸರ್ಕಾರದವರು ಹಿಂದೆ ಈ ನಾಯಕ ಜನಾಂಗದವರ ಬಗ್ಗೆ ಒಂದು ಆರ್ಡರನ್ನು ೧೯೫೬ ರಲ್ಲಿ ಹೊರಡಿಸಿದ್ದರು. ಈಗ ಅದನ್ನು ಆಧಾರವಾಗಿಟ್ಟುಕೊಂಡು ನಾಯಕರು ನಾವೇ ಎಂದು ಕೆಲವರು ಹೇಳಲು ಹೊರಟಿದ್ದಾರೆ. ಕೇಂದ್ರ ಸರ್ಕಾರದ ಈ ಆರ್ಡರ್ ಮೂಲಕ ಕೆಲವರಿಗೆ ದಂಧೆ ಮಾಡುವುದಕ್ಕೆ ಅನುಕೂಲವಾಗಿದೆ. ಈ ಕಾಸ್ಟ್ ಸರ್ಟಿಫಿಕೇಟ್ ಬಗ್ಗೆ ಸರಿಯಾದ ಗೈಡ್‌ಲೈನ್ಸನ್ನು ತಹಶೀಲ್‌ದಾರರಿಗೆ ಕೊಡುವುದಕ್ಕಾಗಿಲ್ಲ. ಈ ಬಗ್ಗೆ ಕಾನೂನು ಇಲಾಖೆ ಮತ್ತು ನಿಮ್ಮ ಇಲಾಖೆ ಕಾರ್ಯದರ್ಶಿಗಳೊಡನೆ ವಿಚಾರ ಮಾಡಿ. ಕೆಲವು ಶಾಸಕರು ಬೇರೆ ಬೇರೆ ಜನಾಂಗದವರನ್ನು ಕರೆದು ಕೇಳಿದರೆ ಶೋಂದರೆ ಏನಿದೆ ಎಂಬುದನ್ನು ಹೇಳುತ್ತಾರೆ ಹಿಂದೆ ಇದ್ದ ಶ್ಯಾನುಭೋಗರ ಪದ್ಧತಿಯನ್ನು ಈಗ ಬದಲಾವಣೆ ಮಾಡಿದ್ದೇವೆ. ಅವರಲ್ಲಿದ್ದ ತಿಳುವಳಿಕೆ ಈಗ ನಮ್ಮಲ್ಲಿ ಯಾರಿಗೂ ಇಲ್ಲ. ಅಂತಹವರು ಈಗ ನಮಗೆ ಸಿಗುತ್ತಿಲ್ಲ. ಮುಖ್ಯವಾಗಿ ಈ ಕಾಸ್ಟ್ ಸರ್ಟಿಫಿಕೇಟ್ ಬಗ್ಗೆ ಸರಿಯಾದ ಗೈಡ್‌ಲೈನ್ಸನ್ನು ಸರ್ಕಾರದ ವತಿಯಿಂದ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಬೇಡ ಜಂಗಮ ಎಂದು ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ನಿಜವಾದ ಜಂಗಮರು ಹೊರಟಿದ್ದಾರೆ. ಕುರುಬರು ಆದವರು ತಾವು ಕಾಡುಕುರುಬರು ಎಂದು ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ; ಅದನ್ನು ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಸ್ಪೆಷಲ್ ಕಾಂಪೋನೆಂಟ್ ಯೋಜನೆ ಅಡಿಯಲ್ಲಿ ಕೊಳವೆಬಾವಿಗಳನ್ನು ತೆಗೆಯುತ್ತಿದ್ದಾರೆ ಆ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಈ ಯೋಜನೆಯ ವತಿಯಿಂದ ಒಂದು ಕೊಳವೆಬಾವಿಗೂ ಮತ್ತೊಂದು ಕೊಳವೆಬಾವಿಗೂ ೨೨೫ ಅಡಿ ದೂರವಿರಬೇಕೆಂದು ನಿಯಮ ಮಾಡಿದ್ದಾರೆ. ಖಾಸಗಿಯವರು ಕೊಳವೆಬಾವಿಗಳನ್ನು ಮಾಡುವುದಕ್ಕೆ ಯಾವುದೇ ರೀತಿಯ ರಿಸ್ಟ್ರಿಕ್ಷನ್ ಇಲ್ಲ. ಆದ್ದರಿಂದ ಈ ದೂರದ ಬಗ್ಗೆ ಇರುವ ನಿಯಮವನ್ನು ಮೊದಲು ಚೇಂಜ್ ಮಾಡಬೇಕು. ನಬಾರ್ಡ್ ಸಂಸ್ಥೆಯವರು

ಸಹ ಇದನ್ನು ಒಪ್ಪಬೇಕಾಗಿದೆ. ನೀವು ಅಷ್ಟೇ ಮಾಡಿದರೆ ಏನೂ ಆಗುವುದಿಲ್ಲ. ನಬಾರ್ಡ್‌ನವರು ಜೊತೆಗೆ ಕೊಳವೆಬಾವಿಗಳನ್ನು ಕೊರೆಯಲಿಕ್ಕೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರಿಗೆ ಆರ್ಡರ್‌ಗಳನ್ನು ಕೊಟ್ಟಿದ್ದಾರೆಂದು ಕಾಣುತ್ತದೆ. ಆದರೆ ಅವರ ಹತ್ತಿರ ರಿಗ್ಸ್ ಇಲ್ಲ. ಅವರೂ ಬಾಕಿಯವರ ಹಾಗೆ ಬಾಡಿಗೆಗೆ ತೆಗೆದುಕೊಂಡುಬಂದು ಮಾಡುವುದು. ಅವರಿಗೆ ಕಮಿಷನ್ ಬೇಕು. ಸರ್ಕಾರದಲ್ಲೇ ಕಮಿಷನ್ ಹೊಡೆಯುವ ಜನ ಅವರು. ಅವರನ್ನೇ ಕೇಳಿ, ಎಷ್ಟು ಎಲೆಕ್ಟ್ರಿಫೈ ಮಾಡಿದ್ದೀರಿ ಎಂದು. ಇದನ್ನು ತಾವು ದಯವಿಟ್ಟು ಗಮನಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ನಾನು ಹೇಳುತ್ತೇನೆ. ಮತ್ತೆ, ಈ ಗಂಗಾಕಲ್ಯಾಣದ ಕಾರ್ಯಕ್ರಮಗಳಿಗೆ ೨೫ ಪರ್ಸೆಂಟ್ ಎಸ್.ಸಿ., ಎಸ್.ಟಿ.ಯವರು ಕೊಡಬೇಕು ಎಂದು ನಾವು ಕಾನೂನು ಮಾಡಿದ್ದೆವು. ಅದನ್ನು ದಯವಿಟ್ಟು ಬದಲಾವಣೆ ಮಾಡಿಬಿಡಿ. ಏಕೆಂದರೆ ಅದನ್ನು ಕೊಡುವ ತಾಕತ್ತು ಅವರಿಗೆ ಇಲ್ಲ. ದಯವಿಟ್ಟು ಅದನ್ನು ನಿಲ್ಲಿಸಬೇಕು. ಎಸ್.ಸಿ.ಪಿ. ಬೋರ್‌ವೆಲ್ಸ್‌ಗೆ ೩೫ ಸಾವಿರ ರೂಪಾಯಿ ಮಾತ್ರ ಕೊಡುತ್ತೇವೆ ಎಂದು ಹೇಳಿದ್ದೀರಿ. ಅದು ಸಾಲುವುದಿಲ್ಲ ಇವತ್ತು ನಾವು ಖಾಸಗಿಯವರು ಹಾಕಿದರೂ ೪೮ ಸಾವಿರ ರೂಪಾಯಿ ಆಗುತ್ತದೆ. ಆದ್ದರಿಂದ ಅದನ್ನು ಹೆಚ್ಚು ಮಾಡಬೇಕು. ೪೫ ಸಾವಿರ ರೂಪಾಯಿಯಾದರೂ ಮಾಡಿ. ಅದರಿಂದ ನಿಮಗೆ ಬಹಳ ಉಪಯೋಗ ಆಗುತ್ತದೆ. ಮತ್ತೆ ಅಂಬೇಡ್ಕರ್ ಅವರ ಕೆಲವು ಒರಿಜಿನಲ್ ವರ್ಕ್ಸನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕೆಂದು ನಾವು ಒಂದು ಸಮಿತಿಯನ್ನು ಮಾಡಿದ್ದೆವು. ಸ್ವಲ್ಪ ದುಡ್ಡು ಕೂಡ ಕೊಟ್ಟಿದ್ದೇವೆ. ಅದು ಏನೂ ಕೆಲಸ ಮಾಡಿದಹಾಗೆ ಕಾಣಲಿಲ್ಲ. ಬಹುಶಃ ಟ್ರಾನ್ಸಿಷನ್ ಪೀರಿಯಡ್ ಇತ್ತು ಎಂದು ಕಾಣುತ್ತದೆ. ಅದು ಬೇಗ ಆಗಬೇಕು. ಇನ್ನು ಬೆಂಗಳೂರಿನಲ್ಲಿ ಒಂದು ಅಂಬೇಡ್ಕರ್ ಭವನ ಮಾಡಬೇಕೆಂದು ಇತ್ತು. ಈ ವರ್ಗದ ಜನರ ಭಾವನೆಯ ಪ್ರತೀಕ ಅದು. ದಯಮಾಡಿ ಇದರಲ್ಲಿ ರಾಜಕೀಯ ಬೆರೆಸಲಿಕ್ಕೆ ಹೋಗಬೇಡಿ. ನೀವು ಕಟ್ಟಲಿಕ್ಕೆ ಆಗಲಿಲ್ಲ, ನಾವು ಕಟ್ಟುವುದಿಲ್ಲ. ನಾವೂ ಐದು ವರ್ಷ ಮುಂದೆ ಹಾಕುತ್ತೇವೆ ಎಂದು ಹೇಳಿದಗೆ ಇದರಲ್ಲಿ ಅರ್ಥ ಇಲ್ಲ. ಸರ್ಕಾರ ರದ್ದಾಯಿತು ಇಲ್ಲದಿದ್ದರೆ ನಾವು ಅದನ್ನು ಕಟ್ಟಿಸುತ್ತಿದ್ದೆವು. ನಾನು ಮತ್ತು ರಾಜ್ಯಪಾಲರು [illegible] ಫೌಂಡೇಷನ್ ಸ್ಟೋನ್ ಹಾಕಿದ್ದೆವು. ಆ ಸ್ಟೋನೇ ನಾಪತ್ತೆಯಾಗಿದೆ. ನಮ್ಮ ಹೆಸರು ಬೇಕಾದರೆ ತೆಗೆದುಹಾಕಿಬಿಡಿ. ಇನ್ನೊಂದು ಸಾರಿ ಬೇಕಾದರೆ ಫೌಂಡೇಷನ್ ಸ್ಟೋನ್ ನೀವೇ ಹಾಕಿಬಿಡಿ. ಒಟ್ಟಾರೆ ಭವನ ಕಟ್ಟಬೇಕು ಇಷ್ಟೇ ನಾವು ಕೇಳತಕ್ಕದ್ದು. ಅದೇರೀತಿ ತಕ್ಷಣ ಈ ಹಾಸ್ಟೆಲುಗಳಿಗೆ ಇರತಕ್ಕಂಥ ಕುಕ್‌ಗಳ ಬಗ್ಗೆ ಹೇಳಬೇಕಾದರೆ, ಆರ್ಥಿಕ ಇಲಾಖೆಯವರು ನಿಮ್ಮ ಬಗ್ಗೆ ಏಕೋ ಕರುಣೆ ತೋರಿಸಿಲ್ಲ. ಗಣಿ ಮತ್ತು ಭೂವಿಜ್ಞಾನ ಖಾತೆಯೂ ನಿಮಗೆ ಇದೆ. ಆದ್ದರಿಂದ ಅವರು ಸ್ವಲ್ಪ ಕರುಣೆ ತೋರಿಸಬೇಕಿತ್ತು. ಆದರೆ ಏಕೋ ತೋರಿಸುತ್ತಿಲ್ಲ. ಈ ಕುಕ್‌ಗಳನ್ನು ರಿಕ್ರೂಟ್ ಮಾಡಲಿಕ್ಕೆ ನಿರ್ಬಂಧ ಏನಿದೆ, ಅದನ್ನು ಸಡಿಲಮಾಡಿ. ಇಲ್ಲದಿದ್ದರೆ ಹಾಸ್ಟೆಲ್‌ಗಳಿಗೆ ನೀವು ಸ್ವಂತ ಬಿಲ್ಡಿಂಗ್‌ಗಳನ್ನು ಕಟ್ಟಿ ಕುಕ್‌ಗಳನ್ನು ನೀವು ಕೊಡದೇ ಹೋದರೆ it is again a fraud. ಅಲ್ಲಿ ಒಳ್ಳೆಯ ಕೆಲಸ ಏನೂ ಆಗುವುದಿಲ್ಲ. ಆದ್ದರಿಂದ ತಕ್ಷಣ ಇದನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಮತ್ತೆ ಈ ಹಾಸ್ಟೆಲ್‌ಗಳಿಗೆ ಕೊಡುವ ಆಹಾರದ ಬಗ್ಗೆ ಹೇಳಬೇಕೆಂದರೆ ಇದನ್ನು ಏಕೆ ಫೇರ್‌ಪ್ರೈಸ್ ಡಿಪೋ ಮೂಲಕ ಕೊಡಬಾರದು ? ನಾನು ಇದ್ದಾಗ ಪ್ರಯತ್ನ ಮಾಡಿದೆ. ಫುಡ್ ಅಂಡ್ ಟ್ರಾನ್ಸ್‌ಪೋರ್ಟ್ ಸೆಕ್ರೆಟರಿ ಜೊತೆಯಲ್ಲಿ ನೀವು ಮಾತನಾಡಿ ಅವರಿಗೆ ಆಹಾರ ಪದಾರ್ಥಗಳನ್ನು ಕೊಡಿಸಿ. ಅದರಿಂದ ಅವರಿಗೆ ಉಪಯೋಗವಾಗುತ್ತದೆ.

ಕೊನೆಯದಾಗಿ ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ತಾವು ಏನು ಎಸ್‌ಸಿ.ಎಸ್‌ಟಿಗಳಿಗೆ ಅಸೆಟ್ ಎಂದು ಏನು ಕೊಡುತ್ತೀರಿ, ಅದನ್ನು ಮಾರತಕ್ಕವರಿಗೆ ಮತ್ತು ಅದನ್ನು ಕೊಳ್ಳತಕ್ಕವರಿಗೆ ಹೀಗೆ ಇಬ್ಬರಿಗೂ ಶಿಕ್ಷೆ ವಿಧಿಸುವ ಕಾನೂನನ್ನು ಈ ಸದನದಲ್ಲಿ ತೆಗೆದುಕೊಂಡು ಬನ್ನಿ. ಇದನ್ನು ಇಡೀ ರಾಷ್ಟ್ರದಲ್ಲೇ ಯಾರೂ ಮಾಡಿಲ್ಲ. ಅದನ್ನು ಮಾಡಿದರೆ ಬಹಳ ಉಪಯೋಗ ಆಗುತ್ತದೆ. ಅವರಿಗೂ ಕೂಡ ಇದನ್ನು ತೆಗೆದುಕೊಳ್ಳಬಾರದು ಎಂದು ಭಯ ಇರುತ್ತದೆ. ಈಗೇನು ಸ್ಮಗಲ್ಡ್ ಗೂಡ್ಸನ್ನು ತೆಗೆದುಕೊಂಡವರಿಗೂ ಭಯ ಇರುತ್ತದೆ ಮತ್ತು ಅದನ್ನು ಮಾರುವವನಿಗೂ ಭಯ ಇರುತ್ತದೆಯೋ ಆ ರೀತಿ ಒಂದು ಕಾನೂನನ್ನು ಇವರ ಆಸ್ತಿಯ ಬಗ್ಗೆಯೂ ಮಾಡಿ. ಆಮೇಲೆ ಸಿ.ಆರ್.ಸಿ. ಸೆಲ್‌ಗೆ ಉತ್ತಮ ಅಧಿಕಾರಿ ಇದ್ದಾರೆ. ನಾನು ಒಪ್ಪುತ್ತೇನೆ. He has got concern and commitment towards these people ಆದರೆ ಇದನ್ನು ಇನ್ನೂ ಬಲಪಡಿಸಬೇಕು. ಅದರಲ್ಲಿ ಮಾತ್ರ ಇಂಟರ್‌ಫಿಯರೆನ್ಸ್ ಮಾಡುವುದಕ್ಕೆ ತಾವು ಹೋಗಬೇಡಿ. ಅದರಲ್ಲಿನ ವರ್ಗಾವಣೆ ಬಗ್ಗೆ ಕೇಸ್‌ಗಳ ವಿಚಾರದ ಬಗ್ಗೆ ಬಹಳ ಒತ್ತಡ ಬರುತ್ತದೆ. ಅಂದರೆ ಈ ಕಡೆಯವರಿಂದ ಅದು ಬರುತ್ತದೆ ಎಂದು ಶ್ರೀ ರೈಅವರು ಹೇಳುವುದು ಬೇಡ. ಒತ್ತಡ ಎಲ್ಲ ಕಡೆಯಿಂದಲೂ ಬರುತ್ತದೆ. ಅದರಲ್ಲಿ ನೀವು ಇಂಟರ್‌ಫಿಯರ್

ಮಾಡುವುದಕ್ಕೆ ಹೋದರೆ ಈ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಒದಗಿಸುವುದಕ್ಕೆ ಆಗುವುದಿಲ್ಲ ವೆಂಬದನ್ನು ನಾನು ಖಚಿತವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತು ಕೊನೆಯದಾಗಿ, ಈ ಸ್ಪೆಷಲ್ ಕಾಂಪೋನೆಂಟ್ ಪ್ರೋಗ್ರಾಮ್ಸ್ ಏನಿದೆ ಇದರ ಇಂಪ್ಲಿಮೆಂಟೇಷನ್ ಮತ್ತು ಅನೇಕ ವೇಸ್ಟ್‌ಫುಲ್ ಎಕ್ಸ್‌ಪೆಂಡಿಚರ್, ನಾನ್‌ಪ್ರಾಡಕ್ಟಿವ್ ಪ್ರೋಗ್ರಾಮ್ಸ್ ಏನಿದೆ, ಅದನ್ನು ತೆಗೆದುಹಾಕಿಬಿಡಿ. ಇದು ಯಾವಾಗಲೂ ಕಾನ್‌ಸ್ಟಂಟ್ ಆಗಿ ಇರುವುದಿಲ್ಲ. ಈ ವರ್ಷ ಉಪಯೋಗವಾಗತಕ್ಕಂಥ ಕಾರ್ಯಕ್ರಮ ಮುಂದಿನ ವರ್ಷ ಉಪಯೋಗ ಆಗದೇ ಇರಬಹುದು. ಮತ್ತೆ ಮುಂದಿನ ವರ್ಷ ಆಗಬಹುದು. ಇದಕ್ಕೆ ನೀವು ಒಂದು ಆಟಾನಮಸ್ ರೀಸರ್ಚ್ ಇನ್ಸ್ಟಿಟ್ಯೂಟ್ ಸ್ಥಾಪನೆ ಮಾಡಿ ಇವರ ಬಗ್ಗೆ ನಾನು ಯೋಚನೆ ಮಾಡಿದ್ದೆ ; ಅದರ ಫೈಲ್ ಇದೆ. But, there should be an independent autonomus institute like the one in the name of Sri Devaraja Urs for Scheduled Castes and Scheduled Tribes. ಈ ತರಹದ್ದು ಒಂದು ಮಾಡಿ. ಅದಕ್ಕೆ ಅಂಬೇಡ್ಕರ್ ಅವರ ಹೆಸರನ್ನೇ ಇಡಿ. ಇಷ್ಟೊಂದು ಯೋಜನೆಗಳಿದ್ದರೂ ಫಲಾನುಭವಿಗಳಿಗೆ ಯಾಕೆ ಅದರ ಫಲ ಹೋಗಿಲ್ಲ, ಹೋಗಬೇಕಾದರೆ ಏನು ಮಾಡಬೇಕು ಎಂಬ ಬಗ್ಗೆ ವಿಚಾರ ಮಾಡಬೇಕು. ಮುಖ್ಯವಾಗಿ ಇದರಲ್ಲಿ ಪೊಲಿಟಿಕಲ್ ಇಂಟರ್‌ಫಿಯರೆನ್ಸ್ ಇರಬಾರದು. ಇದರ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಆಮೇಲೆ ಈ ವರ್ಗದ ಜನರನ್ನು ಡೆಲ್ಲಿಯಲ್ಲಿ ರಾವ್ಸ್ ಇನ್ಸ್ಟಿಟ್ಯೂಟ್ ಅಂತ ಏನಿದೆ ಅಲ್ಲಿಗೆ ಹತ್ತು ಹತ್ತು ಜನರನ್ನು ಸೆಲೆಕ್ಟ್‌ಮಾಡಿ ಅಂದರೆ ಎಸ್‌ಸಿ/ಎಸ್‌ಟಿಯ ಹತ್ತು ಜನ, ಹಿಂದುಳಿದ ವರ್ಗಗಳ ಹತ್ತು ಜನರನ್ನು ಆಯ್ಕೆ ಮಾಡಿ ಅದರ ಮೂಲಕ ಐಎಎಸ್ ಪರೀಕ್ಷೆಗಳಿಗೆ ಕಳಿಸಿಕೊಡಿ.

ನಮ್ಮವರೂ ಒಂದಷ್ಟು ಜನ ಪಾಸಾಗಲಿ. ಸೋಷಿಯಲ್ ವೆಲ್‌ಫೇರ್ ಡೈರಕ್ಟರನ್ನು ನೀವು ಏನು ಪೋಸ್ಟ್ ಮಾಡುತ್ತೀರಿ, ಈ ಬಗ್ಗೆ ನಾನು ಯಾವಾಗಲೂ ಹೇಳುತ್ತೇನೆ. ಏನೆಂದರೆ ಬೇರೆ ಅಧಿಕಾರಿಗಳಿಗೂ ಈ ಭಾವನೆ ಇದೆ, ಅವರಿಗೆ ಇದನ್ನು ಹೇಳಿಕೊಳ್ಳುದಕ್ಕಾಗುವುದಿಲ್ಲ ಏಕೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲೇ ಕೆಲಸ ಮಾಡಬೇಕೆಂದು ಈ ವರ್ಗದ ಜನ ಸಹ ಹೇಳುತ್ತಾರೆ. ಎಲ್ಲೂ ಸಿಕ್ಕುವುದಿಲ್ಲ ಇಲ್ಲಾದರೂ ಕೊಡಿ ಎಂದು ಕೇಳತಕ್ಕ ಸ್ಥಿತಿ ಬಂದಿದೆ ನಿಮ್ಮ ವರ್ಗಾವಣೆ ಒಂದು ಪರಿಸ್ಥಿತಿಯಿಂದ ಇದನ್ನು ದಯಮಾಡಿ ವಿಚಾರ ಮಾಡಬೇಕು. ಜೊತೆಗೆ ನಿಮ್ಮ ಖಾತೆಯೂ ಬದಲಾವಣೆ ಆಗಬೇಕು. ನೀವು ಗಣಿ ಮತ್ತು ಭೂವಿಜ್ಞಾನ ಇಲಾಖೆ ಇಟ್ಟುಕೊಳ್ಳಿ, ಫೈನಾನ್ಸ್ ಮಿನಿಸ್ಟರ್ ಆಗಿ, ಏಕೆ ಸೋಷಿಯಲ್ ವೆಲ್‌ಫೇರ್ ಖಾತೆಯನ್ನು ಈ ವರ್ಗದವರೇ ನೋಡಿಕೊಳ್ಳಬೇಕು. ನಿಮಗೆ ಬೇರೆ ಖಾತೆಗಳನ್ನು ನೋಡಿಕೊಳ್ಳುವ ಕೆಪಾಸಿಟಿ ಇಲ್ಲವೇ ? ನಿಮ್ಮನ್ನು ವಿರೋಧ ಮಾಡುವವರೂ ಇದ್ದಾರೆ ಎಡಗೈಯಂತೆ, ಬಲಗೈಯಂತೆ, ಲಂಬಾಣಿಗಳಂತೆ ಬೋವಿಗಳಂತೆ, ಏಕೆ ?

ಶ್ರೀ ಎಂ. ಪಿ. ವೆಂಕಟೇಶ್.—ಏಕೆ ಇವರಿಗೇ ಕೊಡುತ್ತಾರೆಂದರೆ, ಈ ವರ್ಗದ ಜನರಿಗಾಗಿ ಕೆಲಸ ಮಾಡುತ್ತೇವೆಂದರೆ ಅದಕ್ಕೆ ಬೇರೆಯವರು ಅವಕಾಶ ಕೊಡುವುದಿಲ್ಲ, ಈ ಬಗ್ಗೆ ಸಾರ್ವಜನಿಕರು ಏನಾದರು ಕೇಳಿದಾಗ, ನಿಮ್ಮವರೇ ಮಂತ್ರಿಗಳು ಇದ್ದರೂ ಏನೂ ಮಾಡಲಿಲ್ಲ ಎಂದು ಹೇಳುವುದಕ್ಕೋಸ್ಕರ ಈ ಷೆಡ್ಯೂಲ್ಡ್‌ಕ್ಯಾಸ್ಟ್‌ನವರಿಗೇ ಈ ಖಾತೆಯನ್ನು ಕೊಡುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇಲ್ಲಿ ನಿಮ್ಮ ಸ್ನೇಹಿತರು ಇದ್ದಾರೆ ಅವರೆಲ್ಲರೂ ಇದರ ಚರ್ಚೆಯಲ್ಲಿ ಭಾಗವಹಿಸುತ್ತಾರೆ. ಅವರ ಸಹಾಯ ಪಡೆದು ನೀವು ಈ ಬಗ್ಗೆ ಏನು ಮಾಡುತ್ತೀರೋ ಮಾಡಿ. ಇನ್ನು ಗ್ರಾಂಟ್ ಇನ್ ಏಡ್ ಇನ್‌ಸ್ಟಿಟ್ಯೂಷನ್ಸ್ ಬಗ್ಗೆ, ಹಿಂದೆ ಬೀದರ್‌ನಲ್ಲಿ ನಮ್ಮ ಮೇಲೆ ಒತ್ತಡ ತಂದರು. ಅವರ ಮೇಲೆ ಕ್ರಿಮಿನಲ್ ಕೇಸ್ ಕೂಡ ಹಾಕಿದ್ದೆವು. ಇದನ್ನು ವಾಪಸ್ ತೆಗೆಸಬೇಕೆಂದು ಒಂದು ದೊಡ್ಡ ರಾಜಕೀಯ ಮಾಡಿದರು. ನೀವೂ ಬಗ್ಗಬೇಡಿ, ನಿಮ್ಮ ಮೇಲೂ ಒತ್ತಡ ಬಂದಿರಬಹುದು. ಗ್ರಾಂಟ್ ಇನ್ ಏಡ್ ಬಗ್ಗೆ ಒಂದು ವಿಚಾರ ನಾನು ಒಪ್ಪುತ್ತೇನೆ. ನಾವು ಕೊಡತಕ್ಕ ಹಣ ಸಾಲುವುದಿಲ್ಲ. ೧೦೦–೧೫೦ ರೂಪಾಯಿ ಹುಡುಗರಿಗೆ ಕೊಟ್ಟರೆ ಸಾಕಾಗುವುದಿಲ್ಲ. ಇದನ್ನು ಹೆಚ್ಚು ಮಾಡೋಣ, ಕಡಿಮೆ ವಿದ್ಯಾರ್ಥಿಗಳಿಗೆ ಕೊಡಲಿ. ಆದರೆ ಅವರ ಹೆಸರಿನಲ್ಲಿ ಶೋಷಣೆ ಆಗುವುದನ್ನು ನಿಲ್ಲಿಸಬೇಕು. ತಮಗೆ ಗೊತ್ತಿದೆ, ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ನೂರು ಜನ ಎಂದು ಹೇಳುತ್ತಾರೆ, ಇನ್ನೂರು ಜನರು ಎಂದು ಬರೆದಿರುತ್ತಾರೆ. ೫೦ ಜನ ಇದ್ದರೆ, ನೂರು ಜನ ಇದ್ದಾರೆ ಎಂದು ಬರೆದಿರುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ.—ನಮ್ಮ ಜಿಲ್ಲೆಯಲ್ಲಿ ಮಾತ್ರ ಏಕೆ ಹೇಳುತ್ತೀರಿ, ನಮ್ಮ ಒಬ್ಬರಿಗೇ ಕೆಟ್ಟ ಹೆಸರು ಬೇಡ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ರಾಜ್ಯದ ೨೦ ಜಿಲ್ಲೆಗಳಲ್ಲೂ ಇದೇ ರೀತಿ ನಡೆಯುತ್ತಿದೆ. ಇನ್ನು ಬಹಳ ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಇರತಕ್ಕ ಹೈಪವರ್ ಕಮಿಟಿ, ಏನಿದೆ, ಇದು ಆರು ತಿಂಗಳಲ್ಲಿ ಒಂದು ಸಾರಿಯೂ ಸಭೆ ನಡೆದಿಲ್ಲ. ಈ ವರ್ಗದ ಜನಗಳ ಬಗ್ಗೆ...

ಶ್ರೀ ಬಿ. ಶಿವಣ್ಣ.—ಈಗಾಗಲೇ ಮುಖ್ಯಮಂತ್ರಿಗಳು ಸಭೆ ಕರೆದು ಡಿಸ್‌ಕಸ್ ಮಾಡಿದ್ದಾರೆ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಾಗಾದರೆ ನೀವು ಇದನ್ನು ಪತ್ರಿಕೆಯಲ್ಲಿ ಹೇಳಿ, ಸಭೆಗೆ ಯಾರು ಯಾರು ಅಧಿಕಾರಿಗಳು ಬಂದಿದ್ದರು, ಯಾವ ಯಾವ ದಿನ ಸಭೆ ಮಾಡಿದಿರಿ. ಸಭೆಯಲ್ಲಿ ಏನು ತೀರ್ಮಾನ ಮಾಡಿದೆ, ಎಂಬ ಪ್ರೊಸೀಡಿಂಗ್ಸನ್ನು ಪತ್ರಿಕೆಗೆ ಹೇಳಿ. ಈ ಸಭೆ ಪ್ರತಿ ತಿಂಗಳೂ ಸೇರಬೇಕು. This is a very important programme of any Government ಇನ್ನು ಹಾಸ್ಟಲುಗಳಿಗೆ ಬೋರ್ಡಿಂಗ್ ಚಾರ್ಜಸ್ ಎಂದು ಏನು ದುಡ್ಡು ಕೊಡುತ್ತೇವೆ, ಇದನ್ನು ಏಜೆನ್ಸಿ ಮೂಲಕ ಕೊಡುತ್ತಿರುವುದನ್ನು ನಿಲ್ಲಿಸಬೇಕು, ಚೆಕ್ ಮೂಲಕ ನೇರವಾಗಿ ಕಳುಹಿಸಿಕೊಡಬೇಕು. ಬೀದರ್ ಜಿಲ್ಲೆಯಲ್ಲೇನೋ, ಅಲ್ಲಿನ ಜಿಲ್ಲಾಪರಿಷತ್ ಅಧ್ಯಕ್ಷರು ಈ ರೀತಿ ಮಾಡುತ್ತಿದ್ದಾರೆ. ಇದನ್ನು ಎಲ್ಲ ಕಡೆಯೂ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಹಿಂದುಳಿದ ವರ್ಗಗಳ ಇಲಾಖೆ ಮತ್ತು ಅಲ್ಪಸಂಖ್ಯಾತರ ಇಲಾಖೆ ..

ಉಪ ಸಭಾಧ್ಯಕ್ಷಿಣಿಯವರು.—ನಿಮಗೆ ಇನ್ನೂ ಎಷ್ಟು ಹೊತ್ತು ಬೇಕು. ಇನ್ನೂ ೧೦ ಜನ ಮಾತನಾಡುವವರು ಇದ್ದಾರೆ...

ಶ್ರೀ ಪಿ. ಜಿ ಆರ್. ಸಿಂಧ್ಯ.—ನೀವು ನನಗೆ ಸಹಾಯ ಮಾಡಬೇಕು. ಇನ್ನೂ ಮಹಿಳೆಯರ ಬಗ್ಗೆ, ಮಕ್ಕಳ ಬಗ್ಗೆ ಮಾತನಾಡಬೇಕು.

ಶ್ರೀ ಕರಿಯಣ್ಣ.—ಎರಡು ದಿವಸವಾದರೂ ಚಿಂತೆಯಿಲ್ಲ ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕು. ಅದು ಪ್ರಾಮುಖ್ಯವಾದ ಇಲಾಖೆಯ ಬೇಡಿಕೆಯಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನನಗೆ ಮಾತನಾಡಬೇಕೆಂಬ ಚಟವಿಲ್ಲ, ಎಲ್ಲಾ ಇಲಾಖೆಗಳ ಮೇಲೆ ನಾನು ಮಾತನಾಡುವುದಿಲ್ಲ. ಸಹಕಾರ ಇಲಾಖೆಯ ಬಗ್ಗೆ ಶ್ರೀ ಏಕಾಂತಯ್ಯನವರು ಮಾತನಾಡುತ್ತಾರೆ. ಆ ಇಲಾಖೆಯ ಬಗ್ಗೆ ನಾನೇನು ಮಾತನಾಡಲು ಸಾಧ್ಯ. I am having a real concern and commitment. That is why I am pressing. ಈ ಹಿಂದುಳಿದ ವರ್ಗಗಳ ಬಗ್ಗೆ ಚಿನ್ನಪ್ಪರೆಡ್ಡಿ ಕಮಿಷನ್‌ರವರು ವರದಿಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಲಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಈ ವಿಚಾರದಲ್ಲಿ ನಾವು ಆ ಕಡೆ ಇದ್ದಾಗ ತಪ್ಪು ಮಾಡಿದ್ದೇವೆ. ನೀವು ಆ ತಪ್ಪನ್ನು ಮಾಡುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ ನೋಡೋಣ, ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟಲ್‌ಗಳು ಷೆಡ್ಯೂಲ್ಡ್ ಹಾಸ್ಟಲ್‌ಗಳು ಎಂದು ಏತಕ್ಕೆ ಇರಬೇಕು, ಒಂದೇ ಹಾಸ್ಟಲ್ ಮಾಡೋಣ. ಈ ಹಾಸ್ಟಲ್‌ಗಳ ಬಗ್ಗೆ ಒಂದು ಡೈರೆಕ್ಟರೇಟ್ ಮಾಡಲು ಹಿಂದೆ ನಮ್ಮ ಸರ್ಕಾರ ಇದ್ದಾಗ ಒಂದು ಕಮಿಟಿಯನ್ನು ಕೂಡ ಮಾಡಿತ್ತು. ಡೈರೆಕ್ಟರ್ ಆಫ್ ಬ್ಯಾಕ್‌ವರ್ಡ್ ಕ್ಲಾಸಸ್ ಆಫ್ ಹಾಸ್ಟಲ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಎಂದು ಮಾಡಿ, ಅದನ್ನು ಮಾಡಿ ಅವರಿಗೆ ಕಟ್ಟಡವನ್ನು ಕಟ್ಟಿಸಿಕೊಡಿ, ಫೇರ್‌ಪ್ರೈಸ್ ಡಿಪೋ ಮೂಲಕ ಅವರಿಗೆ ಊಟ ಒದಗಿಸಿ, ಮತ್ತು ಅವರಿಗೆ ಏನು ಬೋರ್ಡಿಂಗ್ ಚಾರ್ಜಸ್ ಕೊಡುತ್ತೀರಿ ಅದನ್ನು ಚೆಕ್ ಮೂಲಕ ಕೊಡತಕ್ಕ ಒಂದು ಸಿಸ್ಟಂ ಅನ್ನು ಜಾರಿಗೆ, ತೆಗೆದುಕೊಂಡು ಬನ್ನಿ ಇದರಿಂದ ಹೆಚ್ಚು ಉಪಯೋಗವಾಗುತ್ತದೆ. ಮಹಿಳಾ ಹಿಂದುಳಿದ ತರಬೇತಿ ಕೇಂದ್ರ ಗೌರಿಬಿದನೂರಿನಲ್ಲಿದೆ ಎಂದು ಈ ವರದಿಯಲ್ಲಿ ಹೇಳಿದ್ದಾರೆ. ಇದು ಪುಸ್ತಕದಲ್ಲಿದೆ, ದಯವಿಟ್ಟು ಒಂದು ಸಾರಿ ಇನ್‌ಸ್ಪೆಕ್ಷನ್ ಮಾಡಿ. It is almost closed. It is a non-functioning body. ಈ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆ ತರಬೇತಿ ಕೇಂದ್ರಗಳನ್ನು ಮಾಡಿದ್ದೇವೆಂದು ಹೇಳಿದ್ದೀರಿ, ಇದು ಔಟ್ ಡೇಟೆಡ್ ಪ್ರೋಗ್ರಾಂ ೨೦ ವರ್ಷಗಳ ಹಿಂದೆ ಈ ಪ್ರೋಗ್ರಾಂನಿಂದ ಉಪಯೋಗವಾಗುತ್ತಿತ್ತು. ಈಗ ಏನಾಗಿದೆಯೆಂದರೆ ಯಾರೋ ಮಧ್ಯವರ್ತಿ ಏಜೆಂಟ್‌ಗಳಿಗೆ ಈ ಹೊಲಿಗೆ ಯಂತ್ರಗಳನ್ನು ಸಪ್ಲೈ ಮಾಡುವವರಿಗೆ ಉಪಯೋಗವಾಗಿದೆ. ಕೆಲವು ಅಧಿಕಾರಿಗಳಿಗೆ ಕೆಳಮಟ್ಟದಲ್ಲಿ ಉಪಯೋಗಗಳು ಆಗುತ್ತಿದೆಯೇ ವಿನಃ ಈ ವರ್ಗದ ಜನರಿಗೆ ಏನೂ ಉಪಯೋಗವಾಗಿಲ್ಲವೆಂದು ಒತ್ತಿ ಹೇಳುತ್ತೇನೆ. ತಾವು ದಯವಿಟ್ಟು ಇಂತಹ ಕಾರ್ಯಕ್ರಮಗಳನ್ನು ರಿವ್ಯೂ ಮಾಡಿ ಆಮೇಲೆ ಬ್ಯಾಕ್‌ವರ್ಡ್ ಕ್ಲಾಸಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಹಾಗೂ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಹೆಸರಿನಲ್ಲಿ ಹೆಚ್ಚಿನ ಕೆಲಸಗಳು ಆಗಬೇಕು. ಅವರ ಹೆಸರಿನಲ್ಲಿ ನೀವು ಅಧಿಕಾರಕ್ಕೆ ಬಂದಿರುವಾಗ ನೀವು ಫೈಟ್ ಮಾಡಬೇಕು. ೨೫ ಲಕ್ಷ ರೂಪಾಯಿಗಳ ದಂಡವನ್ನು ಇಟ್ಟಿದ್ದಾರೆ. ಇದರಿಂದ ಏನೂ ಆಗುವುದಿಲ್ಲ.

೧೨ ಕೋಟಿ ಆದರೂ ಇದಕ್ಕೆ ಕೊಡಬೇಕಾಗಿತ್ತು. ನೀವು ೨೫ ಲಕ್ಷ ರೂಪಾಯಿ ಕೊಟ್ಟು ಬ್ಯಾಕ್‌ವರ್ಡ್ ಕ್ಲಾಸಸ್‌ನವರಿಗೆ ಬಹಳ ಸಹಾಯ ಮಾಡುತ್ತೇವೆಂದರೆ ಏನು ಅರ್ಥ ? ರಸ್ತೆ, ಜಮೀನು ಇವುಗಳಿಂದ ಒಂದು ವರ್ಗದ ಜನರಿಗೆ ಅನುಕೂಲವಾಗುತ್ತದೆ. ಈ ವರ್ಗದ ಜನರಿಗೆ ನಿಜವಾಗಿಯೂ ಉಪಕಾರ ಆಗತಕ್ಕದ್ದು ಈ ಕಾರ್ಪೊರೇಷನ್‌ಗಳ ಮೂಲಕ ಆದ್ದರಿಂದ ಈ ಕಾರ್ಪೊರೇಷನ್‌ಗಳಿಗೆ ಒಂದು ಜೀವ ಕೊಡಿ. ಇನ್ನು ಮೋಟಾರ್ ಡ್ರೈವಿಂಗ್ ತರಬೇತಿ ಯೋಜನೆಯೊಂದು ಇದೆ. ಇದು ಬಹಳ ಒಳ್ಳೆಯ ಯೋಜನೆ ಸ್ವಲ್ಪ ಹುಡುಗರಿಗೆ ಸಹಾಯ ಆಗುತ್ತಿದೆ. ಹಿಂದುಳಿದ ವರ್ಗದ ಬಡವರಿಗೆ ಬೇರೆ ಕೆಲಸ ಸಿಕ್ಕುವುದಿಲ್ಲ. ಆದ್ದರಿಂದ ಅವರು ಡ್ರೈವಿಂಗ್ ಅನ್ನು ಕಲಿತು ಜೀವನ ಮಾಡಬಹುದು. ಆದರೆ ಎಸ್. ಸಿ. ಎಸ್. ಟಿ. ಕಾರ್ಪೊರೇಷನ್ ಅವರಿಗೆ ಈ ಡ್ರೈವಿಂಗ್ ತರಬೇತಿ ಕೆಲಸ ಕೊಟ್ಟಿದ್ದಾರೆ. ಅವರು ದುಡ್ಡು ಹಂಚಿಕೊಂಡು ಬಿಟ್ಟಿದ್ದಾರೆ. ಬೆಂಗಳೂರಿನಲ್ಲಿ ಕೆಲವು ಡ್ರೈವಿಂಗ್ ಟ್ರೈನಿಂಗ್ ತರಬೇತಿ ಶಾಲೆಗಳು ಇವೆ. ನಿಮಗೆ ಸರ್ಟಿಫಿಕೇಟ್ ಬೇಕು. ಅವರು ಕೊಡುತ್ತಾರೆ, ಕೇಳಿದರೆ ಡ್ರೈವಿಂಗ್ ಕಲಿಸಿದ್ದೇವೆಂದು ಹೇಳುತ್ತಾರೆ, ಹೀಗೆ ದುಡ್ಡನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ಈ ಕಾರ್ಯಕ್ರಮವನ್ನು ನಿಲ್ಲಿಸಬೇಕೆಂದು ನಾನು ಪ್ರಯತ್ನ ಮಾಡಿದೆ. ಎಂಟು ದಿವಸದಲ್ಲಿ ನಮ್ಮ ಸರ್ಕಾರ ಹೊರಟು ಹೋಯಿತು, ಈಗ ಏನಾಗಿದೆಯೊ ಗೊತ್ತಾಗಿಲ್ಲ. ತಾವು ದಯವಿಟ್ಟು ಕೆ. ಎಸ್. ಆರ್. ಟಿ. ಸಿ. ಕಡೆಯಿಂದ ಇದನ್ನು ಮಾಡಿಸಬಹುದು. ಕೆ. ಎಸ್. ಆರ್. ಟಿ. ಸಿಯಲ್ಲಿ ಸಹ ಬ್ಯಾಕ್‌ಲಾಗ್ ಇದೆ. ಅಲ್ಲಿ ಸಹ ಎಸ್. ಸಿ. ಎಸ್. ಟಿ. ರಿಜರ್‌ವೇಷನ್‌ನಲ್ಲಿ ಶೇಕಡ ೧೮ರಷ್ಟು ರೀಚ್ ಆಗಿಲ್ಲ ಮೊದಲು ಶೇಕಡ ೭ ರಷ್ಟು ಇತ್ತು, ನಾನು ಮತ್ತು ಎಂ. ಪಿ. ಪ್ರಕಾಶ್‌ರವರು ಈ ಇಲಾಖೆಯ ಮಂತ್ರಿಗಳಾಗಿದ್ದಾಗ ಅದಕ್ಕೆ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿಸಿ ಶೇಕಡ ೧೫ಕ್ಕೆ ತೆಗೆದುಕೊಂಡು ಬಂದೆವು. ಇದರ ಬಗ್ಗೆ ಹೊದಸಲ ಸದನ ಸಮಿತಿಯವರು ಕೂಡ ವರದಿಯನ್ನು ಕೊಟ್ಟಿದ್ದಾರೆ. ಕೆ. ಎಸ್. ಆರ್. ಟಿ. ಸಿ.ಯಲ್ಲಿ ಈ ಬ್ಯಾಕ್‌ವರ್ಡ್ ಕ್ಲಾಸಸ್ ಡ್ರೈವಿಂಗ್ ತರಬೇತಿ ಹಾಗೂ ಷೆಡ್ಯೂಲ್ ಕ್ಲಾಸಸ್ ಡ್ರೈವಿಂಗ್ ತರಬೇತಿ ಕಾರ್ಯಕ್ರಮವನ್ನು ಕೆ. ಎಸ್. ಆರ್. ಟಿ. ಸಿ. ಜೊತೆಗೆ ಸೇರಿಸಿ ಇರುವುದರಲ್ಲಿ ಸ್ವಲ್ಪ ಮೇಲು ಎಂದು ಆ ಸಮಿತಿ ಅವರು ಹೇಳಿದ್ದಾರೆ. ಟೈಅಫ್ ಮಾಡಿ. ಆಗ ಹುಡುಗರಿಗೆ ಕೆಲಸ ಸಿಗುತ್ತದೆ, ಆಗ ಸರ್ಕಾರದ ಹಣ ಸರಿಯಾಗಿ ಖರ್ಚಾಗುತ್ತದೆ. ಅದರಿಂದ ಎಲ್ಲರಿಗೂ ಉಪಯೋಗವಾಗುತ್ತದೆ. ಈ ಸರ್ಕಾರದವರು ಒಂದೇ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದೇನೆಂದರೆ ಶ್ರೀ ದೇವರಾಜ್ ಅರಸುರವರ ಹೆಸರಿನಲ್ಲಿ ಒಂದು ಸಂಶೋದನಾ ಸಂಸ್ಥೆಯನ್ನು ತೆಗೆಯತಕ್ಕದ್ದು. ಇದು ಸ್ವಾಗತಾರ್ಹವಾದ ಕಾರ್ಯಕ್ರಮವಾಗಿದೆ. ಆದರೆ ನಮ್ಮ ಬ್ಯಾಕ್‌ವರ್ಡ್ ಕ್ಲಾಸಸ್‌ಗಳಿಗೆ ಟೀಚಿಂಗ್ ಇನ್‌ಸ್ಟಿಟ್ಯೂಷನ್‌ಗಳನ್ನು ಹಾಗೂ ಟುಟೋರಿಯಲ್ಸ್‌ಗಳನ್ನು ನಡೆಸತಕ್ಕ ಕೋಚಿಂಗ್ ಕ್ಲಾಸಸ್‌ತರಹ ಈ ಸಂಶೋಧನಾ ಸಂಸ್ಥೆ ಆಗಬಾರದು. ಈ ಕೋಚಿಂಗ್ ಕ್ಲಾಸಸ್ ವಿಚಾರ ತಮಗೆ ಗೊತ್ತಿರಬಹುದು. ಯಾರು ಮೇಷ್ಟ್ರು ಪಾಠ ಮಾಡುವುದಕ್ಕೆ ಬರುತ್ತಾರೋ, ಯಾರು ಹುಡುಗರು ಹೋಗುತ್ತಾರೋ ಗೊತ್ತಿಲ್ಲ. ಅಟೆಂಡೆನ್ಸ್ ಇರುತ್ತದೆ. ಪುಸ್ತಕದಲ್ಲಿ ಸಂಬಳ ತೆಗೆದುಕೊಂಡಿರುವುದಕ್ಕೆ ಲೆಕ್ಕ ಇರುತ್ತದೆ, ಈ ಇನ್‌ಸ್ಟಿಟ್ಯೂಷನ್ ಸಹ ಹೀಗೆ ಆಗಬಾರದು. ಅನೇಕ ಜನ ಹಿಂದುಳಿದವರ್ಗಗಳ ಹೆಸರಿನಲ್ಲಿ ದುರುಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾವೂ ಹಿಂದುಳಿದ ವರ್ಗಗಳಾಗಬೇಕೆಂದು ಬಹಳಷ್ಟು ಜನಕ್ಕೆ ಆಸೆ ಇದೆ. ಆದುದರಿಂದ ನಿಜವಾದ ಹಿಂದುಳಿದ ವರ್ಗಗಳು ಯಾರು ಇದ್ದಾರೆ, ಇವರ ಆರ್ಥಿಕ ಪ್ರಗತಿ ಯಾವ ದೃಷ್ಟಿಯಿಂದ ಸಾಧ್ಯ ಎಂಬುದನ್ನು ರೀಸರ್ಚ್ ಮಾಡುವುದಕ್ಕೆ ಒಂದು ಇನ್‌ಸ್ಟಿಟ್ಯೂಷನ್ ಮಾಡಿರುತ್ತೀರಾ. ನಾವೇ ಇದರ ಬಗ್ಗೆ ಹಿಂದೆ ಮಾಡಿರುತ್ತೇವೆ. ಫೈಲ್ ತೆಗೆಸಿದರೆ ಗೊತ್ತಾಗುತ್ತದೆ ನಾನು ಇದನ್ನು ಸ್ವಾಗತ ಮಾಡುತ್ತೇನೆ. ಮತ್ತೆ ಹಾಲಿ ಇರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹೆಚ್ಚು ಮಾಡಬೇಕೆಂದು ಹೇಳಿರುತ್ತೀರಿ. ಅದನ್ನು ಮಾಡಬೇಕು ಮುಂದಿನ ವರ್ಷ ಈ ಸದನಕ್ಕೆ ಈ ಇಲಾಖೆಯ ಮೇಲೆ ಉತ್ತರ ಕೊಡುವಾಗ ಇದನ್ನು ಹೇಳಬೇಕು. ಇದಕ್ಕೆ ನೀವು ಉತ್ತರ ಕೊಡಬಾರದು, ಬೇರೆ ಇಲಾಖೆಗೆ ನೀವು ಉತ್ತರ ಕೊಡಬೇಕೆಂದು ನನ್ನ ಆಶಯ. ಅಕಸ್ಮಾತ್ತಾಗಿ ಉತ್ತರ ಕೊಟ್ಟರೆ ಎಷ್ಟು ಹೆಚ್ಚು ಮಾಡಿರುತ್ತೀರಿ ಎಂಬುದನ್ನು ಹೇಳಬೇಕು, ಬ್ಯಾಕ್‌ವರ್ಡ್ ಕ್ಲಾಸ್ ಹುಡುಗರಿಗೆ ಫೀಸ್ ಕೊಡತಕ್ಕಂಥ ಯೋಜನೆ ಇದೆ. ಇದು ಬಹಳ ದುರುಪಯೋಗವಾಗುತ್ತಿದೆ. ಇದನ್ನು ಆದಷ್ಟೂ ಚೆಕ್ ಸಿಸ್ಟಮ್ ಮೂಲಕ ಜಾರಿಗೆ ತೆಗೆದುಕೊಂಡು ಬಂದರೆ ಇದನ್ನು ಅವಾಯ್ಡ್ ಮಾಡಬಹುದೆಂದು ನಾನು ತಿಳಿದುಕೊಂಡಿದ್ದೇನೆ. ವಿದ್ಯಾವಿಕಾಸ ಯೋಜನೆಗೆ ಏತಕ್ಕೋ ನೀವು ಈ ಸಾರಿ ಪಂಗನಾಮ ಹಾಕುವಹಾಗೆ ಕಾಣುತ್ತಿದೆ, ಇದನ್ನು ಪ್ರಾರಂಭ ಮಾಡಿಯೇ ಇಲ್ಲ. ದಯವಿಟ್ಟು ಇದರ ಕಡೆ ತಾವು ಗಮನ ಕೊಡಬೇಕೆಂದು ಹೇಳುತ್ತೇನೆ.

ಮಾನ್ಯ ಉಪಾಧ್ಯಕ್ಷಣಿಯವರೇ, ನಾನು ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಬರುತ್ತೇನೆ. ಇದರಲ್ಲಿ ಇರತಕ್ಕ ಸಿಡಿಪಿಒ.ಗಳ ಮೇಲೆ ಬಹಳ ಕಂಪ್ಲೇಂಟ್ಸ್ ಇದೆ. ನಿಮ್ಮ ಡೈರೆಕ್ಟರ್‌ನ್ನು ಇದರ ಬಗ್ಗೆ ವಿಚಾರಿಸುವುದಕ್ಕೆ ಹೇಳಬೇಕು. ಐಸಿಡಿಎಸ್. ಪ್ರೋಗ್ರಾಂ ಬಹಳ ಮುಖ್ಯವಾಗಿರತಕ್ಕಂಥಾದ್ದು. ವುಮನ್ ಅಂಡ್ ಚಿಲ್ಡ್ರನ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂದರೆ ಐಸಿಡಿಎಸ್ ಪ್ರೋಗ್ರಾಂ. ಈ ಪ್ರೋಗ್ರಾಂನಲ್ಲಿ ಹೆಲ್ತ್ ಕಾಂಪೊನೆಂಟ್ ಏನಿದೆ ಇದರ ಅಚೀವ್‌ಮೆಂಟ್ ಸೊನ್ನೆ. ವುಮನ್ ಅಂಡ್ ಚಿಲ್ಡ್ರನ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಹೋದರೆ ಡಿ.ಹೆಚ್.ಒ. ಗಳು, ಮೆಡಿಕಲ್ ಆಫೀಸರ್‌ಗಳು ಲೆಕ್ಕಕ್ಕೇ ಇಟ್ಟುಕೊಂಡಿಲ್ಲ. ಪ್ರೈಮರಿ ಹೆಲ್ತ್ ಸೆಂಟರ್ಸ್‌ನಲ್ಲಿ ಇದರ ಬಗ್ಗೆ ಮೀಟಿಂಗ್ ಆಗಬೇಕೆಂದು ಇದೆ. ಆದರೆ ಮೀಟಿಂಗೇ ಆಗುವುದಿಲ್ಲ. ನಾನು ಇದರ ಬಗ್ಗೆ ಹೆಲ್ತ್ ಡಿಪಾರ್ಟ್‌ಮೆಂಟ್ ಮೇಲೆ ಡಿಸ್ಕಷನ್ ಮಾಡುವಾಗ ಹೇಳಿದ್ದೇನೆ. ಈ ಎರಡರ ನಡುವೆ ಕೋಆರ್ಡಿನೇಷನ್ನೇ ಇಲ್ಲ. ಐ.ಸಿ ಡಿಎಸ್ ಪ್ರೋಗ್ರಾಂನಲ್ಲಿ ಹಂಚುವ ಕೆಲಸ ಮಾತ್ರ ಆಗುತ್ತಿದೆ. ಈ ವಿಚಾರವನ್ನು ದಯವಿಟ್ಟು ಹೆಲ್ತ್ ಮಿನಿಸ್ಟರ್ ಜೊತೆಯಲ್ಲಿ ತೆಗೆದುಕೊಳ್ಳಬೇಕು, ಡಿವಿಜನಲ್ ಲೆವೆಲ್, ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ನೀವು ರಿವ್ಯೂ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಇದರ ಉಪಯೋಗ ಆಗುವುದಿಲ್ಲ. ಈ ಪ್ರೋಗ್ರಾಂ ಏನು ಹಾಕಿಕೊಂಡಿರುತ್ತೀರಿ ಇದರ ಬಗ್ಗೆ ಪುಸ್ತಕದಲ್ಲಿ ಟಾರ್ಜೆಟ್ ಅಚೀವ್ ಮಾಡುತ್ತೀರೇ ಹೊರತಾಗಿ, ಫೀಲ್ಡ್‌ನಲ್ಲಿ, ಪ್ರಾಕ್ಟಿಕಲ್ ಆಗಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ವುಮೆನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಮಾಡಿರುತ್ತೀರಿ. ಇದಕ್ಕೆ ಎರಡು ಲಕ್ಷನೋ, ಐದು ಲಕ್ಷನೋ ಕೊಟ್ಟಿದ್ದೀರಿ. ಇದಕ್ಕೆ ಕೊಟ್ಟಿರತಕ್ಕಂಥ ಹಣ ಏನೇನೂ ಸಾಲದು. ಇದಕ್ಕೆ ಕೇಂದ್ರ ಸರಕಾರದಿಂದ ಹೆಚ್ಚಿನ ಹಣವನ್ನು ಪಡೆಯಬಹುದು, ರಾಜ್ಯ ಸರಕಾರದವರು ಇದಕ್ಕೆ ಹೆಚ್ಚು ಹಣ ಹಾಕಬೇಕು. ಈಗೇನೋ ರಿಸೋರ್ಸಸ್ ಮೊಬಿಲೈಸೇಷನ್ ಮಾಡಿರುತ್ತೇವೆಂದು ಮಾನ್ಯ ಆರ್ಥಿಕ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಇದಕ್ಕೂ ಸ್ವಲ್ಪ ಹಣವನ್ನು ಪಡೆದುಕೊಳ್ಳಿ. ಇನ್ನೂ ಒಂದು ಪ್ರೋಗ್ರಾಂ ಇದೆ ಇದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಮ್ ಎಂದು ಇದೆ. ತಾವು ಈ ಸದನ ಮುಗಿದ ಮೇಲೆ, ತಾವು ವಿದೇಶಕ್ಕೆ ಹೋಗುವ ಮೊದಲು ಬೆಂಗಳೂರಿನಲ್ಲಿರ ತಕ್ಕಂಥ ಸ್ಲಮ್ ಏರಿಯಾಕ್ಕೆ ಹೋಗಿ ನೋಡಿ. ಇದಕ್ಕೆ ವಿಶೇಷ ಪೌಷ್ಟಿಕ ಆಹಾರ ಯೋಜನೆ ಎಂದು ಹೆಸರು. ಬ್ರೆಡ್ ಮತ್ತು ಹಾಲು ಹಂಚುವ ಒಂದು ಕಾರ್ಯಕ್ರಮ ಇದೆ. ಎಲ್ಲಿ ಅಂಗನವಾಡಿ ಇಲ್ಲವೋ ಅಲ್ಲಿ ಇದು ಇರುತ್ತದೆ. ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಂ ಎಂದು ಇದರ ಹೆಸರು. ಅಲ್ಲಿ ಒಂದು ಬೆಲ್ ಹೊಡೆಯುತ್ತಾರೆ. ೧೧-೧೨ ಘಂಟೆಗೆ ಬೆಲ್ ಹೊಡೆದಾಗ ಮಕ್ಕಳು ಬಂದು ತೆಗೆದು ಕೊಂಡು ಹೊರಟು ಹೋಗುತ್ತಾರೆ. ಅದೇನು ಕೊಡುತ್ತಾರೋ ಗೊತ್ತಿಲ್ಲ. ವಿಷ ಕೊಡುತ್ತಾರೋ ಏನೋ ಎಂದು ಅನೇಕ ಸಲ ನನ್ನ ಗಮನಕ್ಕೆ ಬಂದಿದೆ. ಈ ಪ್ರೋಗ್ರಾಂ ನಿಲ್ಲಿಸಿಬಿಡಿ, ಏನೂ ತೊಂದರೆ ಆಗುವುದಿಲ್ಲ. ಇದನ್ನು ನಿಲ್ಲಿಸಬೇಕೆಂಬ ಫೈಲ್‌ನ್ನು ಡೆವೆಲಪ್ ಮಾಡಿಸಿದ್ದೆ. ಅದನ್ನು ತೆಗೆದು ನೋಡಿದರೆ ನಿಮಗೆ ಗೊತ್ತಾಗುತ್ತದೆ. ಅದು ಆಗಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ನಮ್ಮ ಸರ್ಕಾರವಿದ್ದಾಗ ಒಂದು ಒಳ್ಳೆಯ ಕಾರ್ಯಕ್ರಮ ಮಾಡಿದ್ದೆವು. ಅದು ಏನೆಂದರೆ ನಿರ್ಗತಿಕ ವಿಧವೆಯರಿಗೆ ವಿಧವಾ ವೇತನ ಕೊಡುವುದು. ಕರ್ನಾಟಕ ರಾಜ್ಯದಲ್ಲಿ ಕಳೆದ ವರ್ಷ ಸುಮಾರು ೮ ಕೋಟಿ ರೂಪಾಯಿಗಳನ್ನು ೪ ಲಕ್ಷ ಜನ ವಿಧವೆಯರಿಗೆ ಈ ವಿಧವಾ ವೇತನ ಕೊಡಬೇಕೆಂದು ಒಂದು ಕಾರ್ಯಕ್ರಮ ಇತ್ತು. ಕಳೆದ ಮೂರು ಸಾರಿ ಅಧಿವೇಶನ ಸೇರಿದಾಗ, ನಾನು ಈ ಬಗ್ಗೆ ಕೇಳಿದೆ ನನಗೆ ಸರಿಯಾದ ಮಾಹಿತಿ ಕೊಡತಕ್ಕಂಥಾದ್ದು ಆಗಲಿಲ್ಲ. ಸರ್ಕಾರಕ್ಕೆ ಈ ಬಗ್ಗೆ ಕಿವಿ ಇಲ್ಲವೇ? ಅವರ ಕಷ್ಟ ಏನೂ ಎಂದು ನಿಮಗೆ ಅರ್ಥವಾಗುವುದಿಲ್ಲವೇ? ಕಳೆದ ೫-೬ ತಿಂಗಳುಗಳಿಂದ ನಾವು ನಮ್ಮ ಕ್ಷೇತ್ರಗಳಿಗೆ ಹೋದಾಗ ಜನ ಎಲ್ಲಿ ಸ್ವಾಮಿ, ನಮ್ಮ ಓ.ಎ.ಪಿ. ಮತ್ತು ವಿಧವಾ ಮಾಸಾಶನ ಮತ್ತು ಅಂಗವಿಕಲರ ಮಾಸಾಶನ ಬರಲಿಲ್ಲ, ಏತಕ್ಕೆ ಬರಲಿಲ್ಲ ಎಂದು ಕೇಳುತ್ತಾರೆ. ಈ ಮಧ್ಯೆ ಪೋಸ್ಟ್‌ಮ್ಯಾನ್‌ಗಳು ಸಹ ದುರ್ವ್ಯವಹಾರ ಮಾಡತಕ್ಕಂಥಾದ್ದು ಒಂದು ಕಡೆ ಇದೆ. ಅದಕ್ಕೆ ಸರಿಯಾಗಿ ಟ್ರೆಜರಿಗಳಲ್ಲಿ ಸಹ ತಿಂಗಳಾನುಗಟ್ಟಲೆ ಇಟ್ಟುಕೊಳ್ಳುತ್ತಾರೆ. ಇದಕ್ಕೆ ಸರ್ಕಾರದವರು ಏನಾದರೂ ಒಂದು ಹೊಸ ಸಿಸ್ಟಂ ಮಾಡಬೇಕು ಅಥವಾ ಬ್ಯಾಂಕ್‌ನಲ್ಲಿ ಅವರ ಹೆಸರಿನಲ್ಲಿ ಅಕೌಂಟ್ಸ್ ಓಪನ್ ಮಾಡಿಸಿ ನೇರವಾಗಿ ಬ್ಯಾಂಕ್‌ಗಳಿಗೆ ಈ ಹಣ ಹೋಗುವಂತೆ ಮಾಡಬೇಕು, ಈ ಬ್ಯಾಂಕ್‌ಗಳಿಗೆ ನೇರವಾಗಿ ತಾಲ್ಲೂಕು ಟ್ರೆಜರಿಯಿಂದ ಹಣ ಹೋಗತಕ್ಕಂಥ ಏರ್ಪಾಡು ಮಾಡುವ ಬಗ್ಗೆ ಸರ್ಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಹೆರಿಗೆ ಭತ್ಯೆ ಕೊಡತಕ್ಕಂಥಾದ್ದರ ಬಗ್ಗೆ ಹೇಳುವುದಾದರೆ ಪ್ರಾಥಮಿಕ ಆರೋಗ್ಯ ಘಟಕಗಳ ಮುಂದೆ ಆ

ಕೂಲಿ ಹೆಣ್ಣು ಮಗು ಹೋಗಿ ಸುಮಾರು ದಿವಸ ಕಾಯಬೇಕಾಗುತ್ತದೆ. ಅವರು ಕೊಡುವ ೩೦೦ ರೂಪಾಯಿಗಳಿಗ ಆ ಹೆಣ್ಣು ಮಕ್ಕಳ ನೋವು ನೋಡುವುದಕ್ಕೆ ಆಗುವುದಿಲ್ಲ. ಆ ಹೆಣ್ಣು ಮಗಳಿಗೆ ೯ ತಿಂಗಳಾಗಿರುತ್ತದೆ. ಆಕೆ ಕೈಯಲ್ಲಿ ನಿಂತುಕೊಳ್ಳುವುದಕ್ಕೂ ಆಗುವುದಿಲ್ಲ. ಅಂತಹ ಹೆಣ್ಣು ಮಗಳಿಗೆ ೩-೪ ತಿಂಗಳಾದರೂ ಸಹ ಆ ಹಣ ಸಿಗುವುದಿಲ್ಲ. ಅವರು ಕೊಡುವ ಹಣ ತೆಗೆದುಕೊಳ್ಳಬೇಕಾದರೂ ೧೦೦-೨೦೦ ರೂಪಾಯಿಗಳು ಖರ್ಚು ಮಾಡಬೇಕಾಗುತ್ತದೆ. ಇದಕ್ಕೆ ತಾವು ಒಂದು ಬೇರೆ ಸಿಸ್ಟಂ ಮಾಡುವುದಕ್ಕೆ ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ತಮ್ಮನ್ನು ಒತ್ತಾಯ ಮಾಡುತ್ತೇನೆ. ಇನ್ನು ಕೇಂದ್ರ ಸರ್ಕಾರದಿಂದ ಮಹಿಳಾ ಮತ್ತು ಮಕ್ಕಳಕಲ್ಯಾಣ ಯೋಜನೆಗೆ ಅಂದರೆ ಐ.ಸಿ.ಡಿ.ಎಸ್ ಪ್ರೋಗ್ರಾಂಗೆ ನಮ್ಮ ರಾಜ್ಯಕ್ಕೆ ಹೆಚ್ಚಿಗೆ ಬ್ಲಾಕ್ಸ್ ಕೊಡುವುದಕ್ಕೆ ತಯಾರು ಇದ್ದಾರೆ. ಆದರೆ ಅದಕ್ಕೆ ನಮ್ಮ ಆರ್ಥಿಕ ಇಲಾಖೆಯವರು ಒಪ್ಪಿಕೊಳ್ಳುವುದಿಲ್ಲ. ಅವರು ಹಣ ಇಲ್ಲ ಎಂದು ಹೇಳುತ್ತಾರೆ, ಒಂದನೇ ಮೂರು ಭಾಗದಷ್ಟು ಹಣ ನಾವು ಕೊಟ್ಟರೆ ಎರಡನೇ ಮೂರರಷ್ಟು ಹಣ ಕೇಂದ್ರ ಸರ್ಕಾರದವರು ಕೊಡುತ್ತಾರೆ, ಈ ಬಗ್ಗೆ ತಾವು ಒತ್ತಾಯ ತರಬೇಕು. ಇದು ಒಳ್ಳೆಯ ಕಾರ್ಯಕ್ರಮ ಇದರಿಂದ ಜನತೆಗೆ ಉಪಯೋಗ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಅಂಗವಿಕಲರ ಕಲ್ಯಾಣದ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಯಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೇವೆ. ಇವುಗಳನ್ನು ತಾವು ದಯಮಾಡಿ ಸ್ವಲ್ಪ ನೋಡಿ. ತಾವು ಈ ಯೋಜನೆಯಲ್ಲಿ ಹೆಣ್ಣು ಮಕ್ಕಳಿಗೆ ಸೀರೆ ಕೊಡುವ ಒಂದು ಪ್ರೋಗ್ರಾಂ ಏನಿದೆ ಅದನ್ನು ತಾವು ಕಿತ್ತು ಹಾಕಿ, ತಾವು ಸೀರೆ ಕೊಡದಿದ್ದರೂ ಸಹ ಚಿಂತೆ ಇಲ್ಲ. ತಾವು ಕೆಲವು ಕಡೆ ಭೇಟಿ ಕೊಡಿ ತಮಗೆ ಗೊತ್ತಾಗುತ್ತದೆ ತಾವು ಪ್ರೋಗ್ರಾಂ ಕೊಟ್ಟು ಹೋಗಬಾರದು. ಪ್ರೋಗ್ರಾಂ ಕೊಡದೆ ಹೋಗಿ ತಮ್ಮ ಅನುಭವಕ್ಕೆ ಬರುತ್ತದೆ. ತಮ್ಮ ಡೈರೆಕ್ಟರ್‌ಗೆ ಗೊತ್ತಾಗುತ್ತದೆ. ಸಿಜವಾಗಿಯೂ ಬೆಂಗಳೂರಿಗೆ ದೂರ ಇರತಕ್ಕಂಥ ಕಡೆ ತಾವು ಹೋಗಿ ನೋಡಿದರೆ ತಮಗೆ ಆಗ ಅರಿವು ಆಗುತ್ತದೆ. ಬೆಂಗಳೂರಿನಲ್ಲಿ ರಮಣ ಮಹರ್ಷಿ ಸ್ಕೂಲ್ ಆಫ್ ಬ್ಲೈಂಡ್ಸ್ ಏನು ಇದೆ, ಅಲ್ಲಿ ಕುರುಡು ಮಕ್ಕಳಿಂದ ಹಾಲು ಕರೆಸುತ್ತಾರೆ. ಆ ರೀತಿ ಅವರು ತರಬೇತಿ ಮಾಡಿದ್ದಾರೆ, ಆದ್ದರಿಂದ ತಾವೂ ಸಹ ತಮ್ಮ ಅಧಿಕಾರಿಗಳನ್ನು ಅಲ್ಲಿಗೆ ಸ್ವಲ್ಪ ದಿವಸ ತರಬೇತಿಗೆ ಕಳುಹಿಸಿ ಕೊಡಿ. ಅಲ್ಲಿ ಆ ಕುರುಡು ಮಕ್ಕಳಿಂದ ಎಲ್ಲಾ ಕೆಲಸಗಳನ್ನು ಸಹ ಮಾಡಿಸುತ್ತಾರೆ. ಮತ್ತು ಅಲ್ಲಿ ಸ್ವಚ್ಛತೆ ಇದೆ. ಆದರೆ ನಮ್ಮಲ್ಲಿ ಸ್ವಚ್ಛತೆ ಇಲ್ಲ ಅದನ್ನು ನೋಡಿಕೊಳ್ಳುವವರು ಇಲ್ಲ. ಯಾವತ್ತೋ ಒಂದು ದಿವಸ ಕ್ಲೀನ್ ಮಾಡಿದರೆ ಆಗುವುದಿಲ್ಲ. ಪ್ರತಿ ದಿವಸ ಅಲ್ಲಿ ಸ್ವಚ್ಛತೆ ಇರುವಂತೆ ನೋಡಿಕೊಳ್ಳಬೇಕು. ಇದೆಲ್ಲಾ ಮಾಡುವುದಕ್ಕೆ ಅಧಿಕಾರಿಗಳಿಗೆ ಭಯ ಇರಬೇಕು. ಮಾನ್ಯ ಮಂತ್ರಿಗಳಾದ ಶಿವಣ್ಣನವರು ಬರುತ್ತಾರೆಂದರೆ ಭಯ ಇರಬೇಕು. ಅಧಿಕಾರಿಗಳು ಬರುತ್ತಾರೆ ಎಂದರೆ ಭಯ ಇರಬೇಕು ಕಾರ್ಯದರ್ಶಿಗಳು ಬರುತ್ತಾರೆ ಎಂದರೆ ಭಯ ಇರಬೇಕು. ತಮ್ಮ ಡೈರೆಕ್ಟರ್ ಬರುತ್ತಾರೆ ಎಂದರೆ ಆ ಅಧಿಕಾರಿಗಳಲ್ಲಿ ಭಯ ಇರಬೇಕು ಆ ರೀತಿ ಮಾಡಲು ನೀವು ಯಾವ ರೀತಿಯಲ್ಲಿ ಇರಬೇಕೆಂದು ತಮಗೆ ಗೊತ್ತಿದೆ. ಆದ್ದರಿಂದ ನೀವು ಆ ಕೆಲಸ ಮಾಡುತ್ತೀರಿ ಎಂದು ನಾನು ನಂಬಿದ್ದೇನೆ. ಇನ್ನು ಅಂಗವಿಕಲರಿಗೆ ನಾವು ಒಂದು ಹೊಸ ಡೈರೆಕ್ಟೊರೇಟ್ ಮಾಡಿದ್ದೇವೆ. ಈ ರೀತಿ ನಮ್ಮ ರಾಷ್ಟ್ರದಲ್ಲಿ ಎಲ್ಲಿಯೂ ಇಲ್ಲವೆಂದು ಕಾಣುತ್ತದೆ. ಇದು ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಆಗಿದ್ದು. ಇಲ್ಲಿ ಸಿಬ್ಬಂದಿ ಇಲ್ಲ. ಸಿಬ್ಬಂದಿ ನೇಮಕಕ್ಕೆ ತಾವು ಅನುಮತಿ ಕೊಡಬೇಕು. ಯಾವ ರೀತಿ ಚಿಲ್ಡ್ರನ್ಸ್ ಡವಲಪ್‌ಮೇಂಟ್ ಫಂಡ್ ಎಂದು ಮಾಡಿದ್ದೀರಿ, ಅದೇ ರೀತಿ ಅಂಗವಿಕಲರ ಕ್ಷೇಮಾಭಿವೃದ್ಧಿ ಫಂಡ್ ಎಂದು ಮಾಡಿ ಒಂದು ನಿಧಿ ಸ್ಥಾಪನೆ ಮಾಡಿ ಅದಕ್ಕೆ ೧೦ ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರ ಕೊಟ್ಟರೆ ಇನ್ನು ಅನೇಕ ಸಂಘಸಂಸ್ಥೆಗಳವರು ದುಡ್ಡು ಕೊಡುತ್ತಾರೆ. ಆಗ ಇವರಿಗೆ ಉಪಯೋಗವಾಗುತ್ತದೆ. ಆ ವರ್ಗದ ಜನರಿಗೆ ಇನ್ನೂ ಹೆಚ್ಚು ಉಪಯೋಗವಾಗುತ್ತದೆ. ಮಾನ್ಯ ಮಂತ್ರಿಗಳಿಗೆ ನಾನು ಒಂದು ಮಾತು ಹೇಳುವುದೇನೆಂದರೆ, ಅಂಗವಿಕಲರ ಕಲ್ಯಾಣದಲ್ಲಿ ಸರ್ಕಾರ ಮಾಡುವುದಕ್ಕಿಂತಲೂ ಉತ್ತಮವಾದ ಕೆಲಸವನ್ನು ಖಾಸಗಿ ಕ್ಷೇತ್ರಗಳಲ್ಲಿ ಮಾಡುತ್ತಿದ್ದಾರೆ. ಉದಾಹರಣೆಗೆ ರಮಣಮಹರ್ಷಿ ಸ್ಕೂಲ್ ಆಫ್ ಬ್ಲೈಂಡ್ಸ್ ಹಾಗೂ ಉತ್ತರ ಕರ್ನಾಟಕದಲ್ಲಿ ಅನೇಕ ಧಾರ್ಮಿಕ ಸಂಸ್ಥೆಗಳು ಇರಬಹುದು ಒಳ್ಳೆಯ ಕೆಲಸ ಮಾಡುತ್ತಿವೆ. ಇದಕ್ಕೆ ತಾವು ಒಂದು ಅಡ್ವೈಜರಿ ಕಮಿಟಿ ಮಾಡಿ. ಅನೇಕ ಜನರು ಇದಕ್ಕೆ ರೆಕಮೆಂಡ್‌ಗೆ ಬರುತ್ತಾರೆ. ಇದಕ್ಕೆ ಕೇಂದ್ರ ಸರ್ಕಾರ ಹಣ ಕೊಡುತ್ತದೆ. ರೆಕಮೆಂಡ್‌ಗೆ ಅನೇಕ ಅಬ್‌ಸ್ಟ್ರಾಕಲ್ಸ್ ಇದೆ. ನಾನು ಯಾರ ಬಗ್ಗೆ ಚಾರ್ಜಸ್ ಮಾಡುವುದಿಲ್ಲ. ಆದರೆ ರೆಕಮೆಂಡ್ ಮಾಡುವ ಕ್ರಮ ಏನಿದೆ ಅದನ್ನು ಸ್ವಲ್ಪ ಸಡಿಲ ಮಾಡಬೇಕೆಂದು ನಾನು ತಿಳಿದುಕೊಂಡಿದ್ದೇನೆ.

೨.೦೦ ಪಿ.ಎಂ

ಗವರ್ನಮೆಂಟ್ ಆಫ್ ಇಂಡಿಯಾದವರು ಇದಕ್ಕೆ ದುಡ್ಡು ಕೊಡುತ್ತಾರೆ. ಅಲ್ಲಿರುವವರು ಯಾರು ? ಸಾಮಾನ್ಯವಾಗಿ ಯಾರೋ ವೃತ್ತಿ ಜೀವನಕ್ಕೋಸ್ಕರ ಪ್ರಾರಂಭ ಮಾಡಿರುವುದಿಲ್ಲ. ಉದಾಹರಣೆಗೆ, ಕೆಲವು ಜಿಲ್ಲೆಗಳಲ್ಲಿ ಹ್ಯಾಂಡಿಕ್ಯಾಪ್ಡ್ ಚಿಲ್ರನ್ಸ್‌ಗೆ ಶಾಲೆಗಳನ್ನು ತೆರೆಯಲು ೨ ವರ್ಷಗಳ ಹಿಂದೆ ಕೇಂದ್ರ ಸರ್ಕಾರದವರು ಶೇಕಡಾ ನೂರರಷ್ಟು ಸಹಾಯ ಕೊಡುತ್ತೇವೆಂದು ಹೇಳಿದ ತಕ್ಷಣ ಮಶ್‌ರೂಮ್ ಗ್ರೋತಾಯಿತು. ತಮ್ಮ ನೆಂಟರಿಷ್ಟರಿಗೆಲ್ಲ ಕೆಲಸ ಕೊಡಿಸಬಹುದೆಂದು ಪ್ರಾರಂಭ ಮಾಡಿದರು. ಅಂಥಾದ್ದನ್ನು ಮಾಡಿ ಎಂದು ನಾನು ಹೇಳುವುದಿಲ್ಲ ಆದರೆ ಯಾವುದು ಜೆನ್ಯೂನ್ ಇನ್‌ಸ್ಟಿಟ್ಯೂಷನ್ ಎಂಬುದು ತಮಗೆ ಗೊತ್ತಿದೆ. ನೀವು ಈ ಬಗ್ಗೆ ಪ್ರಪೋಸಲ್ಸನ್ನು ಮಾರ್ಚಿ ೧೫ನೇ ತಾರೀಖು ತಿಳಿಸಿದರೆ ಏನು ಪ್ರಯೋಜನ ? ಡಿಸೆಂಬರ್‌ನಲ್ಲಿ ಏಕೆ ಕಳಿಸುವುದಿಲ್ಲ? ದುಡ್ಡು ಕೊಡುವವರು ಇದ್ದಾರೆ, ನೀವು ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಆಮೇಲೆ ಅಂಗವಿಕಲರ ಮಾಸಾಶನದೂ ಅಷ್ಟೆ. ಸರಿಯಾಗಿ ವಿತರಣೆಯಾಗುತ್ತಿಲ್ಲ. ಅದು ಸರಿಯಾಗಿ ವಿತರಣೆ ಆಗಬೇಕು. ಅವರಿಗೆ ತ್ರಿಚಕ್ರವಾಹನಗಳನ್ನು ಕೊಡುವ ಬಗ್ಗೆ ಆ ಕಂಟ್ರಾಕ್ಟರ್‌ಗೂ ಈ ಇಲಾಖೆಯವರಿಗೂ ಏನೋ ನಡೆದು ಹೆಚ್ಚೂ ಕಡಿಮೆ ಆಗಿ ಎರಡು ಮೂರು ವರ್ಷದಿಂದ ಈ ಕಾರ್ಯಕ್ರಮ ಬಂದಾಗಿದೆ. ಅದನ್ನು ನೀವು ಚಾಲೂ ಮಾಡಬೇಕು. ಬೇರೆ ಬೇರೆ ಇನ್‌ಸ್ಟಿಟ್ಯೂಷನ್ಸ್ ಈ ದಿಕ್ಕಿನಲ್ಲಿ ಒಳ್ಳೆಯ ಕೆಲಸ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ. ಒಟ್ಟಿನಲ್ಲಿ ಈ ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಕಲ್ಯಾಣ, ಅಂಗವಿಕಲರ ಕಲ್ಯಾಣ ಇಲಾಖೆಗಳು ಏನಿವೆ ಅದಕ್ಕೆ ಒಂದು ಕಮಿಟ್‌ಮೆಂಟ್ ಬೇಕಾಗುತ್ತದೆ ಸುಮ್ಮನೆ ಕೆಲಸ ಮಾಡುತ್ತೇವೆಂದರೆ ಆಗುವುದಿಲ್ಲ. ಒಳ್ಳೆಯ ಅಧಿಕಾರಿಗಳನ್ನೇ ಅಲ್ಲಿಗೆ ಹಾಕಿಕೊಳ್ಳಿ. ಇದರಲ್ಲಿ ಬಹಳ ದುರ್ವ್ಯವಹಾರ ಇದೆ. ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನಿಸಿ. ಸ್ಪೆಷಲ್ ಕಾಂಪೋನೆಂಟ್ ಪ್ರೋಗ್ರಾಂ ಏನಿದೆ, ಅದರಲ್ಲಿ ಕೇಂದ್ರದಿಂದ ಮತ್ತಷ್ಟು ಹಣ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ನಾನು ಈ ಖಾತೆ ಸಚಿವನಾಗಿದ್ದಾಗ ಮಾನ್ಯ ಬಸವಲಿಂಗಪ್ಪನವರೇ, ನನಗೆ ಈ ಬಗ್ಗೆ ಚುಚ್ಚಿ ಚುಚ್ಚಿ ಐದಾರು ಸಲ ತಿಳಿವಳಿಕೆ ಕೊಟ್ಟರು. ಬಿಹಾರ, ಉತ್ತರ ಪ್ರದೇಶದವರು ಆ ದುಡ್ಡು ತೆಗೆದುಕೊಂಡು ಹೋಗುತ್ತಾರೆ. ನಮ್ಮ ಅಧಿಕಾರಿಯೊಬ್ಬರನ್ನು ದೆಹಲಿಯಲ್ಲಿಡಿ. ಆ ಕೆಲಸ ಮಾಡಲಿ. ಕೇಂದ್ರದಲ್ಲಿ ನಮ್ಮವರೇ ಒಬ್ಬರು ಅಧಿಕಾರಿ ಇದ್ದರು. ಈಗ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಕೇಂದ್ರ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಹೆಚ್ಚಿನ ಹಣ ತರಲಿಕ್ಕೆ ಪ್ರಯತ್ನ ಮಾಡಿ. ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರುಗಳು ಹಾಗೂ ಕೆಲವು ಅಧಿಕಾರಿಗಳು ಯಾರಿದ್ದಾರೆ, ಈ ತುಳಿತಕ್ಕೆ ಒಳಗಾಗಿರುವ ಜನಗಳ ಶೋಷಣೆಯನ್ನು ಇವರೇ ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ನೀವು ಪ್ರಯತ್ನ ಮಾಡಬೇಕು.

ಇನ್ನು ನಿಮಗೆ ಪ್ರಿಯವಾಗಿರತಕ್ಕ ಇಲಾಖೆಗೆ ಬರುತ್ತೇನೆ. ಅದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ. ಇದರ ಬಗ್ಗೆ ಅನೇಕ ಸದಸ್ಯರು ಮಾತನಾಡಲು ಕಾತುರ ಇಟ್ಟುಕೊಂಡಿದ್ದಾರೆ. ನಾನು ಹೆಚ್ಚಿಗೆ ಹೇಳುವುದಿಲ್ಲ. ಆದರೆ ಶಿವಣ್ಣನವರ ಕಡೆಯಿಂದ ಎಷ್ಟು ಗ್ರಾನೈಟ್ ಕಲ್ಲುಗಳು ನಿಮ್ಮ ಜಿಲ್ಲೆಯಿಂದ ಬೇರೆ ದೇಶಕ್ಕೆ ಹೋಗುತ್ತದೋ ನನಗೆ ಗೊತ್ತಿಲ್ಲ. ನನ್ನ ತಾಲ್ಲೂಕಿನಿಂದ ಬಹಳ ಹೋಗುತ್ತಿದೆ. ಅದನ್ನು ತಡೆಯಲು ನಾನು ಮಂತ್ರಿಯಾಗಿದ್ದ ಕಾಲದಲ್ಲಿ ಬಹಳ ಪ್ರಯತ್ನ ಮಾಡಿದೆ. ಆದರೆ ಶ್ರೀ ಸೋಮಪ್ಪ ಸುವರ್ಣ ಅವರು ಹೇಳಿದಂತೆ ದೊಡ್ಡ ದೊಡ್ಡ ತಿಮಿಂಗಿಲಗಳು ಇರುವಂತೆ ಕಾಣುತ್ತದೆ. ನಮ್ಮ ಕೈಲಿ ತಡೆಯುವುದಕ್ಕೆ ಆಗಲಿಲ್ಲ. ಆದರೆ ಇದನ್ನು ತಡೆಗಟ್ಟುವ ನೆಪದಲ್ಲಿ ನೀವು ಬಹಿರಂಗ ಹರಾಜನ್ನೇ ಮಾಡಿದ್ದೀರೆಂದು ನಾನು ನೇರವಾಗಿ ಹೇಳುತ್ತಿದ್ದೇನೆ. ಈಗಿರುವ ಕಾನೂನನ್ನು ಸಡಿಲ ಮಾಡಲು ಏನು ಹೊರಟಿದ್ದೀರಿ, ಇದರಿಂದ ಖಂಡಿತವಾಗಿಯೂ ರಾಜ್ಯದ ಬೊಕ್ಕಸಕ್ಕೆ ೪೦ ಕೋಟಿ ಬರಲು ಸಾಧ್ಯವಿಲ್ಲ. ೨೦ ಕೋಟಿ ರೂ.ಗಳ ಆದಾಯ ಬರಬಹುದು. ಈ ಬಗ್ಗೆ ಯಾರೋ ತಮಗೆ ತಪ್ಪು ತಿಳಿವಳಿಕೆ ಕೊಟ್ಟಿದ್ದಾರೆ. ಮಾನ್ಯ ವಾಟಾಳ್ ನಾಗರಾಜರು ಒಂದು ಖಾಸಗಿ ನಿರ್ಣಯ ತಂದಿದ್ದಾರೆ. ಮಾನ್ಯ ವೆಂಕಟೇಶ ಇದರ ಬಗ್ಗೆ ಮಾತನಾಡಿದ್ದಾರೆ. ನಾವು ಜವಾಬ್ದಾರಿ ಸ್ಥಾನದಿಂದ ಏನೋ ಒಂದು ಹೇಳಿ ಆಪಾದನೆ ಮಾಡಿ ಹೋಗಿ ಬಿಡುವುದಿಲ್ಲ, ಇನ್ನು ಮುಂದೆಯೂ ಈ ಸದನದಲ್ಲಿದ್ದು ಕೆಲಸ ಮಾಡಿ ಇಲ್ಲೇ ಇರಬೇಕೆನ್ನುವವರು ನಾವು. ನೀವು ಪ್ರಾಮಾಣಿಕತೆ ತೋರಿಸಿಕೊಳ್ಳಬೇಕಾದರೆ ಈ ನೋಟಿಫಿಕೇಷನ್ನನ್ನು ಎಫ್‌ಕ್ಸ್‌ಗೆ ಕೊಡಬೇಡಿ. ಒಂದು ಸದನದ ಸಮಿತಿ ಮಾಡಿ. ಹೇಗೂ ಮುಂದಿನ ಜುಲೈ ೧೪ರ ಹೊತ್ತಿಗೆ ಮತ್ತೆ ಈ ಸಭೆ ಸಮಾವೇಶಗೊಳ್ಳುತ್ತದೆ, ಅಷ್ಟರಲ್ಲಿ ಸದನದ ಸಮಿತಿ ವರದಿ ಸಲ್ಲಿಸಲಿ. ನಾವೂ ನಿಮಗೆ ಸಹಕಾರ ಕೊಡುತ್ತೇವೆ, ಆದರೆ ನೀವು ಸಡಿಲ ಮಾಡಿದ ಕಾನೂನು ಏನಿದೆ, ಅದರಿಂದ ನಮ್ಮ ರಾಜ್ಯದ ಹೊರಗಡೆಯಿಂದ ಬಂದಿರುವ ಕೆಲವರಿಗೆ ಅನುಕೂಲವಾಗುತ್ತಿದೆ. ಏಕೆ ಅವರ ಮೇಲೆ ನಿಮಗೆ ಪ್ರೀತಿ ? ಈ ಕಲ್ಲಿನ ಗಣಿಗಳಲ್ಲಿ ಕೆಲಸ ಮಾಡುತ್ತಿರುವವರಲ್ಲಿ

ಕರ್ನಾಟಕದವನು ಒಬ್ಬನೂ ಇಲ್ಲ, ಆ ಸ್ಕಿಲ್ ನಮ್ಮವರಿಗಿಲ್ಲ. ತಮಿಳುನಾಡಿನವರೇ ಅಲ್ಲಿರುವುದು. ಅವರ ಪ್ರಾಬ್ಲಂ ನಿವಾರಿಸುವುದಕ್ಕೆ ಕರುಣಾನಿಧಿಯವರು ಇದ್ದಾರೆ, ಅವರು ಕೆಲಸ ಕೊಡುತ್ತಾರೆ ಈ ಕಾನೂನು ಸಡಿಲ ಆದ ಮೇಲೆ ಅವರು ಒಂದು ಫ್ಯಾಕ್ಟರಿಯನ್ನೂ ಕರ್ನಾಟಕದಲ್ಲಿ ತೆರೆಯುವುದಿಲ್ಲ. ನೀವು ಸೆಕ್ಷನ್ ಎ, ಬಿ, ಸಿ ಎಂದು ಮಾಡಿದ್ದೀರಿ, ''ಎ''ನಲ್ಲಿ ಯಾರು ಫ್ಯಾಕ್ಟರಿಗಳನ್ನು ಇಟ್ಟುಕೊಂಡಿದ್ದಾರೆ? ಇಂತಹವರು ಕರ್ನಾಟಕದಲ್ಲಿ ಎಷ್ಟು ಜನರಿದ್ದಾರೆ, "ಬಿ''ಯಲ್ಲಿ ಫ್ಯಾಕ್ಟರಿ ಮಾಡುತ್ತೇವೆಂದು ಬರೆದುಕೊಡಬೇಕು, ಯಾರುಬೇಕಾದರೂ ಬರೆದುಕೊಡುತ್ತಾರೆ, ಆಮೇಲೆ ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಏಕೆ ಇದನ್ನು ತಾವು ರಾಷ್ಟ್ರೀಕರಣ ಮಾಡಬಾರದು. ಇದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ಸದನದ ಸಮಿತಿಯನ್ನು ಮಾಡಿದರೆ, ಅದರಲ್ಲಿ ನಿಮ್ಮವರೇ ಮೆಜಾರಿಟಿ ಇರುತ್ತಾರೆ. ಸತ್ಯಶೋಧನೆ ನಡೆಯಲಿ. ನಾವು ಹೇಳಿರುವುದು ಸುಳ್ಳು ಎಂದಾದರೆ ನೀವು ಹೇಳುವುದನ್ನು ಒಪ್ಪಿಕೊಳ್ಳುತ್ತೇವೆ, why you should not be above suspicion. ಯಾರೋ ಮಾಡಿದ ತಪ್ಪಿಗೆ ನೀವು ಏಕೆ ಗೂಬೆ ಕೂರಿಸಿಕೊಳ್ಳುವುದಕ್ಕೆ ಹೋಗುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಶಿವಣ್ಣ (ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೆ, ಸಿಂಧ್ಯಾರವರು ೬ ವರ್ಷಗಳ ಕಾಲ ಸರ್ಕಾರದಲ್ಲಿದ್ದು ಅವರ ಕಾಲದಲ್ಲಿ ಈ ಎಲ್ಲಾ ಪಾಲಿಸಿಗಳು ಜಾರಿಯಲ್ಲಿ ಬಂದವು. ಈಗ ನಾವು ಲೇಟೆಸ್ಟಾಗಿ ನೋಟಿಫಿಕೇಷನ್ ತಂದೆವು. ಅವರ ಕಾಲದಲ್ಲಿ ಏತಕ್ಕೆ ಇದನ್ನೆಲ್ಲಾ ಮಾಡಲಿಲ್ಲ?

ಶ್ರೀ ಪಿ.ಜಿ. ಆರ್. ಸಿಂಧ್ಯಾ.—ಮಾನ್ಯ ಮಂತ್ರಿಗಳು ನನಗೆ ಬಹಳ ಉಪಕಾರ ಮಾಡಿದ್ದಾರೆ. ನಾವೇ ತಾನೇ ಇದನ್ನು ಸಡಿಲ ಮಾಡಿದ್ದು. That crime has been committed by us and the previous Government. I am also party to it. Let the House Committee decide ಹೇಳಿ ಸ್ವಾಮಿ ? ಹೌಸ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿ. ಅವರೇ ತೀರ್ಮಾನ ಮಾಡಲಿ, ನೀವು ಒಂದು ತಿಂಗಳಲ್ಲಿ ನೀವು ವಿದೇಶದಿಂದ ಬರುವುದರೊಳಗೆ ಈ ಸದನ ಇರುತ್ತದೆ, ಅದರ ತೀರ್ಮಾನವನ್ನು ನಾವು ಒಪ್ಪಿಕೊಳ್ಳುತ್ತೇವೆ. ಇದಕ್ಕೆ ತಾವು ಏತಕ್ಕೆ ಒಪ್ಪಿಕೊಳ್ಳುವುದಿಲ್ಲ? ೧೦ ವರ್ಷಗಳಿಂದ ಮೈಸೂರು ಮಿನರಲ್ಸ್ ಏನು ಮಾಡಿದೆ? ಅಲ್ಲಿ ದೊಡ್ಡ ದೊಡ್ಡ ತಿಮಿಂಗಿಲಗಳು ಸೇರಿಕೊಂಡಿವೆ. ಈ ಗ್ರಾನೈಟ್ ಎಕ್ಸ್‌ಪೋರ್ಟರ್ಸ್ ಜೊತೆಯಲ್ಲಿ ಶಾಮೀಲಾಗಿದ್ದಾರೆ. ಅವರಿಗೆ ಬೇಕಾದ್ದನು ಇವರು ಮಾಡಿದ್ದಾರೆ. ನಿಜ ನಮ್ಮ ಸರ್ಕಾರವಿದ್ದಾಗಲೂ ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದೆವು. ಆದರೆ ಆಗಲಿಲ್ಲ. ಈಗ ನಿಮ್ಮ ಮೇಲೆ ಆಪಾದನೆ ಇದೆ. ಗ್ರಾನೈಟ್ ವ್ಯವಹಾರದಲ್ಲಿ ಈ ಸರ್ಕಾರ ತಪ್ಪು ಮಾಡಿದೆ ಎಂದು. ಯಾರೋ ಕೆಲವರಿಗೆ ಸಹಾಯ ಮಾಡಲು ಇವರು ಹೊರಟಿದ್ದಾರೆ ಎಂದು ಆಪಾದನೆ ಇದೆ. ಇದರಿಂದ ದೂರವಾಗಬೇಕಾದರೆ ಒಂದು ಸದನ ಸಮಿತಿ ಮಾಡಿ. ನೀವು ಮಾಡಿರುವುದು ಸರಿ ಎಂದು, ಆ ಸಮಿತಿ ತೀರ್ಮಾನ ಮಾಡಲಿ. ಈ ಕಲ್ಲುಗಳು ಹೊರ ದೇಶಕ್ಕೆ ಹೋದರೆ ಮತ್ತೆ ನಮಗೆ ಸಿಗುವುದಿಲ್ಲ. ಕೇಂದ್ರ ಹಾಕುವ ಎಲ್ಲ ನಿರ್ದೇಶನಗಳನ್ನೂ ನಾವು ಪಾಲಿಸುತ್ತೇವೆಯೇ ? ಆಯಿತು. ಕೇಂದ್ರ ಏನು ಹೇಳಿದೆ ? ಎಕ್ಸ್‌ಪೋರ್ಟ್ ಮಾಡುವ ಇಂಡಸ್ಟ್ರಿ ಐಟಮ್ಸ್‌ನ್ನು ಎನ್‌ಕರೇಜ್ ಮಾಡಿ ಎಂದಿದ್ದಾರೆ, ಅಂದರೆ ಬರೀ ಗ್ರಾನೇಟ್ ಕಲ್ಲುಗಳನ್ನು ಕಳಿಸಿ ಎಂದು ಹೇಳಿದ್ದಾರೆಯೇ ಇದರಲ್ಲಿ ಏನೋ ನಡೆದಿದೆ, ವಾಸನೆ ಇದೆ. ದಯವಿಟ್ಟು ನೀವು ಆ ವಾಸನೆಯಿಂದ ದೂರವಿರಿ. ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದು ಬೇಡ. ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರೇ ಬರಲಿ ಆದರೆ ನೀವು ಮಾತನಾಡುತ್ತಿರುವ ಧಾಟಿಯಂತೆ ನೀವು ಪ್ರಾಮಾಣಿಕರೆಂದು ಹೇಳಲು ನಾನು ತಯಾರಿಲ್ಲ. ಆದ್ದರಿಂದ ತಾವು ತಕ್ಷಣ ಹೌಸ್ ಕಮಿಟಿ ಮಾಡಿ. ಅಲ್ಲಿಯವರೆಗೂ ಈ ಗ್ರಾನೈಟ್ ನೋಟಿಫಿಕೇಷನ್ ಪೆಂಡಿಂಗ್ ಇಡಿ. ಸಮಿತಿ ತೀರ್ಮಾನ ಮಾಡಲಿ. ಇದರಿಂದ ನಮಗೂ ಕ್ಲಿಯರಾಗುತ್ತದೆ. ನಾವು ಕೂಡ ಈ ಬಗ್ಗೆ ಮಾತನಾಡುವುದನ್ನು ನಿಲ್ಲಿಸುತ್ತೇವೆ. ಇನ್ನು ರಾಜ್ಯದ ದೇವದಾಸಿಯರ ಬಗ್ಗೆ ನನಗಿಂತ ನಿಮಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ ನೀವು ಆ ಭಾಗದವರೇ ಆಗಿದ್ದೀರಿ. ಅವರ ರಿಹ್ಯಾಬಿಲಿಟೇಷನ್ ಪ್ರೋಗ್ರಾಂ ಏನಿದೆ, ಅದು ಸರಿಯಾಗಿ ಜಾರಿ ಆಗಿಲ್ಲ ಎಂಬುದು ನಿಮಗೂ ಗೊತ್ತಿದೆ. ಈ ಬಗ್ಗೆ ಆಕ್ಟ್ ಮಾಡಿದ್ದೇವೆ ಅದನ್ನು ಇಂಪ್ಲಿಮೆಂಟ್ ಮಾಡಿದ್ದೇವೆಂದು ಪುಸ್ತಕದಲ್ಲಿ ಬರೆದುಕೊಳ್ಳುತ್ತೇವೆ. ಆದರೆ ಆ ಅವ್ಯವಹಾರ ನಡೆಯುತ್ತಲೇ ಇದೆ.

ಅದನ್ನು ತಡೆಗಟ್ಟಲಿಕ್ಕೆ ಎಲ್ಲರೂ ಸೇರಿ ಪ್ರಯತ್ನ ಮಾಡಬೇಕು. ಈ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡಬೇಕು ಎಂದು ಹೇಳಿ ಮಾನ್ಯ ಉಪಾಧ್ಯಕ್ಷಿಣಿಯವರೇ, ಸಾಕಷ್ಟು ನನ್ನ ಸಲಹೆಗಳನ್ನು ಸರ್ಕಾರಕ್ಕೆ ಕೊಡಲಿಕ್ಕೆ ತಾವು ಅವಕಾಶವನ್ನು ಒದಗಿಸಿ ಕೊಟ್ಟಿದ್ದೀರಿ, ಅದಕ್ಕಾಗಿ ನಿಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತಿನ ದಿವಸ ಸದನದಲ್ಲಿ ಇಟ್ಟಿರತಕ್ಕಂಥ ಬೇಡಿಕೆಯನ್ನು ನಾನು ಸ್ವಾಗತ ಮಾಡಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ತಾನೆ ವಿರೋಧ ಪಕ್ಷದ ಉಪನಾಯಕರು, ಹಿರಿಯ ಸದಸ್ಯರು ಆಗಿರತಕ್ಕಂಥ ಮಾನ್ಯ ಸಿಂಧ್ಯರವರು ಹೆಚ್ಚು ಸವಿಸ್ತಾರವಾಗಿ ಈ ಖಾತೆಯ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಈ ಖಾತೆಯ ಬಗ್ಗೆ ಮಾತನಾಡಬೇಕಾದರೆ ಬಹಳಷ್ಟು ವಿಷಯಗಳು ಇವೆ. ಆದರೆ ಈ ಖಾತೆಗೆ ಯಾವತ್ತು ಮಹತ್ವ ಬರುತ್ತದೆ ? ಈ ಖಾತೆಯನ್ನು ಬಹಳ ಕೀಳು ದೃಷ್ಟಿಯಿಂದ ಅಥವಾ ಈ ಖಾತೆಯಲ್ಲಿ ಒಳ್ಳೆಯದು ಇದರಲ್ಲಿ ಏನೂ ಇಲ್ಲ, ಇದು ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸಂಬಂಧಪಟ್ಟ ಖಾತೆ, ಈ ವಿಷಯವನ್ನು ಮಾನ್ಯ ಸಿಂಧ್ಯಾರವರು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದು ವಾಸ್ತವ ಸ್ಥಿತಿ ಈಗ ಕರ್ನಾಟಕದಲ್ಲಿ ಹರಿಜನ, ಗಿರಿಜನ, ಹಿಂದುಳಿದವರು, ಅಲ್ಪಸಂಖ್ಯಾತರು ಮಹಿಳೆಯರು ಇವರು ಏನಾದರೂ ಉದ್ಧಾರ ಆಗತಕ್ಕಂಥವರು ಎಂದು ಹೇಳತಕ್ಕಂಥದ್ದರ ಬಗ್ಗೆ ಚಾಲನೆ ಸಿಕ್ಕಿದ್ದರೆ ಅದು ದಿವಂಗತ ದೇವರಾಜ ಅರಸರು ಇದ್ದಾಗ ಆ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ಕೊಟ್ಟು ಅದನ್ನು ಕಾರ್ಯರೂಪಕ್ಕೆ ತರುವ ಹಾಗೆ ಆ ಕಾರ್ಯಕ್ರಮಗಳು ಮನೆ ಮನೆಗೂ ಮುಟ್ಟುವ ಹಾಗೆ ಕೆಲಸವನ್ನು ಅವರು ಮಾಡಿದರು. ಅಲ್ಲಿಂದ ಇದು ಜಾರಿಯಲ್ಲಿ ಬರುತ್ತಿದೆ. ಅದರ ಜೊತೆಗೆ ಕೆಲವು ಮಂತ್ರಿಗಳು ಆಯಾಯ ಖಾತೆಯನ್ನು ಹೊತ್ತಿರತಕ್ಕಂಥವರು, ಉದಾಹರಣೆಗೆ ನಮ್ಮ ಬಸವಲಿಂಗಪ್ಪನವರು ಮಂತ್ರಿಗಳಿದ್ದಾಗ ಮಲವನ್ನು ಹೊರತಕ್ಕಂಥ ಜನರು ಏನಿದ್ದರು ಅವರನ್ನು ಅದರಿಂದ ಮುಕ್ತರನ್ನಾಗಿ ಮಾಡುವ ಮೂಲಕ ಇಂಥ ಒಂದು ಮಹತ್ವದ ಕೆಲಸ ಮಾಡಿದ್ದು ನಮ್ಮ ನೆನಪಿನಲ್ಲಿ ಈಗಲೂ ಇದೆ. ಅದನ್ನು ಮರೆಯುವುದಕ್ಕೆ ಸಾಧ್ಯವೇ ಇಲ್ಲ. ಮಾನ್ಯ ಸದಸ್ಯರಾದ ಸಿಂಧ್ಯರವರು ಮಂತ್ರಿಗಳಿದ್ದಾಗ ರೋಸ್ಟರ್ ಸಿಸ್ಟಂ ಅನ್ನು ಸಾರಿಗೆ ಸಂಸ್ಥೆಯಲ್ಲಿ ಜಾರಿಗೆ ತಂದಿರಲಿಲ್ಲ. ಆಗ ಅವರು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿ ಅದಕ್ಕೆ ಹೆಚ್ಚು ಒತ್ತು ಕೊಟ್ಟು ಅದನ್ನು ತುಂಬಿಸಲಿಕ್ಕೆ ಪ್ರಯತ್ನ ಮಾಡಿದರು. ಹೀಗೆ ಎಲ್ಲರಿಗೂ ನ್ಯಾಯವನ್ನು ದೊರಕಿಸಿಕೊಡುವ ಹಾದಿಯಲ್ಲಿ ಪ್ರಯತ್ನವನ್ನು ಮಾಡಿದ್ದಾರೆ, ಈ ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಇಟ್ಟಿರತಕ್ಕಂಥ ಬೇಡಿಕೆಗೆ ಸಂಬಂಧಪಟ್ಟ ಪುಸ್ತಕವನ್ನು ನಾನು ನೋಡುತ್ತಿದ್ದೇನೆ. ಹೋದ ವರ್ಷ, ಅದಕ್ಕೆ ಹಿಂದಿನ ಐದು ವರ್ಷಗಳಲ್ಲಿ ಏನೇನು ಪ್ರಾವಿಷನನ್ನು ಮಾಡಿದ್ದಾರೋ, ಅದೇ ರೀತಿಯಲ್ಲಿ ಪ್ರಾವಿಷನನ್ನು ಈಗ ಮಾಡಿದ್ದೀರಿ. ಇದರಲ್ಲಿ ಹೊಸದೇನೂ ಹೇಳಿಕೊಳ್ಳತಕ್ಕಂಥದ್ದು ಏನೂ ಇಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತೆ ಷೆಡ್ಯೂಲ್ಡ್ ಟ್ರೈಬ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ವೆಲ್‌ಫೇರ್ ಯಾವ ರೀತಿಯಲ್ಲಿ ಆಗುತ್ತಿದೆ, ಅದು ಯಾವ ರೀತಿಯಲ್ಲಿ ಸಾಗುತ್ತಿದೆ, ಇದಕ್ಕೆ ಇಟ್ಟಿರತಕ್ಕಂಥ ಹಣ ಎಷ್ಟು, ಅದಕ್ಕಂದು ೧೮ ಪರ್‌ಸೆಂಟನ್ನು ಇಟ್ಟಿದ್ದಾರೆ. ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ೧೮ ಪರ್‌ಸೆಂಟ್ ಮೀಸಲಾತಿಯನ್ನು ಇಟ್ಟಿದ್ದರೆ ಅದರಲ್ಲಿ ಅವರು ಉದ್ಧಾರವಾಗಿದ್ದಾರೆಯೇ ? ಅವರಿಗೆ ಜಾಬ್ ಖಾಯಂ ಆಗಿ ಸಿಕ್ಕಿದೆಯೇ ? ಅವರಿಗೆ ಹೋದ ತಕ್ಷಣ ಜಾಬ್ ಖಾಯಂ ಎಂದು ಜನಸಾಮಾನ್ಯರು ಸಾಮಾನ್ಯವಾಗಿ ಆಡತಕ್ಕಂಥ ಮಾತುಂಟು. ಅದನ್ನು ನಾವು ನೋಡುತ್ತಿದ್ದೇವೆ. ಈಗ ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಯಾವ ಯಾವ ಜಾಬ್ ಸಿಕ್ಕಿದೆ ? ಅವರು ಯಾವ ಯಾವ ಇಲಾಖೆಯಲ್ಲಿ ಇದ್ದಾರೆ ? ಅವರು ಯಾವ ಯಾವ ಗ್ರೇಡ್ ನಲ್ಲಿದ್ದಾರೆ ? ಇದರ ಬಗ್ಗೆ ಅಂಕಿಸಂಖ್ಯೆಯನ್ನು ಇಟ್ಟು ಮಾತನಾಡುವುದಾದರೆ ಅವರಿಗೆ ಮೊದಲಿನಿಂದಲೂ ಅನ್ಯಾಯ, ಈಗಲೂ ಅನ್ಯಾಯ, ಮುಂದೆಯೂ ಅನ್ಯಾಯ ನಡೆಯುತ್ತಲೇ ಹೋಗುತ್ತದೆ, ಇದನ್ನು ತಡೆಗಟ್ಟಲಿಕ್ಕೆ ಅಥವಾ ಇದನ್ನು ನಿಲ್ಲಿಸಲಿಕ್ಕೆ ಯಾವ ರೀತಿ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ ಎಂಬ ಬಗ್ಗೆ ಈಗಲೂ ಸಹ ಆ ದಿಕ್ಕಿನಲ್ಲಿ ನಾವು ಪರಿಪೂರ್ಣತೆಯನ್ನು ಕಂಡಿಲ್ಲ. ೧೮ ಪರ್‌ಸೆಂಟ್ ಫಂಡ್ ಅಲೋಕೇಷನ್ ಇದೆಯಲ್ಲಾ, ಅದನ್ನು ನೋಡತಕ್ಕಂಥವರು ಯಾರು ? ಈಗ ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲೂ ೧೮ ಪರ್‌ಸೆಂಟ್ ಅಲೋಕೇಷನ್. ಎಜುಕೇಷನ್, ಹಾರ್ಟಿಕಲ್ಚರ್, ಅಗ್ರಿಕಲ್ಚರ್ ಫಿಸರೀಸ್, ಯೂನಿವರ್ಸಿಟೀಸ್, ಇಲ್ಲೆಲ್ಲಾ ೧೮ ಪರ್‌ಸೆಂಟ್ ರೆಕ್ರೂಟ್‌ಮೆಂಟ್ ಎಂದು ಹೇಳುತ್ತಿದ್ದೇವೆ, ಸಾಕಷ್ಟು ಪ್ರಚಾರ ಸಿಗುತ್ತಿದೆ, ಉದ್ಘಾಟನೆ ಕೂಡಾ ನಡೆಯುತ್ತಿದೆ. ಆದರೆ ಕಾರ್ಯರೂಪಕ್ಕೆ ಮಾತ್ರ ಬಂದಿಲ್ಲ. ಈಗ ಮಾನ್ಯ ಬಸವಲಿಂಗಪ್ಪನವರು ಒಂದು ಸೂಚನೆಯನ್ನು ಈ ಸದನದಲ್ಲಿ ಕೊಟ್ಟರು. ಈ ಸ್ಪೆಷಲ್ ಕಾಂಪೊನೆಂಟ್ ಫಂಡ್ ಎಂದು ಏನು ಇದೆ, ಅದನ್ನೆಲ್ಲಾ ಒಂದು ಕಡೆ ಇಡಿ. ೧೬೭ ಕೋಟಿ ರೂಪಾಯಿಯನ್ನು ಪ್ರತ್ಯೇಕವಾಗಿ ಒಂದು ಕಡೆ ಇಟ್ಟು, ಅದನ್ನು ಪ್ರತ್ಯೇಕವಾದ ಏಜೆನ್ಸಿ ಮುಖಾಂತರ ಆ ಒಂದು ಕೆಲಸವನ್ನು ಮಾಡಿದರೆ, ಆ ದಿಶೆಯಲ್ಲಿ ಎಷ್ಟೊಂದು ರೀತಿಯಾಗಿ ಅಚೀವ್ ಮಾಡಬಹುದು ಎಂಬುದನ್ನು ಕಂಡುಕೊಳ್ಳಬಹುದು. ಅದನ್ನು ಬಿಟ್ಟು ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗೆ ಕೊಟ್ಟರೆ ಅಲ್ಲಿ ಆ ಡಿಪಾರ್ಟ್‌ಮೆಂಟ್‌ನವರು ಅವರ ಕೆಲಸದ ಜೊತೆಗೆ ಇದು ಒಂದು ಕೆಲಸ ಎಂದು ತಿಳಿದುಕೊಂಡು ಹೋಗುತ್ತಾರೆ. ಅದರ ಬಗ್ಗೆ ಅಷ್ಟು ಕಾಳಜಿ ವಹಿಸುವುದಿಲ್ಲ. ೧೮ ಪರ್‌ಸೆಂಟ್ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಿದ್ದಾರೋ ಇಲ್ಲವೋ ಎಂದು ಹೋಗಿ ಮುನಿಸಿಪಲ್ ಆಫೀಸ್‌ನಲ್ಲಿ ನೋಡಿ

ಎಂದು ಹೇಳಿದರೆ ನನ್ನ ಮಾತನ್ನು ಕೇಳಲಿಲ್ಲ, ಆ ಆಫೀಸರ್ ಸರಿಯಾಗಿ ಹೇಳಲಿಲ್ಲ ಎಂದು ಬಂದು ಹೇಳುತ್ತಾರೆ. ಹೀಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನ ಒಬ್ಬ ಅಧಿಕಾರ ಮುನಿಸಿಪಾಲಿಟಿಗೆ ಹೋಗಿ ೧೮ ಪರ್ಸೆಂಟ್ ಹಣ ಖರ್ಚಾಗಿದೆಯೋ ಇಲ್ಲವೇ ಎಂದು ಕೇಳಿದರೆ they are not just bothered. ಏತಕ್ಕೆ ಖರ್ಚು ಮಾಡಿದ್ದೀರಿ? ಎಷ್ಟು ಹಣ ಬಾಕಿ ಇದೆ? ಏತಕ್ಕೆ ಖರ್ಚು ಮಾಡಿದ್ದೀರಿ ಎಂದು ಕೇಳಿದರೆ ಅವರು ಹೇಳುವುದಿಲ್ಲ. ಖರ್ಚು ಮಾಡತಕ್ಕಂಥ ಹಣ ಪಾತ್ರೆ ಕೊಡುವುದು, ಬಟ್ಟೆ ಕೊಡುವುದು, ಲೈಟ್‌ನ್ನು ಹಾಕುವುದು ಈ ರೀತಿಯಲ್ಲಿ ಕಾರ್ಯಕ್ರಮಗಳಿರುತ್ತವೆ. ಪಾತ್ರೆ ಕೊಡುವುದು, ಬಟ್ಟೆ ಕೊಡುವುದು, ಈ ರೀತಿಯ ಪ್ರಚಾರ ಮಾಡುವುದು ಇದೆಯೆಲ್ಲಾ, ಅದನ್ನು ನಿಲ್ಲಿಸಿ. ಯಾವ ಯಾವ ಪ್ರಚಾರ ಕಾರ್ಯಕ್ರಮಗಳು ಇದೆಯೆಲ್ಲಾ, ಬಟ್ಟೆ ಕೊಡುವುದು, ಪಾತ್ರೆಯನ್ನು ಕೊಡಿಸುವುದು ಏನಿದೆ, ಇವನ್ನೆಲ್ಲಾ ನಿಲ್ಲಿಸಿಬಿಡಿ. ನನ್ನ ಪ್ರಾಮಾಣಿಕವಾದ ಒಂದು ಸಲಹೆ ನಮ್ಮ ಸರ್ಕಾರಕ್ಕೆ ಏನೆಂದರೆ ಈ ರೀತಿಯ ಕೆಲವು ಕಾರ್ಯಕ್ರಮಗಳು ಏನಿವೆ ಅದನ್ನು ನಿಲ್ಲಿಸಿಬಿಡಿ. ೨೭ ಸಾವಿರ ಜನಕ್ಕೆ ಲೈಟುಗಳನ್ನು ಹಾಕಿಸುತ್ತೇವೆ, ಬಟ್ಟೆಗಳನ್ನು ಕೊಡುತ್ತೇವೆ, ಪಾತ್ರೆಯನ್ನು ಕೊಡುತ್ತೇವೆ ಎಂದು ಹೇಳುತ್ತೀರಲ್ಲಾ, ಅದು ಯಾವುದೂ ಬೇಡ. ಯಾವುದಕ್ಕೆ ತಾವು ಒತ್ತು ಕೊಟ್ಟು ಕೆಲಸ ಮಾಡಬೇಕೆಂದರೆ, ಮೊದಲು ವಿದ್ಯೆಗೆ ಒತ್ತು ಕೊಡಬೇಕಾಗುತ್ತದೆ. ಅವರಿಗೆ ಯಾವ ಫೆಸಿಲಿಟೀಸನ್ನು ಕೊಡಬೇಕು, ಯಾವ ರೀತಿ ಟ್ರೈನಿಂಗ್ ಕೊಡಬೇಕು, ಅವರನ್ನು ಎಫಿಸಿಯೆಂಟ್ ಮಾಡಲಿಕ್ಕೆ ಯಾವ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವುದರ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕಾಗುತ್ತದೆ. ಎರಡನೆಯದಾಗಿ ಊಟದ ವ್ಯವಸ್ಥೆ. ರೇಟ್ ಆಫ್ ಸ್ಕಾಲರ್‌ಷಿಪ್‌ನ್ನು ಮಾನ್ಯ ಸಿಂಧ್ಯರವರು ಜಾಸ್ತಿ ಮಾಡಿದ್ದಾರೆ. ಈ ವರ್ಷದಿಂದ ಅದು ಲಾಗುವಾಗಿದೆಯೋ ಏನೋ ಗೊತ್ತಿಲ್ಲ. ಹಿಂದೆ ಸ್ಕಾಲರ್‌ಷಿಪ್ ಎಂದು ೮೦ ರೂಪಾಯಿ ೧೦೦ ರೂಪಾಯಿ ಎಂದು ಏನು ಕೊಡುತ್ತಿದ್ದರು ಅದನ್ನು ನಾವು ಕ್ಯಾಲುಕ್ಯುಲೇಟ್ ಮಾಡಿ ನೋಡಿದರೆ ೫೦ ಪೈಸೆಗೆ ಒಂದು ಊಟ ಬೀಳುತ್ತದೆ. ಹಾಸ್ಟೆಲ್‌ಗೆ ಕೊಡುವ ಗ್ರ್ಯಾಂಟ್ ಇನ್‌ಏಡ್‌ನ್ನು ಕ್ಯಾಲುಕ್ಯುಲೇಟ್ ಮಾಡಿ ನೋಡಿದರೆ ಮತ್ತು ಈಗಿನ ಆಹಾರದ ಮಟ್ಟ ಮತ್ತು ಈಗ ಇರತಕ್ಕಂಥ ದರ, ಮತ್ತು ಕಾಸ್ಟ್ ಆಫ್ ಲೀವಿಂಗ್ ಇವನ್ನೆಲ್ಲಾ ನೋಡಿದರೆ ೫೦ ಪೈಸೆಗೆ ಒಂದು ಊಟವನ್ನು ಹಾಕುವಂತೆ ಹೇಳಿ ಸರ್ಕಾರದವರು ಈ ಸ್ಕಾಲರ್‌ಷಿಪ್ ಕೊಡುತ್ತಿದ್ದಾರೆ. ಈ ಹಣದಲ್ಲಿ ಯಾವ ರೀತಿ ಊಟ ಹಾಕುವುದಕ್ಕೆ ಇವತ್ತಿನ ಪರಿಸ್ಥಿತಿಯಲ್ಲಿ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಈ ರೀತಿ ಆದರೆ ಯಾವ ಹಾಸ್ಟೆಲ್‌ನ್ನು ನಡೆಸಲಿಕ್ಕೆ ಸಾಧ್ಯವಿದೆ? ಯಾವ ರೀತಿ ಊಟ ಹಾಕುವುದಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಇವತ್ತು ೫೦ ಪೈಸೆಗೆ ಒಂದು ದೋಸೆ ಕೂಡಾ ಬರುವುದಿಲ್ಲ. ಈಗ ೧೫೦ ರೂಪಾಯಿಯನ್ನು ಫಿಕ್ಸ್ ಮಾಡಿರುವ ಹಾಗೆ ಕಾಣುತ್ತದೆ. ಆದರೂ ಕೂಡಾ ಊಟ ಹಾಕುವುದಕ್ಕೆ ಕಷ್ಟವಾಗುತ್ತದೆ. ಇವತ್ತು ಮಸಾಲೆ ದೋಸೆ ಒಂದಕ್ಕೆ ಒಂದು ರೂಪಾಯಿ, ಕಾಫಿ ಬೆಲೆ ಒಂದು ರೂಪಾಯಿ ಈ ರೀತಿ ದರಗಳು ಹೆಚ್ಚಿವೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಸಾಲೆ ದೋಸೆ ಒಂದು ರೂಪಾಯಿ ಎಂದು ಹೇಳುತ್ತಿದ್ದೀರಿ. ಒಂದು ರೂಪಾಯಿಗಿನ್ನ ಜಾಸ್ತಿ ಇದೆ.

ಶ್ರೀ ಕೆ. ಶಿವಮೂರ್ತಿ.—ಇರಲಿ, ಆದರೆ ದಿವಸ ದಿವಸ ಬೆಲೆಗಳು ಜಾಸ್ತಿ ಏರುತ್ತಿವೆ. ಈ ರೀತಿ ದುಬಾರಿ ವೆಚ್ಚವಾಗುತ್ತಿರುವ ಕಾಲದಲ್ಲಿ ಈ ರೀತಿಯ ರೇಟ್ ಆಫ್ ಸ್ಕಾಲರ್‌ಷಿಪ್‌ಗೆ ಊಟ ಹಾಕಿ ಎಂದು ಹೇಳಿದರೆ ಸಾಧ್ಯವಿದೆಯೇ? ಆದ್ದರಿಂದ ಈ ರೇಟ್ ಸ್ಕಾಲರ್‌ಷಿಪ್‌ನ್ನು ಜಾಸ್ತಿ ಮಾಡಿ. ೧೫೦ ರೂಪಾಯಿ ಮಾಡಿರುವುದು ಕೂಡಾ ಸಾಲುವುದಿಲ್ಲ. ಕಾಲೇಜು ಹಾಸ್ಟೆಲ್‌ನಲ್ಲಿಯೂ ಕೂಡಾ ಇದೇ ಪರಿಸ್ಥಿತಿ ಇದೆ. ಹಳ್ಳಿಯಿಂದ ಬಂದಂಥ ವಿದ್ಯಾರ್ಥಿಗಳು ಬೇಸಾಯ ಮಾಡಿ ಕಷ್ಟಪಟ್ಟಿರುತ್ತಾರೆ. ಅವರು ಸ್ವಲ್ಪ ಊಟವನ್ನು ಜಾಸ್ತಿಯೇ ಮಾಡುತ್ತಾರೆ. ಆ ರೀತಿಯ ಶಕ್ತಿ ಇರುತ್ತದೆ, ಆ ರೀತಿಯಲ್ಲಿ ಅವರು ಕಷ್ಟಪಟ್ಟಿರುತ್ತಾರೆ. ಅದಕ್ಕೋಸ್ಕರ ಅವರು ಊಟವನ್ನು ಜಾಸ್ತಿ ಮಾಡುತ್ತಾರೆ. ಇವತ್ತು ಸರಿಯಾದ ಕ್ವಾಲಿಟಿ ಊಟವನ್ನು ಕೂಡಾ ವಿದ್ಯಾರ್ಥಿಗಳಿಗೆ ಕೊಡುತ್ತಿಲ್ಲ. ತಾವು ಕೂಡಾ ಇದನ್ನು ನೋಡಿ. ತಾವು ಮಂತ್ರಿಗಳಿದ್ದೀರಿ. ನಾನು ನೋಡಿದ್ದೇನೆ. ಒಂದೊಂದು ಹಾಸ್ಟೆಲ್‌ಗಳಲ್ಲಿ ತಾವು ನೋಡಿದರೆ ಸಾರು ಯಾವ ರೀತಿ ಇರುತ್ತದೆ ಎಂದರೆ ಬರಿ ನೀರು ನೀರು. ಅದರಲ್ಲಿ ಬೇಳೆ ತರಕಾರಿ ಏನೇನೂ ಕೂಡ ಇರುವುದಿಲ್ಲ. ಅದನ್ನು ವಿದ್ಯಾರ್ಥಿಗಳು ಯಾವ ರೀತಿ ತಿನ್ನಬೇಕು? ಸರಿಯಾಗಿ ಊಟ ಕೊಡಲಿಲ್ಲ ಎಂದು ಹೇಳಿದರೆ ಯಾವ ರೀತಿ ಅವರು ಓದಬೇಕು? ಊಟವನ್ನು ಹಾಕಲಿಲ್ಲ ಎಂದು ಹೇಳಿದರೆ ಹೇಗೆ ಓದುತ್ತಾರೆ? ಇನ್ನು ಕಟ್ಟಡಗಳ ಬಗ್ಗೆಯೂ ನೋಡಬೇಕಾಗುತ್ತದೆ. ತಮ್ಮ ಕ್ಷೇತ್ರದಲ್ಲಿಯೂ ಹಾಸ್ಟೆಲ್‌ನ್ನು ನಡೆಸುತ್ತಿದ್ದಾರೆ, ಜಿಲ್ಲಾ ಹಾಸ್ಟೆಲ್‌ಗಳು ನಡೆಯುತ್ತಿವೆ.

ತಾವು ಎಷ್ಟು ಗವರ್ನಮೆಂಟ್ ಕಟ್ಟಡಗಳನ್ನು ಕಟ್ಟಿಸಿದ್ದೀರಿ, ಅವು ಯಾವ ಸ್ಟೇಜಿನಲ್ಲಿವೆ ಅಂದರೆ ತಾವು ಕಟ್ಟಿಸಿರತಕ್ಕಂಥ ಗವರ್ನಮೆಂಟ್ ಕಟ್ಟಡಗಳಲ್ಲಿ ಇವತ್ತು ನೀರು ಸೋರುತ್ತಿದೆ. ಅಲ್ಲಿ ಯಾರೂ ವಾಸಿಸುವುದಿಲ್ಲ. ಹಾಕಿರತಕ್ಕ ಬೋರ್‌ವೆಲ್‌ನಲ್ಲಿ ನೀರೇ ಬರುತ್ತಾ ಇಲ್ಲ, ಅಲ್ಲಿ ನೀರಿನ ಫೆಸಿಲಿಟಿ ಇಲ್ಲ, ಈ ರೀತಿ ಕಟ್ಟಡದ ಅವ್ಯವಸ್ಥೆ ಯಾಗಿದೆ. ತಾವು ಏನು ಎಸ್.ಸಿ.ಎಸ್.ಟಿ. ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿಸಿದ್ದೀರೋ ಅವು ನಾದುರಸ್ತಿಯಾಗಿವೆ, ಮಳೆ ಬಂದು ಸೋರುತ್ತಿದೆ, ಕದ ಇಲ್ಲ, ಕಿಟಕಿ ಇಲ್ಲ, ಎಲ್ಲಾ ಮುರಿದು ಹೋಗಿದೆ, ಅವನ್ನು ಮೇಂಟೆನೆನ್ಸ್ ಮಾಡುವವರು, ನೋಡಿಕೊಳ್ಳುವವರು ಇಲ್ಲ. ಮೇಂಟೆನೆನ್ಸ್ ಏನು ಮಾಡಿದ್ದೀರಿ, ಇದಕ್ಕೆ ಎಷ್ಟು ದುಡ್ಡು ಇಟ್ಟಿದ್ದೀರಿ ಎನ್ನುವುದರ ಬಗ್ಗೆ ಇದರಲ್ಲಿ ಏನನ್ನೂ ಕಾಣಿಸಿಲ್ಲ. ಹಾಸ್ಟೆಲ್ ಕಟ್ಟಡಗಳ ಮೇಂಟೆನೆನ್ಸ್ ಬಗ್ಗೆ ತಾವು ಏನು ಮಾಡಿದ್ದೀರಿ. ನಾವು ಈ ಹಾಸ್ಟೆಲ್‌ಗಳಿಗೆ ಹೋಗಿದ್ದೇವೆ, ಅಲ್ಲಿರತಕ್ಕ ಲೆಟ್ರಿನ್ ಬಾತ್‌ರೂಂಗಳನ್ನು ತಾವು ನೋಡಿಬಿಡಿ ಗೊತ್ತಾಗುತ್ತದೆ ಹೇಗಿದೆಯೆಂದು. ಅದರ ಬಗ್ಗೆ ತಾವು ಇದರಲ್ಲಿ ಏನೇನು ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದೀರಿ. ಈಗ ಈ ಹಾಸ್ಟೆಲ್ ಫೆಸಿಲಿಟೀಸ್‌ನಿಂದಾಗಿ ಷೆಡ್ಯೂಲ್ ಕ್ಯಾಸ್ಟ್ ಸ್ಟೂಡೆಂಟ್ಸ್‌ಗೆ ನಾವು ಎಜುಕೇಷನ್ ಕೊಡುತ್ತಾ ಇದ್ದೇವೆ. ಎಜುಕೇಷನ್ ಅಂದರೆ ಷೆಡ್ಯೂಲ್ ಕ್ಯಾಸ್ಟ್ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಓದಬೇಕು. ಇಲ್ಲ ಅಂದರೆ ೧೮ ಪರ್ಸೆಂಟ್ ರಿಸರ್ವೇಷನ್ ಇದೆಯೇ ? ಸೈನಿಕ ಸ್ಕೂಲ್ ದೊಡ್ಡ ದೊಡ್ಡ ಸ್ಕೂಲ್ಸ್, ಪರಮ ಪಂಡಿತರ ಮಕ್ಕಳು ಓದತಕ್ಕ ಶಾಲೆಗಳಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮಕ್ಕಳಿಗೆ ಏನಾದರೂ ಅಡ್ಮಿಷನ್ ಇದೆಯೇ ಅಂದರೆ ಅಲ್ಲಿ ಅಡ್ಮಿಷನ್ ಇಲ್ಲ. ಅವರು ಏನಾದರೂ ಕಾರ್ಪೊರೇಷನ್ ಶಾಲೆಗಳು ಅಥವಾ ಹಳ್ಳಿಗಳ ಶಾಲೆಗಳಲ್ಲಿ ಓದಿ ಈ ಫೆಸಿಲಿಟೀಸ್ ಪಡೆದು ಮುಂದಕ್ಕೆ ಬರಬೇಕು ಅಂದರೆ ಅವನ ಗತಿ ಎಲ್ಲಿಗೆ ಹೋಗುತ್ತದೆ. ಷೆಡ್ಯೂಲ್ ಕ್ಯಾಸ್ಟ್ ವಿದ್ಯಾರ್ಥಿ ಓದಿ ಜಾಬ್ ಸಿಕ್ಕಿ ಆಫೀಸರ್ ಆದ ಎಂದು ಇಟ್ಟುಕೊಳ್ಳಿ. ಆ ಆಫೀಸರನ್ನು ಯಾವರೀತಿ ಮಾಡುತ್ತಾರೆ, ಎಲ್ಲಿಗೆ ಹಾಕುತ್ತಾರೆ, ಯಾವರೀತಿ ನೋಡಿಕೊಳ್ಳುತ್ತಾರೆ ಅಂದರೆ, ಅವನು ಆಫೀಸರ್ ಆದಮೇಲೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬರೆದು ಸುಮ್ಮಸುಮ್ಮನೆ ಅಲಿಗೇಷನ್ ಮಾಡಿ, ಅವನನ್ನು ಮೂಲೆ ಗುಂಪುಮಾಡಿ, ಲೈಫ್ ಲಾಂಗ್ ಬ್ಲಾಕ್‌ಸ್ಪಾಟ್‌ನಲ್ಲಿ ಇಟ್ಟು ಬಿಡುತ್ತಾರೆ. ಷೆಡ್ಯೂಲ್ ಕ್ಯಾಸ್ಟ್ ಆಫೀಸರ್‌ಗಳ ಪೈಕಿ ಒಬ್ಬಿಬ್ಬರನ್ನು ಬಿಟ್ಟರೆ ಬೇರೆ ಎಲ್ಲರ ಮೇಲೂ ಸಾರಾಸಗಟಾಗಿ ಅಲಿಗೇಷನ್ ಮಾಡಿ, ಎನ್‌ಕ್ವೈರಿ ರೀಎನ್‌ಕ್ವೈರಿ, ಸಸ್ಪೆನ್‌ಷನ್, ಈ ರೀತಿ ಮಾಡಿ ಅವರಿಗೆ ಸೆಕ್ಯೂರಿಟಿಯೇ ಇಲ್ಲದಹಾಗೆ ಮಾಡಿದ್ದೀರಿ. ಆದ್ದರಿಂದ ತಾವು ಷೆಡ್ಯೂಲ್‌ಕ್ಯಾಸ್ಟ್ ಅಫೀಸರ್ಸ್ ಬಗ್ಗೆ ನೋಡಬೇಕು. ಅವರು ನಮ್ಮ ಹತ್ತಿರ ಬಂದು ಹೇಳುತ್ತಾರೆ, ಈ ರೀತಿ ಅಲಿಗೇಷನ್, ಷೋಕಾಸ್ ನೋಟೀಸ್, ಎನ್‌ಕ್ವೈರಿ ಎಲ್ಲಾ ಮಾಡುತ್ತಾ ಇದ್ದಾರೆ ಎಂದು ಹೇಳುತ್ತಾರೆ. ಆದರೆ ತಪ್ಪು ಮಾಡಿದ ತಕ್ಷಣ ಅವರನ್ನು ಬಿಡಿ ಎಂದು ನಾವು ಯಾರೂ ಹೇಳುವುದಿಲ್ಲ. ಅವರು ಯಾರೇ ಆಗಲಿ ತಪ್ಪುಮಾಡಿದ ತಕ್ಷಣ ಅವರನ್ನು ಶಿಕ್ಷೆಗೆ ಒಳಪಡಿಸಬೇಕು. ಆದರೆ ದುರುದ್ದೇಶ ಪೂರ್ವಕವಾಗಿ ತಪ್ಪನ್ನು ಮಾಡತಕ್ಕದ್ದು, ಅಲಿಗೇಷನ್ ಮಾಡತಕ್ಕದ್ದು, ಅವರ ಮೇಲೆ ಎನ್‌ಕ್ವೈರಿ ಮಾಡಿಸುವುದು, ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬರೆಸಿ ಹಾಕುವುದು, ಅವರ ಕೆರಿಯರನ್ನು ಡ್ಯಾಮೇಜ್ ಮಾಡತಕ್ಕ ಪ್ರವೃತ್ತಿ ನಡೆಯುತ್ತಿದೆ ಆದುದರಿಂದ ಹೀಗೆ ಕೆಲಸ ಮಾಡತಕ್ಕಂಥ ಜನರಿಗೆ ಸೆಕ್ಯೂರಿಟಿ ಬರತಕ್ಕಂಥ ರೀತಿಯಲ್ಲಿ ಅವರಿಗೆ ಒಳ್ಳೆಯ ಪೋಸ್ಟಿಂಗ್ಸ್ ಕೊಟ್ಟು, ಒಳ್ಳೆಯ ಜಾಬ್‌ನಲ್ಲಿಡುವ ಹಾಗೆ ತಾವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದು ಹೇಳುತ್ತಾ ಇದ್ದೇನೆ. ಈಗ ಸಮಾಜ ಕಲ್ಯಾಣ ಇಲಾಖೆಯಿಂದ ಕೆಲವು ಇರಿಗೇಷನ್ ಪ್ರಾಜೆಕ್ಟ್‌ಗಳು ನಡೆಯುತ್ತಾ ಇವೆ. ಸಾಮೂಹಿಕ ನೀರಾವರಿ ಯೋಜನೆ, ಗಂಗಾಕಲ್ಯಾಣ ಯೋಜನೆಗಳಿವೆ. ಹಾಗೇ ಇನ್ನಿತರ ಯೋಜನೆಗಳಿವೆ. ಈಗ ನಮ್ಮ ತಾಲ್ಲೂಕಿನಲ್ಲಾಗಲಿ, ಜಿಲ್ಲೆಯಲ್ಲಾಗಲಿ ಅಥವಾ ರಾಜ್ಯದಲ್ಲಿ ಷೆಡ್ಯೂಲ್‌ಕ್ಯಾಸ್ಟ್ ಡಿಪಾರ್ಟ್‌ಮೆಂಟ್‌ನಿಂದ ಒಂದು ಬೋರ್ ಹಾಕಿದರೆ ಎಲೆಕ್ಟ್ರಿಸಿಟಿ ಕೊಡಲಿಕ್ಕೆ ಮೂರು ವರ್ಷ ಬೇಕಾಗುತ್ತದೆಯೇ, ನಾಲ್ಕು ವರ್ಷ ಬೇಕಾಗುತ್ತದೆಯೇ ? ಈ ಗಂಗಾಕಲ್ಯಾಣ ಯೋಜನೆ ಜಾರಿಗೆ ಕೊಡಬೇಕಾದರೆ ಐದೈದು ವರ್ಷ ಬೇಕಾಗುತ್ತದೆ ನನ್ನ ಜಿಲ್ಲೆಯಲ್ಲಿ, ನನ್ನ ಕ್ಷೇತ್ರದಲ್ಲಿ ನಾಲ್ಕು ಕಲ್ಯಾಣ ಯೋಜನೆಗಳು ನಾಲ್ಕು ನಾಲ್ಕು ವರ್ಷಗಳಿಂದ ಕೊಳೆಯುತ್ತಾ ಇವೆ. ನೀವು ಹಾಕಿರತಕ್ಕ ಯೋಜನೆಗಳೆಲ್ಲಾ ಡೀಫಂಕ್ಟಾಗಿ ಹೋಗಿದೆ, ಎಲ್ಲ ನಿಂತು ಹೋಗಿದೆ. ಇಡೀ ರಾಜ್ಯದಲ್ಲಿ ಯಾವ ಯಾವ ವರ್ಷದಲ್ಲಿ ನೀವು ಹಾಕಿರತಕ್ಕ ಯೋಜನೆಗಳು ನಡೆಯುತ್ತಿವೆಯೋ, ಅವು ನಾದುರಸ್ಥಿಯಲ್ಲಿದ್ದರೆ ಅವನ್ನು ದುರಸ್ಥಿ ಮಾಡತಕ್ಕಂಥದ್ದನ್ನು ಮಾಡಿದ್ದೀರಾ ? ಇಲ್ಲ, ಅದಕ್ಕೆ ಏನೂ ಮಾಡಿಲ್ಲ, ನನ್ನ ಕ್ಷೇತ್ರದಲ್ಲಿ ಷೆಡ್ಯೂಲ್ ಕಾಸ್ಟ್, ಷೆಡ್ಯೂಲ್ ಟ್ರೈಬ್ ಸೊಸೈಟಿ ಒಂದು ಸಾಮೂಹಿಕ ನೀರಾವರಿ ಯೋಜನೆ ಮಾಡಿದೆ. ಅದನ್ನು ರಿಪೇರಿ ಮಾಡಿ ಅಂದರೆ ಬಿ.ಡಿ.ಎ. ಆಫೀಸಿನಲ್ಲಿ ನಮಗೆ ದುಡ್ಡಿಲ್ಲ ಎಂದು ಹೇಳುತ್ತಾರೆ ಜಿಲ್ಲಾ ಪರಿಷತ್‌ನವರು ನಮಗೆ ದುಡ್ಡಿಲ್ಲ ಎಂದು ಹೇಳುತ್ತಾರೆ. ಅದನ್ನು ಸರ್ಕಾರಕ್ಕೆ ಕೇಳಬೇಕು ಎಂದು ಹೇಳುತ್ತಾರೆ ಈ ರೀತಿ ಮೂರು ವರ್ಷಗಳಿಂದ ಹಾಗೇಕೊಳೆಯುತ್ತಾ ಇದೆ. ಅದು

ಸುಮಾರು ೨೮ ಎಕರೆ ನೀರಾವರಿ ಅಗತಕ್ಕಂಥ ಯೋಜನೆ. ಇಂತಹ ಸುಮಾರು ೨೦ ಯೋಜನೆಗಳಿ ನಮ್ಮ ಜಿಲ್ಲೆಯಲ್ಲಿ ಹಾಗೇ ಕೊಳೆಯುತ್ತಾ ಇವೆ. ತಾವು ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತೀರಿ, ಲಕ್ಷಗಟ್ಟಲೆ ಹಣ ಇಡುತ್ತೀರಿ, ಷೆಡ್ಯೂಲ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್ ಕಾರ್ಪೊರೇಷನ್ ಎಂದು ಹೇಳುತ್ತೀರಿ. ಆದರೆ ಅದು ೩-೪ ವರ್ಷದಿಂದ ನಿಂತು ಹೋಗಿದೆ. ಇದರಿಂದ ಸಿಗತಕ್ಕ ಲಾಭವಾದರೂ ಏನು ? ಯಾರಿಗೆ ಲಾಭ ಬರುತ್ತಿದೆ, ಷೆಡ್ಯೂಲ್ ಕ್ಯಾಸ್ಟ್ ಹೆಸರಿನಲ್ಲಿರತಕ್ಕ ಇರಿಗೇಷನ್ ಪ್ರಾಜೆಕ್ಟ್ಸ್ ಇದೆಯೋ ಅವುಗಳ ಮೆಂಟೆನೆನ್ಸ್ ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಎಂಬುದನ್ನು ತಾವು ತಿಳಿಸಬೇಕು. ಆ ಮೇಲೆ ಮುನಿಸಿಪಾಲಿಟಿಗಳು, ಕಾರ್ಪೊರೇಷನ್‌ಗಳು ಹಾಗೂ ಯೂನಿವರ್ಸಿಟಿಗಳು ೧೮ ಪರ್ಸೆಂಟ್ ಹಣವನ್ನು ಖರ್ಚು ಮಾಡದೇ ಇದ್ದರೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ? ಇದರ ಬಗ್ಗೆ ನಿಗಾ ಇಡಲಿಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ? ಅಧಿಕಾರಿಗಳಿಗೆ ಡೈರೆಕ್ಷನ್ ಕೊಡುತ್ತೀರಾ ? ಜಿಲ್ಲಾ ಪರಿಷತ್‌ನಲ್ಲಿ ನಾವು ಪ್ರಯತ್ನ ಮಾಡಿ, ಮಾಡಿ ಸಾಕಾಗಿದ್ದೇವೆ. ಅವರು ಇದರ ಬಗ್ಗೆ ಯಾವ ಮಾಹಿತಿಯನ್ನೂ ಕೊಡುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಕೇಳಲು ಹೋದಾಗ ಅವರು ಇರುವುದಿಲ್ಲ. ಇದರ ಬಗ್ಗೆ ಯಾರಿಗೂ ಕಾಳಜಿ ಇಲ್ಲ. ಇವತ್ತು ಮಂಡಲ ಪಂಚಾಯಿತ್ತು ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ಕೂಡ ಈ ೧೮ ಪರ್ಸೆಂಟ್ ಹಣ ಯಾವರೀತಿ ಖರ್ಚಾಗುತ್ತಿದೆ ಎಂದರೆ ಈ ಒಂದು ವ್ಯವಸ್ಥೆ ಬಂದಮೇಲೆ ಪರಿಶಿಷ್ಟ ಜಾತಿ, ವರ್ಗ ಹಾಗೂ ಹಿಂದುಳಿದವರಿಗೆ ಬಿದ್ದ ಪೆಟ್ಟು ಹೊಡೆತ ಯಾವ ವರ್ಗಕ್ಕೂ ಬಿದ್ದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇದರಲ್ಲಿ ನಾವು ರಾಜಕೀಯ ಬೆರೆಸುವುದು ಬೇಡ. ಏಕೆಂದರೆ ವಿಶೇಷ ಘಟಕ ಯೋಜನೆ ಪ್ರಾರಂಭವಾದದ್ದು ೮೦ರಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತ್ತಿ ಗಳು ಬಂದದ್ದು ೧೯೮೭ರಲ್ಲಿ. ಈ ಯೋಜನೆ ಜಾರಿಗೆ ಬಂದ ಮೇಲೆ ಎಷ್ಟು ಇಂಪ್ಲಿಮೆಂಟ್ ಆಗಿದೆ. ೧೦೦ ಪರ್ಸೆಂಟ್ ಆಗಿದೆಯೋ ? ಎಷ್ಟು ತಲುಪಿದೆ. ಆದ್ದರಿಂದ ಇದರಲ್ಲಿ ರಾಜಕೀಯವನ್ನು ಬೆರೆಸಿದರೆ ಏನೂ ಉಪಯೋಗ ಆಗುವುದಿಲ್ಲ.

ಶ್ರೀ ಕರಿಯಣ್ಣ.—ಮಾನ್ಯ ಅಧ್ಯಕ್ಷರೆ, ಇಂಪ್ಲಿಮೆಂಟ್ ಬಗ್ಗೆ ವಾದವಿವಾದ ಮಾಡುವುದಲ್ಲ, ಈ ಜಿಲ್ಲಾ ಪರಿಷತ್ತುಗಳು ಬಂದಮೇಲೆ ಈ ಜನರ ಬಗ್ಗೆ ಇರುವ ಕಾರ್ಯಕ್ರಮಗಳಿಗೆ ಎಷ್ಟು ಧಕ್ಕೆ ಯಾಗಿದೆ ಎನ್ನುವುದನ್ನು ಯೋಚನೆ ಮಾಡಿದ್ದೀರಾ. ಅದು ಮುಖ್ಯ ಯಾವ ಉದ್ದೇಶದಿಂದ ಈ ಸಂಸ್ಥೆಗಳನ್ನು ರಚಿಸಲಾಯಿತೋ, ಆ ಒಂದು ಸದುದ್ದೇಶದಿಂದ ಈ ಒಂದು ಜನಾಂಗದ ಉದ್ಧಾರವಾಗಿಲ್ಲ. ಈ ವ್ಯವಸ್ಥೆಯಿಂದ ಇನ್ನಷ್ಟು ಅನಾಹುತಗಳಾಗಿವೆ, ಆದ್ದರಿಂದ ಇದರ ಬಗ್ಗೆ ಮರುಪರಿಶೀಲನೆ ಮಾಡು ವುದಕ್ಕೆ ತಾವು ಒಪ್ಪಬೇಕಾಗುತ್ತದೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತ್ತಿ is a systematic design. This has hard hit the backward classes and weaker sections of the society. ಯಾವ ರೀತಿ ಎಂದರೆ ಎಲೆಕ್ಷನ್ ಪ್ರೊಸೆಸ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರು ಹಾಗೂ ಹಿಂದುಳಿದವರು ಯಾರೂ ಪಾರ್ಟಿಸಿಪೇಟ್ ಮಾಡುತ್ತಿವುದಿಲ್ಲ. ಓಟು ಹಾಕುವುದಕ್ಕೆ ಮಾತ್ರ ಇವರಿದ್ದಾರೆ. ಅವರಿಗೆ ಅಧಿಕಾರ ಸಿಗುವುದಿಲ್ಲ. ಮಂಡಲ ಪಂಚಾಯಿತ್ತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ಏನಿವೆ, ಇವು ಏನಿದ್ದರೂ ಶ್ರೀಮಂತರಿಗೆ, ಶಕ್ತಿವಂತರಿಗೆ ವರಪ್ರಸಾದವಾಗಿವೆ. ಮೈನಾರಿಟೀಸ್ ಯಾರೂ ಭಾಗವಹಿಸುತ್ತಿಲ್ಲ. ಅವರ ಮಾತನ್ನು ಯಾರೂ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಪರಿಶಿಷ್ಟ ಜಾತಿಗೆ ಸೇರಿದವರು ಎಷ್ಟು ಜನ ಅಧ್ಯಕ್ಷರಿದ್ದಾರೆ, ನಾಮ ಕಾವಸ್ಥೆಗೆ ಉಪಾಧ್ಯಕ್ಷರನ್ನಾಗಿ ಮಾಡಿದ್ದಾರೆ. ಅವರಿಗೆ ಯಾವ ಅಧಿಕಾರವೂ ಇಲ್ಲ. ಪರಿಶಿಷ್ಟ ಜಾತಿಗೆ ಸೇರಿದ ಎಷ್ಟು ಜನ ಪ್ರಧಾನರುಗಳು ಇದ್ದಾರೆ, ಹಾಗಿದ್ದರೆ ಯಾರ ಕೈನಲ್ಲಿ ಅಧಿಕಾರ ಇದೆ ? ಈ ಒಂದು ಅಧಿಕಾರವನ್ನು ಚಲಾಯಿಸತಕ್ಕವರು ಯಾರು ? ಯಾರು ಸಮಾಜದಲ್ಲಿ ಶಕ್ತಿವಂತರಿದ್ದಾರೆ, ಶ್ರೀಮಂತರಿದ್ದಾರೆ ಅವರ ಕೈಗೆ ಧಾರೆ ಎರೆದು ಅಧಿಕಾರವನ್ನು ಕೊಟ್ಟಿದ್ದೇವೆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ವಿರೋಧವಾಗಿರತಕ್ಕ ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ಮಾನ್ಯ ಬಸವಲಿಂಗಪ್ಪನವರು ದಿಟ್ಟ ಹೆಜ್ಜೆ ಇಟ್ಟರು. ಈಗ ಬಂದಿರತಕ್ಕ ಮಾನ್ಯ ಮಂತ್ರಿಗಳು ಅದಕ್ಕೆ ಪುರಸ್ಕಾರ ಕೊಟ್ಟು ಆ ದಿಕ್ಕಿನಲ್ಲಿ ಕೆಲಸ ಮಾಡುತ್ತಾರೆಂದು ಭಾವಿಸಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅವರ ಖಾತೆಯನ್ನು ಬದಲಾಯಿಸಿದರು.

ಶ್ರೀ ಕೆ. ಶಿವಮೂರ್ತಿ.—ನೀವು ಇದ್ದ ಕ್ಯಾಬಿನೆಟ್‌ನಲ್ಲಿ ನೀವೊಬ್ಬರೇ ಧೈರ್ಯವಾಗಿ ಮಾತನಾಡು ತ್ತಿದ್ದಿರಿ, ಬೇರೆ ಯಾರೂ ಮಾತನಾಡುತ್ತಿರಲಿಲ್ಲ. ನಾವು ಸಹ ಜಿಲ್ಲಾ ಪರಿಷತ್‌ನಲ್ಲಿ ಕೆಲಸ ಮಾಡಿದ್ದೇವೆ. ಅಲ್ಲಿ ೧೮ ಪರ್ಸೆಂಟ್ ಹಣವನ್ನು ಇವರಿಗಾಗಿ ಮೀಸಲಿಡಲು ಮತ್ತು ಖರ್ಚು ಮಾಡು ವುದಕ್ಕೆ ಬಹುತೇಕ ಮಂಡಲ ಪಂಚಾಯಿತಿ ಪ್ರಧಾನರುಗಳು ಪ್ರಯತ್ನ ಮಾಡುವುದಿಲ್ಲ.

೨-೩೦ ಪಿ. ಎಂ.

ಅಲ್ಲಿರತಕ್ಕಂಥ ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರ್ಸ್ ಹತ್ತಿರ ಸೈನ್ ಹಾಕಿಸಿಕೊಂಡು ಕಳುಹಿಸುತ್ತಾರೆ. ಆ ವೋಟಿಂಗ್ ಪ್ರೊಸೀಡಿಂಗ್ಸ್ ಹೇಗೆ ಆಗುತ್ತದೆಂದು ನನಗೆ ಗೊತ್ತಿದೆ. ಬೇಸಿಕ್ ಲೆವೆಲ್‌ನಲ್ಲಿ ಯಾವ ಹಳ್ಳಿಗಳಿಗೆ ಮನೆ ಬಾಗಿಲಿಗೆ ಅಧಿಕಾರ ಕೊಡಬೇಕು ಎನ್ನುವ ತತ್ವ ಇತ್ತು ಅದು ಇವೊತ್ತು ಇದೆಯೋ ಅಂದರೆ ಅದು ಇವೊತ್ತು ಪೂರ್ತಿಯಾಗಿ ನಡೆಯುತ್ತಿಲ್ಲ, ಮನೆ ಬಾಗಿಲಿಗೆ ಅಧಿಕಾರ ಕೊಡುತ್ತೇವೆಂದು ಏನು ಹೇಳಿದರು, ಅದು ಯಾವರೀತಿ ಆಗಿದೆ ಎಂದರೆ. ಶೋಷಿತವರ್ಗದವರ ಮನೆಯಲ್ಲಿರತಕ್ಕಂಥವರ ಅಧಿಕಾರವನ್ನು ಕಸಿದುಕೊಂಡು ಹೋಗಿ ಶ್ರೀಮಂತರಿಗೆ ಕೊಡುವಂಥ ತತ್ವ ಆಗುತ್ತಿದೆ. ಇನ್ನು ಮಂಡಲ್ ಪಂಚಾಯಿತ್ ಮತ್ತು ಜಿಲ್ಲಾಪರಿಷತ್ ವ್ಯವಸ್ಥೆಯಲ್ಲಿ ಇರತಕ್ಕಂಥ ೧೮ ಪರ್ಸೆಂಟ್ ಬಗ್ಗೆ ಅವರು ಬಡ್ಜೆಟ್ ಪ್ರಾವಿಜನ್ ಅನ್ನೇ ಮಾಡಿಲ್ಲ. ಇನ್ನು ಹಣ ಖರ್ಚು ಮಾಡುವುದು ಎಲ್ಲಿಂದ ಬಂತು? ಮಂಡಲ್ ಪಂಚಾಯಿತಿಗಳಲ್ಲಿ, ಕೆಲವು ಜಿಲ್ಲಾಪರಿಷತ್‌ಗಳಲ್ಲಿ ಕೆಲವು ಇಲಾಖೆಗಳಲ್ಲಿ ಮಾನ್ಯ ಸಿಂಧ್ಯ ಅವರು ಹೇಳಿದ ಹಾಗೆ ಮಾರ್ಚಿ ತಿಂಗಳು ಕೊನೆಯಲ್ಲಿ ತರಾತುರಿ ಆಗಿ ಬಿಲ್ಲು ಹಾಕಿ ಹಣ ಖರ್ಚು ಮಾಡುವುದು ನನಗೆ ಗೊತ್ತು. ಮಾರ್ಚಿ ೩೧ನೇ ತಾರೀಖಿಗೆ ಈ ಬಿಲ್ಲುಗಳು ಆಗುತ್ತಾ ಇರುತ್ತವೆ. ಕೆಲವರು ದುಡ್ಡು ಡ್ರಾ ಮಾಡಿಕೊಂಡು ಇಟ್ಟುಕೊಂಡಿರುತ್ತಾರೆ ಮಾರ್ಚಿ ತಿಂಗಳೊಳಗೆ ಡೇಟ್ ಹಾಕಿಕೊಂಡು ಬಿಲ್ಲು ಕೊಡುತ್ತಿರುತ್ತಾರೆ. ಇನ್ನು ಕೆಲವು ಡಿಪಾರ್ಟ್‌ಮೆಂಟುಗಳಲ್ಲಿ ಸ್ಪೆಷಲ್ ಕಾಂಪೋನೆಂಟ್ ಹಣವನ್ನು ಖರ್ಚುಮಾಡಿ ಮೆಷನರೀಸ್ ತೆಗೆದುಕೊಂಡಿರುವುದು ಇದೆ. ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟುಗಳಲ್ಲಿಯೂ ಈ ತರಹ ಆಗಿದೆ. ಅಲ್ಲಿ ಸುಮಾರು ಲಕ್ಷಾಂತರ ರೂಪಾಯಿ ಬೆಲೆಬಾಳುವ ಮೆಷಿನರಿಯನ್ನು ಖರೀದಿ ಮಾಡಿ ಹಾಗೆಯೇ ಇಟ್ಟುಕೊಂಡಿದ್ದಾರೆ. ಅವರು ಮುಂದೆ ಏನಾಗುತ್ತದೆ ಎಂದು ನೋಡಿಕೊಂಡು ಹೋಗುತ್ತಿರುತ್ತಾರೆ. ಹಿಂದೆ ಏನು ಆಗಿರುತ್ತದೆ ಅದು ಮರೆತುಹೋಗುತ್ತದೆ, ಬರೀ ಕ್ಯಾರಿಫಾರವರ್ಡ್ ಆಗುತ್ತದೆ. ಇದರಲ್ಲಿ ಎಷ್ಟು ಫಂಡ್ ಲ್ಯಾಪ್ಸ್ ಆಗುತ್ತದೆ ಯಾವರೀತಿ ಇಂಪ್ಲಿಮೆಂಟ್ ಮಾಡುತ್ತಿದ್ದಾರೆ ಅದನ್ನು ಏನಾದರೂ ನೋಡಿರುತ್ತಿದ್ದಾರೆಯೋ? ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಬರೀ ಉದ್ಘಾಟನೆ ಮಾಡಿ ಪ್ರಚಾರ ಮಾಡುತ್ತಿದ್ದಾರೆಯೇ ವಿನಹ ಅದರ ಇಂಪ್ಲಿಮೆಂಟ್ ಆಗಿ ಜನರಿಗೆ ಅದರ ಲಾಭ ಸಿಕ್ಕುತ್ತದೆಯೋ ಇಲ್ಲವೇ ಎಂದು ನೋಡುತ್ತಿಲ್ಲ. ಅದರಲ್ಲಿ ಪ್ರಾಯೋಗಿಕವಾಗಿ ನಡೆದುಕೊಂಡು ಹೋಗುತ್ತಿದೆ. ಆ ಡಿಪಾರ್ಟ್‌ಮೆಂಟ್ ನಾನು ಯಾರ ಬಗ್ಗೆಯೂ ಸಹ ದೋಷಾರೋಪಣೆ ಮಾಡುತ್ತಿಲ್ಲ. ಆ ಸಿಸ್ಟಮ್ ಅನ್ನು ಬದಲಾವಣೆಯಾಗಬೇಕು. ಆ ಪ್ಲಾನಿಂಗ್ ಸಿಸ್ಟಮ್ ಏನಿದೆ ಅದರ ಬಗ್ಗೆ ನಾವು ಹೇಳಿದ್ದೆ ಹೇಳಿದ್ದು. ನಾವು ಲಾ ಗ್ರಾಜುಯೇಟ್ಸ್‌ಗೆ ಸ್ಟೈಫಂಡ್ ಕೊಡುತ್ತೇವೆ, ಉಚಿತ ಬಟ್ಟೆ ಕೊಡುತ್ತೇವೆ, ಅವರಿಗೆ ಲೈಬ್ರರಿ ಮಾಡುತ್ತೇವೆ ಎಂದು ಹೇಳುವುದು ಏನಿದೆ ಇದು ಬೇಡ ಇದನ್ನು ನಿಲ್ಲಿಸಿ ಇವೊತ್ತು ನಾವು ಯಾವುದನ್ನು ಕೊಡಬೇಕು ಅಂದರೆ ಊಟ ಮೊದಲು ಹಾಕಿ ಈ ವರ್ಷ ಮಕ್ಕಳಿಗೆ ಊಟ ಹಾಕಲಿಕ್ಕೆ ಎಷ್ಟು ಹಾಸ್ಟೆಲ್ ಸೌಲಭ್ಯ ಕೊಟ್ಟಿದ್ದೇವೆ ಸ್ವಾಮಿ? ಇವೊತ್ತು ಜನಸಂಖ್ಯೆ ಬೆಳೆಯುತ್ತಿದೆ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯುತ್ತಿದೆ ಓದತಕ್ಕಂಥ ಮಕ್ಕಳು ಜಾಸ್ತಿಯಾಗುತ್ತಿದ್ದಾರೆ. ಬೇಡಿಕೆ ಜಾಸ್ತಿ ಬರುತ್ತಿದೆ ಆದರೆ ಹೊಸದಾಗಿ ಎಷ್ಟು ಹಾಸ್ಟೆಲ್ ಕೊಟ್ಟಿದ್ದೇವೆ? ಕೊಡದೇ ಇದ್ದರೆ ಏತಕ್ಕೆ ಕೊಡಲಿಲ್ಲ ತಾವು ಜೆನಿಯುನ್ ಆಗಿರತಕ್ಕಂಥ ಮ್ಯಾನೇಜ್‌ಮೆಂಟ್‌ಗಳಿಗಾದರೂ ಕೊಡಬಾರದೇ? ಎಲ್ಲರೂ ಲೂಟಿ ಮಾಡಿ ತಿಂದುಕೊಂಡು ಹೋಗತಕ್ಕವರೇನು? ಈ ವರ್ಷ ಹೊಸದಾಗಿ ಕೊಡಲಿಲ್ಲ. ಹೋದ ವರ್ಷವೂ ಕೊಡಲಿಲ್ಲ. ಈ ವರ್ಷ ಷೆಡ್ಯೂಲ್ಡ್ ಕ್ಯಾಸ್ಟ್ ಮಕ್ಕಳಿಗೆ ಹೊಸದಾಗಿ ದುಡ್ಡು ಖರ್ಚುಮಾಡಲೇ ಇಲ್ಲ. ಹಿಂದೆ ಎಷ್ಟು ಹಣ ಇಟ್ಟಿದ್ದರೋ ಅಷ್ಟೆ. ಎಷ್ಟು ಬೇಡಿಕೆ ಸರ್ಕಾರದ ಮುಂದೆ ಇದೆ. ಈಗ ಷೆಡ್ಯೂಲ್ಡ್ ಕ್ಯಾಸ್ಟ್ ಹೆಸರಿನಲ್ಲಿ ಮ್ಯಾನೇಜ್‌ಮೆಂಟ್‌ಗಳು ನಡೆಯುತ್ತವೆ. ಹಾಸ್ಟೆಲುಗಳು ನಡೆಯುತ್ತವೆ ಹೈಸ್ಕೂಲುಗಳು, ಕಾಲೇಜುಗಳು ಎಲ್ಲವೂ ಷೆಡ್ಯೂಲ್ಡ್ ಕ್ಯಾಸ್ಟ್ ಹೆಸರಿನಲ್ಲಿ ನಡೆಯುತ್ತವೆ. ಇದನ್ನು ಯಾವರೀತಿ ಕಂಡುಹಿಡಿಯಬೇಕು. ಸಂವಿಧಾನದ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಯಾವ ಯಾವ ಸೌಲಭ್ಯಗಳನ್ನು ಇರುತ್ತವೆ, ಅವುಗಳನ್ನು ಪಡೆಯಲು ಬೇರೆಯವರು ಷೆಡ್ಯೂಲ್‌ಕ್ಯಾಸ್ಟ್ ಹೆಸರಿನಲ್ಲಿ ನಡೆಸುತ್ತಿದ್ದಾರೆ. ಸಾಮಾನ್ಯವಾಗಿ ಈ ತರಹ ಫೇಕ್ ಮ್ಯಾನೇಜ್ ಮೆಂಟ್‌ನವರೇ ''ಉಚಿತ ಪ್ರಸಾದ ನಿಲಯ'' ಎಂದು ಬೋರ್ಡ್ ಹಾಕಿಕೊಂಡು ಇವರ ಹೆಸರಿನಲ್ಲಿ ಈ ಗ್ರಾಂಟ್ಸ್ ತೆಗೆದುಕೊಳ್ಳುತ್ತಿದ್ದಾರೆ, ಈ ತರಹ ಷೆಡ್ಯೂಲ್ಡ್ ಕ್ಯಾಸ್ಟ್ ಹೆಸರಿನಲ್ಲಿ ಲಕ್ಷಗಟ್ಟಲೆ ಗ್ರಾಂಟ್ಸ್ ತೆಗೆದುಕೊಂಡು ನಡೆಸತಕ್ಕಂಥ ಮ್ಯಾನೇಜ್‌ಮೆಂಟಿನವರನ್ನು ಸಹ ಬಂಧಿಗೆ ತರಲು ತಾವು ಏನು ಮಾಡುತ್ತೀರಿ. ಇವರು ನಿಜವಾದ ಷೆಡ್ಯೂಲ್ಡ್ ಕ್ಯಾಸ್ಟ್ ಮ್ಯಾನೇಜ್ ಮೆಂಟಿನವರಿಗೆ ಕಳಂಕ ತರುತ್ತಿದ್ದಾರೆ. ತಾವು ಷೆಡ್ಯೂಲ್ಡ್ ಕ್ಯಾಸ್ಟ್ ಮ್ಯಾನೇಜ್‌ಮೆಂಟ್ ಹಾಸ್ಟೆಲ್‌ಗೆ ಇನ್‌ಸ್ಪೆಕ್ಷನ್‌ಗೆ ಹೋಗುತ್ತೀರಿ ಅವರು ಅಲ್ಲಿಯೇ ಸಿಕ್ಕುತ್ತಾರೆ, ಅಲ್ಲಿ ಅವರಿಗೆ ಲ್ಯಾಂಡ್ ಇರುವುದಿಲ್ಲ, ಬಿಲ್ಡಿಂಗ್ ಇರುವುದಿಲ್ಲ, ವ್ಯವಸ್ಥೆ ಸರಿಯಾಗಿ ಇರುವುದಿಲ್ಲ. ಅದೇ

ಬೇರೆ ಮ್ಯಾನೇಜ್‌ಮೆಂಟಿನವರಿಗೆ ಬಿಲ್ಡಿಂಗ್ ಇರುತ್ತವೆ ೫೦ ಜನ ಬೇರೆಯವರ ಮಕ್ಕಳನ್ನು ಸೇರಿಸಿಕೊಂಡಿರುತ್ತಾರೆ. ೧೫-೨೦ ಜನ ಷೆಡ್ಯೂಲ್ಡ್ ಕ್ಯಾಸ್ಟ್ ಮಕ್ಕಳನ್ನು ಸೇರಿಸಿಕೊಂಡಿರುತ್ತಾರೆ. ನಂತರ ಎಲ್ಲರದ್ದನ್ನೂ ಸೇರಿಸಿಕೊಂಡು ಗ್ರ್ಯಾಂಟ್ಸ್ ತೆಗೆದುಕೊಳ್ಳುತ್ತಾರೆ. ಉಚಿತ ಪ್ರಸಾದ ನಿಲಯ ಎಂದು ಹೆಸರು ಹಾಕಿಕೊಂಡು ಷೆಡ್ಯೂಲ್ಡ್ ಕ್ಯಾಸ್ಟ್ ಹೆಸರಿನಲ್ಲಿ ಲೂಟಿ ಮಾಡುತ್ತಿದ್ದಾರೆ, ಅನ್ಯಾಯ ಮಾಡುತ್ತಿದ್ದಾರೆ ಇದನ್ನು ತಾವು ಯಾವರೀತಿ ತಡೆಗಟ್ಟುತ್ತೀರಾ ? ಷೆಡ್ಯೂಲ್ಡ್ ಕ್ಯಾಸ್ಟ್ ಮ್ಯಾನೇಜ್‌ಮೆಂಟ್ ಅಂದರೆ ಯಾರು ? ಅದರ ಡೆಫನಿಷನ್ ಏನು ? ಅಂದರೆ ಆ ಮ್ಯಾನೇಜ್‌ಮೆಂಟ್ ಎಲ್ಲಾ ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರ್‌ಗಳನ್ನೇ ಹೊಂದಿರಬೇಕು. ಈಗ ಏನಾಗುತ್ತಿದೆ ಅಂದರೆ, ಹೊಲದಲ್ಲಿ ಕೆಲಸ ಮಾಡುವವರನ್ನು ಮನೆಯಲ್ಲಿ ಕೆಲಸ ಮಾಡುವವರನ್ನು ಅಥವಾ ಊರಿನಲ್ಲಿ ಹೆಬ್ಬೆಟ್ಟು ಒತ್ತುವವರನ್ನು ಮೆಂಬರ್‌ಗಳನ್ನಾಗಿ ಮಾಡಿಕೊಂಡು ಅವರ ಹೆಸರಿನಲ್ಲಿ ಗ್ರ್ಯಾಂಟ್ ತೆಗೆದುಕೊಳ್ಳುತ್ತಾರೆ. ಆ ರೀತಿಯ ಮ್ಯಾನೇಜ್‌ಮೆಂಟ್‌ಗಳ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ತಾವು ಈ ಬಗ್ಗೆ ಸರಿಯಾದಂಥ ಕ್ರಮ ತೆಗೆದುಕೊಳ್ಳಬೇಕು, ಇಲ್ಲದೇ ಹೋದರೆ ನಿಜವಾದ ಮ್ಯಾನೇಜ್‌ಮೆಂಟ್ಸ್ ಏನಿರುತ್ತವೆ, ಯಾರು ಹರಿಜನರು ನಡೆಸುತ್ತಿರುತ್ತಾರೆ, ಅವರಮೇಲೆ ಪೂರ್ತಿ ಕಳಂಕ ಕುಳಿತುಕೊಳ್ಳುತ್ತದೆ ಆದ್ದರಿಂದ, ಈ ವಿಷಯದಲ್ಲಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮತ್ತೆ ಬೋರ್‌ವೆಲ್ ಅನ್ನು ಹಾಕತಕ್ಕಂತಹ ಕೆಲಸವನ್ನು ಎಸ್.ಸಿ. ಎಸ್.ಟಿ. ಕಾರ್ಪೊರೇಷನ್‌ಗೆ ಕೊಟ್ಟಿದ್ದೀರಿ ಅವರು ಅದನ್ನು ಖಾಸಗಿ ಕಂಟ್ರಾಕ್ಟರ್‌ಗೆ ಕೊಡುತ್ತಾರೆ. ಅವರು ಎಲ್ಲಿ ರಿಗ್ ಅನ್ನು ಹಾಕಿದರು ಅದರ ಬಗ್ಗೆ ಸರ್ವೆ ಮಾಡಿದ್ದಾರೆಯೋ ಇಲ್ಲವೇ ಫೀಸಿಬಲಿಟಿ ಇದೆಯೋ ಇಲ್ಲವೇ ಸರಿಯಾದಂತಹ ಡಿಸ್ಟೆನ್ಸ್ ಅನ್ನು ಮೈನ್‌ಟೇನ್ ಮಾಡಿದ್ದಾರೆಯೋ ಇಲ್ಲವೇ, ಎಸ್. ಟಿ. ಎಸ್. ಸಿ. ಯವರ ಲ್ಯಾಂಡ್‌ನಲ್ಲಿಯೋ ಹಾಕಿದ್ದಾರೆಯೋ ಎಂಬುದನ್ನು ಎಸ್.ಟಿ. ಎಸ್.ಸಿ. ಕಾರ್ಪೊರೇಷನ್‌ರವರು ತಿಳಿದುಕೊಳ್ಳುತ್ತಿಲ್ಲ. ಅವರು ರಾತ್ರಿ ಹೊತ್ತಿನಲ್ಲಿ ಬೋರ್ ಅನ್ನು ಹಾಕುತ್ತಾರೆ. ಅದು ಎಷ್ಟು ಆಳ ಹೋಯಿತು ಅದಕ್ಕೆ ಯಾವ ಮಿಷನರಿಯನ್ನು ಹಾಕಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಫೀಲ್ಡ್ ಆಫೀಸರ್‌ರವರು ಕೊಟ್ಟ ಮಾಹಿತಿಯಿಂದ ಸರಿಯಾಗಿ ಗೊತ್ತಾಗುತ್ತಿಲ್ಲ. ಅವರೇ ಸರ್ಟಿಫೈ ಮಾಡುತ್ತಾರೆ ನಮ್ಮ ಜಿಲ್ಲೆಯಲ್ಲಿ ನನ್ನ ಕ್ಷೇತ್ರದಲ್ಲಿ ಇದರ ಬಗ್ಗೆ ಸಾಕಷ್ಟು ದೂರುಗಳು ಕೂಡ ಬಂದಿವೆ. ಎಸ್.ಸಿ ಎಸ್.ಟಿ ಕಾರ್ಪೊರೇಷನ್‌ನಲ್ಲಿ ಇಂತಹ ಕೆಲಸಗಳು ನಡೆಯುತ್ತಿವೆ. ಏಜೆನ್ಸಿಗಳಿಗೆ ಇವರು ಏನು ಬೋರ್ ಹಾಕುವ ಕೆಲಸವನ್ನು ವಹಿಸಿದ್ದಾರೆ, ಅವರಿಂದ ಪೂರ್ತಿಯಾಗಿ ಮೋಸ ನಡೆಯುತ್ತಿದೆ ಸರ್ವೀಸ್ ಸರಿ ಇಲ್ಲ ಮಿಷನರಿ ಹಳೆಯದನ್ನು ಹಾಕುತ್ತಾರೆ. ಬೇರೆ ಬೇರೆ ಹೆಸರಿನಲ್ಲಿ ದುರುಪಯೋಗ ನಡೆಯುವುದು ಬೇರೆ ಇದನ್ನೆಲ್ಲಾ ತಪ್ಪಿಸಬೇಕು ಆದರೆ ಎಸ್‌ಟಿ ಎಸ್‌ಸಿ ಗೋಸ್ಕರ ಹಾಕಿರತಕ್ಕಂತಹ ಬೋರ್‌ವೆಲ್ ಸ್ಕೀಮ್ ಏನಿದೆ ಇದಕ್ಕೆ ಇನ್ನೂ ಹೆಚ್ಚಿನ ಟಾರ್ಗೆಟ್ ಅನ್ನು ಫಿಕ್ಸ್ ಮಾಡಬೇಕಾಗುತ್ತದೆ. ಇದನ್ನು ನಿಜವಾಗಿ ಸ್ವಾಗತ ಮಾಡಬೇಕಾದುದು ನಮ್ಮ ಕರ್ತವ್ಯ ಏಕೆಂದರೆ ಅವರ ಜಮೀನಿಗೆ ನೀರನ್ನು ಬಿಟ್ಟರೆ ನಮ್ಮ ಸಂಸಾರ ಉದ್ಧಾರವಾಗುತ್ತದೆಂದು ಅವರು ಹೇಳುತ್ತಾರೆ ಆದರೆ ಬೋರ್ ಹೊಡೆಸುವುದು ಒಂದುವರ್ಷ ಸರ್ವಿಸ್ ಕೊಡುವುದು ಮತ್ತೊಂದು ವರ್ಷ ಸರ್ವೆ ಮಾಡುವುದು ಅದರ ಮುಂದಿನ ವರ್ಷ, ಒಟ್ಟಿನಲ್ಲಿ ಅವರ ಜಮೀನಿಗೆ ನೀರು ಸಿಗುವಾಗ ೪-೫ ವರ್ಷವಾಗುತ್ತದೆ. ಅಷ್ಟು ಹೊತ್ತಿಗೆ ಅವನ ಗತಿ ಏನಾಗುತ್ತದೆಂಬುದನ್ನು ವಿಚಾರ ಮಾಡಬೇಕು. ನಂತರ ಅವುಗಳು ಕೆಟ್ಟು ಹೋದರೆ ರಿಪೇರಿ ಮಾಡುವುದಕ್ಕೆ ಸ್ಥಳೀಯವಾಗಿ ಏನಾದರೂ ಟೆಕ್ನೀಷಿಯನ್ ಅನ್ನೇನಾದರೂ ಇಟ್ಟಿದ್ದೀರಾ ? ಇಲ್ಲ ಎಲೆಕ್ಟ್ರಿಷಿಯನ್ ಅನ್ನೇನಾದರೂ ಇಟ್ಟಿದ್ದೀರಾ ? ಮಿಷಿನ್ ಕೆಟ್ಟರೆ ಹೆಡ್ ಆಫೀಸಿಗೆ ಬಂದು ಅಂದರೆ ಚಿತ್ರದುರ್ಗಕ್ಕೆ ಬಂದು ಅವರು ಕಂಪ್ಲೆಂಟ್ ಮಾಡಬೇಕು. ಆಗ ಅವರು ಬೆಂಗಳೂರಿಗೆ ಹೋಗಿ ಮಿಷಿನರಿಯನ್ನು ತರಬೇಕು ಅದು ಮಂಜೂರಾಗಿ ಬರಬೇಕು ಎಂದು ಹೇಳುತ್ತಾರೆ. ಹೀಗಾಗಿ ನಮ್ಮ ಜಿಲ್ಲೆಯಲ್ಲಿ ಒಟ್ಟು ೬೨ ಬೋರ್‌ವೆಲ್‌ಗಳು ಕೆಟ್ಟಿವೆ ರಿಪೇರಿಯಾಗಿಲ್ಲ, ಒಂದು ಸಣ್ಣ ಮಿಷಿನ್‌ಗೋಸ್ಕರ ಬೆಂಗಳೂರಿಗೆ ಬರಬೇಕಾದಂತಹ ಪರಿಸ್ಥಿತಿ ಇದೆ. ಈ ಕಾರ್ಪೊರೇಷನ್ ಸ್ಥಿತಿ ಈ ರೀತಿ ಇದೆ ಇನ್ನು ಎಸ್‌ಸಿ ಎಸ್‌ಟಿಯವರಿಗೆ ಸ್ಕಾಲರ್‌ಷಿಪ್ ನೀಡುವುದು ಹಾಸ್ಟೆಲ್ ಅನ್ನು ಸ್ಥಾಪನೆ ಮಾಡುವುದು ಏನು ಇದೆ, ಅದನ್ನು ಶಾಲಾ ಕಾಲೇಜುಗಳು ಪ್ರಾರಂಭವಾದಾಗ ಮಾಡಬೇಕಾಗುತ್ತದೆ. ಆದರೆ ಶಾಲಾ ಕಾಲೇಜುಗಳು ಪ್ರಾರಂಭವಾಗಿ ಅಡ್ಮಿಷನ್ ಆಗಿ ಸ್ವಾತಂತ್ರ್ಯ ದಿನಾಚರಣೆ ಮುಗಿದರೂ ಕೂಡ ಇನ್ನೂ ಹಾಸ್ಟೆಲ್‌ಗಳು ಪ್ರಾರಂಭವಾಗಿರುವುದಿಲ್ಲ ಇದಕ್ಕೆ ಕಾರಣ ಏನು ? ಚಿತ್ರದುರ್ಗ, ದಾವಣಗೆರೆಯಲ್ಲಿನ ಹಾಸ್ಟೆಲ್‌ಗಳಲ್ಲಿ ಮುಂದೆ ಹಾಕದಿದ್ದರೆ ಅವರು ಹೇಗೆ ಬರುತ್ತಾರೆ ? ಎಲ್ಲಾ ಹಾಸ್ಟೆಲ್‌ಗಳಲ್ಲೂ ಕೂಡ ಊಟದ ವ್ಯವಸ್ಥೆ ಸರಿ ಇರಬೇಕು. ಇಲ್ಲದಿದ್ದರೆ ಅವರು ಕೂಲಿ ಕೆಲಸ ಮಾಡಿಕೊಂಡಿರುತ್ತಾರೆ. ಯಾವಾಗ ಶಾಲಾ ಕಾಲೇಜುಗಳು ಪ್ರಾರಂಭವಾಗುತ್ತವೆ ಆಗಲೇ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಬೇಕು. ಅಡ್ಮಿಷನ್ ಆದ ಮೇಲೆ ಹಾಸ್ಟೆಲ್‌ಗೆಂದು ಆಗ ಅರ್ಜಿಯನ್ನು ಕಾಲ್ ಮಾಡಿ ಕಮಿಟಿ ಸಭೆ ಕರೆದು ಎಲ್ಲಾ ಆಗುವವರೆಗೆ

ಒಂದೂವರೆ ತಿಂಗಳಾಗುತ್ತದೆ ಅಲ್ಲಿಯವರೆಗೆ ಅವರು ಶಾಲೆಗೆ ಬರುವುದು ಬೇಡವೇ ? ಈ ರೀತಿಯ ಪರಿಪಾಠವನ್ನು ಏಕೆ ಇಟ್ಟುಕೊಂಡಿದ್ದೀರಿ; ಎಸ್‌ಸಿ ಎಸ್‌ಟಿ ಹಾಸ್ಟೆಲ್‌ಗಳನ್ನು ಕಾಲೇಜಿನ ಪ್ರಿನ್ಸಿಪಾಲರು ನಡೆಸುತ್ತಿದ್ದಾರೆ ಅದನ್ನು ಸರಕಾರವೇ ಏಕೆ ನಡೆಸಬಾರದು ನಿಮ್ಮ ಇಲಾಖೆಯಲ್ಲಿ ಏನು ಕೊರತೆ ಇದೆ ಎಂಬುದನ್ನು ವಿಚಾರ ಮಾಡಬೇಕು. ಕೆಲವು ಕಡೆಗಳಲ್ಲಿ ಕೆಲವು ಹಾಸ್ಟೆಲ್‌ಗಳನ್ನು ನಡೆಸಿದ್ದೀರಿ ಅಲ್ಲಿ ಉತ್ತಮವಾದ ಊಟವನ್ನು ಕೊಟ್ಟಿದ್ದೀರಿ. ಆದುದರಿಂದ ದಯಮಾಡಿ ಎಲ್ಲಾ ಎಸ್‌ಸಿ ಎಸ್‌ಟಿ ಹಾಸ್ಟೆಲ್‌ಗಳನ್ನು ಸರಕಾರವೇ ವಹಿಸಿಕೊಂಡು ಇವರಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಇವತ್ತು ಕಾಲೇಜು ಹಾಸ್ಟೆಲ್‌ಗಳ ಬಗ್ಗೆ ಏನು ಪರಿಪಾಠವನ್ನು ತಾವು ಇಟ್ಟುಕೊಂಡಿದ್ದೀರಿ ಇದು ಇಡೀ ರಾಜ್ಯದಲ್ಲೆಲ್ಲಾ ಇದೆ. ಶಾಲಾ ಕಾಲೇಜುಗಳನ್ನು ನೀವು ಯಾವಾಗ ಪ್ರಾರಂಭ ಮಾಡುತ್ತೀರಿ ಅದೇ ವೇಳೆಯಲ್ಲೇ ಈ ಹಾಸ್ಟೆಲ್‌ಗಳನ್ನೂ ಕೂಡ ಪ್ರಾರಂಭ ಮಾಡಬೇಕು. ಒಂದು ವೇಳೆ ತಾವು ಆದೇಶವನ್ನು ಕೊಟ್ಟಿದ್ದರೂ ಇಲಾಖೆಯ ಅಧಿಕಾರಿಗಳು ಇದನ್ನು ಪಾಲನೆ ಮಾಡುತ್ತಿಲ್ಲ. ಇದರ ಬಗ್ಗೆಯೂ ತಾವು ಕ್ರಮ ತೆಗೆದು ಕೊಳ್ಳಬೇಕು.

ಇನ್ನು ಹಾಸ್ಟೆಲ್ ಬಿಲ್ಡಿಂಗ್ಸ್‌ಗೆ ಸಂಬಂಧಿಸಿದಂತೆ ಹೇಳುವುದಾದರೆ ನನಗೆ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕಾದರೆ ಮನಸ್ಸಿಗೆ ತುಂಬಾ ದುಃಖವಾಗುತ್ತದೆ. ನಾನು ತಮ್ಮ ಬಜೆಟ್ ಪ್ರಾವಿಷನ್‌ನ್ನು ನೋಡಿದ್ದೇನೆ. ಅದರಲ್ಲಿ ಬಹಳ ಕಡಿಮೆ ಹಣವನ್ನು ಇಟ್ಟಿದ್ದೀರಿ, ಸ್ವಾಮಿ, ತಾವು, ಎಷ್ಟು ಹಾಸ್ಟೆಲ್‌ಗಳನ್ನು ಮಂಜೂರು ಮಾಡಿದ್ದೀರಿ, ಅದರ ಪೈಕಿ ಎಷ್ಟು ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡಗಳಿವೆ ? ಎಷ್ಟು ಹಾಸ್ಟೆಲ್‌ಗಳು ಪ್ರೈವೇಟ್ ಕಟ್ಟಡಗಳಲ್ಲಿ ನಡೆಯುತ್ತವೆ ಎಂಬ ಬಗ್ಗೆ ತಾವು ಅಂಕಿ ಅಂಶಗಳನ್ನು ನೋಡಿದ್ದೀರಾ ? ಕರ್ನಾಟಕ ರಾಜ್ಯದಲ್ಲಿ ಅತಿ ಬೇಡಿಕೆ ಇರತಕ್ಕ ಪ್ರದೇಶಗಳಲ್ಲಿ ಈ ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ಕಾಲರ್‌ಷಿಪ್‌ನ್ನು ಕೊಡಬೇಕಾದರೆ ಚೆಕ್ ಮೂಲಕ ಕೊಡುತ್ತೇವೆಂದು ಹೇಳುತ್ತಿದ್ದಾರೆ, ಕೆಲವು ಕಡೆಗಳಲ್ಲಿ ಮ್ಯಾನೇಜ್‌ಮೆಂಟ್‌ನವರು ಕ್ಯಾಷ್ ರೂಪದಲ್ಲೇ ಕೊಡುತ್ತಿದ್ದಾರೆ ಇದರ ಬಗ್ಗೆ ಸರ್ಕಾರ ಗಮನ ಹರಿಸುವುದೇ ಅಲ್ಲದೆ ಸ್ಕಾಲರ್‌ಷಿಪ್ ಹಣವನ್ನೂ ಕೂಡ ಜಾಸ್ತಿ ಮಾಡಬೇಕು. ಈ ಹಣವನ್ನೂ ಕೂಡ ತಾವು ಕೊಡುವಾಗ ವರ್ಷದ ಕೊನೆಯಲ್ಲಿ ಕೊಡುತ್ತಿದ್ದೀರಿ. ಇದು ತುಂಬಾ ತಡವಾಗುತ್ತಿದೆ: ಇನ್ನು ಮುಂದೆ ತಡವಾಗದ ರೀತಿಯಲ್ಲಿ ಸ್ಕಾಲರ್‌ಷಿಪ್ ಹಣವನ್ನು ಮೊದಲೇ ನೀಡಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಆ ಮೇಲೆ ಎಸ್. ಸಿ. ಎಸ್. ಟಿ. ಜನಾಂಗದವರ ಪೈಕಿ ಯಾರು ಲಾ ಗ್ರಾಜುಯೇಟ್ಸ್ ಇರುತ್ತಾರೆ ಅವರಿಗೋಸ್ಕರ ಒಂದು ಸ್ಟೈಫೆಂಡರಿ ಸ್ಕೀಂನ್ನು ಜಾರಿಗೆ ತಂದಿದ್ದೀರಿ, ಇದು ಮಾನ್ಯ ದೇವರಾಜ ಅರಸ್ ಮತ್ತು ಹಾವನೂರು ಅಧಿಕಾರದಲ್ಲಿ ಇದ್ದಾಗ ಆದುದು ಆದರೆ ಕಳೆದ ೨-೩ ವರ್ಷಗಳಿಂದ ಸೆಲೆಕ್ಟ್ ಆಗಿರತಕ್ಕ ಯಾವ ಎಸ್. ಸಿ. ಎಸ್. ಟಿ. ಲಾ ಗ್ರ್ಯಾಜುಯೇಟ್ಸ್‌ಗೂ ಕೂಡ ಇದುವರೆಗೂ ಈ ಸ್ಟೈಪೆಂಡ್ ಸಿಕ್ಕಿಲ್ಲ. ಅವರು ಕಾನೂನು ಇಲಾಖೆಗೂ, ಮಂತ್ರಿಗಳ ಕಛೇರಿಗೂ ಸುತ್ತೀ ಸುತ್ತೀ ಸಾಕಾಗಿದ್ದಾರೆ. ಏತಕ್ಕೆ ಇಷ್ಟು ಡಿಲೇ ಮಾಡುತ್ತಿದ್ದೀರಿ. ಯಾರ್ಯಾರಿಗೆ ಈ ಸ್ಟೈಫೆಂಡ್ ಸಿಕ್ಕಬೇಕೋ ಕೊಡಬೇಕೋ ನೋಡಿ ತಕ್ಷಣ ಈ ಹಣವನ್ನು ರಿಲೀಸ್ ಮಾಡಿ. ಒಂದು ವೇಳೆ ಎಕಾನಮಿ ಮೆಷರ್ಸ್ ಇದಕ್ಕೂ ಇದ್ದರೆ ಅದನ್ನಾದರೂ ಹೇಳಿ. ನನ್ನ ಅಭಿಪ್ರಾಯದಲ್ಲಿ ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಈ ಎಕಾನಮಿ ಮೆಷರ್ಸ್ ಅಪ್ಲೈ ಆಗುವುದಿಲ್ಲ. ಒಂದು ವೇಳೆ ಎಕಾನಮಿ ಮೆಷರ್ಸ್ ಸೋಷಿಯಲ್ ವೆಲ್‌ಫೇರ್ ಇಲಾಖೆಗೂ ಅನ್ವಯಿಸುತ್ತದೆಂದರೆ ಅದನ್ನು ಈ ಸಭೆಗೆ ತಿಳಿಸಬೇಕು.........

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದ ಶಿವಮೂರ್ತಿಯವರು ಈ ಸಮಾಜ ಕಲ್ಯಾಣ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಬಹಳ ಒಳ್ಳೆಯ ಬೆಳಕನ್ನು ಚೆಲ್ಲುತ್ತಿದ್ದಾರೆ. ಆದರೆ ಅವರು ಹೇಳುತ್ತಿರುವುದನ್ನು ಕೇಳುವವರೇ ಇಲ್ಲ. ಇಲ್ಲಿ ೩ ಜನ ಮಂತ್ರಿಗಳಿದ್ದಾರೆ, ಇನ್ನೊಂದು ಕಡೆ ೫ ಜನ ಸದಸ್ಯರಿದ್ದಾರೆ. ಈ ಇಡೀ ಸಭೆಯಲ್ಲಿ ೧೭ ಜನ ಸದಸ್ಯರಿದ್ದೇವೆ. ಕೋರಂ ಇಲ್ಲ. ಇಂಥ ಸಂದರ್ಭದಲ್ಲಿ ಈ ಮಾನ್ಯ ಸಭೆಯನ್ನು ನಡೆಸುವುದು ಔಚಿತ್ಯ ಪೂರ್ಣವೇ ಎಂಬುದನ್ನು ಹೇಳಬೇಕು. ತಾವು ಇದರ ಬಗ್ಗೆ ಗಮನಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಾಟೀಲ್ ನಾಗರಾಜ್.—ಸಮಾಜ ಕಲ್ಯಾಣ ಇಲಾಖೆಯ ಆಗು ಹೋಗುಗಳ ಬಗ್ಗೆ ಚರ್ಚೆ ಆಗುವಾಗ ಇಲ್ಲಿ ಯಾರೂ ಇಲ್ಲದಿದ್ದರೆ ಈ ವರ್ಗದ ಜನರ ಬಗ್ಗೆ ಅವರಿಗೆ ಚಿಂತನೆಯೇ ಇಲ್ಲ ಎಂದು ಹೇಳಬಹುದು.

ಶ್ರೀ ಎಸ್. ಹೆಚ್. ಕೌಜಲಗಿ ಆ ಕಡೆಯವರಿಗೆ ಹರಿಜನರ ಬಗ್ಗೆ ಚಿಂತನೆಯೇ ಇಲ್ಲ,

ಶ್ರೀ ಕೆ. ಎಸ್. ಈಶ್ವರಪ್ಪ.ಏನಾದರೂ ಮಾತನಾಡಬೇಕಾದರೆ ಹರಿಜನರ ಹೆಸರು ಎತ್ತುತ್ತಾರೆ, ಮಂತ್ರಿ ಪದವಿ ಬೇಕೆಂದರೆ ಹರಿಜನರ ಹೆಸರು ಎತ್ತುತ್ತಾರೆ, ಮತ ಬೇಕಾದರೆ ಹರಿಜನರ ಹೆಸರು ಎತ್ತುತ್ತಾರೆ, ಆದರೆ ಇಲ್ಲಿ ಯಾವ ಮಂತ್ರಿಯೂ ಇಲ್ಲವಲ್ಲಾ............

(ಗೊಂದಲ)

ಉಪಾಧ್ಯಕ್ಷಿಣಿಯವರು.—ಎರಡೂ ಕಡೆಯಲ್ಲೂ ಅಷ್ಟೇ ಜನರಿದ್ದೀರಿ. ಮಾನ್ಯ ಸದಸ್ಯರು ಮಾತನಾಡಲಿ, ತಾವು ಕೂಡಿ. ಈ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವವರು ಇನ್ನೂ ಬಹಳ ಜನರಿದ್ದಾರೆ, ಇದನ್ನು ತಿಳಿದೆ ಇವತ್ತು ಲಂಚ್ ಅವರ್ ಕ್ಯಾನ್ಸಲ್ ಮಾಡೋಣ ಮತ್ತು ಆಗ ಕೋರಂನ್ನೂ ಕೂಡ ಗಣನೆಗೆ ತೆಗೆದುಕೊಳ್ಳುವುದು ಬೇಡ ಎಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿದೆ.........

ಶ್ರೀ ಕೆ. ಹೆಚ್. ಹನುಮೇಗೌಡ.—ವಿರೋಧ ಪಕ್ಷದವರಲ್ಲಿ ಮುಂದಿನ ಸಾಲಿನಲ್ಲಿ ಯಾರಾದರೂ ಇದ್ದಾರೆಯೇ ನೋಡಿ ಯಾರೂ ಇಲ್ಲ.........

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ನಮ್ಮ ವಿರೋಧ ಪಕ್ಷದ ಕಡೆ ೩೦ ಜನರಿಗೆ ನಾವು ಇಪ್ಪೊಂದು ಜನರು ಕುಳಿತಿರುತ್ತೇವೆ. ಆಡಳಿತ ಪಕ್ಷದಲ್ಲಿ ೧೫೦ ಜನರು ಇದ್ದರು ಎಷ್ಟು ಜನರು ಇದ್ದಾರೆಂಬುದನ್ನು ತಾವೇ ದಯವಿಟ್ಟು ಎಣಿಸಬೇಕು. ಆವಾಗ ತಮಗೆ ಗೊತ್ತಾಗುತ್ತದೆ.

ಶ್ರೀ ಬಿ. ಶಿವಣ್ಣ.—ಜನರಲ್ ಆಗಿ ಯಾವ ಡಿಪಾರ್ಟ್‌ಮೆಂಟ್ ಮೇಲೆ ಚರ್ಚೆ ನಡೆಯುತ್ತಿರುತ್ತದೆ ಆ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಂಥ ಮಂತ್ರಿಗಳು ಇರಬೇಕೆಂದಿದೆ. ಸಂಬಂಧಪಟ್ಟ ಮಂತ್ರಿಯಾಗಿ ನಾನು ಇದ್ದೇನೆ. ದಯವಿಟ್ಟು ಮಾನ್ಯ ಸದಸ್ಯರು. ಕೋ ಆಪರೇಟ್ ಮಾಡಬೇಕು.

ಉಪಾಧ್ಯಕ್ಷರು.—ಈಗ ಕೋರಮ್ ಇದೆ. ದಯವಿಟ್ಟು ಮಾನ್ಯ ಸದಸ್ಯರಾದ ಶಿವಮೂರ್ತಿಯವರು ತಮ್ಮ ಭಾಷಣವನ್ನು ಮುಂದುವರೆಸಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷಣಿಯವರೇ, ಸಾಮಾನ್ಯವಾಗಿ ಇಂಥ ಪರಿಸ್ಥಿತಿ ನಡೆಯುತ್ತಲೇ ಇರುತ್ತದೆ, ನಾನು ಅನೇಕ ಬಾರಿ ತಮ್ಮ ಗಮನಕ್ಕೆ ತಂದಿದ್ದೇನೆ. ಸಮಾಜ ಕಲ್ಯಾಣ ಇಲಾಖೆಯ ಮೇಲೆ ಚರ್ಚೆಯಾಗುತ್ತಿರಬೇಕಾದರೆ ಅದರಲ್ಲೂ ಬಹಳ ಪ್ರಮುಖವಾದಂಥ ಇಲಾಖೆಯ ಮೇಲೆ.........

ಉಪಾಧ್ಯಕ್ಷಣಿಯವರು.—ಎಲ್ಲ ಇಲಾಖೆಗಳು ಪ್ರಮುಖವಾದ ಇಲಾಖೆಗಳೇ ಆಗಿರುತ್ತದೆ. ಯಾವ ಇಲಾಖೆಗೆ ಪ್ರಾಮುಖ್ಯತೆ ಇಲ್ಲ: ಎಲ್ಲ ಇಲಾಖೆಗಳಿಗೂ ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಉಪಾಧ್ಯಕ್ಷಣಿಯವರೇ ಈ ಇಲಾಖೆ ತುಳಿತಕ್ಕೆ ಒಳಗಾಗಿರುವ ಇಲಾಖೆ. ಇದನ್ನು ಮೇಲಕ್ಕೆ ಎತ್ತಬೇಕೆಂದು ಹೇಳುವಾಗ ಎಲ್ಲ ಮಾನ್ಯ ಸದಸ್ಯರು ಮಾನ್ಯ ಸಚಿವರುಗಳು ಇರಬೇಕೆಂಬುದು ನಮ್ಮ ಕಳಕಳಿಯಾಗಿರುತ್ತದೆ. ನಾವು ಈ ಇಲಾಖೆಯ ಬಗ್ಗೆ ಬಹಳಷ್ಟು ಬೇಕನ್ನು ಚೆಲ್ಲತಕ್ಕಂಥ ವಿಚಾರಗಳನ್ನು ಹೇಳಬೇಕಾಗಿರುತ್ತದೆ. ಹೀಗಿದ್ದರೂ ಸಭೆಯಲ್ಲಿ ಕೋರಮ್ ಇಲ್ಲದೆ ಸಭೆಯನ್ನು ನಡೆಸಬೇಕೆನ್ನುವ ಔಚಿತ್ಯವಾದರೂ ಏನೆಂಬುದನ್ನು ತಾವು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್.—ಕೋರಮ್ ಸಭೆಯಲ್ಲಿ ಇಲ್ಲದಿದ್ದರೂ ನಡೆಸಿ ಎಂದು ಹೇಳುತ್ತೀರಾ ?

ಉಪಾಧ್ಯಕ್ಷರು.—ಯಾವ ಕಡೆ ಎಷ್ಟು ಜನರು ಇದ್ದಾರೆ ಎನ್ನುವ ಪ್ರಶ್ನೆಯಲ್ಲ ಒಟ್ಟು ಎಷ್ಟು ಜನರಿರಬೇಕೋ ಅಷ್ಟು ಜನರು ಇದ್ದಾರೆ. ಕೋರಮ್ ಇದೆ. ಸಭೆ ನಡೆಸಬಹುದು.

ಶ್ರೀ ವಾಟಾಳ್ ನಾಗರಾಜ್.—ವಿರೋಧ ಪಕ್ಷದ ಕಡೆಯೇ ಜಾಸ್ತಿ ಜನ ಇದ್ದೇವೆ. ಆದರೆ ಆಡಳಿತ ಪಕ್ಷದಲ್ಲಿ ೧೮೦ ಜನರಿಗೆ ೧೭ ಜನರು ಮಾತ್ರ ಇದ್ದಾರೆ.

ಉಪಾಧ್ಯಕ್ಷರು.—ಎಲ್ಲರೂ ಸೇರಿ ಒಟ್ಟು ೨೪ ಜನ ಸದಸ್ಯರಿದ್ದಾರೆ, ಆದ್ದರಿಂದ ಸಭೆ ನಡೆಸಬಹುದು.

ಶ್ರೀ ವಾಟಾಳ್ ನಾಗರಾಜ್.—ಎಲ್ಲರೂ ಎಲ್ಲಿ ಹೋಗಿದ್ದಾರೆ, ಆ ಕಡೆಯಲ್ಲಿ ಮುಖ್ಯ ಸಚೇತಕರು ತಮ್ಮ ಪಕ್ಷದ ಸದಸ್ಯರನ್ನು ಕರೆಸಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್,—ನಮ್ಮ ಕಡೆಯವರಿಗೆ ಹೇಳುವುದು ತಮ್ಮ ಕರ್ತವ್ಯವಾದರೆ ಹಾಗೆಯೇ ನಿಮ್ಮ ಕಡೆಯವರಿಗೂ ನೀವು ಹೇಳುವುದು ನಿಮ್ಮ ಕರ್ತವ್ಯವಾಗಿರುತ್ತದೆ. ನಿಮ್ಮ ಕಡೆಯಲ್ಲಿ ಮಾತನಾಡುವವರೇ ಇಲ್ಲ ಅದಕ್ಕೇ ನಮ್ಮ ಕಡೆಯವರು ಮಾತನಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ನಾನು ಅದನ್ನು ಒಪ್ಪುತ್ತೇನೆ. ನನಗೆ ಇವತ್ತೆಲ್ಲ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ, ನಾನು ಒಂದು ದಿವಸವೆಲ್ಲ ಮಾತನಾಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು.—ಶಿವಮೂರ್ತಿಯವರೇ ತಾವು ಇಂಟರ್‌ವೀನ್ ಆಗಬೇಡಿ ಮುಂದುವರಿಸಿ.

ಶ್ರೀ ಎಂ. ಪಿ. ವೆಂಕಟೇಶ್.—ಕಾಂಗ್ರೆಸ್‌ನವರ ಪೈಕಿ ೧೦ ಪರ್ಸೆಂಟ್ ಸದಸ್ಯರೂ ಇಲ್ಲ.

ಶ್ರೀ ಎಸ್, ಹೆಚ್. ಕೌಜಲಗಿ.—ಮಂತ್ರಿಗಳೂ ಸಹಿತ ಇಲ್ಲ.

ಉಪಾಧ್ಯಕ್ಷಣಿಯವರು.—ಮಾನ್ಯ ಶಿವಮೂರ್ತಿಯವರೇ, ತಾವು ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಕೆ. ಶಿವಮೂರ್ತಿ.— ಸಮಾಜ ಕಲ್ಯಾಣ ಇಲಾಖೆಯಲ್ಲಿ ಯಾವ ರೀತಿ ಕಾರ್ಯಕ್ರಮಗಳು ಇವೆ ? ಇದಕ್ಕೆ ಸಂಬಂಧಪಟ್ಟ ಪುಸ್ತಕ ನನ್ನ ಕಡೆ ಇದೆ. ಸಣ್ಣ ಕೈಗಾರಿಕೆಗಳು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಬಹಳ ದೂರ. ಅವರಿಗೆ ಅದರಲ್ಲಿ ತರಬೇತಿ ಇಲ್ಲ. ಟೆಕ್ನಿಕಲ್ ಸ್ಕಿಲ್ ಇಲ್ಲ. ಇಂಡಸ್ಟ್ರೀಸ್ ಸೆಟ್‌ಅಪ್ ಮಾಡುವ ಶಕ್ತಿ ಅವರಿಗೆ ಇಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಯಾವ ರೀತಿ ಟ್ರೈನಿಂಗ್ ಕೊಡುತ್ತಿದ್ದೀರಿ ಎಂದರೆ they are not skillful, they are not trained... Under Industrial Sector, the Schedule Caste Youths of the age from 15-30 years are being trained various trades like blacksmithy, Carpentry, etc. with a stipend of Rs. 250 per month, per trainee. They are also provided with tool kits worth Rs. 1,000 after training ೨೫೦ ರೂಪಾಯಿ ಸ್ಟೈಪೆಂಡ್ ಕೊಡುತ್ತಿದ್ದೀರಿ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಇವರಿಗೆ ಅನೇಕ ಯೋಜನೆಗಳಿವೆ ? ಸರಿಯಾದ ಟ್ರೈನಿಂಗ್ ಇಲ್ಲದೆ ಇವೆಲ್ಲ ಏಕೆ ? ಸರಿಯಾಗಿ ಟ್ರೈನಿಂಗ್ ಕೊಡಬೇಕು. ಸ್ಟೈಪೆಂಡ್ ಕೊಡತಕ್ಕದ್ದು ನಿಜ, ಒಪ್ಪುತ್ತೇನೆ. ಅವರು ಸ್ಟೈಫೆಂಡ್‌ಗೆ ಮಾತ್ರ ಬರುತ್ತಾರೆಂದೇ ಅವರಿಗೆ ಊಟ ಏನೂ ಹಾಕುವುದಿಲ್ಲವೆ ? ಊಟ ಹಾಕಿ ಸ್ಟೈಫೆಂಡ್ ಕೊಟ್ಟು ಇಡೀ ಜಿಲ್ಲೆಯಲ್ಲಿ ಒಂದೇ ಅಲ್ಲ ಎಲ್ಲಾ ವಿಧವಾದ ತಾಂತ್ರಿಕ ಟ್ರೈನಿಂಗನ್ನು ಅವರಿಗೆ ಕೊಡಿ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ತರಬೇತಿಯ ಕೊರತೆ ಇದೆ. ಯಾವುದೇ ಕೈಗಾರಿಕೆಯಾಗಲಿ ಅಥವಾ ಒಂದು ಟೆಕ್ನಿಕಲ್ ಫೀಲ್ಡ್‌ನಲ್ಲಿ ವಾಚ್, ರೇಡಿಯೋ, ಟಿ. ವಿ. ಆಟೋರಿಕ್ಷಾ ರಿಪೇರಿ ಮಾಡುವುದಕ್ಕೆ ಟ್ರೈನಿಂಗ್ ಕೊಡಿ. ಅವರನ್ನು ಆಟೋ ಡ್ರೈವರ್ ಮಾಡಿ. ಅವರಿಗೆ ಈಗ ಟ್ರೈನಿಂಗ್ ಕೊಡತಕ್ಕದ್ದು ಹೇಗೆಂದರೆ ಇಂಡಸ್ಟ್ರೀಸ್ ಇಲಾಖೆಗೆ ಈ ಕೋರ್ಸನ್ನು ಅಟಾಚ್ ಮಾಡಿ ೧೫-೨೦ ದಿವಸ ಟ್ರೈನಿಂಗ್ ಕೊಡುವುದು. ಆಮೇಲೆ ಸಾವಿರ ರೂಪಾಯಿಗಳ ಟೂಲ್‌ಕಿಟ್ಸ್ ಅನ್ನು ಕೊಡುತ್ತೀರಿ Is he going to be trained ? What is the ultimate out come of the productiveness ? ನಾವು ಪ್ರೊಡಕ್ಟ್ ಓರಿಯಂಟೆಡ್ ಸ್ಕೀಂ ಅಂಥ ಮಾಡುತ್ತಿದ್ದೇವೋ ಅಥವಾ ಅನ್-ಪ್ರೊಡಕ್ಟ್ ಓರಿಯಂಟೆಡ್ ಸ್ಕೀಂ ಅಂಥ ಮಾಡುತ್ತಿದ್ದೇವೋ ? ಹಣ ಕೊಟ್ಟು. ಟ್ರೈನಿಂಗ್ ಕೊಟ್ಟು ನಾಳೆ ಅವರು ಏನಾದರೂ ಮಾಡಿ ಕೊಳ್ಳಲಿ ಎಂದರೆ ಇದು ಎಂತಹ ಸ್ಕೀಂಗಳು ? ಇಂಥ ಸ್ಕೀಂಗಳನ್ನು ಅಬಾಲಿಷ್ ಮಾಡಿ. ಈ ದುಡ್ಡನ್ನು ಒಂದು ಜಿಲ್ಲೆಯಲ್ಲಿರತಕ್ಕ ಒಂದು ಟ್ರೈನಿಂಗ್ ಸೆಂಟರ್‌ಗೆ ಕೊಡಿ. ಟೆಕ್ನಿಕಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ಅಂಥ ಮಾಡಿ. you introduce various trades and train them...ನೀವು ಈ ರೀತಿ ಮಾಡದೆ ಇದನ್ನು ತೆಗೆದುಕೊಂಡು ಹೋಗಿ ಇಂಡಸ್ಟ್ರೀಸ್ ಇಲಾಖೆಗೆ ಅಟಾಚ್ ಮಾಡುವುದು ಸರಿಯಲ್ಲ. ಯಾವುದೇ ಇಲಾಖೆಗೆ ಅಟಾಚ್ ಮಾಡಿದರೂ ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಎಫಿಷಿಯನ್ಸಿ ಡಿಟ್ಯಾಚ್ ಆಗುತ್ತದೆ. ದಯಮಾಡಿ ಇಂಥದ್ದನ್ನು ನಿಲ್ಲಿಸಬೇಕು. ಇದನ್ನು ನಿಲ್ಲಿಸಿ ಹೆಚ್ಚಿನ ಆದ್ಯತೆಯನ್ನು ಟ್ರೈನಿಂಗ್ ಕೊಡುವುದಕ್ಕೆ ಕೊಡಿ ಮತ್ತು ಇರಿಗೇಷನ್‌ಗೆ ಕೊಡಿ ಈ ಬಾಬಿಗೆ ಕೊಟ್ಟಿರತಕ್ಕ ಹಣ ಕೂಡ ಸಾಲದು. ಅದನ್ನು ಜಾಸ್ತಿ ಮಾಡಿ. ಹಾಸ್ಟೆಲ್ ಕಟ್ಟಡ ಕಟ್ಟಿಕೊಡುವುದಕ್ಕೆ ಆದ್ಯತೆ ಕೊಡಿ.

ಮಹಿಳೆಯರಿಗೆ ಟೈಲರಿಂಗ್ ಟ್ರೈನಿಂಗ್ ಕೊಡುತ್ತೇವೆಂದು ಹೇಳುತ್ತೀರಿ. ಹಳ್ಳಿಯಿಂದ ಬಂದು ಟೈಲರಿಂಗ್ ಮಾಡಿಕೊಂಡು ಮತ್ತೆ ಹಳ್ಳಿಗೆ ಹೇಗಬೇಕು. ನೀವೇನೋ ಮೆಷಿನ್ ಕೊಡುತ್ತೀರಿ. ಅವರು ಅದನ್ನು ಎಲ್ಲಿ ಸೆಟ್‌ಅಪ್ ಮಾಡಿಕೊಳ್ಳುತ್ತಾರೆ ? ನೀವು ಇಷ್ಟು ದಿನ ಟ್ರೈನಿಂಗ್ ಕೊಟ್ಟ ಔಟ್‌ಕಂ ಏನಾಗಿದೆ ? ಅವರ ಬಟ್ಟೆಯನ್ನು ಅವರೇ ಹೊಲೆದುಕೊಳ್ಳುವುದಕ್ಕಾಗುತ್ತಿಲ್ಲ. ಟ್ರೈನಿಂಗ್ ಕೊಟ್ಟ ಮೇಲೆ ಎಷ್ಟರ ಮಟ್ಟಿಗೆ ಅವರು ತಯಾರಾಗಿದ್ದಾರೆಂಬುದನ್ನು ನೋಡಬೇಕು. ೧೮ ಪರ್ಸೆಂಟ್ ಹಣದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಬರೀ ಪಾತ್ರೆ ಬಟ್ಟೆ ಹಂಚುವುದು ಬೇಡ. ಅವರಿಗೆ ಬೇಕಾದ ಹಾಸ್ಟೆಲ್‌ಗಳನ್ನು ತೆರೆಯಲು ಭದ್ರವಾದ ಕಟ್ಟಡಗಳನ್ನು ಕಟ್ಟಿಸಿ ಕೊಡಿ. ಆಸ್ತಿ ಸೃಷ್ಟಿ ಮಾಡಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಕೊಡಿ. ಅವರ ಹೆಸರಿನಲ್ಲಿ ಟೂರ್ ಪ್ರೋಗ್ರಾಂಗೆ ಖರ್ಚು ಮಾಡಿದ್ದೇವೆ, ಟ್ರೈನಿಂಗ್ ಕೊಟ್ಟೆವು ಎಂದು ಲೆಕ್ಕ ತೋರಿಸುವುದನ್ನು ಇನ್ನು ಮುಂದೆ ನಿಲ್ಲಿಸಬೇಕು. ಸಮಾಜ ಕಲ್ಯಾಣ ಇಲಾಖೆಯವರಿಗೆ ಬೇರೆ ಇಲಾಖೆಗಳಲ್ಲಿ ರೋಸ್ಟರ್ ಸಿಸ್ಟಂ ಅನ್ನು ಫಾಲೋ ಮಾಡಿದ್ದಾರೆಯೋ ಇಲ್ಲವೇ ಮತ್ತು ೧೮ ಪರ್ಸೆಂಟ್ ಹಣ ಖರ್ಚು ಮಾಡಿದ್ದಾರೆಯೋ ಹೇಗೆ ಎಂಬುದನ್ನು ನೋಡತಕ್ಕ ಅಧಿಕಾರ ಇದೆಯೋ ಇಲ್ಲವೇ ಅಧಿಕಾರ ಇದ್ದರೆ ಇದುವರೆಗೆ ಏಕೆ ಚಲಾವಣೆ ಮಾಡಿಲ್ಲ ? ಎಷ್ಟೋ ಅಧಿಕಾರಿಗಳಿಗೆ ರೋಸ್ಟರ್ ಅಂದರೆ ಏನು ಎಂದು ಗೊತ್ತಿಲ್ಲ. ನಾನು ಎಸ್.ಸಿ. ಎಸ್.ಟಿ. ಕಮಿಟಿಯಲ್ಲಿದ್ದು ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಕಮಿಟಿಯಲ್ಲಿದ್ದು ಕೆಲಸ ಮಾಡಿದ್ದೇನೆ. ಆ ಒಂದು ಅನುಭವದಿಂದ ಹೇಳಬೇಕೆಂದರೆ, ಎಷ್ಟೋ ಜಿಲ್ಲಾ ಮುಖ್ಯಾಧಿಕಾರಿಗಳಿಗೆ ರೋಸ್ಟರ್ ಅಂದರೆ ಏನು ಎಂಬುದು ಗೊತ್ತಿಲ್ಲ. ಹೇಗೆ ನೇಮಕಗಳನ್ನು ಮಾಡಬೇಕು ಎಂಬುದು ಗೊತ್ತಿಲ್ಲ. ನಾನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ವೆಲ್ಫೇರ್ ಕಮಿಟಿಯಲ್ಲಿ ಕೆಲಸ ಮಾಡಿದ್ದೇನೆ. ಎಷ್ಟೋ ಅಧಿಕಾರಿಗಳಿಗೆ ರೋಸ್ಟರ್ ಸ್ಕೀಂ ಬಗ್ಗೆ ವಿವರಣೆ ಕೊಡುವುದಕ್ಕೆ ಬರಲಿಲ್ಲ. ಡಿಸ್ಟ್ರಿಕ್ಟ್ ಆಫೀಸರ್‌ಗಳಿಗೆ ಬರಲಿಲ್ಲ. ಇನ್ನು ಅವರನ್ನು ಇಂಪ್ಲಿಮೆಂಟ್ ಮಾಡುವುದು ಹೇಗೆ ? ಆದ್ದರಿಂದ ಇದರ ಬಗ್ಗೆ ಅವರಿಗೆ ಸರಿಯಾಗಿ ಮನವರಿಕೆ ಮಾಡಿಕೊಡಬೇಕು. ಡೈಲಿ ವೇಜಸ್‌ನಲ್ಲಿ ಎಷ್ಟೋ ಅಪಾಯಿಂಟ್‌ಮೆಂಟ್‌ಗಳಾಗಿವೆ. ಮಲ್ಲಿಕಾರ್ಜುನ ಖರ್ಗೆಯವರು, ಮೊಟ್ಟಮ್ಮನವರು ಮತ್ತು ನಾವು ಫಾರೆಸ್ಟ್, ಅಗ್ರಿಕಲ್ಚರ್ ಮತ್ತು ಅನಿಮಲ್ ಹಸ್ಬೆಂಡರಿ ಇಲಾಖೆಯಲ್ಲಿ ಡೈಲಿವೇಜಸ್‌ನಲ್ಲಿ ಎಷ್ಟು ಜನರನ್ನು ಅಪಾಯಿಂಟ್ ಮಾಡಿಕೊಂಡಿದ್ದಾರೆ, ಅಂಕಿಸಂಖ್ಯೆ ಸದನದ ಮುಂದಿಡಿ ಎಂದು ಕೇಳಿದರೆ ಇಡಲಿಲ್ಲ. ಇದರಲ್ಲಿ ಬಹಳ ಅನ್ಯಾಯವಾಗಿದೆ, ಅವರವರ ಜಾತಿಯವರನ್ನು ಅಪಾಯಿಂಟ್ ಮಾಡಿಕೊಂಡು ರೆಗ್ಯುಲರೈಸ್ ಮಾಡುತ್ತಿದ್ದಾರೆ. ಈಗಲೂ ಡೈಲಿ ವೇಜಸ್ ಮೇಲೆ ಅಪಾಯಿಂಟ್‌ಮೆಂಟ್ ನಡೆಯುತ್ತಿದೆ, ಇಂಜಿನಿಯರುಗಳನ್ನು, ಡಾಕ್ಟರ್‌ಗಳನ್ನು ಅಪಾಯಿಂಟ್ ಮಾಡಿಕೊಂಡು ರೆಗ್ಯುಲರೈಸ್ ಮಾಡುತ್ತಿದ್ದಾರೆ. ಈಗಲೂ ನಡೆಯುತ್ತಿದೆ. ಅದಕ್ಕೆ ರೂಲ್ಸ್ ರೆಗ್ಯುಲೇಷನ್ ಏನೂ ಇಲ್ಲ. ರೋಸ್ಟರ್ ಸಿಸ್ಟಂ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ೧೮ ಪರ್ಸೆಂಟ್ ಏನು ರಿಸರ್ವೇಷನ್ ಕೊಡಬೇಕು ಅದನ್ನು ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಇದರ ಬಗ್ಗೆ ದಯವಿಟ್ಟು ತಮ್ಮ ಇಲಾಖೆಯವರು ನೋಡಬೇಕು. ಮಾನ್ಯ ಮಂತ್ರಿಗಳು ಈ ರಿಸರ್ವೇಷನ್ ಸಿಸ್ಟಂಗೆ, ರೋಸ್ಟರ್ ಸಿಸ್ಟಂಗೆ ಕಸ್ಟೋಡಿಯನ್. ಈ ದಿಸೆಯಲ್ಲಿ ತಾವು ಏತಕ್ಕೆ ಹೆಜ್ಜೆ ಹಾಕುತ್ತಿಲ್ಲ ? ಹೊರರಾಜ್ಯಗಳಿಂದ ಷೆಡ್ಯೂಲ್ಡ್ ಕ್ಯಾಸ್ಟ್ ಸರ್ಟಿಫಿಕೇಟ್ ತಂದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಕಾರ್ಖಾನೆಗಳಲ್ಲಿ ದೊಡ್ಡ ದೊಡ್ಡ ಹುದ್ದೆಯಲ್ಲಿ ಸೇರಿಕೊಂಡಿದ್ದಾರೆ. ಇದರ ಬಗ್ಗೆ ಸಿ.ಆರ್.ಇ ಸೆಲ್‌ನಲ್ಲಿ ಕೇಸ್ ರಿಜಿಸ್ಟರ್ ಆಗಿದೆ. ಇದರ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು. ತ್ವರಿತವಾದ ಕಾರ್ಯಕ್ರಮ ಹಾಕಿಕೊಳ್ಳಬೇಕು. ಫಾಲ್ಸ್ ಸರ್ಟಿಫಿಕೇಟ್ ತಂದು ಯಾರು ಯಾರು ಈ ಕಂಪನಿಗಳಲ್ಲಿ ಸೇರಿಕೊಂಡಿದ್ದಾರೆ, ಅದನ್ನು ಕಂಡುಹಿಡಿಯಲು ವಾಲಂಟರಿ ಆರ್ಗನೈಸೇಷನ್‌ಗಳಿಗೆ ಅವಕಾಶ ಮಾಡಿಕೊಡಬೇಕು. ಅವರನ್ನು ಇದರಲ್ಲಿ ಇನ್‌ವಾಲ್ವ್ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ತಮ್ಮ ಮೆಷಿನರಿಯಿಂದ ಕಂಡುಹಿಡಿಯುವುದಕ್ಕಾಗುವುದಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ ಕೆಲಸ ಮಾಡುವ ಆರ್ಗನೈಸೇಷನ್‌ಗಳು ಯಾವುದಿದೆ, ಆ ಏಜೆನ್ಸಿಗಳಿಗೆ ಕರೆಸಿ ಮಾತನಾಡಿ ಅವರ ಮೂಲಕ ಇದರ ಮಾಹಿತಿ ಸಂಗ್ರಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಯಾವ ಮ್ಯಾನೇಜ್‌ಮೆಂಟಿನವರು ಷೆಡ್ಯೂಲ್ಡ್ ಕ್ಯಾಸ್ಟ್ ಬಗ್ಗೆ ಅಸಡ್ಡೆ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಮಾನ್ಯ ಸಿಂಧ್ಯಾ ಅವರು ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಅದೇರೀತಿ ಮೈನ್ಸ್ ಅಂಡ್ ಜಿಯಾಲಜಿ ಬಗ್ಗೆ ಬಹಳ ಚರ್ಚೆಯಾಗಿದೆ. ಬಹಳ ರೀತಿಯಲ್ಲಿ ಅದರ ಬಗ್ಗೆ ಹೇಳಿದ್ದಾರೆ. ವೆಂಕಟೇಶ್ ಅವರೇ ತಾವು ಷೆಡ್ಯೂಲ್ಡ್ ಕ್ಯಾಸ್ಟ್‌ನವರು. ತಾವು ಇದನ್ನು ಗಮನಿಸಬೇಕು. ಈ ಕಾಂಟ್ರಾಕ್ಟ್ ವ್ಯವಹಾರ ಪೂರ್ತಿ ಬೇರೆಯವರಿಗೇ ಕೊಡುತ್ತಿದ್ದಾರೆ. ಬಿ.ಡಿ.ಎ.ನಲ್ಲಿ, ಕಾರ್ಪೊರೇಷನ್‌ನಲ್ಲಿ, ಮಂಡಲ ಪಂಚಾಯಿತಿಯಲ್ಲಿ ಬೇರೆಯವರ

ಗುತ್ತಿಗೆ ಆಗಿದೆ. ಎಲ್ಲಿಯೂ ಸಹ ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಪಾರ್ಟಿಸಿಪೇಷನ್ನೇ ಇಲ್ಲ. ಕಲ್ಲು ಒಡೆಯುವವರು, ಡಾಂಬರ್ ಹಾಕುವವರು ಷೆಡ್ಯೂಲ್ಡ್ ಕ್ಯಾಸ್ಟ್‌ನವರು. ಕಂಟ್ರಾಕ್ಟ್ ಮಾಡುವವರು ಮಾತ್ರ ಬೇರೆಯವರು. ಕ್ವಾರಿ ಕಂಟ್ರಾಕ್ಟ್ ಅನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಏನಾದರೂ ಕೊಟ್ಟಿದ್ದಾರಾ ?

ಶ್ರೀ ಎಂ. ಪಿ. ವೆಂಕಟೇಶ್.— ಮಂತ್ರಿಗಳು ಪ್ರೊಪೋಸಲ್ ಕಳುಹಿಸಿದರು. ಲಾ ಡಿಪಾರ್ಟ್‌ಮೆಂಟಿನವರು ಕಿತ್ತು ಬಿಸಾಕಿದರು. ಪರಿಶಿಷ್ಟ ಜಾತಿಯವರಿಗೆ ೨೫ ಪರ್ಸೆಂಟ್ ಅವಕಾಶ ಕೊಡಬೇಕೆಂದು ಮಂತ್ರಿಗಳು ಪ್ರೊಪೋಸಲ್ ಕಳುಹಿಸಿದರೆ ಲಾ ಡಿಪಾರ್ಟ್‌ಮೆಂಟಿನವರು ಅದನ್ನು ಕಿತ್ತು ಬಿಸಾಕಿದರು. ಅವರು ಅಮೆಂಡ್‌ಮೆಂಟ್ ಮಾಡುವಾಗ ನಾನು ಇದಕ್ಕೆ ಸಹಿ ಮಾಡುವುದಿಲ್ಲ ಎಂದು ಬಿಸಾಕಿದ್ದರೆ ರಾಜ್ಯಕ್ಕೆ ಗೊತ್ತಾಗುತ್ತಿತ್ತು, ಆಗ ಈ ಪರಿಸ್ಥಿತಿಯೇ ಬರುತ್ತಿರಲಿಲ್ಲ.

ಶ್ರೀ ಕೆ. ಶಿವಮೂರ್ತಿ.— ಈ ಗುತ್ತಿಗೆ ವ್ಯಾಪಾರವನ್ನು ಎಲ್ಲರಿಗೂ ಕೊಡುತ್ತಾರೆ. ಯಾವುದೇ ಗುತ್ತಿಗೆ ಇರಲಿ, ದೇಶದಲ್ಲಿ ರಾಜ್ಯದಲ್ಲಿ, ಕಾಂಟ್ರಾಕ್ಟ್ ಬಿಸಿನೆಸ್‌ನಲ್ಲಿ ಸೋಷಿಯಲ್ ಜಸ್ಟೀಸ್ ಎಂಬುದಿರಬೇಕು. ಕ್ವಾರಿ ಬಿಸಿನೆಸ್‌ನಲ್ಲಿ ಎಷ್ಟು ಜನ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಕಂಟ್ರಾಕ್ಟ್ ಕೊಟ್ಟಿದ್ದೀರಿ ? ಅವರು ಅಪ್ಲಿಕೇಷನ್ಸ್ ಹಾಕಿಲ್ಲವೇ ? ಅವರು ಮುಂದಕ್ಕೆ ಬರುವುದು ಬೇಡವೇ ? ಅವರಿಗೆ ಅರ್ಹತೆ ಇಲ್ಲವೆ ? ಇದರಲ್ಲಿ ಅವರು ಕೆಲಸ ಮಾಡುವುದು ಬೇಡವೇ ? ಈ ಜನರಲ್ಲಿ ಹಣ ಇನವೆಸ್ಟ್ ಮಾಡುವವರು ಯಾರೂ ಇಲ್ಲವೇ ?

ಶ್ರೀ ಎ. ಟಿ. ರಾಮಸ್ವಾಮಿ.— ಒಳಗಡೆ ಬಿಸಿನೆಸ್‌ಗೆ ದುಡ್ಡು ಕೊಡುವುದಕ್ಕೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ದುಡ್ಡಿಲ್ಲ. ಬೇರೆ ಕ್ಯಾಸ್ಟ್‌ನವರು ಬೇಕಾದಷ್ಟು ಸುರಿಯುತ್ತಾರೆ, ಅದಕ್ಕಾಗಿ ಅವರಿಗೆ ಕೊಡುತ್ತಾರೆ.

೩–೦೦ ಪಿ.ಎಂ.

ಶ್ರೀ ಕೆ. ಶಿವಮೂರ್ತಿ.— ಇವತ್ತು ಇದು ನಾವು ನಗತಕ್ಕ ವಿಷಯವಲ್ಲ ಒಂದಲ್ಲಾ ಒಂದು ದಿವಸ ಆಗಲೇಬೇಕು. ಎಲ್ಲಾ ಜಾತಿಯವರಿಗೂ ಹಂಚಿಕೆಯಾಗಬೇಕು. ಇವತ್ತು ಹೆಂಡ ಸಾರಾಯಿ ವಿಷಯ ಇರಲಿ, ಮರಳು ವ್ಯಾಪಾರ ಮಾಡುವುದನ್ನೂ ಕೂಡಾ ಒಂದೇ ಜಾತಿಯವರಿಗೆ ಕೊಟ್ಟಿದ್ದಾರೆ. ಇವತ್ತು ಎಸ್‌ಸಿ ಅಪ್ಲಿಕೇಷನ್ಸ್ ರಿಜೆಕ್ಟ್ ಮಾಡಿದ್ದಾರೆ. ಇವರೂ ಇನ್‌ವೆಸ್ಟ್ ಮಾಡುವುದಕ್ಕೆ ತಯಾರು ಇದ್ದರೂ ಮತ್ತು ಇವರ ಬಗ್ಗೆ ಫೀಜಿಬಿಲಿಟಿ ರಿಪೋರ್ಟ್ ಇದ್ದರೂ ಇವರ ಅರ್ಜಿ ರಿಜೆಕ್ಟ್ ಮಾಡಿದ್ದಾರೆ. ಈ ರೀತಿಯ ಕಂಟ್ರಾಕ್ಟ್‌ನಲ್ಲೂ ಸಹ ಎಸ್‌ಸಿಗಳಿಗೆ ಆಗಿರುವಷ್ಟು ಅನ್ಯಾಯ ಬೇರೆ ಯಾರಿಗೂ ಆಗಿಲ್ಲ. ಇವತ್ತು ಎಸ್‌ಸಿಗಳಿಗೆ, ಎಸ್‌ಟಿಗಳಿಗೆ ಹಾಗೂ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಎಷ್ಟೆಷ್ಟು ಕೊಡಬೇಕೆಂಬುದನ್ನು ನಿಗದಿ ಮಾಡಬೇಕಾಗುತ್ತದೆ. ಇವತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಬರೀ ವಿದ್ಯೆ ಕೊಡುವುದರಿಂದ, ಹಾಸ್ಟೆಲ್ ಅನುಕೂಲ ಕೊಟ್ಟು ಮುದ್ದೆ ಹಾಕುವುದರಿಂದ ಇವರನ್ನು ಉದ್ಧಾರ ಮಾಡಿದಂತಾಗುವುದಿಲ್ಲ. ಇವತ್ತು ಯಾವ ಯಾವ ಇಲಾಖೆಗಳಲ್ಲಿ ಏನೇನು ಕೆಲಸಕಾರ್ಯಗಳು ಆಗುತ್ತಿವೆ, ಅವು ಎಲ್ಲ ವರ್ಗದ ಜನರಿಗೂ ಸಿಗುವಂತೆ, ಎಲ್ಲರಿಗೂ ಮಾನ್ಯತೆ ಸಿಗುವಂತೆ ನೋಡಿ ಕೊಳ್ಳಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯ ಆಗಿದೆ. ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಹೇಳಬೇಕೆಂದರೆ ಈಗ ನಡೆಯುತ್ತಿರುವ ಶಿಶುವಿಹಾರ ಕೇಂದ್ರಗಳು ಹಾಗೂ ಅಂಗನವಾಡಿಗಳ ಬಗ್ಗೆ ದೂರುಗಳು ಜಾಸ್ತಿ ಇವೆ ಎಂದು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಗಮನಹರಿಸಿ ಒಂದು ಹಿಡಿತಕ್ಕೆ ತರಬೇಕೆಂದು ಹೇಳುತ್ತೇನೆ. ಇವತ್ತು ಕೆಲವು ಸಮಾಜ ಕಲ್ಯಾಣ ಇಲಾಖೆ ಕೈಕೆಳಗೆ, ಕೆಲವು ವಿದ್ಯಾ ಇಲಾಖೆ ಕೆಳಗೆ ಬಂದೂ ಇವಕ್ಕೆ ಹರಿಜನಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ ಇಲಾಖೆಯಿಂದಲೇ ಹಣದ ಸಹಾಯ ಹೋಗುತ್ತಿದೆ. ಇವತ್ತು ಈ ಕೇಂದ್ರಗಳಲ್ಲಿ ಏನೇನು ನಡೆಯುತ್ತಿದೆ ಎಷ್ಟೆಷ್ಟು ಫಂಡ್ ಹೋಗುತ್ತಿದೆ ಎನ್ನುವ ಬಗ್ಗೆ ತಾವು ಪತ್ತೆ ಹಚ್ಚುವುದು ಬಹಳ ಕಷ್ಟ ಇದೆ. Whether those funds are spent for genuine purposes or not...ಇದನ್ನು ಇವತ್ತು ಪತ್ತೆ ಹಚ್ಚಬೇಕಾದರೆ ತಾವು ಇದರಲ್ಲಿ ವಾಲೆಂಟರಿ ಆರ್ಗನೈಸೇಷನ್ಸ್ ಅನ್ನು ಇನ್ವಾಲ್ವ್ ಮಾಡಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† SRI JOSHI SUBHASH SHRIDHAR (Nippani).—Madam Deputy Speaker, about many matters other hon. Members have elaborated their view points. I want to stress on one point and that is about

dedication of Devadasis to Goddess Yellamma. There are many Development Agencies which are doing some development works about rehabilitation of Devadasis particularly in Belgaum district. I don't want to go to that aspect. I am going to stress on one point and that is about dedication of Devadasis to Goddess Yellamma. Once Dr. Babasaheb Ambedkar-he has specifically in his speech said why only Dalit girls. why not upper caste women or girls are dedicated to Goddess Yellamma. As things stand to-day only girls belonging to Dalit community are dedicated as Devadasis and this custom is prevalent in Karnataka and the whole nation is discussing about this. According to one report last year about 3,000 girls were dedicated from the drought-prone areas of Belgaum District but that was not factual figure. Some girls from this area were dedicated last year as Devadasis and because of the existence of this custom that is prevalent from age old years the whole name of Karnataka is defamed not only in our country but in the entire world for that matter. In fact this matter was once discussed in the UNO also and there was unanimous opinion that this practice should be stopped once for all But now we are only engaged in development works and not bothered about stopping this practice. Whereas the Maharastra Government has constituted a Commission to go into the problems of Devedasis and the Social Welfare Minister of Maharastra Government is heading that Commission. In addition the Maharastra Government involved NGO's and other voluntary organisations also. I therefore take this opportunity to request theKarnataka Government to take steps to stop this parctice and look into the problems of Devadasis. This year you are all aware that we are going to celebrate the Birth Anniversary of our great leader Dr. Babasaheb Ambedkar and from this year the Government should be firm to stop this whole custom and steps should be taken to rehabilitate them. The previous Government when Sri Ramakrishna Hegde was the Chief Minister at that time Government has taken a decision to stop worship at Chandragutti. Similarly steps should be taken to stop worship at Soundatti also and the Government machiney is not capable of handling the situation It can be one through a Committee headed by Hon'ble Minister for Social Welfare and Committee of NGOS can do this. Don't involve the Government machiney in this, they will not do the job properly because they are not for any social reforms. Further the people of that area have also changed the procedure of dedicating Devadasis. So we must have some proper plan to stop this practice I therefore request the Government to look into the matter and see that a working group and an Enquiry Commission is constituted and an action plan is prepared to rehabilitate those women through the Social Welfare Ministry and this work should be done at a great speed and without loss of time. I also request the Hon'ble Minister for Social Welfare to make a visit to Belgaum

once and see that the problem faced by devadasi women is solved and rehabilitation programme is taken up. As I mentioned earlier this year being the Birth Centenary of Dr. Ambedkar, Government should declare in this year what social reforms they are going to tackle and what are the programmes they are going to take up for the upliftment of SC/STs in Karnataka. I, therefore, once again say that if we do these two things at the time of the Birth Anniversary of Dr. Babasaheb Ambedkar we will do something not only for the State but also for the entire country. I request therefore, through you hon'ble Speaker to take these steps for stopping the dedication and also for taking some firm steps for speeding up of the work for the development of SCs/STs. I think the Social Welfare Minister will definitely look into the matter and for the rehabilitation of the Devadasis definitely he will take few steps. I thank you for giving me sometime for expressing my views. Thank you very much.

† ಶ್ರೀ ಪ್ರಭಾಕರ್ ಸದಾಶಿವ ರಾಣೆ (ಕಾರವಾರ).—ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಮಂಡಿಸಿರುವಂಥ ಸಮಾಜ ಕಲ್ಯಾಣ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾನು ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಾವೆಲ್ಲ ತಿಳಿದುಕೊಂಡಿರುವ ಹಾಗೆ ಈ ಸಮಾಜ ಕಲ್ಯಾಣ ಇಲಾಖೆ ತನ್ನದೇ ಆದಂಥ ಒಂದು ಮಹತ್ವವನ್ನು ಪಡೆದಿದೆ. ಅದಕ್ಕೆ ಕಾರಣವೂ ಇದೆ ಇವತ್ತು ಈ ಇಲಾಖೆಯ ಕಕ್ಷೆಯೊಳಗೆ ಬರುವಂಥ ಕೆಲವು ಸಮುದಾಯಗಳನ್ನು ಗಣನೆಗೆ ತೆಗೆದುಕೊಂಡರೆ ವಿಶೇಷವಾಗಿ ಹರಿಜನರು ಗಿರಿಜನರು, ಹಿಂದುಳಿದ ವರ್ಗದವರು ಅಷ್ಟೇ ಅಲ್ಲ, ಸಂಪೂರ್ಣವಾಗಿ ಮಹಿಳಾ ವರ್ಗ ಮತ್ತು ಮಕ್ಕಳನ್ನು ಒಳಗೊಂಡಿರುವಂಥ ಇಲಾಖೆ ಆಗಿರುವುದರಿಂದ ಇದಕ್ಕೆ ನಿಜವಾಗಿ ಹೆಚ್ಚಿನ ಒಂದು ಮಹತ್ವ ಇದೆ. ಅದೂ ಅಲ್ಲದೆ ಈ ಸಲ ನಾವು ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮಶತಾಬ್ಧಿಯನ್ನು ಆಚರಿಸುವ ಈ ಸಂದರ್ಭದಲ್ಲಿ ಅದಕ್ಕೆ ಇನ್ನೂ ಹೆಚ್ಚಿನ ಮಹತ್ವ ಬಂದಿದೆಯೆಂದು ನಾವು ಒಪ್ಪಬೇಕಾಗುತ್ತದೆ. ಇಂತಹ ಒಂದು ಮಹತ್ವದ ಇಲಾಖೆಯಲ್ಲಿ ನಾವು ಈವರೆಗೆ ಸಾಧಿಸಿರುವ ಸಾಧನೆ ಏನು ಎನ್ನುವುದನ್ನು ನೋಡಿದಾಗ ನಮ್ಮ ಮುಂದೆ ಅತ್ಯಂತ ನಿರಾಶಾದಾಯಕವಾದ ಚಿತ್ರ ನಮಗೆ ಕಾಣುತ್ತದೆ. ಇದಕ್ಕೆ ಕಾರಣಗಳು ಏನು? ಇದನ್ನು ದೂರಪಡಿಸಲಿಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ಇವತ್ತು ನಾವು ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಏಕೆಂದರೆ, ಅನೇಕ ವರ್ಷಗಳಿಂದ, ಸ್ವಾತಂತ್ರ್ಯ ಬಂದಾಗಿನಿಂದ ಈ ಒಂದು ಇಲಾಖೆ ಸ್ಥಾಪನೆಯಾಗಿ ನಾವು ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡು ಶೋಷಿತವರ್ಗ, ಹಿಂದುಳಿದವರ್ಗ ಮತ್ತು ದುರ್ಬಲವರ್ಗಗಳ ಉನ್ನತಿ ಮಾಡಬೇಕೆಂದು ಏನು ಬಯಸಿಕೆಪಟ್ಟು ಆ ರೀತಿ ಮಾಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಅದರಿಂದ ಏನು ಸಾಧನೆಯಾಗಿದೆ ಎಂದು ನೋಡದೆ ಇದ್ದರೆ, ಅದನ್ನು ವಿಚಾರ ಮಾಡದೇ ಇದ್ದರೆ ಆ ಉದ್ದೇಶ ಸಫಲವಾಗುವುದಿಲ್ಲ ಎಂದು ಸಹ ನಾವು ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದ ಇವತ್ತು ಈ ಇಲಾಖೆಯಲ್ಲಿ ನಾವು ನಮ್ಮ ಅನೇಕ ಮಿತ್ರರು ಕೆಲವು ವಿಷಯಗಳ ಬಗ್ಗೆ ಇಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ನಾನು ಹೇಳುವುದು ಏನೆಂದರೆ, ಇವತ್ತು ಈ ಶೋಷಿತವರ್ಗದವರು ಅಥವಾ ದುರ್ಬಲ ವರ್ಗದವರು ಏನಿದ್ದಾರೆ, ಇವರ ಸುಧಾರಣೆ ಆಗಬೇಕಾದರೆ, ಏನಾದರೂ ಇವರ ಕಲ್ಯಾಣ ಆಗಬೇಕಾದರೆ, ಮುಖ್ಯವಾಗಿ ಈ ವರ್ಗ ಶಿಕ್ಷಣದಲ್ಲಿ ಮುಂದೆ ಬರಬೇಕು. ಅದರ ಮೂಲಕ ಅವರ ಆರ್ಥಿಕ ಉನ್ನತಿಯಾಗಬೇಕು, ಸಾಮಾಜಿಕ ಸ್ಥಿತಿಗತಿ ಸುಧಾರಣೆಯಾಗಬೇಕು, ಅವರಲ್ಲಿ ಶಕ್ತಿಯುಂಟು ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡು ನಾವು ಕೆಲಸ ಮಾಡಬೇಕಾಗಿದೆ. ಈ ಒಂದು ಇಲಾಖೆಯಲ್ಲಿ ಬೇಕಾದಷ್ಟು ಹಣ ಇದೆ. ಪ್ರತಿಯೊಂದು ಇಲಾಖೆಯಲ್ಲೂ ಶೇಕಡ 18ರಷ್ಟು ಹಣವನ್ನು ಮೀಸಲಾಗಿಡುತ್ತಿದ್ದಾರೆ. ಇನ್ನೂ ಅನೇಕ ಮೂಲಗಳಿಂದ ಹಣವನ್ನು ಸಂಗ್ರಹಿಸುತ್ತಿದ್ದೇವೆ ಎನ್ನುವ ದೃಷ್ಟಿಯಿಂದ ಕೇವಲ ಈಗಾಗಲೇ ನಮ್ಮ ವಿರೋಧಪಕ್ಷದ ಉಪನಾಯಕರು ಹೇಳಿದಂತೆ, ಮಾರ್ಚಿ ತಿಂಗಳಲ್ಲಿ ವೆಚ್ಚ ಮಾಡುವಂಥ ಪದ್ಧತಿ ಸಂಪೂರ್ಣವಾಗಿ ನಿಲ್ಲಬೇಕು. ಏಕೆಂದರೆ, ಈ ಬಗ್ಗೆ ಅನೇಕ

ಉದಾಹರಣೆಗಳನ್ನು ಕೊಟ್ಟು ಈ ಮಾತನ್ನು ಸ್ಪಷ್ಟೀಕರಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇವತ್ತು ನಾವು ಈ ಶಿಕ್ಷಣದ ಬಗ್ಗೆ ವಿಚಾರ ಮಾಡಬೇಕಾದರೆ, ಈ ಹರಿಜನ ಮತ್ತು ಗಿರಿಜನರ ಶೈಕ್ಷಣಿಕ ಸ್ಥಿತಿ ಸುಧಾರಣೆ ಆಗಬೇಕಾದರೆ ಮುಖ್ಯವಾಗಿ ಹರಿಜನ ಹಾಸ್ಟಲುಗಳು ಆರಂಭವಾಗಬೇಕು, ಆಶ್ರಮ ಶಾಲೆಗಳು ಆರಂಭವಾಗಬೇಕು, ಅಷ್ಟೇ ಅಲ್ಲ ಆರಂಭ ಮಾಡಿದ ಹಾಸ್ಟಲುಗಳಾಗಲೀ ಅಥವಾ ಆಶ್ರಮ ಶಾಲೆಗಳಾಗಲೀ ಯಾವ ಸ್ಥಿತಿಗತಿಯಲ್ಲಿವೆ ಎಂಬುದನ್ನೂ ನಾವು ಅತ್ಯಂತ ಗಂಭೀರವಾಗಿ ನೋಡಬೇಕಾಗಿದೆ. ಏಕೆಂದರೆ ಅನೇಕ ಹಾಸ್ಟಲುಗಳಲ್ಲಿ ಮಕ್ಕಳನ್ನು ನಾವು ನೋಡಿದಾಗ ನಿಜವಾಗಿಯೂ ಅತ್ಯಂತ ಕನಿಕರವಾದ ಸ್ಥಿತಿ ನಮ್ಮ ಮುಂದೆ ಬರುತ್ತದೆ. ಅನೇಕ ಹಾಸ್ಟಲುಗಳಲ್ಲಿ ಮಕ್ಕಳು ಜೀತದಾಳು ಗಳಿಗಿಂತಲೂ ಕಡೆಯಾದ ಸ್ಥಿತಿಯಲ್ಲಿರುವುದನ್ನು ನಾವು ಕಾಣಬಹುದು. ಇವತ್ತು ಪ್ರೀಮೆಟ್ರಿಕ್ ಹಾಸ್ಟಲುಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ೧೦೦ ರೂಪಾಯಿ ಮತ್ತು ಪೋಸ್ಟ್ ಮೆಟ್ರಿಕ್ ಹಾಸ್ಟಲು ಗಳಲ್ಲಿ ೧೫೦ ರೂಪಾಯಿ ಕೊಡುತ್ತಿದ್ದಾರೆ, ಇದು ಏತಕ್ಕೂ ಸಾಲದು. ಮತ್ತು ಕೊಟ್ಟಂಥ ಹಣದಲ್ಲಿ ಬಹಳ ಸೋರುವಿಕೆ ನಡೆಯುತ್ತಿದೆ. ಇದನ್ನು ತಡೆಯುವಂಥ ಒಂದು ಕಾರ್ಯಕ್ರಮವನ್ನು ಸರ್ಕಾರ ದವರು ಹಾಕಿಕೊಳ್ಳಬೇಕು. ಮತ್ತೆ ಬೇರೆ ಬೇರೆ ಇಲಾಖೆಗಳಲ್ಲಿ ಬೇಡವಾದಂಥ ಜನರು ಈ ಇಲಾಖೆಗೆ ಬರುವುದು ವಾಡಿಕೆಯಾಗಿದೆ. ಆದರೆ ಸುದೈವದಿಂದ ಈ ಸಲ, ಈ ಇಲಾಖೆಗೆ ಒಬ್ಬರು ದಕ್ಷ ಕಾರ್ಯದರ್ಶಿ ಗಳನ್ನು ಹಾಕಿದ್ದಾರೆ. ಆದರೆ ಇವರೊಬ್ಬರೇ ದಕ್ಷರಾಗಿದ್ದರೆ ಈ ಇಲಾಖೆಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವರ ಜೊತೆಗೆ ಕೆಳಹಂತದಲ್ಲಿ ಕೆಲಸ ಮಾಡುವಂಥ ಜನರೂ ದಕ್ಷರಾಗಿರಬೇಕು ಪ್ರಾಮಾಣಿಕರಾಗಿರಬೇಕು ಈ ಒಂದು ವರ್ಗದ ಹಿತರಕ್ಷಣೆ ಮಾಡುವುದಕ್ಕೆ ಕಟಿಬದ್ಧರಾಗಿರಬೇಕು. ಇಂತಹ ವ್ಯವಸ್ಥೆಯನ್ನು ಉಂಟು ಮಾಡುವಂಥ ಕಾರ್ಯಕ್ರಮಗಳನ್ನು ಮಾನ್ಯ ಮಂತ್ರಿಗಳು ಹಾಕಿಕೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ಹರಿಜನರ ಗಿರಿಜನರ ಸ್ಥಿತಿ ಸುಧಾರಿಸಬೇಕೆಂದು ಗಂಗಾ ಕಲ್ಯಾಣ ಕಾರ್ಯಕ್ರಮವನ್ನು ಸರ್ಕಾರ ಜಾರಿಗೆ ತಂದಿದೆ, ಈ ಗಂಗಾ ಕಲ್ಯಾಣ ಕಾರ್ಯಕ್ರಮದಲ್ಲಿ ಅನೇಕ ಜಿಲ್ಲೆಗಳಲ್ಲಿ ರಾಜ್ಯಾದ್ಯಂತ ಕೆಲವು ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಈ ಯೋಜನೆಗಳನ್ನು ಲಿಫ್ಟ್ ಇರಿಗೇಷನ್ ಮುಖಾಂತರ ಮತ್ತು ಬಂಡಾರ ಕಟ್ಟಿಕೊಳ್ಳುವ ಮುಖಾಂತರ ಮಾಡಿದ್ದಾರೆ. ಈ ವಿಷಯದಲ್ಲಿ ಸರ್ಕಾರಿ ಆಜ್ಞೆಯನ್ನು ನೋಡಿ ಆಶ್ಚರ್ಯವಾಯಿತು. ಏನೆಂದರೆ, ಗಂಗಾ ಕಲ್ಯಾಣ ಕಾರ್ಯಕ್ರಮದ ಮುಖಾಂತರ ಏನು ನೀರಾವರಿ ಮಾಡಿದ್ದಾರೆ, ಆ ಭೂಮಿಯಲ್ಲಿ ಇರುವಂಥ ಎಲ್ಲಾ ರೈತರೂ ಒಂದು ಸಹಕಾರಿ ಸಂಘ ಮಾಡಿ, ಆ ಸಂಘದ ಮೂಲಕ ಗಂಗಾ ಕಲ್ಯಾಣ ಕಾರ್ಯಕ್ರಮಗಳಾದ ಲಿಫ್ಟ್ ಇರಿಗೇಷನ್ ಇತ್ಯಾದಿ ಗಳನ್ನು ಮೆಯಿನ್‌ಟೇನ್ ಮಾಡಬೇಕು, ಇದಕ್ಕೆ ಸರ್ಕಾರ ಕಟಿಬದ್ಧರಾಗುವುದಿಲ್ಲ ಎಂಬ ಆಜ್ಞೆಯನ್ನು ಹೊರಡಿಸಿದ್ದಾರೆ. ಇದು ನಿಜವಾಗಿಯೂ ವಿಚಿತ್ರ ಎನಿಸುತ್ತದೆ. ಇವತ್ತು ಕೋಟಿಗಟ್ಟಲೆ ವೆಚ್ಚ ಮಾಡಿ, ಕೃಷ್ಣಾ ಮೇಲ್ದಂಡೆ ಮಾಡುತ್ತೇವೆ, ಕಾವೇರಿ ಮಾಡುತ್ತೇವೆ, ಮತ್ತು ಇನ್ನು ಅನೇಕ ನೀರಾವರಿ ಯೋಜನೆಗಳನ್ನು ಮಾಡುತ್ತಿದ್ದೇವೆ. ಇಲ್ಲಿ ಎಲ್ಲಿಯೂ ಸಹ ಈ ಯೋಜನೆಗಳ ವೆಚ್ಚವನ್ನು ರೈತರ ಮೇಲೆ ಹಾಕುವುದಿಲ್ಲ. ನೀವು ನೀರಾವರಿ ಕರವನ್ನು ಹಾಕಿ ಆ ರೈತರಿಂದ, ಕರ ವಸೂಲಿ ಮಾಡಿ, ಆದರೆ ಅದರ ಸಂಪೂರ್ಣವಾದ ನಿರ್ವಹಣೆ ಮಾಡುವಂಥ ಜವಾಬ್ದಾರಿಯನ್ನು ಆ ಶೋಷಿತ ವರ್ಗದ ಜನರ ಮೇಲೆ ಹಾಕಿದರೆ, ನಿಜವಾಗಿಯೂ ಅವರಿಗೆ ಉಪಕಾರ ಮಾಡಿದಂತಾಗುವುದಿಲ್ಲ. ಅನ್ಯಾಯ ಮಾಡುತ್ತಿದ್ದೀರಿ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಈ ಕಾರಣದಿಂದ ನಮ್ಮ ಜಿಲ್ಲೆಯಲ್ಲಿ ಅನೇಕ ಗಂಗಾಕಲ್ಯಾಣ ನೀರಾವರಿ ಯೋಜನೆಗಳು ನಿಂತು ಹೋಗಿವೆ. ಅಲ್ಲಿ ಪಂಪ್‌ಸೆಟ್‌ನ ವಿದ್ಯುತ್‌ಬಿಲ್ಲನ್ನು ತುಂಬಿಸುವವರು ಇಲ್ಲ. ಏನಾದರು ಪಂಪ್‌ಸೆಟ್ ಕೆಟ್ಟು ಹೋದರೆ ರಿಪೇರಿ ಮಾಡುವವರು ಇಲ್ಲ. ನಾವು ಒಂದು ಯೋಜನೆ ಅಳವಡಿಸುವಾಗ ಏನು ಶ್ರದ್ಧೆ ಮತ್ತು ತತ್ವ ಇಟ್ಟುಕೊಂಡಿರುತ್ತೇವೆ ಆ ಶ್ರದ್ಧೆ ಮತ್ತು ತತ್ವ ನಿಜವಾಗಿಯೂ ಜನರಿಗೆ ಪ್ರಯೋಜನವಾಗುವಂತೆ ಕಾರ್ಯಕ್ರಮ ಹಾಕಿಕೊಂಡಾಗ ಮಾತ್ರ ಅದು ಸಫಲವಾಗುತ್ತದೆ ಎಂದು ಹೇಳುತ್ತೇನೆ. ಮತ್ತೆ ವಿಶ್ವವಿದ್ಯಾನಿಲಯದಲ್ಲಿ ರೋಸ್ಟರ್ ಸಿಸ್ಟಂ ಬಗ್ಗೆ ವಿರೋಧ ಪಕ್ಷದ ಉಪನಾಯಕರು ಹೇಳಿದರು. ನಾನು ಆ ಮಟ್ಟಕ್ಕೆ ಹೋಗುವುದಿಲ್ಲ ಒಂದೇ ಒಂದು ಉದಾಹರಣೆ ಕೊಡುತ್ತೇನೆ, ನಮ್ಮ ಕಾರವಾರ ಜಿಲ್ಲೆಯಲ್ಲಿ ಒಂದು ಪೋಸ್ಟ್ ಮೆಟ್ರಿಕ್ ಹಿಂದುಳಿದವರ್ಗಗಳ ವಿದ್ಯಾರ್ಥಿ ನಿಲಯ ಇದೆ. ಅಲ್ಲಿ ರೋಸ್ಟರ್ ಸಿಸ್ಟಮ್ ಪ್ರಕಾರ ಎಲ್ಲಾ ಹಿಂದುಳಿದವರ್ಗಗಳ ಹುಡುಗರಿಗೆ ಪ್ರವೇಶ ಕೊಡಬೇಕಾಗಿತ್ತು. ಆದರೆ ಹುಡುಗರನ್ನು ಆಯ್ಕೆ ಮಾಡುವಾಗ ಜಿಲ್ಲಾ ಪರಿಷತ್‌ನವರು ಎಲ್ಲಾ ನಿಯಮಗಳನ್ನೂ ಗಾಳಿಗೆ ತೂರಿದ್ದಾರೆ. ಅಲ್ಲಿ ಹೆಚ್ಚಾಗಿ ಮೇಲುವರ್ಗದ ಜಾತಿಯ ಹುಡುಗರು ಹೆಚ್ಚಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಹೀಗೆ ಹಿಂದುಳಿದವರ್ಗಗಳ ವಿದ್ಯಾರ್ಥಿಗಳಿಗೆ ಇಟ್ಟಂಥ ಸೌಲಭ್ಯ ದುರುಪಯೋಗ ವಾದರೆ ಅದಕ್ಕೆ ಕಡಿವಾಣ ಹಾಕುವ ವ್ಯವಸ್ಥೆ ಈ ಸರ್ಕಾರದಲ್ಲಿ ಇದೆಯೋ ಇಲ್ಲವೋ ಎಂದು ಕೇಳುತ್ತೇನೆ.

ಎಲ್ಲಾ ಜಿಲ್ಲೆಗಳಲ್ಲಿ ಸಹ ಈ ಜಿಲ್ಲಾ ಪರಿಷತ್ತಿನವರು ಪಾಳೆಗಾರರಂತೆ ವರ್ತಿಸುತ್ತಿದ್ದಾರೆ. ಇದನ್ನು ನಾನು ದುಃಖದಿಂದ ಹೇಳುತ್ತಿದ್ದೇನೆ. ಎಲ್ಲಾ ರಾಜಕೀಯ ಪಕ್ಷದವರೂ ಅದೇ ರೀತಿ ಇದ್ದಾರೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ಅವರಿಗೆ ಯಾವ ಕಾನೂನು ಇಲ್ಲ. ಯಾವ ನಿಯಮಗಳೂ ಇಲ್ಲ. ಎಲ್ಲಾ ನಿಯಮಗಳನ್ನೂ ಗಾಳಿಗೆ ತೂರುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಲೇಬೇಕು. ಸಮಾಜ ಕಲ್ಯಾಣ ಇಲಾಖೆಯಿಂದಾಗಲೀ ಅಥವಾ ಸರಕಾರದಿಂದಾಗಲೀ ಏನು ಗೈಡ್‌ಲೈನ್ಸ್ ಹಾಕುತ್ತಾರೆ, ಅದನ್ನು ಅವರು ಅನುಸರಿಸುತ್ತಾರೆಯೋ ಇಲ್ಲವೋ ಎಂಬುದನ್ನು ನೋಡುವ ಒಂದು ವ್ಯವಸ್ಥೆ ಮಾಡಬೇಕು. ಹಾಗೇನಾದರೂ ಅನುಸರಿಸದಿದ್ದರೆ ಆ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕಠಿಣವಾದ ಶಿಸ್ತಿನ ಕ್ರಮ ಕೈಗೊಳ್ಳಬೇಕು. ಅದಕ್ಕೆ ಕಾರವಾರದ ಪ್ರಿಮೆಟ್ರಿಕ್ ಬ್ಯಾಕ್‌ವರ್ಡ್ ಕ್ಲಾಸಸ್ ಹಾಸ್ಟೆಲ್‌ನ ಒಂದು ಉದಾಹರಣೆ ಕೊಟ್ಟೆ, ಅಲ್ಲಿ ರೋಸ್ಟರ್ ಸಿಸ್ಟಮ್ ಅಳವಡಿಸಿಲ್ಲ. ಈ ರೀತಿ ಪ್ರತಿಯೊಂದನ್ನೂ ನೋಡಿದರೆ ಜಿಲ್ಲಾ ಪರಿಷತ್‌ನವರು ಯಾವರೀತಿ ಕಾರ್ಯಕ್ರಮ ಮಾಡುತ್ತಾರೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಇದನ್ನು ತಾವು ನೋಡಬೇಕು. ಇನ್ನು ವಿಶೇಷ ಘಟಕ ಯೋಜನೆ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನಾನೂ ಸಹ ಹೇಳುವುದು ಇಷ್ಟೇ. ಪ್ರತಿಯೊಂದು ಇಲಾಖೆಯಲ್ಲೂ ಈ ವಿಶೇಷ ಘಟಕ ಯೋಜನೆ ಮುಖಾಂತರ ಪರಿಶಿಷ್ಟ ವರ್ಗದವರಿಗೆ ಸವಲತ್ತುಗಳನ್ನು ಕೊಡಬೇಕೆಂದು ಇದೆ. ನಾನು ಪ್ರಥಮದಲ್ಲೇ ಒಂದು ಮಾತನ್ನು ಏತಕ್ಕೆ ಹೇಳಿದೆ ಎಂದರೆ, ನಾವು ಬಹುಸಂಖ್ಯಾತ ವರ್ಗದವರ ಬಗ್ಗೆ ಯೋಚನೆ ಮಾಡುವುದನ್ನು ದೂರ ಇಟ್ಟು ಕೆಲವೇ ಸಂಖ್ಯೆಯಲ್ಲಿ ಇರುವ ಪರಿಶಿಷ್ಟ ವರ್ಗದವರ ಬಗ್ಗೆ ಯೋಚನೆ ಮಾಡಬೇಕು. ಒಂದು ಉದಾಹರಣೆ ಕೊಟ್ಟರೆ, ನಮ್ಮ ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಹರಿಜನರ ಸಂಖ್ಯೆ ಬಹಳಷ್ಟು ಕಡಿಮೆ. ವಿವಿಧ ಇಲಾಖೆಗಳಲ್ಲಿ ಶೇಕಡಾ ೧೮ರಷ್ಟು ಗ್ರ್ಯಾಂಟ್ ಇದೆ, ವಿಶೇಷ ಘಟಕ ಯೋಜನೆ ಏನಿದೆ ಅದರಿಂದ ಯಾವುದೇ ಒಂದು ಅನುಕೂಲವನ್ನು, ಸವಲತ್ತುಗಳನ್ನು ಕೊಡಬೇಕಾದರೆ ಹರಿಜನ ಗಿರಿಜನರನ್ನು ಹುಡುಕಿಕೊಂಡು ಹೋಗಬೇಕಾದ ಪರಿಸ್ಥಿತಿ ಕೆಲವು ಕಡೆ ಇದೆ. ಇಷ್ಟಿದ್ದಾಗಲೂ ಕೂಡಾ ನಮ್ಮ ಕ್ಷೇತ್ರದಲ್ಲಿ ಅನೇಕ ಕಡೆ, ಫಾರೆಸ್ಟ್ ಇಲಾಖೆಯಲ್ಲಿ ಅದೇ ಫಲಾನುಭವಿಗಳನ್ನು ಆರಿಸುತ್ತಾರೆ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರೂ ಅದೇ ಫಲಾನುಭವಿಗಳನ್ನು ಆರಿಸುತ್ತಾರೆ ಬೇರೆ ಡಿಪಾರ್ಟ್‌ಮೆಂಟ್‌ನವರೂ ಅದೇ ಫಲಾನುಭವಿಗಳನ್ನು ಆರಿಸುತ್ತಾರೆ. ಆದರೂ ಸಹ ಅವರ ಸ್ಥಿತಿಗತಿಯಲ್ಲಿ ಯಾವುದೇ ಸುಧಾರಣೆಯಾಗುವುದಿಲ್ಲ. ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನವರೂ ಅದೇ ಫಲಾನುಭವಿಗಳನ್ನು ಆರಿಸುತ್ತಾರೆ. ಅವರಿಗೆ ಬೇರೆ ಫಲಾನುಭವಿಗಳು ಸಿಗುವುದಿಲ್ಲ. ಇಂತಹ ಸ್ಥಿತಿ ಇದ್ದಾಗಲೂ ಸಹ ಅವರ ಸ್ಥಿತಿಗತಿಗಳಲ್ಲಿ ಸುಧಾರಣೆಯಾಗಿಲ್ಲವೆಂದರೆ ನಮ್ಮ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಲು ಸಾಧ್ಯವಾಗಿಲ್ಲ ಎಂಬುದು ಸಿದ್ಧವಾಗುತ್ತದೆ. ಆದುದರಿಂದ ಈ ದಿಸೆಯಲ್ಲಿ ನೀವು ಅದನ್ನು ೧೦೦ ಜನರಿಗೆ ಅಳವಡಿಸಿದ್ದೇವೆ, ಇಲ್ಲವೇ ೧೦೦೦ ಜನರಿಗೆ ಅಳವಡಿಸಿದ್ದೇವೆಂದು ಹೇಳಿದರೆ ಪ್ರಯೋಜನವಿಲ್ಲ. ಅದರ ಪೂರ್ತಿ ಸದುಪಯೋಗ ಅವರಿಗೆ ಆಗಿದೆಯೋ ಇಲ್ಲವೋ ಎಂಬುದನ್ನು ನೋಡುವಂತಹ ಕಾರ್ಯಕ್ರಮ ಹಾಕಿಕೊಳ್ಳಬೇಕು ಬಗ್ಗೆ ವ್ಯವಸ್ಥಿತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಕೇವಲ ಅಂಕಿ ಅಂಶಗಳ ಆಧಾರದ ಮೇಲೆ ಸಾಧನೆ ಮಾಡಿದ್ದೇವೆಂದು ಹೇಳಿದರೆ ಅದು ಜನರಿಗೆ ಮೋಸ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಈ ಒಂದು ಕಾರ್ಯಕ್ರಮವನ್ನು ಯಾವರೀತಿ ಮಾಡುತ್ತೀರಿ ಎಂಬುದನ್ನು ಮಾನ್ಯ ಸಚಿವರು ವಿಚಾರ ಮಾಡಬೇಕು. ಹಾಗೂ ಇದರ ಬಗ್ಗೆ ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು

ಇನ್ನು ಹಿಂದುಳಿದ ವರ್ಗದವರ ಬಗ್ಗೆ ಹೇಳುವುದಾದರೆ ಈಗ ಚಿನ್ನಪ್ಪರೆಡ್ಡಿ ಆಯೋಗದ ವರದಿ ಸರ್ಕಾರದ ಕೈಸೇರಿದೆ. ಇದರ ಬಗ್ಗೆ ಎಲ್ಲರಿಗೂ ತಿಳುವಳಿಕೆ ಬಂದಿದೆ. ಈ ಹಿಂದೆ ವೆಂಕಟಸ್ವಾಮಿ ಆಯೋಗ ಸಹ ವರದಿ ಸಲ್ಲಿಸಿತ್ತು. ನಾನು ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀ ವೆಂಕಟಸ್ವಾಮಿ ವರದಿಗೆ ಆದಂತಹ ಸ್ಥಿತಿ ಚಿನ್ನಪ್ಪರೆಡ್ಡಿ ಆಯೋಗದ ವರದಿಗೆ ಆಗಬಾರದೆಂದು ಕಳಕಳಿಯಿಂದ ಸರ್ಕಾರದಲ್ಲಿ ವಿನಂತಿಸಿ ಕೊಳ್ಳುತ್ತೇನೆ. ನಮ್ಮ ಸರ್ಕಾರ ಒಂದು ಮೆಚ್ಚತಕ್ಕಂಥಹ ಕೆಲಸವನ್ನು ಮಾಡಿದೆ. ಶ್ರೀ ದೇವರಾಜ್ ಅರಸುರವರ ನೆನಪಿನಲ್ಲಿ ಒಂದು ಸಂಶೋಧನಾ ಸಂಸ್ಥೆಯನ್ನು ಮಾಡಿದ್ದಾರೆ. ಇದು ಕೇವಲ ಹೆಸರಿಗೆ ಮಾತ್ರ ಸಂಶೋಧನೆ ಸಂಸ್ಥೆಯಾಗಬಾರದು. ಇದರ ಮೂಲಕ ನಿಜವಾಗಿಯೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಯಾವರೀತಿಯ ಒಂದು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಎಂಬುದರ ಬಗ್ಗೆ ಒಂದು ಸಂಶೋಧನೆ ಆಗಬೇಕು. ಹಿಂದುಳಿದ ವರ್ಗಗಳವರಲ್ಲಿ ಜಾಗೃತಿ ಆಗಬೇಕು. ನಾವು ಈ ಸಲ ಡಾ. ಬಾಬಸಾಹೇಬ್ ಅಂಬೇಡ್ಕರ್‌ರವರ ಜನ್ಮ ಶತಾಬ್ಧಿಯನ್ನು ಅತ್ಯಂತ ವೈಭವಯುತವಾಗಿ ಆಚರಿಸಿದಾಗ ಅನೇಕ ಜನ ಟೀಕೆ ಮಾಡಿದರು, ಆದರೆ ಆ ಟೀಕೆ ಸಲ್ಲದು ಎಂದು ನನ್ನ ಅಭಿಪ್ರಾಯ ಏಕೆಂದರೆ, ಈ ಒಂದು ಶೋಷಿತ ವರ್ಗದಲ್ಲಿ

ಒಂದು ಅವೇರನೆಸ್ ಮೂಡಬೇಕಾದರೆ, ಒಂದು ಜಾಗ್ರತೆ ಮೂಡಬೇಕಾದರೆ ಇಂತಹ ಕಾರ್ಯಕ್ರಮಗಳನ್ನು ಇಂತಹ ಉತ್ಸವಗಳನ್ನು ಮಾಡಬೇಕಾಗುತ್ತದೆ. ಈ ರೀತಿ ಉತ್ಸವಗಳನ್ನು ಮಾಡುವುದರ ಮೂಲಕ ನಾವು ಸಮಾಧಾನ ಪಟ್ಟುಕೊಳ್ಳಬೇಕಾಗಿಲ್ಲ. ಒಂದು ನೆನಪಿನಲ್ಲಿ ಶೋಷಿತ ವರ್ಗದ ಜನರಿಗೆ ನಿಜವಾಗಿಯೂ ಉಪಯೋಗ ಆಗುವಂತಹ ವೈಶಿಷ್ಟ್ಯ ಪೂರ್ಣವಾದಂತಹ ಸಾಧನೆ ಈ ವರ್ಷದಲ್ಲಿ ಆಗಲೇಬೇಕು. ಇಲ್ಲದಿದ್ದರೆ ನಾವು ಹೆಸರಿಗೆ ಮಾತ್ರ ಅನೇಕ ಜನರ ಜನ್ಮಶತಾಬ್ದಿಯನ್ನು ಆಚರಿಸಿದಂತೆ ಇವರದ್ದು ಸಹ ಜನ್ಮ ಶತಾಬ್ದಿಯನ್ನು ಆಚರಿಸಿದಂತೆ ಆಗುತ್ತದೆಂದು ಹೇಳುತ್ತೇನೆ.

ಇನ್ನು ಹಾಸ್ಟಲ್‌ಗಳ ಬಗ್ಗೆ ಹೇಳಬೇಕಾದರೆ ಹೆಣ್ಣು ಮಕ್ಕಳ ಹಾಸ್ಟಲ್‌ಗಳಲ್ಲಿ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಈ ಹಾಸ್ಟಲ್‌ಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚು ಮಾಡಬೇಕು. ಹಿಂದುಳಿದ ವರ್ಗದವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹಾಸ್ಟಲ್ ಸೌಕರ್ಯಗಳು ದೊರಕಬೇಕು. ತಾಲ್ಲೂಕು ಮಟ್ಟದಲ್ಲಿ ಇರತಕ್ಕ ಹಾಸ್ಟಲ್‌ಗಳಲ್ಲಿ ಕೇವಲ ೫೦ ಸಂಖ್ಯೆ ಒಂದು ನಿಗದಿ ಮಾಡಿರುವುದರಿಂದ ಹೆಚ್ಚಿನ ಮಕ್ಕಳಿಗೆ ಈ ಸೌಲಭ್ಯವನ್ನು ಪಡೆಯಲು ಆಗುತ್ತಿಲ್ಲ, ಅದರಂತೆ ಮಾನ್ಯ ಮಂತ್ರಿಗಳು ಸಂಖ್ಯೆಯನ್ನು ಹೆಚ್ಚು ಮಾಡುತ್ತೇವೆಂದು ಹೇಳಿದ್ದಾರೆ. ಈ ಸಂಖ್ಯೆಯನ್ನು ಹೆಚ್ಚು ಮಾಡುವಂತಹ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕು.

ಇನ್ನು ಮಹಿಳೆಯರ ಮತ್ತು ಶಿಶು ಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ ಇಡೀ ಸಮಾಜದಲ್ಲಿ ಇವರ ಸಂಖ್ಯೆ ಹೆಚ್ಚಿದೆ. ಆದ್ದರಿಂದ ಈ ಇಲಾಖೆಯ ಜವಾಬ್ದಾರಿ ಬಹಳ ಹೆಚ್ಚಿದೆ. ಆದರೆ ದುರಾದೃಷ್ಟವಶಾತ್ ಯಾವ ಒಂದು ಮಟ್ಟದಲ್ಲಿ ಈ ಇಲಾಖೆ ಕಾರ್ಯ ಮಾಡಬೇಕಾಗಿತ್ತೋ ಆ ಮಟ್ಟದಲ್ಲಿ ಇದು ಕಾರ್ಯ ಮಾಡುತ್ತಿಲ್ಲ. ಐ. ಸಿ. ಡಿ. ಎಸ್. ಪ್ರೋಗ್ರಾಂ ಏನಿದೆ, ಇದು ಒಂದು ನಿಜವಾದ ಅತ್ಯಂತ ಉಪಯುಕ್ತವಾದ ಕಾರ್ಯಕ್ರಮವಾಗಿದೆ. ಇದರಲ್ಲಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಏನು ಪೌಷ್ಟಿಕ ಆಹಾರ ಕೊಡುವ ಯೋಜನೆ ಇದೆ ಅದು ಮಕ್ಕಳಿಗೆ ಸರಿಯಾಗಿ ತಲುಪುತ್ತಿಲ್ಲ, ಎಷ್ಟರ ಮಟ್ಟಿಗೆ ಇದು ಮಕ್ಕಳಿಗೆ ಮತ್ತು ಮಹಿಳೆಯರಿಗೆ ತಲುಪುತ್ತಿವೆ ಎಂಬುದನ್ನು ನೋಡಬೇಕು, ಇದರಲ್ಲಿ ಬಹಳಷ್ಟು ಸೋರುವಿಕೆ ಇದೆ. ಈ ಇಲಾಖೆಯಲ್ಲಿ ಕೆಲಸ ಮಾಡುವಂತಹ ಸಿ. ಡಿ. ಪಿ ಒ. ಮತ್ತು ಅಸಿಸ್ಟೆಂಟ್ ಡೈರೆಕ್ಟರ್‌ರವರ ವರ್ತನೆಯನ್ನು ನೋಡಿದಾಗ ನಿಜವಾಗಿ ಈ ಸರ್ಕಾರಕ್ಕೆ ಶೋಭೆಯನ್ನು ತರುವಂತಹ ವರ್ತನೆ ಅವರಲ್ಲಿ ಇಲ್ಲವೆಂದು ಹೇಳಬೇಕಾಗುತ್ತದೆ. ಇವತ್ತು ಅಂಗನವಾಡಿ ಪ್ರಾರಂಭ ಮಾಡಬೇಕಾದರೆ, ಅಂಗನವಾಡಿಯ ಕಾರ್ಯಕರ್ತೆಯರನ್ನು ಆಯ್ಕೆ ಮಾಡಬೇಕಾದರೆ ಸರ್ಕಾರದ ನಿಯಮಗಳಿವೆ.

೩-೩೦ ಪಿ. ಎಂ.

ಗೈಡ್‌ಲೈನ್ಸ್ ಇದೆ. ಅಂಗನವಾಡಿಗಳನ್ನು ಎಲ್ಲಿ ಮಾಡಬೇಕು. ಅವರ ವಸತಿ ಹೆಚ್ಚು ಇರುವ ಕಡೆ ಪ್ರಾರಂಭ ಮಾಡಬೇಕು ಎಂದು ಸ್ಪಷ್ಟವಾದ ನೀತಿ ನಿಯಮಗಳಿವೆ. ಎಲ್ಲಿ ಹರಿಜನ ಮತ್ತು ಗಿರಿಜನರ ವಸತಿ ಹೆಚ್ಚು ಇರುತ್ತದೆಯೋ ಅಲ್ಲಿ ಮಾಡಬೇಕು ಎಲ್ಲಿ ಹಿಂದುಳಿದ ವರ್ಗಗಳ ವಸತಿ ಸಂಖ್ಯೆ ಹೆಚ್ಚು ಇರುತ್ತದೆಯೋ ಅಲ್ಲಿ ಮಾಡಬೇಕು ಅಥವಾ ಗ್ರಾಮ ಮಟ್ಟದಲ್ಲಿ ಹಿಂದುಳಿದ ವರ್ಗಗಳು ಇದ್ದರೆ ಅಲ್ಲಿ ಮಾಡಬೇಕು ಎಲ್ಲಿ ಹಿಂದುಳಿದ ವರ್ಗಗಳ ಪರಿಸ್ಥಿತಿ ತೀರ ಹದಗೆಟ್ಟಿದೆಯೋ ಅಲ್ಲಿ ಮಾಡಬೇಕೆಂದು ಇದೆ. ಆದರೆ ಇವತ್ತು ಕಾರವಾರ ಜಿಲ್ಲಾ ಪರಿಷತ್ತಿನಲ್ಲಿ ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ತಮ್ಮ ಮನಸ್ಸಿಗೆ ಬಂದ ಹಾಗೆ ಕ್ರಮ ಕೈಗೊಂಡಿದ್ದಾರೆ. ನಾನು ಕಳೆದ ಎರಡು ವರ್ಷಗಳಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ವಿಷಯ ಜಿಲ್ಲಾ ಪರಿಷತ್ತು ಮತ್ತು ತಾಲ್ಲೂಕು ಪಂಚಾಯಿತಿ ಸಮಿತಿಗಳಲ್ಲಿ ಬೇಕಾದಷ್ಟು ಕಾವೇರಿದ ಚರ್ಚೆ ಆಗಿದೆ ರಾಜ್ಯಪಾಲರ ಆಡಳಿತವಿದ್ದಂತಹ ಕಾಲದಲ್ಲಿ ಇದರ ಬಗ್ಗೆ ನಾವು ಒಂದು ದೂರನ್ನು ಸಹ ತೆಗೆದುಕೊಂಡು ಹೋಗಿದ್ದೆವು. ನಿರ್ದೇಶನಾಲಯದ ಅಧಿಕಾರಿಗಳಿಗೆ ಕೂಡ ಈ ಬಗ್ಗೆ ದೂರು ಸಲ್ಲಿಸಿದ್ದೇವೆ. ಆದರೆ ಇದುವರೆವಿಗೂ ಯಾವುದೇ ಎನ್‌ಕ್ವೈರಿ ಸಹ ಆಗಿಲ್ಲ. ನಾವು ದೂರು ಕೊಟ್ಟರೂ ಸಹ ತನಿಖೆ ಆಗಲಿಲ್ಲ. ಇದರ ಬಗ್ಗೆ ಒಂದು ಶಿಸ್ತಿನ ಕ್ರಮವನ್ನು ಸಂಬಂಧಪಟ್ಟವರ ಮೇಲೆ ತೆಗೆದುಕೊಳ್ಳುವ ಕೆಲಸವನ್ನು ಸರ್ಕಾರ ಮಾಡಿಲ್ಲ. ಆದ್ದರಿಂದ ತತ್‌ಕ್ಷಣ ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ನಾನು ಹೇಳುತ್ತೇನೆ ಇವತ್ತು ಕಾರವಾರದಲ್ಲಿ ಕೆಲಸ ಮಾಡುತ್ತಿರುವಂತಹ ಸಿ. ಡಿ. ಪಿ. ಒ. ಮತ್ತು ಅಸಿಸ್ಟೆಂಟ್ ಡೈರೆಕ್ಟರ್ಸ್ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ ಈ ಅಂಗನವಾಡಿ ಕಾರ್ಯಕರ್ತೆಯರು ಗೌರವಧನ ಪಡೆಯುತ್ತಿದ್ದಾರೆ, ಗೌರವ ವೇತನ ಪಡೆಯುವ ಈ ಜನರನ್ನು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವರ್ಗ ಮಾಡುವಂತಹ ಪದ್ಧತಿ ಇಲ್ಲ. ಆದರೆ ಇಲ್ಲಿ ಕಾರವಾರ ಜಿಲ್ಲೆಯಲ್ಲಿ ಮತ್ತು ಕಾರವಾರ ತಾಲ್ಲೂಕಿನಲ್ಲಿ ಯಥೇಚ್ಛವಾಗಿ ವರ್ಗಾವಣೆ ಮಾಡುವ ಪದ್ಧತಿಯನ್ನು ನಡೆಸಿಕೊಂಡು ಬಂದಿದ್ದಾರೆ. ಅವರ ಮನಸ್ಸಿಗೆ ಬಂದಂತೆ ವರ್ಗ ಮಾಡಿದ್ದಾರೆ. ಅಲ್ಲಿನ ಸಿ. ಡಿ. ಪಿ. ಒ. ಗೆ ಏನಾದರೂ ವ್ಯವಸ್ಥೆ ಮಾಡಿದರೆ

ಅವರು ಏನು ಬೇಕಾದರೂ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ. ಇವರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳಿದರೆ ಇಲಾಖಾ ಮೇಲಧಿಕಾರಿಗಳು ಯಾವ ರೀತಿಯ ಕ್ರಮ ಕೈಗೊಳ್ಳುವುದಕ್ಕೂ ಮುಂದೆ ಬರುತ್ತಿಲ್ಲ. ಈ ಮಹಿಳಾ ಮತ್ತು ಮಕ್ಕಳ ಕಲ್ಯಾಣ ನಿರ್ದೇಶನಾಲಯ ಏನು ಇದೆ ಅದರ ಅಸ್ತಿತ್ವವಾದರೂ ಏತಕ್ಕೆ ಎಂದು ಪ್ರಶ್ನೆ ಮಾಡುವಂತಹ ರೀತಿಯಲ್ಲಿ ಆ ಇಲಾಖೆ ಕಾರ್ಯ ಮಾಡಿದರೆ ಅದರ ಬಗ್ಗೆ ವಿಚಾರಣೆ ಮಾಡುವುದು ಸರ್ಕಾರದ ಕರ್ತವ್ಯವೆಂದು ನಾನು ಹೇಳಬೇಕಾಗುತ್ತದೆ. ಅಷ್ಟೇ ಅಲ್ಲ ಆಯ್ಕೆಯಲ್ಲಿ ಕೂಡ ಅನ್ಯಾಯಗಳು ನಡೆದಿವೆ. ಕೆಲವು ಕಡೆ ಒಬ್ಬರೇ ಹರಿಜನ ಕಾರ್ಯಕರ್ತೆ ಬಂದರೂ ಸಹ, ಅವರನ್ನು ತಿರಸ್ಕರಿಸುವಂತಹ ಕೆಲಸವನ್ನು ಆ ಸಿ. ಡಿ. ಪಿ. ಓ. ಮತ್ತು ಅಸಿಸ್ಟೆಂಟ್ ಡೈರೆಕ್ಟರ್ ಅವರು ಮಾಡಿದ್ದಾರೆ. ಇವರ ಮೇಲೆ ದೂರು ಕೊಟ್ಟರೂ ಸಹ ಯಾವುದೇ ಕ್ರಮ ತೆಗೆದುಕೊಂಡಿಲ್ಲ, ಇನ್ನು ನಾನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಂಬಂಧಪಟ್ಟಹಾಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಗ್ರಾನೈಟ್ ಕಲ್ಲುಗಳ ಬಗ್ಗೆ ಈ ಮನೆಯಲ್ಲಿ ಸಾಕಷ್ಟು ಚರ್ಚೆ ಆಗಿದೆ: ಮೇಜರ್ ಮಿನರಲ್ಸ್ ಬಗ್ಗೆ ಹೇಳಿದ್ದಾರೆ. ಅಲ್ಲಿನ ಅವ್ಯವಹಾರಗಳ ಬಗ್ಗೆ ಅನೇಕ ಮಾನ್ಯ ಸದಸ್ಯರು ಇಲ್ಲಿ ಬೆಳಕು ಚೆಲ್ಲಿದ್ದಾರೆ. ನಾನು ಆ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಮಾತನ್ನು ಮಾತ್ರ ನಾನು ಇಲ್ಲಿ ಹೇಳಬೇಕಾಗುತ್ತದೆ ಈ ವ್ಯವಸ್ಥೆಯಲ್ಲಿ ಏನು ನಡೆದಿದೆಯೋ ನನಗಂತೂ ಗೊತ್ತಿಲ್ಲ. ಭ್ರಷ್ಟಾಚಾರಕ್ಕೆ ಮತ್ತೊಂದು ಹೆಸರು ಇದ್ದರೆ ಅದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಎಂದು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ, ಅದರಲ್ಲಿ ಎರಡು ಮಾತು ಇಲ್ಲ. ಏಕೆಂದರೆ ನಮ್ಮ ಭಾಗದಲ್ಲಿರತಕ್ಕಂಥ ಮೈನರ್ ಮಿನರಲ್ಸ್ ಅನ್ನು ಗುತ್ತಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಅಲ್ಲಿ ಸೋರಿಹೋಗುತ್ತಿರುವ ರಾಯಲ್ಟಿಯನ್ನು ತಡೆಹಿಡಿಯುವುದರಲ್ಲಿ ವಿಫಲರಾಗಿರುವ ಈ ಅಧಿಕಾರಿಗಳ ಒಂದು ವರ್ತನೆಯನ್ನು ನೋಡಿದಾಗ ನಾವು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ, ಏನೆಂದರೆ ಭ್ರಷ್ಟಾಚಾರಕೆ ಮತ್ತೊಂದು ಹೆಸರು ಏನಾದರು ಇದ್ದರೆ ಅದು ಗಣಿ ಮತ್ತು ಭೂವಿಜ್ಞಾನ ಇಲಾಖೆ ಎಂದು ನಾವು ಹೇಳಬೇಕಾಗುತ್ತದೆ. ಇವತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶನಾಲಯದಲ್ಲಿ ಎಲ್ಲಾ ಅಧಿಕಾರವನ್ನು ಅವರೇ ಇಟ್ಟುಕೊಂಡಿದ್ದಾರೆ, ಅಧಿಕಾರ ಎಲ್ಲಾ ಅವರಲ್ಲಿಯೇ ಕೇಂದ್ರೀಕೃತವಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಬ್ಬೊಬ್ಬ ಉಪನಿರ್ದೇಶಕರನ್ನು ನೇಮಕ ಮಾಡಿದ್ದು ಅವರು ಪ್ರತಿಯೊಂದು ಜಿಲ್ಲೆಯಲ್ಲಿರತಕ್ಕಂಥ ಮೈನರ್ ಮಿನರಲ್ಸ್‌ಗಳಲ್ಲಿ ದೊರೆಯುವ ಸೀಸ, ಕಪ್ಪೆ ಚಿಪ್ಪು ಇತ್ಯಾದಿಗಳನ್ನು ಗುತ್ತಿಗೆ ಕೊಡುವಂತಹ ಅಧಿಕಾರ ಕೂಡ ಅವರಿಗೆ ಇಲ್ಲ. ಅದೂ ಸಹ ಇಲ್ಲಿಯೇ ಕೇಂದ್ರೀಕೃತವಾಗಿದೆ. ಈ ಒಂದು ವ್ಯವಸ್ಥೆಯಿಂದ ನಿರ್ದೇಶನಾಲಯದಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಂತೆ ಮಾತ್ರ ವಿಕೇಂದ್ರೀಕರಣವಾಗಿದೆ. ವಿಕೇಂದ್ರೀಕರಣ ಎಲ್ಲಿಂದ ಶುರುವಾಗಿದೆ ಎಂದರೆ ಒಬ್ಬ ಜವಾನನಿಂದ ಹಿಡಿದು ನಿರ್ದೇಶಕರವರೆಗೆ ಯಾವ ರೀತಿ ಭ್ರಷ್ಟಾಚಾರ ವ್ಯವಸ್ಥೆ ಮಾಡಿಕೊಂಡು ಬಂದಿದ್ದಾರೆಂದರೆ ಬಹಳ ಚಾಕಚಕ್ಯತೆಯಿಂದ ಮಾಡಿಕೊಂಡು ಬಂದಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಮಾನ್ಯ ಮಂತ್ರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇಂತಹ ಒಂದು ಗಂಭೀರವಾದ ವಾತಾವರಣ ನಿರ್ದೇಶನಾಲಯದಲ್ಲಿ ಇದೆ ಎಂದು ಹೇಳಬೇಕಾಗುತ್ತದೆ. ಕಪ್ಪೆ ಚಿಪ್ಪು ಮತ್ತು ಇತರೆ ವಸ್ತುಗಳ ಗುತ್ತಿಗೆಗೆ ಅರ್ಜಿ ಹಾಕಿದರೆ ಆ ತಕ್ಷಣ ಎರಡೇ ನಿಮಿಷಗಳಲ್ಲಿ ಅದರ ಹಿಂದಿನ ಡೇಟ್ ಹಾಕಿ ಒಂದು ಅರ್ಜಿ ಆ ಫೈಲ್‌ನಲ್ಲಿ ಬಂದು ಬಿಡುತ್ತದೆ. ಅವರಲ್ಲಿ ಒಂದು ಪದ್ಧತಿ ಇದೆ, ಏನೆಂದರೆ ಸೀನಿಯಾರಿಟಿ ಪ್ರಕಾರ ಅಪ್ಲಿಕೇಶನ್‌ಗಳನ್ನು ವಿಲೇವಾರಿ ಮಾಡಬೇಕೆಂದು ಇದೆ. ಇದರಿಂದ ಅವರಿಗೆ ಬೇಕಾದವರಿಗೆ ಗುತ್ತಿಗೆಗೆ ಕೊಡುವಂತಹ ಒಂದು ವ್ಯವಸ್ಥೆ ಸಹ ಅಲ್ಲಿದೆ.

ನಾನು ನಮ್ಮ ಕಾಳೀನದಿಯ ಬೇಸಿನ್‌ನಲ್ಲಿ ಕಪ್ಪೆ ಚಿಪ್ಪಿನ ಗುತ್ತಿಗೆ ಮಾಡುವ ಸಂದರ್ಭದಲ್ಲಿ ಅಲ್ಲಿಯ ಅಧಿಕಾರಿಗಳಿಗೆ ಕೆಲವು ಸೂಚನೆಗಳನ್ನು ಕೊಟ್ಟೆ. ಅಲ್ಲಿ ಅನೇಕ ಕಡೆ ಅನಧಿಕೃತವಾಗಿ ಕಪ್ಪೆಚಿಪ್ಪುಗಳನ್ನು ಗುತ್ತಿಗೆದಾರರು ಒಯ್ಯುತ್ತಿದ್ದಾರೆ, ಸರ್ಕಾರಕ್ಕೆ ಸೇರಬೇಕಾದ ರಾಯಲ್ಟಿಯನ್ನು ತಪ್ಪಿಸುತ್ತಿದ್ದಾರೆ, ಅಕ್ರಮವಾಗಿ ಬೇರೆ ಕಡೆಗೆ ಸಾಗಿಸುತ್ತಿದ್ದಾರೆಂದು ಹೇಳಿದೆ, ಪೋಲೀಸರಿಗೂ ಈ ವಿಷಯ ತಿಳಿಸಿದೆ. ಅದಕ್ಕೆ ಪೋಲೀಸರು ಸಂಬಂಧಪಟ್ಟ ಇಲಾಖೆಯಿಂದ ನಮಗೆ ಕಂಪ್ಲೇಂಟ್ಸ್ ಬಂದರೆ ನಾವು ಅದನ್ನು ಸೀಜ್ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದರು. ಇಲಾಖೆ ಅಧಿಕಾರಿಯನ್ನು ಕೇಳಿದಾಗ ಆತ ಏನು ಹೇಳುತ್ತಾನೆಂದರೆ ನನಗೆ ವಾಹನ ಇಲ್ಲ, ಸಾಕಷ್ಟು ಸಿಬ್ಬಂದಿ ಇಲ್ಲ, ಜೊತೆಗೆ ನೀರಿನಲ್ಲಿ ಏನಿದೆ ಎಂದು ನೋಡುವುದಕ್ಕೆ ಸಾಧ್ಯವಿಲ್ಲ, ಹೀಗೆ ಯಾವುದಾದರೂ ಒಂದು ಕುಂಟು ನೆಪ ಹೇಳಿ ಜಾಣತನದಿಂದ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಇದನ್ನು ತಡೆಹಿಡಿಯಲೇಬೇಕು. ವಿನಾಕಾರಣ ಮೋಸ ಮಾಡಿದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಇದರಲ್ಲಿ ಸರ್ಕಾರ ನಡೆಸುವವರ ಪಾಲು ಏನೂ ಇಲ್ಲದಿದ್ದರೂ ಸಹ ಇಂತಹ ಭ್ರಷ್ಟ ಅಧಿಕಾರಿಗಳಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದನ್ನು ತಪ್ಪಿಸಿಕೊಳ್ಳುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು

ಮೈಸೂರು ಮಿನರಲ್ಸ್ ಎಂದು ಇದೆ. ಇದು ಸರ್ಕಾರಿ ಸಂಸ್ಥೆ. ಇದು ಅನೇಕ ಕಡೆ ಮೈನಿಂಗ್ ಮಾಡುತ್ತಿದ್ದೆ, ನಮ್ಮ ಜಿಲ್ಲೆಯಲ್ಲೂ ಕೂಡ ಮೈನಿಂಗ್ ಮಾಡುತ್ತಿದೆ. ಈ ಹಿಂದೆ ಈ ಸಂಸ್ಥೆ ಯಾವ ಭಾಗದಲ್ಲಿ ಮೈನಿಂಗ್ ಮಾಡುತ್ತಿತ್ತೋ ಆ ಭಾಗದ ಜನರ ಕ್ಷೇಮಾಭಿವೃದ್ಧಿ ಸಲುವಾಗಿ ಅಲ್ಲಿನ ಗ್ರಾಮೀಣಾಭಿವೃದ್ಧಿ ಸಲುವಾಗಿ ಒಂದು ನಿಧಿಯನ್ನು ಸ್ಥಾಪಿಸಿತ್ತು. ಆದರೆ ಇವತ್ತು ಅದು ಇಲ್ಲದಿರುವುದರಿಂದ ಹಿಂದುಳಿದ ಕ್ಷೇತ್ರಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಬೇಕಾದರೆ ಅದಕ್ಕೆ ಸಹಾಯ ಮಾಡಲಾಗದಂತಹ ಒಂದು ಪರಿಸ್ಥಿತಿ ಬಂದೊದಗಿದೆ. ಆದ್ದರಿಂದ ಮಾನ್ಯ ಸಚಿವರು ಆ ನಿಧಿಯನ್ನು ಪುನರ್ ಸ್ಥಾಪಿಸಬೇಕು. ಹಾಗೂ ಆ ಮೂಲಕ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಒಂದು ಸಹಾಯ ಆಗುವಂತೆ ನೋಡಿಕೊಳ್ಳಬೇಕೆಂದು ಕೇಳಿಕೊಂಡು, ಈ ಸಂದರ್ಭದಲ್ಲಿ ನನಗೆ ಎರಡು ಮಾತುಗಳನ್ನು ಹೇಳಲು ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀಮತಿ ಮೋಟಮ್ಮ (ಮೂಡಿಗೆರೆ).— ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ದಿನ ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರ ಕೆಲವು ಬೇಡಿಕೆಗಳನ್ನು ಮಾನ್ಯ ಸಚಿವರು ಏನು ಸಭೆಯ ಮುಂದಿಟ್ಟಿದ್ದಾರೆ, ಅವುಗಳನ್ನು ಸ್ವಾಗತ ಮಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸಲು ಇಷ್ಟಪಡುತ್ತೇನೆ. ಈ ವರ್ಷ ಹರಿಜನ ಗಿರಿಜನರ ಪಾಲಿಗೆ ದೈವಸ್ವರೂಪರಾಗಿದ್ದ ದಿವಂಗತ ಡಾ: ಅಂಬೇಡ್ಕರರ ಶತಮಾನೋತ್ಸವದ ಸಂದರ್ಭದಲ್ಲಿ ಈ ಇಲಾಖೆಯ ಮೂಲಕ ಹರಿಜನರಿಗೆ ಸಹಾಯವಾಗುತ್ತದೆ, ಸ್ವಲ್ಪವಾದರೂ ಅವರ ಏಳಿಗೆಯಾಗುತ್ತದೆ, ಇದುವರೆಗೂ ಏನು ಇವರಿಗೆ ಅನ್ಯಾಯವಾಗಿತ್ತು, ಅದಕ್ಕೆ ಸ್ವಲ್ಪವಾದರೂ ನ್ಯಾಯ ಸಿಗುತ್ತದೆಂಬ ಅಭಿಲಾಷೆ ಹಾಗೂ ಆಶಯವನ್ನು ಹೊತ್ತು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಹರಿಜನರ ಮತ್ತು ದಲಿತರ ಏಳಿಗೆ ಬಗ್ಗೆ ಹಿಂದಿನ ಸರ್ಕಾರಗಳು ಹಾಗೂ ಈಗಿನ ಸರ್ಕಾರ ಕೇವಲ ಮೊಸಳೆ ಕಣ್ಣೀರು ಸುರಿಸುವ ರೀತಿಯಲ್ಲಿ ಕೆಲವಾರು ಯೋಜನೆಗಳನ್ನು ಹಾಕಿ ಅಭಿವೃದ್ಧಿ ಮಾಡುತ್ತೇವೆಂದು ಹೊರಟ್ಟಿದ್ದರೆಂದು ಹೇಳಿದರೆ ತಪ್ಪಾಗಲಾರದು. ಇವತ್ತು ಏನು ಕೆಲವು ಕಾರ್ಯಕ್ರಮಗಳಿವೆ. ಅಂದರೆ ವಿಶೇಷ ಘಟಕ ಯೋಜನೆ, ಗಂಗಾ ಕಲ್ಯಾಣ ಯೋಜನೆ ಅಥವಾ ಗಿರಿಜನರಿಗೆ ೪೦ ತೆಂಗಿನ ಗಿಡ ಕೊಡುವುದಾಗಲೀ, ವ್ಯವಸಾಯ ಇಲಾಖೆಯಿಂದ ಭತ್ತದ ಬೀಜ ಕೊಡುವುದಾಗಲೀ, ಇದರಿಂದ ಹರಿಜನರ ಉದ್ಧಾರವಾಗುತ್ತದೇದು ಹೇಳಿದರೆ ತಪ್ಪಾಗುವುದು. ಏಕೆಂದರೆ ಇವೆಲ್ಲ ಬರೀ ಕಣ್ಒರೆಸುವ ಕಾರ್ಯಕ್ರಮ. ನಿಜವಾಗಿಯೂ ಹರಿಜನರ ಉದ್ಧಾರದ ಬಗ್ಗೆ ಗಮನವನ್ನು ಈ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕೊಡಬೇಕಾಗುತ್ತದೆ. ನನ್ನ ಸಲಹೆ ಏನೆಂದರೆ, ಅವರ ಮಕ್ಕಳು ಏನಿದ್ದಾರೆ ಅವರನ್ನು ಸರ್ಕಾರ ಅಡಾಪ್ಟ್ ಮಾಡಿಕೊಂಡು ಪ್ರತಿ ಮಗುವಿಗೂ ಕಂಪಲ್ಸರಿ ಎಜುಕೇಷನ್ ಕೊಡುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಇದರಿಂದ ಸಮಾಜದಲ್ಲಿ ಹೇಗೆ ಬದುಕಬೇಕು ಯಾವ ಯೋಜನೆ ಬಂದರೂ ಅದನ್ನು ಹೇಗೆ ಉಪಯೋಗಿಸಿಕೊಂಡು ಯಾವ ರೀತಿ ಮುಂದೆ ಬರಬಹುದು ಎಂದು ಯೋಚನೆ ಮಾಡುತ್ತಾರೆ. ಗಂಗಾಕಲ್ಯಾಣ ಯೋಜನೆ, ನೂರು ಬಾವಿ ಯೋಜನೆಗಳ ಬಗ್ಗೆ ಈ ಮುಗ್ಧ ಜನರಿಗೆ ಹೇಳಿ ಅವರನ್ನು ಮೋಸಗೊಳಿಸುವ ಬದಲು ಈ ಎಲ್ಲ ಹಣವನ್ನೂ ಕ್ರೋಢೀಕರಿಸಿ ಹರಿಜನ ಗಿರಿಜನರ, ಹಾಗೂ ದಲಿತರ ವಿದ್ಯಾಭ್ಯಾಸಕ್ಕೆ ಮುಡುಪಾಗಿಟ್ಟರೆ ಒಳ್ಳೆಯದೆಂದು ನನ್ನ ಸಲಹೆ. ಅಂತಹ ಕಾರ್ಯವನ್ನು ಈ ಸಲ ಹಮ್ಮಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ.

ಮುಖ್ಯವಾಗಿ ನಮ್ಮ ಮಕ್ಕಳ ಅಭಿವೃದ್ಧಿ ಸಾಧಿಸಬೇಕಾಗಿರುವುದು ಹಾಸ್ಟೆಲುಗಳಲ್ಲಿ. ಆದರೆ ಆ ಹಾಸ್ಟೆಲ್‌ಗಳ ದುಸ್ಥಿತಿ ನೋಡಿದರೆ ನಿಜವಾಗಿಯೂ ದುಃಖವಾಗುತ್ತದೆ. ಏಕೆಂದರೆ ಹಾಸ್ಟೆಲಿನ ವಾರ್ಡನ್ ಓದಿರುವುದು ಕೇವಲ ಎಸ್‌ಎಸ್‌ಎಲ್‌ಸಿ. ಈ ವಾರ್ಡನ್ ಬೆಳಿಗ್ಗೆ ಬರುತ್ತಾನೆ. ಊಟಕ್ಕೆ ಏನು ರೇಷನ್ ಬೇಕೋ ಕೊಡುತ್ತಾನೆ ಹೋಗುತ್ತಾನೆ ಮತ್ತೆ ಸಂಜೆ ಬಂದು ರೇಷನ್ ಕೊಟ್ಟು ಹೊರಟು ಹೋಗುತ್ತಾರೆ. ಅಲ್ಲಿರುವವರು ಅಡಿಗೆ ಮಾಡಿ ಹಾಕುತ್ತಾರೆ. ನಂತರ ಆ ಹುಡುಗರು ಸರಿಯಾಗಿ ಓದುತ್ತಾರೋ ಇಲ್ಲವೋ ಎಂಬುದನ್ನು ನೋಡುವವರಿಲ್ಲ.

ಅದೇ ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ನವರು ಅದರಲ್ಲೂ ಕ್ರಿಶ್ಚಿಯನ್ ಸಂಸ್ಥೆಯವರು ಹಾಸ್ಟೆಲುಗಳನ್ನು ನಡೆಸುತ್ತಾರೆ. ಅವರು ಮಕ್ಕಳು ಇಷ್ಟು ಗಂಟೆ ಸ್ಟಡೀಸ್ ಮಾಡಬೇಕು ಮತ್ತು ಟೆಸ್ಟ್ ಸಮಯದಲ್ಲಿ ಮಕ್ಕಳು ಸರಿಯಾಗಿ ಓದುತ್ತವೋ ಇಲ್ಲವೋ ಎಂದು ವಾಚ್ ಮಾಡಲಿಕ್ಕೆ ಒಬ್ಬ ಟ್ಯೂಟರನ್ನು ಇಡುತ್ತಾರೆ. ನಮ್ಮ ಹಾಸ್ಟೆಲ್‌ಗಳಲ್ಲಿ ಆ ವ್ಯವಸ್ಥೆ ಇಲ್ಲ. ಹೀಗಾಗಿ ಎಸ್‌ಎಸ್‌ಎಲ್‌ಸಿಯಲ್ಲಿ ಎಷ್ಟು ಪರ್ಸೆಂಟ್ ರಿಸಲ್ಟ್ ಬರುತ್ತದೆಂದು ನೋಡಿದರೆ ನಮಗೆ ನಾಚಿಕೆಯಾಗುತ್ತದೆ. ೧೦ಕ್ಕೆ ಒಬ್ಬ ೨೦ಕ್ಕೆ ೫ ಹುಡುಗರು ಪಾಸಾಗುತ್ತಾರೆ. ಯಾರೂ ಇದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಇಬ್ಬರು ಗ್ರಾಜ್ಯುಯೇಟ್ ವಾರ್ಡನ್‌ಗಳನ್ನು ನೇಮಿಸಬೇಕು. ಅವರಲ್ಲಿ ಒಬ್ಬರು ಹಾಸ್ಟೆಲ್ ಉಸ್ತುವಾರಿಯನ್ನೂ ಮತ್ತೊಬ್ಬರು ಹುಡುಗರ ವಿದ್ಯಾಭ್ಯಾಸದ ಉಸ್ತುವಾರಿಯನ್ನು ನೋಡಿಕೊಳ್ಳಬೇಕು. ಹೀಗೆ ಒಳ್ಳೆಯ ರೀತಿಯಲ್ಲಿ ವ್ಯಾಸಂಗಕ್ಕೆ ದಾರಿ ಮಾಡಿಕೊಡಬೇಕು ಹಾಗೂ ಒಳ್ಳೆಯ ವಾತಾ

ವರಣವನ್ನು ಕ್ರಿಯೇಟ್ ಮಾಡಬೇಕು. ಕೆಲವು ಕಡೆ ದೊಡ್ಡ ಹಾಸ್ಟೆಲ್‌ಗಳಲ್ಲಿ ಸೀನಿಯರ್ ವಾರ್ಡನ್, ಜೂನಿಯರ್ ವಾರ್ಡನ್ ಎಂದು ಇದ್ದು, ಅವರುಗಳು ಸಹ ಸರಿಯಾದ ಗಮನ ತೆಗೆದುಕೊಳ್ಳುವುದಿಲ್ಲ. ಇನ್ನು ಹಾಸ್ಟೆಲ್ ಮಕ್ಕಳಿಗೆ ಊಟ ಮತ್ತು ವಸತಿಗೆಂದು ಏನು ದುಡ್ಡು ಕೊಡುತ್ತಿದ್ದಾರೆ, ಅದನ್ನು ಜಾಸ್ತಿ ಮಾಡಿದ್ದಾರೆ. ಆದರೆ ಆ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವಂಥದ್ದು ಏನೂ ಇಲ್ಲ. ಒಬ್ಬ ಹುಡುಗನ ಹೇರ್ ಕಟ್ ಮಾಡಬೇಕಾದರೆ ೫ ರೂ. ಹೊರಗಡೆ ಕೊಡಬೇಕು. ಈ ಸಲ ಇವರು ಎರಡು ರೂಪಾಯಿ ಅಥವಾ ಮೂರು ರೂಪಾಯಿ ಮಾಡಿದ್ದಾರೋ ಗೊತ್ತಿಲ್ಲ. ಇದನ್ನು ತಿಳಿದುಕೊಳ್ಳಬೇಕಾಗಿದೆ. ಹಾಸ್ಟೆಲಿನಲ್ಲಿ ಮಕ್ಕಳಿಗೆ ಬಟ್ಟೆ ಹೊಲೆಸಿಕೊಡುತ್ತಾರೆ. ಅದನ್ನು ನೋಡಲು ಎರಡು ಕಣ್ಣೂ ಸಾಲದು. ೮ ವರ್ಷದ ಹುಡುಗಿಯ ರವಿಕೆಯನ್ನು ೧೦ ವರ್ಷದ ಹುಡುಗಿಗೆ ಕೊಟ್ಟರೆ ತೊಟ್ಟುಕೊಳ್ಳುವುದಕ್ಕೆ ಆಗುತ್ತದೆಯೋ ? ಬಾಯ್ಸ್ ಹಾಸ್ಟೆಲಿನಲ್ಲೂ ಇದೇ ಗತಿ. ಒಬ್ಬ ಹುಡುಗನ ಚಡ್ಡಿ ಇನ್ನೊಬ್ಬ ಹುಡುಗನಿಗೆ ಆಗುವುದಿಲ್ಲ. ಈ ಬಗ್ಗೆ ನನ್ನ ಸಲಹೆ ಏನೆಂದರೆ ಬಟ್ಟೆಯನ್ನು ಇವರು ಕೊಡಿಸಿ; ಹೊಲಿಸಿಕೊಳ್ಳುವ ಜವಾಬ್ದಾರಿಯನ್ನು ಅವರಿಗೇ ಬಿಡಬೇಕು. ಜೊತೆಗೆ ಯೂನಿಫಾರ್ಮ್ ಅಂದರೆ ನೀಲಿ ಕಲರ್, ಮೆರೂನ್ ಕಲರ್ ಶರ್ಟ್ ಎಂದು ಇರುತ್ತದೆ. ಇದರ ಬದಲಿಗೆ ಆಯಾ ಸ್ಕೂಲಿನ ಯೂನಿಫಾರ್ಮನ್ನೇ ಹೊಲಿಸಿಕೊಟ್ಟರೆ ಒಳ್ಳೆಯದಾಗುತ್ತದೆ. ಜೊತೆಗೆ ಇವರು ಪಠ್ಯಪುಸ್ತಕಗಳನ್ನು ಸರಿಯಾಗಿ ಒದಗಿಸುವುದಿಲ್ಲ. ವರ್ಷದ ಕೊನೆಯಲ್ಲಿ ಕೊಡುತ್ತಾರೆ. ಮೊದಲೇ ಕೊಡಬೇಕು. ಇದರ ಜೊತೆಗೆ ಹುಡುಗರು ಅಪ್ಪ ಅಮ್ಮಂದಿರಿಗೆ ಇಷ್ಟು ಎಕ್ಸರ್‌ಸೈಜ್ ಪುಸ್ತಕಗಳು ಬೇಕು ಎಂದು ಲಿಸ್ಟ್ ಕೊಟ್ಟುಬಿಡುತ್ತಾರೆ. ಆ ಬಡ ತಂದೆತಾಯಿಗಳು ಪಾಪ ಎಲ್ಲಿಗೆ ಹೋಗಬೇಕು ? ಇಲ್ಲಿಯವರೆಗೆ ನಾವು ಮಾಡುತ್ತಾ ಬಂದಿರುವುದು ಬರೀ ಕಣ್ಣೊರೆಸುವ ಕೆಲಸ ಅಷ್ಟೆ. ಒಂದು ಸೈನ್ಸ್ ಪುಸ್ತಕ ಇವತ್ತಿನವರೆಗೂ ಆ ಹುಡುಗರಿಗೆ ಕೊಟ್ಟಿಲ್ಲ ಎಂಬುದು ನಾನು ಹಾಸ್ಟೆಲ್‌ಗಳಿಗೆ ಭೇಟಿ ಕೊಟ್ಟಾಗ ತಿಳಿಯಿತು. ಹೀಗೆ ಓದಿದರೆ ಪಾಸ್ ಮಾಡಲಿಕ್ಕೆ ಆಗುತ್ತದೆಯೋ ?

ಈ ಸಲ ಹೊಸ ಹಾಸ್ಟೆಲ್‌ಗಳನ್ನು ಸ್ಥಾಪಿಸುವುದಿಲ್ಲ ಎಂದು ಸಚಿವರು ಹೇಳಿದ್ದಾರೆ, ಆದರೆ ಈ ಬಗ್ಗೆ ಬೇಕಾದಷ್ಟು ಅರ್ಜಿಗಳು ಬಂದಿವೆ. ಆದ್ದರಿಂದ ನನ್ನ ಕೋರಿಕೆ ಏನೆಂದರೆ ಹಾಲಿ ಇರುವ ಹಾಸ್ಟೆಲ್‌ಗಳಿಗೆ ೧೦–೧೫ ಹುಡುಗರನ್ನು ಹೆಚ್ಚಿಗೆ ತೆಗೆದುಕೊಂಡರೆ ಇರುವ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಇನ್ನು ಆರೋಗ್ಯದ ವಿಷಯದಲ್ಲಿ ಕೇಳುವುದೇ ಬೇಡ. ನಾವು ಯಾರಾದರೂ ಹಾಸ್ಟೆಲ್ ವಿಸಿಟ್ ಮಾಡಿ, ಈ ಬಗ್ಗೆ ಕೇಳಿದರೆ ಆರೋಗ್ಯದ ಬಾಬ್ತಿಗೆ ಕೊಡುತ್ತಿರುವ ದುಡ್ಡು ಸಾಲುವುದಿಲ್ಲವೆಂದು ಹೇಳುತ್ತಾರೆ. ಅವರಿಗೆ ಬೇರೆ ರೀತಿ ತಿನ್ನಲಿಕ್ಕೆ ಹಣ ಇರುತ್ತದೆ. ಆದರೆ ಸ್ನಾನಕ್ಕೆ ವ್ಯವಸ್ಥೆ ಇಲ್ಲ. ನಮ್ಮ ಹಳ್ಳಿಯ ಜನರು ಬಡವರಾದರೂ ಸಹ ತಮ್ಮ ಮಕ್ಕಳಿಗೆ ದಿನವೂ ಸ್ನಾನ ಮಾಡಿಸುತ್ತಾರೆ.

ಆದರೆ ಇವತ್ತು ಹಾಸ್ಟೆಲ್‌ನಲ್ಲಿರುವ ಮಕ್ಕಳಿಗೆ ಸ್ನಾನ ಮಾಡಿಸುವಂತಹ ವ್ಯವಸ್ಥೆ ಇಲ್ಲ. ಇವತ್ತು ಚಿಕ್ಕಮಗಳೂರು, ಶಿವಮೊಗ್ಗ ಮುಂತಾದೆಡೆಗಳಲ್ಲೆಲ್ಲಾ ಮಳೆಗಾಲ ಪ್ರಾರಂಭವಾಗಿರುವುದರಿಂದ ಸಣ್ಣ ಮಕ್ಕಳು ತಣ್ಣೀರಿನಲ್ಲಿ ಸ್ನಾನ ಮಾಡಲಿಕ್ಕೆ ಹೇಗೆ ಸಾಧ್ಯ ಆಗುತ್ತದೆ ? ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಸರಿಯಾದ ಕ್ರಮ ಕೈಗೊಳ್ಳುತ್ತೀರೆಂದು ನಂಬಿರುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿ ಕೆಲವು ಹಾಸ್ಟೆಲ್‌ಗಳ ವಿಷಯಗಳನ್ನು ಪ್ರಸ್ತಾಪ ಮಾಡಿ ಕೆಲವು ವಿಷಯಗಳನ್ನು ಅವರ ಗಮನಕ್ಕೆ ತಂದಿದ್ದೇವೆ. ದಿನನಿತ್ಯವೂ ಮಕ್ಕಳು ಸ್ನಾನ ಮಾಡುವಂತ ವ್ಯವಸ್ಥೆಯನ್ನು ಮಾಡಬೇಕು. ಅವರು ಸ್ನಾನ ಮಾಡದಿದ್ದರೆ ಕಜ್ಜಿ ಹತ್ತಿಕೊಂಡು ಒಂದು ರೀತಿಯ ಸಂಕಟಕ್ಕೆ ಈಡಾಗುವ ಪರಿಸ್ಥಿತಿ ಇದೆ. ಇದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಆದ್ದರಿಂದ ಈ ವ್ಯವಸ್ಥೆಯನ್ನು ಸರಿ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಕಾಲೇಜು ಹಾಸ್ಟೆಲ್‌ಗಳ ಬಗ್ಗೆ ಹೇಳುವುದಾದರೆ ನನ್ನ ಕ್ಷೇತ್ರದ ಒಂದು ಹಾಸ್ಟೆಲ್‌ನಲ್ಲಿ ಸುಮಾರು ಮೂವತ್ತು ವಿದ್ಯಾರ್ಥಿಗಳಿದ್ದಾರೆ. ಅಲ್ಲಿ ಸರಿಯಾದ ಕಟ್ಟಡ ಇಲ್ಲ. ಇರುವ ಕಟ್ಟಡ ಬಹಳ ಸಣ್ಣದು ಮತ್ತು ಚಿಕ್ಕದಾಗಿದೆ. ಒಂದು ಮನೆಯಲ್ಲಿ ಹಾಸ್ಟೆಲ್‌ನ್ನು ನಡೆಸುತ್ತಿದ್ದಾರೆ. ಜಾಗದ ತೊಂದರೆಯಿಂದಾಗಿ ಇನ್ನೊಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ನಡೆಸುತ್ತಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡಾ ತಂದಿದ್ದೆ. ಎರಡು ಮನೆಗಳಲ್ಲಿ ಹಾಸ್ಟೆಲ್‌ನ್ನು ನಡೆಸುತ್ತಿರುವುದರಿಂದ ಇಲ್ಲಿಯವರು ಅಲ್ಲಿಗೆ ಹೋಗಿ ಕೆಲಸ ಮಾಡಬೇಕಾಗುತ್ತದೆ ಮತ್ತು ಅಲ್ಲಿಯವರು ಇಲ್ಲಿಗೆ ಬಂದು ಕೆಲಸವನ್ನು ಮಾಡಲಿಕ್ಕೆ ಕಷ್ಟ ಇದೆ. ಅಲ್ಲಿ ಜಮೀನು ರೆಡಿ ಇದೆ. ಡಿ. ಸಿ. ಯವರು ಅದನ್ನು ಸ್ಯಾಂಕ್ಷನ್ ಮಾಡಿಕೊಟ್ಟಿದ್ದಾರೆ. ಅದಕ್ಕೆ ಹಣವನ್ನು ಜಾಸ್ತಿ ಮಂಜೂರಿ ಮಾಡಿ ಹಾಸ್ಟೆಲ್ ಕಟ್ಟಡ ಪ್ರಯತ್ನ ಮಾಡೋಣ ಎಂದು ಹೇಳಿದರೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡ ಹಾಗೆ ಕಾಣುತ್ತಿಲ್ಲ. ಅಲ್ಲಿ

ಸಾಕಷ್ಟು ಬೇಡಿಕೆ ಇರುವ ದೃಷ್ಟಿಯಿಂದ ಮೂಡಿಗೆರೆಯಲ್ಲಿ ಕಾಲೇಜು ಹಾಸ್ಟೆಲ್ ಅಗತ್ಯವಾಗಿ ಬೇಕಾಗುತ್ತದೆ. ಹೆಣ್ಣು ಮಕ್ಕಳ ಹಾಸ್ಟೆಲ್ ಒಂದನ್ನು ಚಿಕ್ಕಮಗಳೂರಿನಲ್ಲಿ ಮಹಡಿ ಮೇಲೆ ನಡೆಸುತ್ತಿದ್ದಾರೆ. ಸರಿಯಾಗಿ ನೀರು ಸಿಗುವುದಿಲ್ಲ. ಹೆಣ್ಣು ಮಕ್ಕಳು ನೀರನ್ನು ಹೊತ್ತುಕೊಂಡು ಮಹಡಿ ಹತ್ತಿ ಹೋಗಬೇಕಾಗುತ್ತದೆ. ಪರೀಕ್ಷೆಗಳು ನಡೆಯುವ ಸಮಯದಲ್ಲಿ ನಾನೇ ಹೋಗಿ ನೋಡಿದ್ದೇನೆ. ಅಲ್ಲಿ ಅಡಿಗೆಯನ್ನು ಮಾಡುವಾಗ ಸೌದೆಯಿಂದ ಹೊಗೆ ತುಂಬಿಕೊಂಡು ಉಸಿರು ಕಟ್ಟುತಕ್ಕಂಥ ಪರಿಸ್ಥಿತಿ ಅಲ್ಲಿ ಇದೆ ಈ ರೀತಿ ಆದರೆ ಯಾವ ರೀತಿಯಲ್ಲಿ ಅವರು ಓದಬೇಕು ? ಹಾಗೂ ಅವರಿಗೆ ಯಾವ ರೀತಿಯಲ್ಲಿ ವಿಧ್ಯಾಭ್ಯಾಸವನ್ನು ಕೊಟ್ಟ ಹಾಗೆ ಆಗುತ್ತದೆ ಎನ್ನುವುದನ್ನು ಕೂಡಾ ಯೋಚಿಸಬೇಕಾಗುತ್ತದೆ. ಇದಕ್ಕೆ ಏನಾದರೂ ಅರ್ಥವಿದೆಯೋ ಒಂದು ತಾವುಗಳೇ ಯೋಚನೆ ಮಾಡಬೇಕಾಗುತ್ತದೆ. ಹಾಸ್ಟೆಲ್ ಪರಿಸ್ಥಿತಿಯನ್ನು ಮಾನ್ಯ ಸಚಿವರು ಸುಧಾರಣೆ ಮಾಡುವ ಕಡೆ ಪ್ರಯತ್ನ ಮಾಡುತ್ತಾರೆಂದು ನಾನು ನಂಬಿದ್ದೇನೆ ಮಾನ್ಯ ಸಚಿವರು ಸಹಾ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಓದಿ ಮುಂದೆ ಬಂದಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ನಾನು ಕೂಡಾ ಹಾಸ್ಟೆಲ್‌ನಲ್ಲಿಯೇ ಇದ್ದು ವಿದ್ಯಾಭ್ಯಾಸವನ್ನು ಮಾಡಿ ಈ ಮಟ್ಟಕ್ಕೆ ಬಂದಿದ್ದೇನೆ. ಆ ಕೃತಜ್ಞತೆ ಮಾನ್ಯ ಮಂತ್ರಿಗಳಲ್ಲಿ ಇವೆ ಎಂದು ತಿಳಿದುಕೊಂಡಿದ್ದೇನೆ. ಇವತ್ತು ತಾವು ಒಂದು ಒಳ್ಳೆಯ ಖಾತೆಯನ್ನು ವಹಿಸಿಕೊಂಡಿದ್ದೀರಿ. ಒಂದು ಒಳ್ಳೆಯ ಕೆಲಸವನ್ನು ತಾವು ಮಾಡುತ್ತೀರೆಂದು ನಾನು ನಂಬಿರುತ್ತೇನೆ. ಇವತ್ತು ಪ್ರತಿಭಾವಂತ ಮಕ್ಕಳು ಇವೆ. ಅವರಿಗೆ ಪ್ರತ್ಯೇಕವಾದ ಹಾಸ್ಟೆಲನ್ನು ಮಾಡಿದರೆ ಒಳ್ಳೆಯದು. ರೆಸಿಡೆನ್ಸಿಯಲ್ ಹಾಸ್ಟೆಲ್‌ನು ಮಾಡಿದರೆ ಒಳ್ಳೆಯದು. ಇವತ್ತು 'ಸೈನಿಕ್ ಶಾಲೆ' ಎಂದು ಕೇಳಿದ್ದೇವೆ. ಇಡೀ ಜಿಲ್ಲಾ ಜಿಲ್ಲೆಗೆ ಕೊಡದಿದ್ದರೂ ಚಿಂತೆಯಿಲ್ಲ. ರಾಜ್ಯದಲ್ಲಿ ನಾರ್ತ್‌ಗೆ ಒಂದು, ಸೌತ್‌ಗೆ ಒಂದು ಈ ರೀತಿಯಲ್ಲಿ ಸೈನಿಕ್ ಶಾಲೆಗಳನ್ನು ತೆರೆದರೆ ಒಳ್ಳೆಯದೆಂದು ನನ್ನ ಸಲಹೆ. ಈ ರೀತಿ ಮಾಡಿದ್ದೇ ಆದರೆ ಪ್ರತಿಭಾವಂತ ಮಕ್ಕಳನ್ನು ತಯಾರು ಮಾಡಿದಂತಾಗುತ್ತದೆ. ಇವತ್ತು ಸೈನಿಕ ಶಾಲೆಗಳಲ್ಲಿ ರೈಡಿಂಗ್, ಕುದುರೆಯನ್ನು ರೈಡ್ ಮಾಡುವುದು, ಸ್ವಿಮಿಂಗ್ ಕ್ಲಾಸ್ ಈ ರೀತಿಯ ಕೋರ್ಸ್‌ಗಳೆಲ್ಲಾ ಇರುತ್ತವೆ ಈ ರೀತಿಯ ವಿಧ್ಯಾಭ್ಯಾಸವನ್ನು ನಮ್ಮ ಮಕ್ಕಳುಗಳಿಗೆ ಕೊಟ್ಟಿದ್ದೇ ಆದರೆ ಅವರಲ್ಲಿ ಪ್ರತಿಭೆಯನ್ನು ಬೆಳೆಸಿದಂತಾಗುತ್ತದೆ. ಆದ್ದರಿಂದ ಅದರ ಬಗ್ಗೆ ತಾವು ಯೋಚನೆ ಮಾಡಿದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಂದು ದೊಡ್ಡ ಸಾಧನೆಯನ್ನು ಮಾಡಿದ ಹಾಗೆ ಆಗುತ್ತದೆ ಎಂದು ನನ್ನ ಒಂದು ಅಭಿಲಾಷೆ. ರೆಸಿಡೆನ್ಸಿಯಲ್ ಶಾಲೆ ಎಂದು ಮಾಡಿ ನಾರ್ತ್ ಕರ್ನಾಟಕಕ್ಕೆ ಒಂದು, ಸೌತ್ ಕರ್ನಾಟಕಕ್ಕೆ ಒಂದು ಎಂದು ಮಾಡಿಕೊಟ್ಟರೆ ಪ್ರತಿಭಾವಂತ ಮಕ್ಕಳನ್ನು ಮುಂದೆ ತರುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಅನ್‌ಟಚಬಿಲಿಟಿಯನ್ನು ನಿವಾರಣೆ ಮಾಡುತ್ತೇವೆ ಎಂದು ಸರ್ಕಾರ ಹೇಳಿಕೊಂಡು ಬಂದಿದೆ. ಇದು ಒಂದು ಸಮಾಜ ಕಲ್ಯಾಣ ಇಲಾಖೆಯ ಒಂದು ಹೊಣೆಯೂ ಕೂಡಾ ಆಗಿದೆ. ನಾವು ಈಗಷ್ಟೇ ಎಲೆಕ್ಷನ್ ಆಗಿ ಬಂದಮೇಲೆ ಸುಮಾರು ಕಡೆ ದೌರ್ಜನ್ಯಗಳ ನಡೆದ ಬಗ್ಗೆ ಕೇಳಿದೆವು. ಚಿಕ್ಕಮಗಳೂರಿನಲ್ಲಿ ಬಸ್‌ಗೊಂಡ್ ಎಂಬಲ್ಲಿ ಮನೆ ಮನೆಗೆ ನುಗ್ಗಿ ಡಕಾಯಿತರು ಮಾಡುತ್ತಾರಲ್ಲಾ, ಆ ರೀತಿ ಗುಂಡನ್ನು ಹೊಡೆದುಕೊಂಡು ಹೋಗಿದ್ದಾರೆ. ಯಾವುದೋ ಒಂದು ಸಣ್ಣ ಗಲಾಟೆಗಾಗಿ ಹರಿಜನರ ಮೇಲೆ ಆ ರೀತಿ ಗುಂಡು ಹೊಡೆದುಕೊಂಡು ಹೋದರಲ್ಲಾ, ಅವರ ಮೇಲೆ ಏನು ಶಿಕ್ಷೆಯನ್ನು ವಿಧಿಸಿದಿರಿ ? ಅವರ ಮೇಲೆ ಏನು ಕ್ರಮವನ್ನು ತೆಗೆದು ಕೊಂಡಿದ್ದೀರಿ ? ಬಂಧಿತರಾದಮೇಲೆ ಕೊನೆಗೆ ಅವರನ್ನು ರಾಜೋಪಚಾರ ಮಾಡಿ ಬಿಡುಗಡೆ ಮಾಡಿದ್ದಾರೆ. ಬಂಧಿತರಾದವರಿಗೆ ಎಳನೀರನ್ನು ಕುಡಿಯಲಿಕ್ಕೆ ಕೊಟ್ಟು ರಾಜೋಪಚಾರದ ರೀತಿಯಲ್ಲಿ ಅವರನ್ನು ಬಿಡುಗಡೆ ಮಾಡಿದ್ದಾರೆ. ಈ ರೀತಿಯಾದರೆ ಇಂತಹ ದೌರ್ಜನ್ಯಗಳನ್ನು ತಿಳಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ತಾವು ಯೋಚನೆ ಮಾಡಬೇಕು. ಮಂಡ್ಯ ಜಿಲ್ಲೆಯ ಕಾಡು ಕೊತ್ತನಹಳ್ಳಿಯಲ್ಲೂ ಕೂಡಾ ಇಂತಹ ದೌರ್ಜನ್ಯ ನಡೆದಿದೆ. ಹಲವಾರು ಹರಿಜನರ ಮನೆಗಳಿಗೆ ನುಗ್ಗಿ ಬೆಂಕಿ ಹಚ್ಚಿ ಹೆಚ್ಚು ಮನೆಗಳನ್ನು ನಾಶ ಮಾಡಿದ್ದಾರೆ. ಇವರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇದನ್ನೆಲ್ಲಾ ನೋಡಿದರೆ ಬಹಳ ಆತಂಕವಾಗುತ್ತದೆ. ಹರಿಜನರಿಗೆ ದೌರ್ಜನ್ಯಕ್ಕೊಳಗಾದವರಿಗೆ. ತೊಂದರೆಗೊಳಗಾದವರಿಗೆ ಮನೆಯನ್ನು ಕಟ್ಟಿಸಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಬಸ್‌ಗೊಂಡ್‌ನಲ್ಲಿ ೪-೫ ಮನೆಗಳೆಲ್ಲಾ ಸುಟ್ಟುಹೋಯಿತು. ಗ್ರೂಪ್ ಹೌಸಿಂಗ್ ಸ್ಕೀಮ್. ಮೂಲಕ ಮನೆಯನ್ನು ಕಟ್ಟಿಸಿಕೊಡುವುದಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಆಗಿಲ್ಲ ಎಂದು ಹೇಳಿದರೆ ಇನ್ನು ಯಾವ ರೀತಿಯಾದ ಸಹಾಯವನ್ನು ನಾವು ಸಮಾಜ ಕಲ್ಯಾಣ ಇಲಾಖೆಯಿಂದ ಅಪೇಕ್ಷೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

ಇದು ಕೇವಲ ಬಾಯಿ ಮಾತು ಆಗುತ್ತದೆ. ನಿಜವಾಗಿ ಹರಿಜನರ ರಕ್ಷಣೆ ಆಗಬೇಕು. ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಇನ್ನು ಹರಿಜನ ಮಕ್ಕಳಿಗೆ ಅವರು ಎಸ್‌ಎಸ್‌ಎಲ್‌ಸಿಯಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ಬಂದರೆ ಪ್ರೋತ್ಸಾಹ ಧನ ಕೊಡಲಿಕ್ಕೋಸ್ಕರ ಅವರಿಗೆ ಗಿಫ್ಟ್ ಅಥವಾ ಪ್ರೋತ್ಸಾಹ ಧನ ಎಂದು ೫೦೦ ರೂಪಾಯಿಗಳನ್ನು ಕೊಡುತ್ತಾರೆ. ಅದನ್ನು ಒಂದು

ಸಾವಿರ ರೂಪಾಯಿಗಳಿಗೆ ಹೆಚ್ಚಿಸುವುದಾದರೆ ಆ ಮಕ್ಕಳು ಕಾಲೇಜು ಸೇರುವಾಗ ಬಟ್ಟೆಗೋ ಅಥವಾ ಪುಸ್ತಕವನ್ನು ಕೊಂಡುಕೊಳ್ಳುವುದಕ್ಕೆ ಸಹಾಯ ಆಗುತ್ತದೆ. ಅದೇ ರೀತಿ ಪಿಯುಸಿಯಲ್ಲಿ ಫಸ್ಟ್ ಕ್ಲಾಸ್ ಬಂದ ಮಕ್ಕಳಿಗೆ ಯಾವುದೇ ರೀತಿಯ ಸೌಲಭ್ಯ ಇಲ್ಲ. ಅವರಿಗೂ ಸಹ ಈ ರೀತಿ ಪ್ರೋತ್ಸಾಹ ಧನವನ್ನು ಸಮಾಜ ಕಲ್ಯಾಣ ಇಲಾಖೆಯವರು ಇಂಟ್ರೊಡ್ಯೂಸ್ ಮಾಡಬೇಕಾಗುತ್ತದೆ. ಮತ್ತೆ ಹೈಯರ್ ಕೋರ್ಸ್‌ನಲ್ಲಿ ಪಾಸ್ ಆದವರಿಗೆ ಅಂದರೆ ಡಿಗ್ರಿ, ಇಂಜಿನಿಯರಿಂಗ್, ಎಂ.ಬಿ ಬಿ.ಎಸ್.ನಲ್ಲಿ ಫಸ್ಟ್ ಕ್ಲಾಸ್ ಬಂದವರಿಗೆ ನೇರವಾಗಿ ಹುದ್ದೆ ಕೊಡುತ್ತೇವೆ ಎಂದು ಹಿಂದಿನ ಸರ್ಕಾರದವರು ಹೇಳಿಕೊಂಡು ಬರುತ್ತಿದ್ದರು, ನಾವೂ ಸಹ ಹೇಳುತ್ತಿದ್ದೇವೆ. ಅದಕ್ಕೋಸ್ಕರ ಒಂದು ಹೈ ಪವರ್ ಕಮಿಟಿ ಇದೆ. ಆದರೆ ಏನಾದರೂ ನ್ಯಾಯ ಒದಗಿಸಿದ್ದಾರೆಯೋ ಏನು ಯೋಚನೆ ಮಾಡಬೇಕಾಗುತ್ತದೆ. ಸುಮ್ಮನೆ ಸುಳ್ಳನ್ನು ಎಲ್ಲಿಯವರೆಗೆ ಹೇಳಲು ಸಾಧ್ಯ. ಸ್ವಲ್ಪವಾದರೂ ಸತ್ಯ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಈಗಲಾದರೂ ಈ ಇಲಾಖಾ ಮಂತ್ರಿಗಳು ಹೋರಾಟ ಮಾಡಿ ನೇರವಾದ ಆಯ್ಕೆಗೆ ಸಹಾಯ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಎಸ್‌ಸಿಪಿ ಪ್ರೋಗ್ರಾಮ್ ಬಗ್ಗೆ ಹಲವಾರು ಜನ ಮಾತನಾಡಿದ್ದಾರೆ. ಇದರಲ್ಲಿ ಎಷ್ಟು ರೀತಿಯ ಅನ್ಯಾಯ ಆಗುತ್ತಿದೆ ಎಂಬ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಎಸ್‌ಸಿಪಿ ಪ್ರೋಗ್ರಾಮ್‌ನಲ್ಲಿ "ಬಿ ಹೊಸಹಳ್ಳಿ" ಹರಿಜನ ಕೇರಿಗೆ ರಸ್ತೆ ಮಂಜೂರಾಯಿತು. ಆದರೆ ಹರಿಜನ ಕೇರಿಗೆ ರಸ್ತೆ ಮಾಡಿಲ್ಲ. ಅದು ಊರಿನ ಒಳಗಡೆ ರಸ್ತೆ ಆಗಿದೆ. ಹರಿಜನರ ಹೆಸರಿನಲ್ಲಿ ಈ ರೀತಿ ಹಗಲು ದರೋಡೆ ನಡೆದಿದೆ, ಹೀಗೆ ಆಗುವುದಕ್ಕೆ ಯಾರು ಕಾರಣ? ಅಲ್ಲಿ ಸೋಷಿಯಲ್ ವೆಲ್‌ಫೇರ್ ಆಫೀಸರ್ ಇರುತ್ತಾರೆ, ಸೋಷಿಯಲ್ ಜಸ್ಟೀಸ್ ಕಮಿಟಿಯವರೂ ಇರುತ್ತಾರೆ, ಜಿಲ್ಲಾ ಪರಿಷತ್ ಮೆಂಬರ್ ಇರುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ಯಾಕೆ ಕ್ರಮ ತೆಗೆದುಕೊಳ್ಳಬಾರದು. ಕ್ರಮ ತೆಗೆದುಕೊಂಡಿದ್ದೇ ಆದರೆ ಮುಂದೆ ಯಾವತ್ತೂ ಹರಿಜನ ಹೆಸರಿನಲ್ಲಿ ಹಗಲು ದರೋಡೆ ಆಗುವುದಿಲ್ಲ. ಎಂದು ನನ್ನ ಅಭಿಪ್ರಾಯ. ದಯಮಾಡಿ ಈ ರೀತಿ ಎಲ್ಲೆಲ್ಲಿ ಹರಿಜನರ ಹೆಸರಿನಲ್ಲಿ ಅನ್ಯಾಯ ಆಗಿದೆ, ದುರುಪಯೋಗ ಆಗಿದೆ ಅಲ್ಲಿ ತನಿಖೆ ಮಾಡಿಸಬೇಕು ಎಂದು ತಮ್ಮ ಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಗಿರಿಜನರ ಅಭಿವೃದ್ಧಿ ಯೋಜನೆ ನಮ್ಮಲ್ಲೂ ಇದೆ. ಆದರೆ ಅವರ ಹೆಸರಿನಲ್ಲಿ ಕೂಡ ಅನ್ಯಾಯಗಳು ಜಾಸ್ತಿಯಾಗುತ್ತಿವೆ, ಎರಡು ವರ್ಷದಿಂದ ಗಿರಿಜನರ ಅಧಿಕಾರಿಯನ್ನು ಪೋಸ್ಟ್ ಮಾಡಿಲ್ಲ. ಗಿರಿಜನ ಅಧಿಕಾರಿಯನ್ನು ಪೋಸ್ಟಿಂಗ್ ಮಾಡಿ ಎಂದು ನಾವು ಕೇಳಿಕೊಂಡಿದ್ದೇವೆ. ಅಲ್ಲಿ ಕಾರ್ಯಕ್ರಮಗಳು ಅನ್ಯಾಯ ಆಗುತ್ತಿದೆ, ದುರುಪಯೋಗ ಆಗುತ್ತಿದೆ, ಎಷ್ಟೋ ಜನ ಗಿರಿಜನರು ಕುದುರೆ ಮುಖದ ತಳದಡಿಯಲ್ಲಿದ್ದಾರೆ, ಅವರನ್ನು ಗುರುತಿಸಿ, ಅವರಿಗೆ ಅಗತ್ಯವಾದ ರಸ್ತೆಗಳು, ಸೇತುವೆಗಳನ್ನು ಮಾಡಿಕೊಟ್ಟಿಲ್ಲ. ಆದರೆ ಅವರ ಹೆಸರಿನಲ್ಲಿ ನಮ್ಮ ಊರಿಗೆ ಒಂದು ರಸ್ತೆ ಬರುತ್ತದೆ. ಗಿರಿಜನರ ಹೆಸರಿನಲ್ಲಿ ನಮಗೆ ಸೌಲಭ್ಯಗಳು ಸಿಗುತ್ತವೆ ಎಂದು ಹೇಳಿ ಈ ರೀತಿ ಮೋಸ ಮಾಡಿ ಗಿರಿಜನರ ಯೋಜನೆಗಳು ದುರುಪಯೋಗ ಆಗುತ್ತದೆ, ಕೂಡಲೇ ಗಿರಿಜನ ಅಧಿಕಾರಿ ಹುದ್ದೆ ಎಲ್ಲೆಲ್ಲಿ ಖಾಲಿ ಇದೆ. ಅದನ್ನು ಭರ್ತಿ ಮಾಡಿ ಈ ಅನ್ಯಾಯವನ್ನು ತಡೆಗಟ್ಟಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಮಕ್ಕಳ ಮತ್ತು ಮಹಿಳಾ ಕಲ್ಯಾಣ ಇಲಾಖೆಯ ಬಗ್ಗೆ ನಾಲ್ಕು ಮಾತುಗಳನ್ನಾಡಲು ಇಷ್ಟಪಡುತ್ತೇನೆ. ಇದರಲ್ಲಿ ಮುಖ್ಯವಾಗಿ ಬರುವುದು ಐ.ಸಿ.ಡಿ.ಎಸ್. ಪ್ರೋಗ್ರಾಮ್. ಈ ಪ್ರೋಗ್ರಾಮ್ ಇರುವುದು ಸಹ ನಮ್ಮ ದುರಂತ ಎಂದು ಹೇಳಬಹುದು. ಸಂಬಂಧಪಟ್ಟ ಅಸಿಸ್ಟೆಂಟ್ ಡೈರೆಕ್ಟರ್ ಅವರ ಪೋಸ್ಟಿಂಗ್ ಎರಡು ವರ್ಷದಿಂದ ಖಾಲಿ ಇದೆ, ಇದು ಚಿಕ್ಕಮಂಗಳೂರಿನ ದುರಂತ. ಅಲ್ಲಿ ಇನ್ನೂ ಭರ್ತಿ ಮಾಡಿಲ್ಲ. ಮೂಡಿಗೆರೆಯಲ್ಲಿ ಕಡೂರ್‌ನಲ್ಲಿ ಸಿ.ಡಿ ಪಿ.ಓ. ಪೋಸ್ಟ್‌ಗಳು ಖಾಲಿ ಇವೆ. ಅಲ್ಲಿನ ಸಿಡಿಪಿಓ ಅವರು ಬಿಡಿಓ ಆಗಿದ್ದರಿಂದ ಅವರನ್ನು ಚಿಂಚೋಳಿಗೆ ಹಾಕಿದ್ದಾರೆ. ಆದರೆ ಚಿಕ್ಕಮಂಗಳೂರು ಜಿಲ್ಲೆಯಲ್ಲಿಯೇ ಹುದ್ದೆಗಳು ಖಾಲಿ ಇದೆ. ಅವರೂ ಅಲ್ಲಿ ಕೆಲಸ ಮಾಡುತ್ತಿದ್ದ ಸಿಡಿಪಿಓ ಅನ್ನು ಚಿಂಚೋಳಿಗೆ ಹಾಕಿದ್ದಾರೆ. ಈ ತರಹ ಆದರೆ ಐ.ಸಿ.ಡಿ.ಎಸ್. ಪ್ರೋಗ್ರಾಮ್ ಸರಿಯಾಗಿ ಕಾರ್ಯಗತ ಆಗುತ್ತದೆಯೋ ಎಂಬುದನ್ನು ನಾವು ಯೋಚನೆ ಮಾಡಬೇಕು. ಇವೊತ್ತು ಅಂಗನವಾಡಿಯಲ್ಲಿ ಸ್ಕೀಮ್ ಏನು ಇದೆ, ಅದನ್ನು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳಿಸದಿದ್ದರೆ ನಿಜವಾಗಿ ಮಕ್ಕಳಿಗೆ ಅನ್ಯಾಯ ಆಗುವ ಸಾಧ್ಯತೆ ಇದೆ. ಡ್ವಾಕ್ರಾ ಯೋಜನೆ ಎಂದು ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯಲ್ಲಿದೆ. ನಿಜವಾಗಿ ಅದು ಉತ್ತಮವಾದ ಯೋಜನೆ. ನಮ್ಮಲ್ಲಿ ಉತ್ತಮವಾಗಿ ಕೆಲಸ ಆಗುತ್ತಿದೆ. ಎನರ್ಜಿ ಫುಡ್ ಒಂದು ಕಡೆ ತಯಾರು ಮಾಡುತ್ತಿದ್ದಾರೆ. ಟ್ಯಾನರಿ ಮೇಕಿಂಗ್ ಯುನಿಟ್, ಸೋಪ್ ನಟ್ ಮೇಕಿಂಗ್ ಯುನಿಟ್ ಹೀಗೆ ನಾನಾ ಯುನಿಟ್‌ಗಳು ಈ ಯೋಜನೆಯಡಿಯಲ್ಲಿವೆ. ಇದನ್ನು ವ್ಯವಸ್ಥಿತವಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕಾಗುತ್ತದೆ. ಈ ಹುದ್ದೆ ಸಹ ಖಾಲಿ ಇತ್ತು. ಈಗಷ್ಟೇ ಇದನ್ನು ಜಿಲ್ಲಾ ಪರಿಷತ್‌ನಿಂದ ಭರ್ತಿ ಮಾಡಲಾಗಿದೆ. ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗ

ಬೇಕು. ಏಕೆಂದರೆ ಇದು ಬಡ ಹೆಣ್ಣು ಮಕ್ಕಳಿಗೆ ನಿಜವಾಗಿ ಆರ್ಥಿಕ ಸ್ವಾವಲಂಬನೆ ಹೊಂದುವುದಕ್ಕೆ ಸಹಾಯ ಆಗುತ್ತದೆ, ಆದ್ದರಿಂದ ಇದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಹಲವಾರು ಯೋಜನೆಗಳಿವೆ. ಅನಾಥಾಶ್ರಮದ ಯೋಜನೆ ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಕಾರ್ಯಗತವಾಗಿದೆ. ಮಾನ್ಯ ಅಧ್ಯಕ್ಷರ ಕ್ಷೇತ್ರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಎಲ್ಲ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. ಆದರೆ ಚಿಕ್ಕಮಗಳೂರು, ಹಾಸನ ಮುಂತಾದ ಕೆಲವು ಜಿಲ್ಲೆಗಳಲ್ಲಿ ಬಿಟ್ಟು ಹೋಗಿದೆ. ಕಾರಣವಿಷ್ಟೆ, ಅಲ್ಲಿ ಮಹಿಳಾ ಸಂಸ್ಥೆಗಳಿವೆ. ಈ ಯೋಜನೆಗಳನ್ನು ತೆಗೆದುಕೊಳ್ಳಲಿಕ್ಕೆ ಅವರಿಗೆ ಕಷ್ಟವಾಗುತ್ತದೆ. ಏಕೆಂದರೆ ಅವು ಆರ್ಥಿಕವಾಗಿ ಬಲಯುತವಾಗಿರುವುದಿಲ್ಲ. ಅವರು ಮ್ಯಾಚಿಂಗ್ ಗ್ರ್ಯಾಂಟ್ ಕಟ್ಟಬೇಕಾಗುತ್ತದೆ. ಮ್ಯಾಚಿಂಗ್ ಗ್ರಾಂಟನ್ನು ಏನಾದರೂ ಸಡಿಲಗೊಳಿಸಿದ್ದೇ ಆದರೆ ಮಹಿಳಾ ಸಂಸ್ಥೆಗಳು ಈ ಎಲ್ಲ ಯೋಜನೆಗಳನ್ನು ತೆಗೆದುಕೊಂಡು ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಅದನ್ನೂ ಸಹ ಪರಿಶೀಲನೆ ಮಾಡಬೇಕು ಎಂದು ನಾನು ಹೇಳುತ್ತೇನೆ, ಆಮೇಲೆ ಮಹಿಳಾ ಅಭಿವೃದ್ಧಿ ಕಾರ್ಪೊರೇಷನ್ ಅಥವಾ ಉಮೆನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎನ್ನುವುದನ್ನು ಶ್ರೀಮತಿ ಮಾರ್ಗರೇಟ್ ಆಳ್ವರವರು ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗ ಸ್ಕೀಂ ತಯಾರು ಮಾಡಿದ್ದರು. ಆ ಸ್ಕೀಮನ್ನು ಜಾರಿಗೆ ತಂದಿದ್ದೆ ಆದರೆ ನಮ್ಮ ಹೆಣ್ಣುಮಕ್ಕಳು ಈ ಕಾರ್ಪೊರೇಷನ್‌ನಿಂದ ಸಾಲಸೌಲಭ್ಯ ಹಾಗೂ ಆರ್ಥಿಕ ಸೌಲಭ್ಯವನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತದೆ. ಈ ಒಂದು ದೃಷ್ಟಿಯಿಂದ ಉತ್ತಮವಾದ ರೀತಿಯಿಂದ ಮನಸ್ಸು ಮಾಡಿ ಅವರು ಈ ಒಂದು ಯೋಜನೆಯನ್ನು ತಯಾರಿಸಿದ್ದರು. ಇದಕ್ಕಾಗಿ ಕೇಂದ್ರದಿಂದಲೂ ೧೯ ಲಕ್ಷ ಮಂಜೂರಾಗಿದೆಯೆಂದು ಕೇಳಿದೆ, ರಾಜ್ಯದಿಂದಲೂ ೨೦ ಲಕ್ಷ ಮಂಜೂರು ಆಗಿದೆಯೆಂದು ಕೇಳಿದೆ. ಆದರೆ ಈ ಡೆವಲಪ್‌ಮೆಂಟ್ ಕಾರ್ಪೊರೇಷನ್ ಏಕೆ ಕೆಲಸ ಮಾಡುತ್ತಾ ಇಲ್ಲ. ಚೇರ್ಮನ್ ಆಯ್ಕೆ ಏಕೆ ಮಾಡಿಲ್ಲ, ಸಂಬಂಧಪಟ್ಟ ಮೆಂಬರ್ಸನ್ನು ಏಕೆ ನಾಮಿನೇಷನ್ ಮಾಡಿಲ್ಲ ಎನ್ನುವುದು ನನ್ನ ಪ್ರಶ್ನೆ. ಏಕೆಂದರೆ ಮಾನ್ಯ ಸಚಿವರಿಗೆ ಹೆಣ್ಣುಮಕ್ಕಳು ತಮ್ಮ ಅಭಿವೃದ್ಧಿಯನ್ನು ಅಡಿಗೆ ರೂಮಿನಲ್ಲಿ ಕಂಡುಕೊಳ್ಳಲಿ ಎಂದು ಮನಸ್ಸು ಇದೆಯೋ ಅಥವಾ ನಿಜವಾಗಲೂ ಅವರ ಅಭಿವೃದ್ಧಿ ಈ ರೀತಿ ಆಗಬೇಕು ಎಂದು ಮನಸ್ಸು ಇದೆಯೋ ಎಂದು ನನ್ನ ಪ್ರಶ್ನೆ. ದಯಮಾಡಿ ಉಮೆನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಏನಿದೆ ಅದನ್ನು ಕಾರ್ಯಗತಗೊಳಿಸಲಿಕ್ಕೆ......

ಶ್ರೀ ಬಿ. ಶಿವಣ್ಣ.—ಅಡಿಗೆ ಮನೆಯಲ್ಲೇ ಹೆಣ್ಣುಮಕ್ಕಳು ಇರಬೇಕು, ಮುಂದೆ ಬರಬಾರದು ಎಂಬ ಮನಸ್ಸು ಮಂತ್ರಿಗಳಿಗೆ ಇರಬಹುದು ಎಂದು ಹೇಳಿದರು. ಅವರಿಗೆ ನಮ್ಮ ಮೇಲೆ ವಿಶ್ವಾಸವಿಲ್ಲ ಎಂದು ಕಾಣಿಸುತ್ತದೆ.

ಉಪಾಧ್ಯಕ್ಷರು.—ಬೇಗ ಮಾಡುತ್ತೇವೆ ಎಂದು ಸಮಾಧಾನ ಹೇಳಿಬಿಡಿ. ಅವರಿಗೆ ಸಮಾಧಾನ ಆಗುತ್ತದೆ.

ಶ್ರೀಮತಿ ಮೋಟಮ್ಮ.—ಮಾನ್ಯ ಉಪಾಧ್ಯಕ್ಷರೆ, ನನಗೆ ಒಂದು ಅನುಮಾನ. ಏಕೆಂದರೆ ಅವರು ಬ್ರಹ್ಮಚಾರಿಗಳು, ಹೆಣ್ಣುಮಕ್ಕಳ ಬಗ್ಗೆ ಅವರಿಗೆ ಅಷ್ಟು ಕಾಳಜಿ ಇದೆಯೋ ಇಲ್ಲವೋ ಅಥವಾ ಹೆಣ್ಣುಮಕ್ಕಳು ಸಮಾಜದಲ್ಲಿ ಆರ್ಥಿಕವಾಗಿ ಮುಂದುವರಿಯಬೇಕು ಎನ್ನುವ ಆಸೆ ಅವರಿಗೆ ಇದೆಯೋ ಇಲ್ಲವೋ ಎಂದು ಅನುಮಾನ. ಹಾಗೆ ಇಲ್ಲದೇ ಹೋದರೆ ನೀವು ಈ ಹೆಣ್ಣು ಮಕ್ಕಳ ಇಲಾಖೆಯನ್ನು ಹೊತ್ತಿದ್ದೀರಿ, ಆದ್ದರಿಂದ ಹೆಚ್ಚಿನ ಕೆಲಸವನ್ನು ಹೆಣ್ಣುಮಕ್ಕಳಿಗೋಸ್ಕರ ಮಾಡಬೇಕು ಎಂದು ನಿಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮತ್ತೆ ನಾನು ಆಗಲೇ ಹೇಳಿದಹಾಗೆ, ಈ ವರ್ಷ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ೧೦೦ನೇ ವರ್ಷವಾಗಿರುವ ದೆಸೆಯಿಂದ ರಿಸರ್ವೇಷನ್ ಪ್ರಕಾರ ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲೂ ಫಿಲಪ್ ಮಾಡಬೇಕಾಗಿದೆ. ರೋಸ್ಟರ್ ಸಿಸ್ಟಮನ್ನು ಅನುಸರಣೆ ಮಾಡಿದ್ದಾರೋ ಅಥವಾ ಇಲ್ಲವೋ ಎನ್ನುವುದನ್ನು ಕಡ್ಡಾಯವಾಗಿ ತನಿಖೆ ಮಾಡಿಸಿ ಯಾವ ಇಲಾಖೆಯಲ್ಲಿ ಭರ್ತಿಯಾಗಿಲ್ಲ ಅಲ್ಲಿ ಅದನ್ನು ಭರ್ತಿ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಸಂಬಂಧಪಟ್ಟ ಇಲಾಖೆಯವರೊಡನೆ ತಾವು ಚರ್ಚೆಮಾಡಿ ನಮ್ಮ ಹರಿಜನ-ಗಿರಿಜನರಿಗೆ ದಲಿತರಿಗೆ ಎಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕು ಎಂದು ಕೇಳಿಕೊಂಡು, ಇಷ್ಟು ಹೇಳಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಸನ್ಮಾನ್ಯ ಉಪಾಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಎರಡು ಸಲಹೆಗಳನ್ನು ಕೊಡಲಿಕ್ಕೆ ಇಚ್ಛಿಸುತ್ತೇನೆ. ಈಗ ಸಾಮಾಜಿಕವಾಗಿ ತುಳಿತಕ್ಕೆ ಒಳಗಾಗಿರುವವರ ಪರವಾಗಿ ಸನ್ಮಾನ್ಯ ಸಿಂಧ್ಯರವರು, ಸನ್ಮಾನ್ಯ ಶಿವಮೂರ್ತಿಯವರು, ಮೋಟಮ್ಮನವರು, ಅವರದೇ ಆದ ಶೈಲಿಯಲ್ಲಿ ಸಮಾಜ

ಕಲ್ಯಾಣ ಇಲಾಖೆಯಲ್ಲಿ ಏನೇನು ವ್ಯತ್ಯಾಸಗಳು ನಡೆಯುತ್ತಿವೆ, ಏನೇನು ಏರುಪೇರುಗಳು ನಡೆಯುತ್ತಿವೆ ಎನ್ನುವುದನ್ನು ಸದನದ ಮುಂದೆ ಇಟ್ಟಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ನಿಮ್ಮದೂ ಹೊಸ ಶೈಲಿ ಬರಲಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನನ್ನದು ಈ ಇಲಾಖೆ ಬಗ್ಗೆ ಹಳೇ ಶೈಲಿನೇ, ಕಲ್ಲೊಂದು ಬಿಟ್ಟರೆ ಇನ್ನಾವುದೂ ಶೈಲಿ ಇಲ್ಲ ಇಲ್ಲಿ. ಈ ಸಂದರ್ಭದಲ್ಲಿ ನಾನಾದರೂ ಕೇಳುವುದಿಷ್ಟೆ, ತುಳಿತಕ್ಕೆ ಒಳಗಾಗಿರುವವರನ್ನು ಎತ್ತಬೇಕು ಎನ್ನತಕ್ಕ ವಿಚಾರದಲ್ಲಿ ಸರ್ಕಾರ ಬಹಳ ಕಾಳಜಿ ವಹಿಸಬೇಕೆಂದು ೧೯೮೦ನೇ ಇಸವಿಯಿಂದೀಚೆಗೆ ಬಹಳಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದನ್ನು ನಾವು ನೋಡಿದ್ದೇವೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಯಾವುದೇ ಸರ್ಕಾರವಾಗಲಿ ಪ್ರಜಾತಂತ್ರದ ವ್ಯವಸ್ಥೆ ಇರುವವರೆಗೆ ಇವರ ತುಳಿತ ತಪ್ಪುವುದಿಲ್ಲವೇನೊ ಎನ್ನತಕ್ಕಂಥ ಅನಿಸಿಕೆ ಕಳೆದ ಹತ್ತಾರು ವರ್ಷಗಳಿಂದ ನಡೆದುಬಂದಂಥ ಹಾದಿಯನ್ನು ನೋಡಿದರೆ ನಮಗೆ ಅರ್ಥವಾಗುತ್ತದೆ. ಈ ಇಲಾಖೆಗೆ ಇಟ್ಟಿರತಕ್ಕಂಥ ಹಣವೇನೂ ಕಡಿಮೆಯಿಲ್ಲ, ಸಾಕಷ್ಟು ಹಣ ಇಟ್ಟಿದ್ದಾರೆ. ಇವತ್ತು ಯಾವುದೇ ಒಂದು ಇಲಾಖೆಗೆ ಹೋಗಲಿ ೧೮ ರಿಂದ ೨೦ ಪರ್ಸೆಂಟ್ ಹಣವನ್ನು ತುಳಿತಕ್ಕೆ ಒಳಗಾಗಿರತಕ್ಕಂಥ ಹರಿಜನ–ಗಿರಿಜನರಿಗೆ ಮೀಸಲಾಗಿ ಇಟ್ಟಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಆದರೆ ಇದು ಎಷ್ಟರಮಟ್ಟಿಗೆ ಫಲಶ್ರುತಿ ಆಗುತ್ತಿದೆ ಎನ್ನುವುದರ ಬಗ್ಗೆ ನಾವು ಸ್ವಲ್ಪ ಬೆಳಕನ್ನು ಚೆಲ್ಲಬೇಕಾಗಿದೆ.

೪–೦೦ ಪಿ. ಎಂ.

ಈಗ ತುಳಿತಕ್ಕೆ ಒಳಗಾಗಿರುವವರ ಬಗ್ಗೆ ಮಾನ್ಯ ವಿರೋಧಪಕ್ಷದ ಉಪನಾಯಕರು ಹೇಳಿದರು. ಕಾಡುಗೊತ್ತನಹಳ್ಳಿಯಲ್ಲಿ ಹರಿಜನರ ಮೇಲೆ ದಾಂಧಲೆ ನಡೆಯಿತು ಎಂದು. ನಾನು ಈ ಸಂದರ್ಭದಲ್ಲಿ ಅವರನ್ನು ಕೇಳುತ್ತೇನೆ, ೩–೪ ವರ್ಷಗಳ ಹಿಂದೆ ಬೆಂಡಿಗೇರಿ ಮತ್ತು ತುತ್ತೂರು ಪ್ರಕರಣಗಳಲ್ಲಿ ಹರಿಜನರ ಮೇಲೆ ನಡೆದ ದೌರ್ಜನ್ಯಗಳನ್ನು ನಾವು ನೋಡಿದ್ದೇವೆ. ಇದರ ಬಗ್ಗೆ ರಾಜ್ಯದ ದಲಿತ ಸಂಘರ್ಷ ಸಮಿತಿಯವರು ಇಂಥ ಪ್ರಸಂಗ ನಡೆಯಬಾರದಿತ್ತು, ಆದರೂ ನಡೆದಿದೆ. ಇದರ ಬಗ್ಗೆ ಸರ್ಕಾರ ಸಿ.ಓ.ಡಿ. ತನಿಖೆ ಮಾಡಬೇಕೆಂದು ಒಕ್ಕೊರಲಿನಿಂದ ಆಗ್ರಹಪಡಿಸಿದ ಮೇಲೆ, ಅಂದಿನ ಸರ್ಕಾರದವರು, ಆ ಪ್ರಕರಣಗಳನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಿದರು. ಮಾನ್ಯ ಸಮಾಜ ಕಲ್ಯಾಣ ಮಂತ್ರಿಯವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು. ಈ ಬಗ್ಗೆ ಸಿ.ಓ.ಡಿ. ವರದಿ ಸರ್ಕಾರಕ್ಕೆ ಬಂದಿದೆಯೇ ? ಬಂದಿದ್ದರೆ ಅದನ್ನು ಸದನದ ಮುಂದೆ ಇಡಬೇಕೆಂದು ಹೇಳುತ್ತೇನೆ. ಈಗ ನಗರಸಭೆ, ಪುರಸಭೆ, ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯ್ತಿಗಳಲ್ಲಿ ೧೮ ರಿಂದ ೨೦ ಪರ್ಸೆಂಟ್ ಹಣವನ್ನು ಈ ಒಂದು ವರ್ಗದವರ ಕಲ್ಯಾಣಕ್ಕಾಗಿ ಇಟ್ಟಿರುತ್ತಾರೆ. ಮಾನ್ಯ ಸಿಂಧ್ಯರವರು ಈ ಬಗ್ಗೆ ತಮ್ಮ ಅನುಭವದ ಮಾತಿನಲ್ಲಿ ಹೇಳಿದರು. ಅವರು ಹೇಳಿದಂತೆ ಮಾರ್ಚಿ ಕೊನೇವಾರದಲ್ಲಿ ಈ ಹಣ ಖರ್ಚಾಗುತ್ತದೆ. ನಾನು ಸಹ ಅವರ ಮಾತಿಗೆ ಬೆಂಬಲ ಕೊಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡತಕ್ಕವರು ಯಾರು ಕೂಡ ಸರಿಯಾಗಿ ಕೆಲಸ ಮಾಡುವುದಿಲ್ಲ. ಆ ಒಂದು ವರ್ಗದವರಿಗೆ ಇಟ್ಟಿರುವ ಹಣವನ್ನು ಕೂಡ ವರ್ಷವಿಡೀ ಖರ್ಚು ಮಾಡುವುದಿಲ್ಲ. ಏಕೆಂದರೆ ಇಲ್ಲಿ ನಮಗೆ ಕೊಟ್ಟಿರುವ ಅಂಕಿಸಂಖ್ಯೆಗಳನ್ನು ನೋಡಿದರೆ ಗೊತ್ತಾಗುತ್ತದೆ, ಇಲ್ಲಿ ಅವರು ಕೊಟ್ಟಿರುವುದು ರಾಮನ ಲೆಕ್ಕ ಕೃಷ್ಣನ ಲೆಕ್ಕವೇ ಹೊರತು ನಿಜವಾದಂಥ ಲೆಕ್ಕವಲ್ಲ. ಇದರ ಬಗ್ಗೆ ತಾವು ಸರಿಯಾದ ಬೆಳಕು ಚೆಲ್ಲಬೇಕೆಂದು ಹೇಳುತ್ತೇನೆ. ಈ ಇಲಾಖೆಯನ್ನು ವಹಿಸಿಕೊಂಡವರು ಯಾರೇ ಆಗಲಿ, ಅವರು ಇಲ್ಲಿ ನಡೆಯುತಕ್ಕ ಅನ್ಯಾಯ ಮತ್ತು ಭ್ರಷ್ಟಾಚಾರದ ಬಗ್ಗೆ ಹೆಚ್ಚು ಗಮನಹರಿಸಬೇಕೆಂದು ಹೇಳುತ್ತೇನೆ.

ಭೂ ಸೇನಾ ನಿಗಮದ ಮೂಲಕ ಅನೇಕ ಕಡೆ ಸಮಾಜಕಲ್ಯಾಣ ಇಲಾಖೆಯವರು ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಕಟ್ಟಿರತಕ್ಕ ಕಟ್ಟಡಗಳ ಉದ್ಘಾಟನೆ ಕೂಡ ಆಗಿಲ್ಲ, ಇದರ ಮಾಹಿತಿ ತಮ್ಮ ಹತ್ತಿರ ಇದೆಯೇ ? ಒಂದು ಕಡೆ ಕಟ್ಟಡ ಇಲ್ಲ ಎಂದು ಹೇಳುತ್ತೀರಿ, ಹಣ ಇಲ್ಲವೆಂದು ಹೇಳುತ್ತೀರಿ. ಆದರೆ ಕಟ್ಟಡಗಳನ್ನು ಕಟ್ಟಿ ಒಂದೂವರೆ ವರ್ಷವಾದರೂ ಭೂ ಸೇನಾ ನಿಗಮದವರು ಬೀಗದ ಕೀ ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಎಷ್ಟೋ ಕಟ್ಟಡಗಳ ದುರಸ್ತಿ ಇಲ್ಲದೆ, ಶಿಥಿಲವಾಗಿ ಬಿದ್ದು ಹೋಗತಕ್ಕ ಸ್ಥಿತಿಗೆ ಬಂದಿವೆ. ಹೊಸದಾಗಿ ರಿಪೇರಿ ಮಾಡಲಿಕ್ಕೆ, ಮೆಂಟೇನೆನ್ಸ್ ಮಾಡಲಿಕ್ಕೆ ದುಡ್ಡು ಇಲ್ಲ ಎಂದು ಹೇಳುತ್ತಿದ್ದಾರೆ. ಈಗಲಾದರೂ ಈ ಕಟ್ಟಡಗಳ ದುರಸ್ತಿಗಾಗಿ ಪ್ರತ್ಯೇಕವಾಗಿ ಹಣ ಇಡಬೇಕೆಂದು ವಿನಂತಿಸುತ್ತೇನೆ. ಆಶ್ರಮಶಾಲೆಗಳು ಮತ್ತು ವಸತಿಸೌಕರ್ಯಗಳು ತಾಲ್ಲೂಕು ಮಟ್ಟದಲ್ಲಿ ಇವೆ. ಇದರ ಆಯ್ಕೆ ಮಾಡುವ ಆಯ್ಕೆ ಸಮಿತಿಯಲ್ಲಿ ಬಹಳ ವ್ಯತ್ಯಾಸ

ನಡೆಯುತ್ತಿದೆ. ಆದ್ದರಿಂದ ಈ ಒಂದು ಆಯ್ಕೆ ಸಮಿತಿಯಲ್ಲಿ ತುಳಿತಕ್ಕೆ ಒಳಗಾದವರಿಗೆ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕವರಿಗೆ ಒತ್ತು ಕೊಡಬೇಕೆಂದು ವಿನಂತಿಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಆಶ್ರಮಶಾಲೆಗಳನ್ನು ಹೆಚ್ಚು ಹೆಚ್ಚು ತೆಗೆಯಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಿಂದ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಹೆಚ್ಚು ಒತ್ತು ಕೊಡುತ್ತೇವೆಂದು ಹೇಳಿದ್ದೀರಿ. ಸಮಾಜ ಕಲ್ಯಾಣ ಇಲಾಖೆಯವರು ತರಬೇತಿ ನೀಡಿದ ಮೇಲೆ ಹೊಲಿಗೆ ಯಂತ್ರ ಕೊಡುತ್ತಾರೆ. ಈ ಒಂದು ತರಬೇತಿಗೆ ಸೆಲೆಕ್ಟ್ ಮಾಡತಕ್ಕ ಜನ ಯಾರಿದ್ದಾರೆ, ಅವರು ತರಬೇತಿನಂತರ ಪಡೆದ ಯಂತ್ರಗಳನ್ನು ಮತ್ತೆ ಅದೇ ಕಂಪನಿಗೆ ವಾಪಸ್ಸು ಕೊಡುವಂಥ ವ್ಯವಸ್ಥೆ ಕೂಡ ನಡೆಯುತ್ತಿದೆ. ಅದನ್ನು ಪಡೆದು ಅನುಕೂಲ ಮಾಡಿಕೊಂಡು ಜೀವನ ಮಾಡತಕ್ಕವರು ಯಾರು ಇಲ್ಲ. ವಿಶೇಷ ಘಟಕ ಯೋಜನೆಯಲ್ಲಿ ಎತ್ತುಗಾಡಿ ತೆಗೆದುಕೊಂಡಂತೆ ಇಲ್ಲಿ ಕೂಡ ನಡೆಯುತ್ತಿವೆ. ಈ ಯೋಜನೆಯಲ್ಲಿ ತೆಗೆದುಕೊಂಡು ಹೋದಂಥ ಎತ್ತುಗಾಡಿ ಮತ್ತು ಹಸುಗಳು ಯಾವರೀತಿ ಊರೆಲ್ಲಾ ಸುತ್ತುತ್ತವೋ ಅದೇರೀತಿ ಈ ಇಲಾಖೆಯಿಂದ ತೆಗೆದುಕೊಂಡು ಹೋದ ಹೊಲಿಗೆ ಯಂತ್ರಗಳು ಮತ್ತೆ ಅದೇ ಅಂಗಡಿಗೆ ಹೋಗತಕ್ಕ ವ್ಯವಸ್ಥೆ ಇದೆ. ಇದು ಒಂದು ರೀತಿಯಿಂದ ಪೂರ್ವಯೋಜಿತವಾದಂಥ ವ್ಯವಸ್ಥೆ ಆಗಿದೆ. ಇದರ ಬಗ್ಗೆ ತಾವು ಕಡಿವಾಣ ಹಾಕಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವೊತ್ತು ಮುನಿಸಿಪಾಲಿಟಿ ಸರಹದ್ದಿನಲ್ಲಿ ಮತ್ತು ನಗರಸಭೆ ಸರಹದ್ದಿನಲ್ಲಿ ಗುಡಿಸಲುಗಳು ಬಹಳಷ್ಟು ಇವೆ. ಅದಕ್ಕೆ ಒಂದು ಲಕ್ಷ ರೂಪಾಯಿ ಹಣ ಇಟ್ಟಿರುವುದು ನಾನು ಕೇಳಿದೆ ಮತ್ತು ನೋಡಿದ್ದೇನೆ. ಒಂದು ಲಕ್ಷ ರೂಪಾಯಿ ಇಟ್ಟರೆ ಅದರಿಂದ ಏನೂ ಪ್ರಯೋಜನ ಇಲ್ಲ. ಇದರಲ್ಲಿ ಇನ್‌ಷ್ಯೂರೆನ್ಸ್ ಮಾಡಲೇ ಬೇಕಾಗುತ್ತದೆ. ನನ್ನ ತಾಲ್ಲೂಕು ಬೆಳ್ಳೂರು ಎನ್ನತಕ್ಕ ಒಂದು ಪುರಸಭೆ ಸರಹದ್ದಿನಲ್ಲಿ ಎರಡು ತಿಂಗಳಿಂದ ಈಚೆಗೆ ೪೦ ಹರಿಜನರ ಗುಡಿಸಲುಗಳು ಸುಟ್ಟು ಹೋಗಿವೆ. ಈ ಬಗ್ಗೆ ನಾನು ಸರ್ಕಾರಕ್ಕೆ ಮನವಿ ಮಾಡಿದೆ, ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದೆ ಮತ್ತು ಅಲ್ಲಿರತಕ್ಕ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದೆ. ಆದರೆ ಇದುವರೆಗೂ ಪರಿಹಾರ ಸಿಕ್ಕಲಿಲ್ಲ. ತಮಗೂ ಸಹ ಒಂದು ಪತ್ರವನ್ನು ಬರೆದೆ ಅದಕ್ಕೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ಉತ್ತರ ಬಂದಿದೆ ವಿನಹ ಇನ್ನೂ ಪರಿಹಾರ ಸಿಕ್ಕಿಲ್ಲ. ಇಂತಹ ಸಂದರ್ಭದಲ್ಲಿ ಹಳ್ಳಿಯಲ್ಲಿ ಗಾಯಗೊಂಡಿರತಕ್ಕ ಪರಿಶಿಷ್ಟ ಜನ ಮತ್ತು ವರ್ಗದವರು ಉಳಿಯಲಿಕ್ಕೆ ಅವಕಾಶ ಇಲ್ಲ. ಆದ್ದರಿಂದ ದಯಮಾಡಿ ಅವಕ್ಕೆ ಗ್ರೂಪ್ ಇನ್‌ಷ್ಯೂರೆನ್ಸ್ ಸ್ಕೀಮ್ ಎನ್ನತಕ್ಕದ್ದೋ ಗುಡಿಸಲು ಇನ್‌ಷ್ಯೂರೆನ್ಸ್ ಸ್ಕೀಮ್ ಎನ್ನತಕ್ಕದ್ದೋ ಮಾಡಿಸಬೇಕು. ಈ ಬಗ್ಗೆ ಮಾನ್ಯ ಸಿಂಧ್ಯ ಅವರು ಏನು ಹೇಳಿದರು ಅದನ್ನು ನಾನು ಸಹಿತ ಒಪ್ಪಿಕೊಳ್ಳುತ್ತೇನೆ. ಅದನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ: ಇನ್ನು ಬೋರ್‌ವೆಲ್ ಹಾಕಿಸತಕ್ಕ ಒಂದು ವ್ಯವಸ್ಥೆ ಇದೆ ವಿಶೇಷ ಘಟಕ ಯೋಜನೆಯ ಬಗ್ಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಮಾಡಿದ ಮೇಲೆ ಹರಿಜನಗಿರಿಜನರು, ಪರಿಶಿಷ್ಟ ಜನ ಮತ್ತು ಪರಿಶಿಷ್ಟವರ್ಗ, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ತುಳಿತಕ್ಕೆ ಸಿಕ್ಕಿ ಹಾಕಿಕೊಂಡಿದ್ದರು ಇವುಗಳು ಬಂದ ಮೇಲೆ ತುಳಿತಕ್ಕೆ ಸಿಕ್ಕಿ ಹಾಕಿ ಕೊಂಡಿದ್ದರು ಇನ್ನೂ ಕೆಳಕ್ಕೆ ಹೋಗಿದ್ದಾರೆಯೋ ಹೊರತು ಮೇಲೆ ಬರಲಿಕ್ಕೆ ಆಗಲಿಲ್ಲ. ಇವೊತ್ತು ಯಾರಿಗೆ ಹಣ ಸೇರುತ್ತಿದೆ ಅಂದರೆ ಮಂಡಲ್ ಪಂಚಾಯತ್ ಪ್ರಧಾನರ ಬ್ಯಾಗ್ ಯಾರು ಹೊರುತ್ತಾರ ಅವರಿಗೆ ಮತ್ತು ಅವರು ಚುನಾವಣೆಗೆ ನಿಂತಾಗ ಅವರ ಏಜೆಂಟರಾಗಿ ಯಾರು ಕೆಲಸ ಮಾಡುತ್ತಾರೆ, ಅವರುಗಳಿಗೆ ಎತ್ತಿನಗಾಡಿ ಅವರಿಗೆ ನೀರಿನ ಸೌಲಭ್ಯ, ಅವರಿಗೆ ಹೊಲಿಗೆ ಯಂತ್ರ ಅವರಿಗೆ ಏನೆಲ್ಲಾ ಸೌಲಭ್ಯಗಳು ನಿಮ್ಮ ಸರ್ಕಾರದಿಂದ ಹೋಗುತ್ತವೆ, ಆ ಪ್ರತಿಯೊಂದು ಸೌಲಭ್ಯವೂ ಪ್ರಧಾನರ ಮುಖಾಂತರ ಅವರ ಏಜೆಂಟರುಗಳಿಗೆ. ಯಾರು ಅವರನ್ನು ನಿರಂತರವಾಗಿ ಅಧಿಕಾರಕ್ಕೆ ತರುತ್ತಾರೆ, ಅಂತಹವರಿಗೆ ಸೌಲಭ್ಯ ಸಿಕ್ಕುತ್ತಿದೆ. ಯಾರು ನಿಜವಾಗಿ ತುಳಿತಕ್ಕೆ ಸಿಕ್ಕಿಕೊಂಡಿದ್ದಾರೆ, ಅವರಿಗೆ ಆ ಸೌಲಭ್ಯಗಳು ಸಿಕ್ಕುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಬೆಳಕನ್ನು ಚೆಲ್ಲಬೇಕು. ತಾವು ಯಾವುದಾದರೂ ಒಂದು ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಎಷ್ಟು ಕೋಟಿ ರೂಪಾಯಿ ಹಣ ನಾವು ಅಲ್ಲಿಗೆ ಕೊಡುತ್ತೇವೆ ಆ ಹಣ ಯಾವ ರೀತಿ ಖರ್ಚಾಗುತ್ತದೆಂದು ಪರಿಶೀಲನೆ ಮಾಡಲಿಕ್ಕೆ ಯಾರು ಜಿಲ್ಲಾಪರಿಷತ್ ಸದಸ್ಯರಾಗಿರತಕ್ಕಂಥವರು ಇರುತ್ತಾರೆ ಅವರ ಅನುಭವ, ಶಾಸಕರ ಅನುಭವ, ಮಂಡಲ್ ಪಂಚಾಯತ್ ಪ್ರಧಾನರ ಅನುಭವ, ಎಲ್ಲರ ಅನುಭವವನ್ನು ತೆಗೆದುಕೊಳ್ಳಿ, ಈ ಹಣ ಏನಾಗುತ್ತದೆ ಎಂದು ಪರಿಶೀಲನೆ ಮಾಡಿದರೆ ಕ್ರಮ ತೆಗೆದುಕೊಂಡರೆ ಮಾತ್ರ ತುಳಿತಕ್ಕೆ ಒಳಗಾದವರನ್ನು ಮೇಲೆ ಎತ್ತಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲವೇ ಹೋದರೆ ಇದು ಪುಸ್ತಕದ ಮೇಲೆ, ಅಂಕಿಅಂಶಗಳ ಮೇಲೆ ಹೋಗುತ್ತದೆ. ತುಳಿತಕ್ಕೆ ಸಿಕ್ಕಿದವರು ಮೇಲೆ ಹೇಳಲಿಕ್ಕೆ ಆಗುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ವಿಶೇಷ ಘಟಕ ಯೋಜನೆಯಲ್ಲಿ ತೋಟಗಾರಿಕೆ ಮೇಲೆ ನೀವು ಸೌಲಭ್ಯಗಳನ್ನು ಒದಗಿಸುತ್ತಿದ್ದೀರಿ.

ಪಶುಸಂಗೋಪನೆ ಮೇಲೆ ಸೌಲಭ್ಯಗಳನ್ನು ಒದಗಿಸುತ್ತಿದ್ದೀರಿ. ನೀರಾವರಿ ಬಾವಿಗಳ ಮೇಲೆ ಸೌಲಭ್ಯಗಳನ್ನು ಕೊಡುತ್ತಿದ್ದೀರಿ. ಸಾಮಾಜಿಕ ಅರಣ್ಯದ ಮೇಲೆ ಸೌಲಭ್ಯಗಳನ್ನು ಕೊಡುತ್ತಿದ್ದೀರಿ. ಸಣ್ಣ ಕೈಗಾರಿಕೆಗಳ ಮೇಲೆ ಸೌಲಭ್ಯಗಳನ್ನು ಕೊಡುತ್ತಿದ್ದೀರಿ. ಗ್ರಾಮೀಣ ಅಭಿವೃದ್ಧಿಯ ಮೇಲೆ ಸೌಲಭ್ಯಗಳನ್ನು ಕೊಡುತ್ತಿದ್ದೀರಿ. ಈ ವಿಶೇಷ ಘಟಕ ಯೋಜನೆಯಲ್ಲಿ ಎತ್ತಿನಗಾಡಿ ಕೊಡುತ್ತಿದ್ದೀರಿ. ಅದು ನನಗೆ ಚೆನ್ನಾಗಿ ಅನುಭವ ಇದೆ. ಒಂದೇ ಎತ್ತುಗಾಡಿಗೆ ವಿಶೇಷ ಘಟಕ ಯೋಜನೆಯುಡಿಯಲ್ಲಿ ಹಣವನ್ನು ವಿತರಣೆ ಮಾಡುತ್ತಿದ್ದಾರೆ. ೫೦ ಜನ ಫಲಾನುಭವಿಗಳಿಗೆ ಒಂದೇ ಎತ್ತುಗಾಡಿಯನ್ನು ತೋರಿಸುತ್ತಾರೆ. ತಿಮ್ಮನಹಳ್ಳಿಯಲ್ಲಿ ತೋರಿಸಿದ್ದನ್ನೇ ಬೊಮ್ಮನಹಳ್ಳಿಯಲ್ಲಿಯೂ ತೋರಿಸುತ್ತಾರೆ.

ಶ್ರೀ ಬಿ. ಶಿವಣ್ಣ.—ತಾವು ಮುಖಂಡರಿದ್ದೀರಿ, ಶಾಸಕರು ಇದ್ದೀರಿ, ಇಂಥಾದ್ದು ತಮ್ಮ ಗಮನಕ್ಕೆ ಬಂದಮೇಲೆ ತಾವು ಏನು ಮಾಡಿದಿರಿ ಎನ್ನುವುದನ್ನು ಹೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಮಂತ್ರಿಗಳು ದಯಮಾಡಿ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ಹಿಂದೆ ಗ್ರಾಮೀಣ ಅಭಿವೃದ್ಧಿ ಸಚಿವರಾದ ಬಸವಲಿಂಗಪ್ಪನವರು ನನ್ನ ಕ್ಷೇತ್ರಕ್ಕೆ ನನ್ನ ಜಿಲ್ಲೆಗೆ ಬಂದಿದ್ದರು, ಅಲ್ಲಿ ಒಂದು ರೆವ್ಯೂ ಮೀಟಿಂಗ್ ಮಾಡಿದರು. ಅಲ್ಲಿಯ ಅಂಕಿಅಂಶಗಳನ್ನು ನೋಡಿದಾಗ ಅಲ್ಲಿ ಯಾವರೀತಿ ಎತ್ತುಗಾಡಿಗಳ ವಿಲೇವಾರಿಯಾಗಿದೆ ಎನ್ನುವುದು ಕಂಡು ಬಂತು. ಒಂದು ಕಡೆ ಎತ್ತುಗಳಿಗೆ ಓಲೆ ಚುಚ್ಚಿ ಹಾಕಿದರೆ ಅದೇ ಎತ್ತುಗಳಿಗೆ ಮತ್ತೊಂದು ಕಡೆ ಕೊಡುವಾಗ ವೆಟರ್ನರಿ ಡಾಕ್ಟರುಗಳು ಆ ಎತ್ತುಗಳಿಗೆ ಓಲೆಗಳನ್ನು ಬಿಚ್ಚಿ ಹಾಕುತ್ತಾರೆ. ಇದರ ಬಗ್ಗೆ ಬಹಳ ಸಂಕ್ಷಿಪ್ತವಾಗಿ ಹೇಳಿದ್ದೇನೆ. ಮಾನ್ಯ ಮಂತ್ರಿಗಳು ಆ ಸಂದರ್ಭದಲ್ಲಿ ಬಹಳ ದಿಟ್ಟತನದಿಂದ ಹೇಳಿದರು, ಒಬ್ಬ ಸೋಷಿಯಲ್ ವೆಲ್‌ಫೇರ್ ಆಫೀಸರ್‌ಗೆ ಸ್ಪಾಟ್‌ನಲ್ಲಿಯೇ ಸಸ್ಪೆಂಡ್ ಮಾಡುತ್ತೇನೆಂದು ಹೇಳಿದರು. ಕೊನೆಗೆ ಅಲ್ಲಿದ್ದಂತಹವರು ಇದೊಂದು ಸಾರಿ ಮಾರನ ಮಾಡಿ ಎಂದು ಹೇಳಿದರು. ಜಿಲ್ಲಾ ಸೋಷಿಯಲ್ ವೆಲ್‌ಫೇರ್ ಆಫೀಸರ್ ಯಾರು ಇದ್ದಾರೆ ಅವರಿಗೆ ನಾಲ್ಕು ಜನರಿಗೆ ಸಸ್ಪೆಂಡ್ ಮಾಡಿ. ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿ. ನೀವೇನೂ ಮಂತ್ರಿಗಳು ಆಗ ಬೇಕಾಗಿಲ್ಲ. ನೀವು ಒಬ್ಬ ಸೋಷಿಯಲ್ ವೆಲ್‌ಫೇರ್ ಆಗಿದ್ದೆ ಸಾಕು, ಅವರಿಗೆ ಎಲ್ಲಾ ಸವಲತ್ತುಗಳ ಸಿಕ್ಕುತ್ತವೆ. ಏನು ಒಬ್ಬರು ಮಂತ್ರಿಗಳು ಇರುತ್ತಾರೆ ಅವರಿಗಿಂತಲೂ ಹೆಚ್ಚು ದುಡ್ಡು ಇವರು ಮಾಡಬಹುದು. ಅಷ್ಟೇ ಅವಕಾಶಗಳು ಜಿಲ್ಲಾ ಸೋಷಿಯಲ್ ವೆಲ್‌ಫೇರ್ ಆಫೀಸರ್‌ಗಳಿಗೆ ಇದೆ. ಸರ್ಕಾರ ಇದನ್ನೆಲ್ಲಾ ತಡೆಗಟ್ಟಬೇಕಾದರೆ ಈ ವಿಚಾರಗಳಲ್ಲಿ ಪ್ರಾಮಾಣಿಕ ಪ್ರಯತ್ನಪಟ್ಟರೆ ನೂರಕ್ಕೆ ನೂರುಭಾಗ ಮಾಡಲಿಕ್ಕೆ ಆಗದಿದ್ದರೂ ಸ್ವಲ್ಪಮಟ್ಟಿಗಾದರೂ ಸುಧಾರಣೆ ಮಾಡಬಹುದು ಎಂದು ನನ್ನ ಅನ್ನಿಸಿಕೆ.

ಉಪಾಧ್ಯಕ್ಷರು.—ತಾವು ಇನ್ನು ೫ ನಿಮಿಷದಲ್ಲಿ ಮುಗಿಸಿ.

ಶ್ರೀ ಎಂ. ಪಿ. ವೆಂಕಟೇಶ್.—ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಇನ್ನೂ ಸ್ವಲ್ಪ ಹೊತ್ತು ಮಾತನಾಡಲು ಅವಕಾಶ ಕೊಡಿ. ತಾವು ಬೆಲ್ ಹೊಡೆದರೆ ಕಷ್ಟವಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ತೋಟಗಾರಿಕೆ ಇಲಾಖೆ ಮೂಲಕ ೪೦ ತಾಲ್ಲೂಕಿಗೆ ತೆಂಗಿನ ಸಸಿಗಳನ್ನು ಹಂಚುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಆದರೆ ತೆಂಗು ಎಲ್ಲಾಭಾಗದಲೂ ಬೆಳೆಯುವುದಿಲ್ಲ ಕೆಲವು ಭಾಗಗಳಲ್ಲಿ ಮಾತ್ರ ಬೆಳೆಯುತ್ತದೆ. ತುಮಕೂರು ಮಂಡ್ಯಜಿಲ್ಲೆಯ ಕೆಲವು ಭಾಗ ಇರಬಹುದು, ಹಾಸನ ಜಿಲ್ಲೆಯ ಕೆಲವು ಭಾಗ ಇರಬಹುದು, ಅರಸೀಕೆರೆ ಸುತ್ತಮುತ್ತ ಇರಬಹುದು, ಇಲ್ಲವೇ ಬೆಳಗಾಂ ಜಿಲ್ಲೆ ಇರಬಹುದು. ಆದರೆ ಎಲ್ಲಾ ಕಡೆಗಳಿಗೂ ಕೂಡ ತೆಂಗಿನ ಸಸಿಗಳನ್ನು ಹಂಚಿದರೆ ಅವರು ಏನು ಮಾಡುತ್ತಾರೆ, ಯಾರಿಗೆ ಅದನ್ನು ಕೊಡುತ್ತಿದ್ದಾರೆ ಎಂಬುದನ್ನು ವಿಚಾರ ಮಾಡಿದ್ದಿರಾ ?

ಶ್ರೀ ಎಂ. ಎಸ್. ಪಾಟೀಲ್.—ಬೆಳಗಾಂ ವಿಚಾರ ಹೇಳಬೇಡಿ ಅಲ್ಲಿ ತೆಂಗಿನ ಸಸಿ ಚೆನ್ನಾಗಿ ಬರುತ್ತದೆ

ಶ್ರೀ ಎಲ್. ಆರ್. ಶಿವರಾಮೇಗೌಡ.—ತೆಂಗಿನ ಸಸಿ ವಿಚಾರದಲ್ಲಿ ಎಂ. ಎಸ್. ಪಾಟೀಲ್‌ರವರು ದಾರಿ ತಪ್ಪಿಸುತ್ತಿದ್ದಾರೆ ಏಕೆಂದು ಗೊತ್ತಾಗಲಿಲ್ಲ. ಬೆಳಗಾಂ ಜಿಲ್ಲೆಗೆ ತೆಂಗು ಬೆಳೆಗೆ ಹೆಚ್ಚು ಆದ್ಯತೆಯನ್ನು ಕೊಟ್ಟಿಲ್ಲ ಇತ್ತೀಚಿಗೆ ಏನಾದರೂ ಕೊಟ್ಟಿರಬಹುದು. ಎಲ್ಲಾ ಜಿಲ್ಲೆಗಳಲ್ಲೂ ಕೂಡ ತೆಂಗಿನ ಬೆಳೆ ಅಭಿವೃದ್ಧಿಯಾಗಲು ತೆಂಗಿನ ಸಸಿಗಳನ್ನು ಕೊಡತಕ್ಕಂತಹ ಕಾರ್ಯಕ್ರಮ ಇದೆ. ಅದು ಬೆಳೆಯಲೀ ಬಿಡಲಿ, ಅಂತೂ ಕೊಡುತ್ತಾರೆ. ಆ ಮಂಡಲ ಪಂಚಾಯತಿ ಪ್ರಧಾನರು ಮತ್ತು ಜಿಲ್ಲಾ ಪರಿಷತ್ ಅಧ್ಯಕ್ಷರ ಬ್ಯಾಗ್ ಅನ್ನು ಯಾರು ಯಾರು ಹಿಡಿಯುತ್ತಾರೆ ಅಂತಹವರಿಗೆ ೨ ತೆಂಗಿನ ಸಸಿಗಳನ್ನು ಕೊಡುವಂತೆ ಚೀಟಿ ಬರೆದು ಕೊಡುತ್ತಾರೆ. ಒಂದು ವೇಳೆ ಸಸಿಗಳನ್ನು ಕೊಡದಿದ್ದರೆ ಇಂತಹ ಕೃಷಿ ಅಧಿಕಾರಿಯನ್ನು ಏಕೆ ಇಟ್ಟು ಕೊಂಡಿದ್ದೀರಿ. ಅವರನ್ನು ವರ್ಗ ಮಾಡಿ, ನಾವು ಹೇಳಿ

ದಂತೆ ಕೇಳುವುದಿಲ್ಲವೆಂದು ಹೇಳುತ್ತಾರೆ. ಹೀಗೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತಿಯಲ್ಲಿ ಹಗಲು ದರೋಡೆ ನಡೆಯುತ್ತಿದೆ. ಹಿಂದುಳಿದ ಜನಾಂಗದ ಮೇಲೆ ದರೋಡೆ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು, ಅದಕ್ಕಾಗಿ ಕೆಲವು ಜಿಲ್ಲಾ ಪರಿಷತ್ತುಗಳನ್ನು ಸೆಲೆಕ್ಟ್ ಮಾಡಿಕೊಂಡು, ಅಲ್ಲಿಗೆ ಹೆಚ್ಚಿನ ಅನುಭವ ಇರತಕ್ಕಂತಹ ಏಕಾಂತಯ್ಯನವರನ್ನು, ಆತ್ಮಾನಂದ ಅವರನ್ನು ಶ್ರೀ ಪುಟ್ಟಸ್ವಾಮಿ ಗೌಡರನ್ನು ಹಾಗೂ ನಮ್ಮನ್ನು ಕರೆದುಕೊಂಡು ಹೋಗಿ ಅಲ್ಲಿ ಏನು ನಡೆಯುತ್ತಿದೆ ಯಾರ ಜೇಬಿಗೆ ದುಡ್ಡು ಹೋಗುತ್ತಿದೆ ಎನ್ನುವುದನ್ನು ಪತ್ತೆ ಮಾಡೋಣ. ಹೀಗೆ ನಾಲ್ಕಾರು ಜನರಿಗೆ ಬಿಸಿ ಮಾಡಿದರೆ ಮುಂದೆ ಇಂತಹ ಪ್ರಕರಣಗಳು ಆಗದಂಥ ತಡೆಗಟ್ಟಬಹುದು. ಇನ್ನು ನೂರು ಬಾವಿಗಳ ಯೋಜನೆಗಳು, ಗಂಗಾ ಕಲ್ಯಾಣ ಯೋಜನೆಗಳು ಎಲ್ಲವನ್ನೂ ಮಾಡುತ್ತಿದ್ದೀರಿ. ಈ ಯೋಜನೆ ಬಹಳ ಚೆನ್ನಾಗಿ ಇದೆ. ಆದರೆ ಇದನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರಬೇಕು. ನನ್ನ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಪ್ರತಿ ಸಾವಿರ ಹಳ್ಳಿಯಲ್ಲಿ ನೂರು ಬಾವಿ ತೆಗೆಯಬೇಕೆಂಬ ಯೋಜನೆ ಇದೆ ಆದರೆ ಅದು ಈಗ ನಿಂತಿದೆ. ಎಷ್ಟು ಪ್ರಯತ್ನ ಪಟ್ಟರೂ ಇದು ಸರಿಯಾದ ರೀತಿಯಲ್ಲಿ ಕಾರ್ಯಗತವಾಗುತ್ತಿಲ್ಲ. ಒಂದು ಇದ್ದರೆ ಮತ್ತೊಂದು ಸರಿಯಿರುವುದಿಲ್ಲ. ಮಿಷಿನ್ ಸರಿ ಇದ್ದರೆ ನೀರು ಇರುವುದಿಲ್ಲ ನೀರು ಇದ್ದರೆ ಮಿಷಿನ್ ಸರಿ ಇರುವುದಿಲ್ಲ ಇಂತಹ ಪರಿಸ್ಥಿತಿಯಾಗಿದೆ. ಇದರಿಂದಾಗಿ ಅಲ್ಲಿನ ಫಲಾನುಭವಿಗಳಿಗೆ ಸರಿಯಾಗಿ ಮುಟ್ಟುತ್ತಿಲ್ಲ. ಗಂಗಾಕಲ್ಯಾಣ ಯೋಜನೆ ಚೆನ್ನಾಗಿ ನಡೆಯಬೇಕು. ಅದು ಸರಿಯಾದಂತ ಜನರಿಗೆ ತಲುಪುವಲ್ಲಿ ಸರಕಾರ ಗಮನ ಹರಿಸಬೇಕು. ಇನ್ನು ವಿಶೇಷ ಘಟಕ ಯೋಜನೆಯಡಿಯಲ್ಲಿ ಭಾವಿಗಳನ್ನು ಹಾಕಿಸಿಕೊಟ್ಟಿದ್ದೀರಿ. ನನ್ನ ತಾಲ್ಲೂಕಿನಲ್ಲಿ ಸುಮಾರು ೫ ವರ್ಷಗಳ ಹಿಂದೆ ಅಂದರೆ ೧೯೮೭ರಲ್ಲಿ ಹರಿಜನ ಗಿರಿಜನರಿಗೆಂದು ೫ ಬಾವಿಗಳನು ತೆಗೆದಿದ್ದಾರೆ ಆದರೆ ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರು ಸಾಲವನ್ನು ಬ್ಯಾಂಕ್‌ಗೆ ಕಟ್ಟಬೇಕು. ಬೋರ್‌ವೆಲ್‌ನವರು ಬಂದು ಅವರ ತೋಟದಲ್ಲಿ ಬಾವಿಯನ್ನು ತೋಡುತ್ತಾರೆ, ಬ್ಯಾಂಕ್‌ನವರು ಅವರಿಗೆ ಹಣವನ್ನು ಕೊಡುತ್ತಾರೆ. ಫಲಾನುಭವಿಗಳಿಗೆ ಹಣವನ್ನು ಕೊಡುವುದಿಲ್ಲ. ಆದರೆ ಆ ಬಾವಿಗಳಲ್ಲಿ ನೀರು ಸಿಗದೆ ಅವರಿಗೆ ತೊಂದರೆಯಾಗಿದೆ. ಆದರೂ ಬ್ಯಾಂಕ್‌ಗೆ ಹಣವನ್ನು ಕಟ್ಟಬೇಕು. ಫಸಲಿಗೆ ಬೇಕಾಗತಕ್ಕಂತಹ ನೀರು ಬರುತ್ತಿಲ್ಲ. ಆದರೂ ಸಾಲಗಾರರಾಗಿದ್ದಾರೆ, ೧೦ ಸಾವಿರ ಗ್ಯಾಲನ್ ನೀರು ಬರುತ್ತದೆಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆದರೆ ನೀರೇ ಬರುವುದಿಲ್ಲ. ನಾನು ಇದರ ಬಗ್ಗೆ ಜಿಲ್ಲಾ ಪರಿಷತ್‌ನಲ್ಲಿ ಪ್ರಸ್ತಾಪ ಮಾಡಿದಾಗ ವಿಚಾರಣೆ ಮಾಡಿ ಕ್ರಮ ತೆಗೆದು ಕೊಳ್ಳುತ್ತೇನೆಂದು ಜಿಲ್ಲಾ ಪರಿಷತ್ ಅಧ್ಯಕ್ಷರು ಹೇಳಿದರು. ಆದರೆ ಕ್ರಮ ತೆಗೆದುಕೊಂಡಿಲ್ಲ. ಏಕೆಂದರೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಯು ಕೆಲವರ ರಕ್ಷಣೆಯಲ್ಲಿರತಕ್ಕಂತಹ ಅಧಿಕಾರಿಗಳ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದರಿಂದಾಗಿ ಅವರು ಯಾವ ಕ್ರಮವನ್ನೂ ಕೂಡ ಇವರ ಮೇಲೆ ಜರುಗಿಸಲಿಲ್ಲ.

ಆದ್ದರಿಂದ ತಾವು ಸಾಧ್ಯವಾದಷ್ಟು ದೊಡ್ಡ ಮನಸ್ಸು ಮಾಡಿ ೫೦ ಪರ್ಸೆಂಟನ್ನು ನೇರವಾಗಿ ಜಿಲ್ಲಾ ಪರಿಷತ್ತಿನಿಂದ ತೆಗೆದು ಇದಕ್ಕೆ ತೆಗೆದುಕೊಳ್ಳಬೇಕು. ಮಾನ್ಯ ಬಸವಲಿಂಗಪ್ಪನವರು ಒಂದು ಅನುಭವದ ಮಾತನ್ನು ಹೇಳಿದರು. ಅದೇನೆಂದರೆ ಸರ್ಕಾರ ಕೊಡತಕ್ಕ ೧೬೮ ಕೋಟಿ ರೂಪಾಯಿಗಳು ಏನಿದೆ ಇದನ್ನು ಒಂದೇ ಏಜೆನ್ಸಿಯ ಮುಖಾಂತರ ಕೊಡಿ ಎಂದು. ನಿಜವಾಗಿಯೂ ಇದು ಒಪ್ಪತಕ್ಕ ಮಾತು. ಇಲ್ಲದಿದ್ದರೆ ಎಷ್ಟೇ ವರ್ಷವಾದರೂ, ನೀವು ೧೬೮ ಕೋಟಿಯಲ್ಲ ೨೬೮ ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ ಇದಕ್ಕೆ ಹೆಚ್ಚು ಒತ್ತು ಕೊಡುತ್ತೇವೆ ಎಂದು ಹೇಳಿದರು. ನೀವು ಏನು ಕೊಟ್ಟಿದ್ದೀರೆಂದು ನಮಗೆ ಗೊತ್ತು. ಕೊಟ್ಟಿರತಕ್ಕದ್ದು ಕೇವಲ ತೆಂಗಿನ ನಾರಿಗೆ. ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ತಾವು ಅಂಕಿ ಅಂಶಗಳನ್ನು ತರಿಸಿಕೊಂಡು ನೋಡಬಹುದು. ನಮ್ಮ ಕರ್ನಾಟಕ ರಾಜ್ಯದಲ್ಲಿ ಹಣಕಾಸು ಸಂಸ್ಥೆಯಿಂದ ಇದುವರೆಗೆ ಹಣವನ್ನು ತೆಗೆದುಕೊಂಡಿರತಕ್ಕ ಯಾವ ತೆಂಗಿನ ನಾರಿನ ಅಭಿವೃದ್ಧಿ ಕೇಂದ್ರಗಳೂ ಕೂಡ ಚೆನ್ನಾಗಿ ನಡೆಯುತ್ತಿಲ್ಲ ಏಕೆಂದರೆ ಅವು ವೈಜ್ಞಾನಿಕವಾಗಿ ಈ ರಾಜ್ಯದಲ್ಲಿ ಮಾಡುವುದಕ್ಕಾಗುತ್ತಿಲ್ಲ. ಎಲ್ಲವೂ ಫೇಲ್ಯೂರ್ ಆಗಿವೆ. ಒಂದೂ ಕೂಡ ಅಭಿವೃದ್ಧಿಯಾಗಿಲ್ಲ. ಇಂಥಾದ್ದರಲ್ಲಿ ನಿಮ್ಮ ಸಮಾಜ ಕಲ್ಯಾಣ ಇಲಾಖೆಯವರಿಗೆ ಯಾರೂ ಈ ಒಂದು ಪ್ರೋಗ್ರಾಂನ್ನು ಹಾಕಿಕೊಟ್ಟರೋ ಗೊತ್ತಿಲ್ಲ. ತೆಂಗಿನ ನಾರಿನ ಅಭಿವೃದ್ಧಿ ಕೇಂದ್ರವೆಂದು ಮಾಡಿಕೊಂಡು ೧೦-೧೦ ಚರಕಗಳನ್ನು ಇಟ್ಟುಕೊಂಡಿದ್ದಾರೆ. ಆದರೆ ಅವರು ಯಾರಿಗೂ ಕೂಡ ಚರಕಗಳನ್ನು ಕೊಟ್ಟಿದ್ದೇ ನೋಡಿಲ್ಲ. ನಾನೂ ಕೂಡ ಒಂದು ತೆಂಗಿನ ನಾರಿನ ಒಂದು ಕೈಗಾರಿಕೆಯ ಮಾಲೀಕ. ಆದ್ದರಿಂದ ನನಗೆ ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ. ತೆಂಗಿನ ನಾರಿನ ಅಭಿವೃದ್ಧಿ ಕೇಂದ್ರದಿಂದ ಮಾಡತಕ್ಕ ಗುರಿ ಏನಿದೆ ಅದನ್ನು ಯಾರೂ ಕೂಡ ಮುಟ್ಟಿ ನೋಡುವುದಿಲ್ಲ. ಪಕ್ಕದಲ್ಲಿರತಕ್ಕ ತಮಿಳುನಾಡಿನಲ್ಲಿ, ಸೇಲಂನಲ್ಲಿ ಹಸಿಯ ಮಟ್ಟೆ ಸಿಕ್ಕುತ್ತದೆ ಆದರ ನಾರು ಬೆಳ್ಳಗೆ ಬರುತ್ತದೆ.

ಅದರಿಂದ ಮಾಡತಕ್ಕ ದಾರ ನೋಡುವುದಕ್ಕೂ ಚೆನ್ನಾಗಿ ಕಾಣಿಸುತ್ತದೆ. ಅವಕ್ಕೆ ಹೆಚ್ಚು ಹಣವೂ ಕೂಡ ಸಿಕ್ಕುತ್ತದೆ. ಆದರೆ ನಿಮ್ಮ ನಾರನ್ನು ಯಾರೂ ಕೂಡ ತೆಗೆದುಕೊಳ್ಳುವುದಿಲ್ಲ. ಅಂಥಾದ್ದನ್ನು ನೀವು ಇಟ್ಟುಕೊಂಡಿದ್ದೀರಿ. ಇದರ ಬಗ್ಗೆ ತಾವು ಒಂದು ಎನ್‌ಕ್ವೈರಿಯನ್ನು ಮಾಡಿ, ಬೆಳಕನ್ನು ಚೆಲ್ಲಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಇನ್ನು ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ, ರಸ್ತೆ, ಚರಂಡಿ, ಮುಂತಾದ ವಿಚಾರಗಳು ಬಂದಾಗ ಹರಿಜನರ ಹೆಸರನ್ನು ಹೇಳಿಕೊಂಡು ಪ್ರಧಾನರು ಉಪ ಪ್ರಧಾನರ ಮನೆಯ ಮುಂದೆ ರಸ್ತೆ ಮಾಡಿಸುವುದು ನಡೆಯುತ್ತದೆ. ಯಾರು ಓಟಿಗೆ ಕೈ ಎತ್ತುತ್ತಾರೆ ಅಂಥವರ ಮನೆಯ ಮುಂದೆ ರಸ್ತೆಗಳಾಗಿದೆಯೇ ವಿನಃ ಎಸ್.ಸಿ. ಎಸ್.ಟಿ. ಯವರ ಮನೆಯ ಮುಂದೆ ರಸ್ತೆಗಳಾಗಿಲ್ಲ. ಇದರ ಬಗ್ಗೆ ತಾವು ಒಂದು ಎನ್‌ಕ್ವೈರಿಯನ್ನು ಮಾಡಿಸಿ, ಇಡೀ ರಾಜ್ಯದಲ್ಲಿ ಒಬ್ಬ ಪ್ರಧಾನನ ಮೇಲಾಗಲಿ, ಉಪ ಪ್ರಧಾನನ ಮೇಲಾಗಲಿ ಕ್ರಮವನ್ನು ತೆಗೆದುಕೊಂಡಿರತಕ್ಕ ನಿದರ್ಶನಗಳಿಲ್ಲ. ತಮಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಜಿಲ್ಲಾ ಪರಿಷತ್ತಿನಲ್ಲಿ ಒಬ್ಬ ನೌಕರ ಸತ್ತು ೨ ವರ್ಷವಾಗಿದೆ ಅಂದರೆ ೮೮ ರಲ್ಲಿ ಸತ್ತಿದ್ದಾನೆಂದು ಇಟ್ಟುಕೊಳ್ಳೋಣ, ೯೦ನೇ ಇಸವಿಯಲ್ಲಿ ಟ್ರ್ಯಾನ್ಸ್‌ಫರ್ ಆರ್ಡರ್ ಅವನ ಮನೆಗೆ ಹೋಗಿದೆ, ಅಂದರೆ ಈ ಜಿಲ್ಲಾ ಪರಿಷತ್ತು ಎಷ್ಟರಮಟ್ಟಿಗೆ ಕೆಲಸಮಾಡುತ್ತಿದೆ ಎಂಬುದನ್ನು ತಾವೇ ಊಹೆ ಮಾಡಿಕೊಳ್ಳಿ. ಸರ್ಕಾರದ ಕಾಳಜಿ ಏನಿದೆ ಅದು ಒಳ್ಳೆಯದು. ಆದರೆ ಅದು ಪ್ರಾಮಾಣಿಕವಾಗಿ ಯಾರಿಗೆ ಸಲ್ಲಬೇಕೋ ಅದು ಸಲ್ಲುತ್ತಿಲ್ಲ ಈ ಕಾರ್ಯಕ್ರಮಗಳು ನೂರಕ್ಕೆ ನೂರೂ ಯಶಸ್ವಿಯಾಗುತ್ತಿಲ್ಲ. ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದು ಯಶಸ್ವಿಯಾಗಿದೆ ಎಂದು ಯಾರಾದರೂ ಅಧಿಕಾರಿಗಳು ಹೇಳುವುದಾದರೆ ಅದು ಕೇವಲ ಪುಸ್ತಕದಲ್ಲಿ ಮಾತ್ರ ಆಗಿರಬಹುದು. ಆದರೆ ಪ್ರಾಮಾಣಿಕವಾಗಿಯಂತೂ ಆಗಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಅಂಗನವಾಡಿಯ ವಿಚಾರದಲ್ಲಿ ಹೇಳುವುದಾದರೆ. ಅಂಗನವಾಡಿಗಳಿಗೆ ಮೇಡಂಗಳನ್ನು ಕೊಡುವುದಿಲ್ಲ. ಆದರೆ ಅಲ್ಲಿಗೆ ಸೇವಕಿ ಕೊಡುತ್ತಿದ್ದಾರೆ. ಆಕೆ ಏನು ಮಾಡುತ್ತಿದ್ದಾಳೆ ಎಂಬುದನ್ನು ಹೇಳುವುದಾದರೆ ಮಕ್ಕಳಿಗೆ ತಿಂಡಿಯನ್ನು ಮಾಡುವುದಕ್ಕೆ ಅಡಿಗೆಯನ್ನು ಮಾಡುವುದಕ್ಕೆ ಏನು ಆಹಾರ ಪದಾರ್ಥಗಳನ್ನು ಕೊಡುತ್ತೀರಿ ಅದನ್ನೆಲ್ಲಾ ವ್ಯವಸ್ಥಿತವಾಗಿ ಮಾರಾಟ ಮಾಡಿಕೊಳ್ಳುತ್ತಾಳೆ. ಇಡೀ ಕರ್ನಾಟಕದಲ್ಲಿ ಯಾವುದೇ ಅಂಗನವಾಡಿಯಲ್ಲಾಗಲಿ, ಯಾರೊಬ್ಬರ ಮೇಲೆ ಆಗಲಿ ಸೀರಿಯಸ್ ಕಂಪ್ಲೇಂಟ್ಸ್ ಬಂದಿದೆಯೆಂದು, ಅಂದರೆ ನೀನು ಅಡಿಗೆಯನ್ನು ಸರಿಯಾಗಿ ಮಾಡುವುದಿಲ್ಲ. ತಿಂಡಿಯನ್ನು ಸರಿಯಾಗಿ ಮಾಡುವುದಿಲ್ಲ. ಕೊಟ್ಟ ಪದಾರ್ಥಗಳನ್ನೆಲ್ಲಾ ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ ಎಂದು ಸಸ್ಪೆಂಡ್ ಅಥವಾ ಡಿಸ್‌ಮಿಸ್ ಮಾಡಿರತಕ್ಕ ಒಂದೇ ಒಂದು ನಿದರ್ಶನವನ್ನು ಈ ಸದನದ ಮುಂದೆ ತಿಳಿಸಿದರೆ ನಾನು ಸಂತೋಷ ಪಡುತ್ತೇನೆ, ಅಥವಾ ಒಪ್ಪಿಕೊಳ್ಳುತ್ತೇನೆ. ಆದರೆ ಅಂಥಾದ್ದು ಯಾವುದನ್ನೂ ನೀವು ಮಾಡಿಲ್ಲ. ಇದು ನಿಮ್ಮ ಕಾಲದಲ್ಲಿ ಆದರೂ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಲ್ಲಿನ ಬಗ್ಗೆ ಮಾತನಾಡುವುದಾದರೆ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಕರ್ನಾಟಕದ ಇಡೀ ಮಂತ್ರಿಮಂಡಲವೇ ಬೇವಿನ ಸೊಪ್ಪನ್ನು ಸೊಂಟಕ್ಕೆ ಸುತ್ತಿಕೊಂಡು ಯಾವುದೇ ದೇವರ ಸುತ್ತ ನರ್ತನ ಮಾಡಿದರೂ ಹೋದ ಕಲ್ಲು ಮತ್ತೆ ಬೆಳೆಯುವುದಿಲ್ಲ ಅಂತ. ಈ ಕಲ್ಲಿನ ಕಾಂಟ್ರ್ಯಾಕ್ಟ್ ಬಗ್ಗೆ ರಾಜ್ಯದ ಬೊಕ್ಕಸಕ್ಕೆ ಬರತಕ್ಕ ಆದಾಯ ೨೦ ಕೋಟಿ ರೂಪಾಯಿ ಮಾತ್ರ. ನಮ್ಮಲ್ಲಿರತಕ್ಕ ನಿಸರ್ಗ ನಾಶವಾದ ಮೇಲೆ ನೀವು ಏನು ಮಾಡುತ್ತೀರಿ? ಇಂಥ ವಿಧಾನ ಸೌಧವನ್ನು ಇನ್ನೊಂದನ್ನು ಕಟ್ಟಬಹುದು. ಆದರೆ ಹೋದ ಕಲ್ಲನ್ನು ಮತ್ತೆ ಬೆಳೆಸುವುದಕ್ಕಾಗುವುದಿಲ್ಲ. ನೀವು ಈಗ ಎಲ್ಲಿಗೆ ಕೈಹಾಕಿದ್ದೀರೆಂದರೆ ಎಲ್ಲೆಲ್ಲಿ ದೇವರುಗಳಿವೆ ಅಂದರೆ ಅದು ಬಿಳಿಗಿರಿ ರಂಗನ ಬೆಟ್ಟವಿರಬಹುದು. ಗವಿರಂಗಪ್ಪನ ಬೆಟ್ಟವಿರಬಹುದು. ಶಿವಗಂಗೆ ಬೆಟ್ಟವಿರಬಹುದು ಅಲ್ಲೆಲ್ಲಾ ಕೈ ಹಾಕಿದ್ದೀರಿ. ನನ್ನ ಕ್ಷೇತ್ರದಲ್ಲಿ ಹತ್ತಿಕಲ್ಲು ಹನುಮಂತರಾಯ ಎಂದು ಒಂದು ಪ್ರಸಿದ್ಧ ದೇವರಿದೆ. ಆ ಬೆಟ್ಟದಲ್ಲಿ ಕಲ್ಲುಗಳನ್ನು ತೆಗೆಯುವುದಕ್ಕೆ ನೀವು ಲೈಸೆನ್ಸ್‌ನ್ನು ಕೊಟ್ಟಿದ್ದೀರಿ. ಆ ಊರಿನ ಜನರೆಲ್ಲಾ ನನ್ನ ಹತ್ತಿರ ಬಂದು ದೂರು ಹೇಳುತ್ತಿರುತ್ತಾರೆ. ಏನೆಂದರೆ ಅಲ್ಲಿ ಲೈಸೆನ್ಸ್ ತೆಗೆದುಕೊಂಡಿರತಕ್ಕ ವ್ಯಕ್ತಿ ಬೆಳಿಗ್ಗೆ ೧೦ ಗಂಟೆಗೆ ಬಂಡೆಗೆ ಮದ್ದನ್ನು ಇಟ್ಟು ಬಂಡೆ ಒಡೆಯುವುದಕ್ಕೆ ಪ್ರಾರಂಭ ಮಾಡಿದರೆ ಇಡೀ ರಾತ್ರಿಯೆಲ್ಲಾ ಒಡೆಯುತ್ತಲೇ ಇರುತ್ತಾನೆ, ಮದ್ದನ್ನು ಇಡುತ್ತಲೇ ಇರುತ್ತಾನೆ. ಅಂತ. ಅವನು ಬಿಳಿ ಕಲ್ಲನ್ನು ತೆಗೆಯಲು ಲೈಸೆನ್ಸನ್ನು ತೆಗೆದುಕೊಂಡಿದ್ದಾನೆ. ಇದನ್ನು ತಾವು ಪರಿಶೀಲನೆ ಮಾಡಿ ನೋಡಬೇಕು. ನಾಗಮಂಗಲದ ತಾಲ್ಲೂಕು ಬೆಳ್ಳೂರು ಹೋಬಳಿಗೆ ಸೇರಿದಂತೆ ಇರಡನಹಳ್ಳಿ ಎಂಬ ಗ್ರಾಮ ಇದೆ ಅಲ್ಲಿ ಅಜ್ಜನಕಲ್ಲು ಹನುಮಂತರಾಯ ಎಂದು ಒಂದು ದೊಡ್ಡ ಭಕ್ತಿ ಪೂರ್ವಕವಾದ ದೇವಸ್ಥಾನ ಇದೆ. ನಾನ ಗಣಿ ಇಲಾಖೆಯ ಆಫೀಸಿಗೆ ಹೋದಾಗ ನೋಡಿದೆ, ಅಲ್ಲಿ ೨೫ ಸಾವಿರ ರೂಪಾಯಿನ ಡ್ರಾಫ್ಟ್

ಹಾಕಿ ೨೫ ಎಕರೆ ಜಮೀನು ತೆಗೆದುಕೊಳ್ಳಬೇಕೆಂದು ಅರ್ಜಿ ಹಾಕಿದ್ದಾನೆ. ಈಗಾಗಲೇ ೧೪ ಎಕರೆ ಜಮೀನನ್ನು ಬರೆಸಿಕೊಂಡಿದ್ದಾನೆ ಅದಕ್ಕೆ ಕೋರ್ಟಿನಲ್ಲಿ ಸ್ಟೇ ಆಗಿದೆ. ಸ್ಟೇ ಆಗಿರುವ ಬಗ್ಗೆ ನಿಮ್ಮ ಅಧಿಕಾರಿಗಳಿಗೆ ಏನು ಹೇಳಿದ್ದಾನೋ ಗೊತ್ತಿಲ್ಲ ಆ ಸ್ಟೇ ಬಗ್ಗೆ ಬಿಟ್ಟು ಉಳಿದಂತೆ ತಾವು ಪರಿಶೀಲನೆಮಾಡಿ ತಾವು ಈ ಸದನಕ್ಕೆ ತಿಳಿಸಬೇಕು. ಆತ ನಿಮಗೆ ವಂಚನೆ ಮಾಡುತ್ತಿದ್ದಾನೆ ದಿವಸಕ್ಕೆ ೨೦ ಟ್ರ್ಯಾಕ್ಟರ್‌ನಷ್ಟು ಕಲ್ಲನ್ನು ಪುಡಿ ಮಾಡುತ್ತಿದ್ದಾರೆ ರಾಷ್ಟ್ರೀಯ ಹೆದ್ದಾರಿ ರಸ್ತೆಯ ಪಕ್ಕದಲ್ಲಿ ದಿವಸಕ್ಕೆ ೧೦೦ ಲಾರಿಗಳಷ್ಟು ಕಲ್ಲು ಹೊರಗಡೆ ಹೋಗುತ್ತಿದೆ. ಸ್ವಾಮಿ ಅಲ್ಲಿ ಒಳ್ಳೆಯ ಕೆಂಪುಕಲ್ಲು ಸಿಕ್ಕುತ್ತಿದೆ. ಇಂಥ ನಿಸರ್ಗ ನಾಶವಾಗುತ್ತಿರತಕ್ಕಂಥ ಸಂದರ್ಭದಲ್ಲಿ ಈ ಒಂದು ಬಾಬಿನಿಂದ ಸರ್ಕಾರಕ್ಕೆ ೨೦ ಕೋಟಿ ರೂಪಾಯಿಗಳ ಆದಾಯ ಬರುತ್ತದೆಂದು ಹೇಳುತ್ತಿರುವುದು ಸರಿಯಾದ ಕ್ರಮವಲ್ಲವೆಂದು ಹೇಳುತ್ತೇನೆ. ಯಾವ ಒಂದು ಎಕ್ಸ್‌ಪ್ಲೈಸ್ ಲಾಬಿಯನ್ನು ನಿರ್ನಾಮ ಮಾಡಿದಂಥ ಕೀರ್ತಿಯನ್ನು ತೆಗೆದುಕೊಂಡ ಸರ್ಕಾರ ಈಗ ಈ ಕಲ್ಲಿಗೆ ಕೈಹಾಕಿರುವುದು ನಿಜಕ್ಕೂ ನನಗಂತೂ ಆಶ್ಚರ್ಯವಾಗಿದೆ. ಇವತ್ತು ನಿಸರ್ಗ ನಾಶವಾದರೆ ಭೂಕಂಪವಾಗಬಹುದು. ನಾವು ಹೊರದೇಶದಲ್ಲಿ ಭೂಕಂಪವಾಗುತ್ತಿರುವುದನ್ನು ಕೇಳಿದಾಗ ಬಹುಶಃ ಅದಕ್ಕೆ ಇದೇ ಒಂದು ಕಾರಣವಾಗಿದೆ ಎಂದು ನನ್ನ ಅನಿಸಿಕೆ. ಇವತ್ತು ನಿಮಗೆ ರಾಯಲ್ಟಿಯನ್ನು ಕೊಟ್ಟು ಕಾನೂನನ್ನು ತಿದ್ದುಪಡಿಮಾಡಿಸಿಕೊಂಡವರು ಕಲ್ಲು ತೆಗೆಯಲು ಯಾವ ಭೂಮಿಯನ್ನು ಬಿಡುವುದಿಲ್ಲ ಒಂದು ಕಿಲೋಮೀಟರ್ ಆಳಕ್ಕೆ ಹೋದರೂ ಬಿಡುವುದಿಲ್ಲ. ಅಂಥ ದುಡ್ಡು ಇದು. ಯಾವ ಎಕ್ಸ್‌ಪ್ಲೈಸ್ ಬೇಕಿಲ್ಲ ಎಕ್ಸ್‌ಪ್ಲೈಜ್‌ನವರೆಲ್ಲಾ ನಡುಗಿ ಬಿಟ್ಟಿದ್ದಾರೆ. ತಮಿಳುನಾಡಿನವರು ಇಲ್ಲಿಗೆ ಬಂದು ಈ ಕೆಲಸ ಮಾಡುತ್ತಿದ್ದಾರೆ. ಅವರು ಒಬ್ಬೊಬ್ಬರು ಇಂಥ ವಿಧಾನಸೌಧವನ್ನು ಕಟ್ಟಿಸಿಕೊಳ್ಳಬಹುದು. ಆ ಮಟ್ಟದಲ್ಲಿ ದುಡ್ಡು ಬರ್‍ತಿದೆ. ಇವತ್ತು ನಿಸರ್ಗ ನಾಶವಾದರೆ ಭೂಕಂಪವಾಗತಕ್ಕಂಥ ಭಯ ಬಂದಿದೆ. ಇದನ್ನು ತಡೆಗಟ್ಟಬೇಕು ೫ ವರ್ಷಗಳ ಅವಧಿಯಲ್ಲಿ ೧೦೦ ಕೋಟಿ ರೂಪಾಯಿಗಳ ಆದಾಯ ಇದರಿಂದ ನಿಮ್ಮ ಲೆಕ್ಕಾಚಾರದ ಪ್ರಕಾರ ಬರುತ್ತದೆ. ಈ ೨೦ ಕೋಟಿ ರೂಪಾಯಿಗಳಿಂದ ಏನಾಗುತ್ತದೆ. ವರ್ಷದಲ್ಲಿ ೩,೮೦೦ ಕೋಟಿ ರೂಪಾಯಿಗಳ ವ್ಯವಹಾರ ಮಾಡತಕ್ಕಂಥ ಸರ್ಕಾರಕ್ಕೆ ಈ ೨೦ ಕೋಟಿ ರೂಪಾಯಿಗಳ ಆದಾಯಕ್ಕಾಗಿ ಬಹಳ ಪುರಾತನಕಾಲದಿಂದ ಬಂದಿರತಕ್ಕಂಥ ದೇವಸ್ಥಾನಗಳನ್ನು ಅಭದ್ರ ಮಾಡತಕ್ಕಂಥ ವಿಚಾರಕ್ಕೆ ಕೈಹಾಕಿರುವುದು ನಿಜಕ್ಕೂ ಕೂಡ ನನಗೆ ಶೋಚನೀಯವಾಗಿದೆ. ಆದ್ದರಿಂದ ದಯವಿಟ್ಟು ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಬಯಸುತ್ತೇನೆ. ನಿಸರ್ಗ ನಾಶವಾದರೆ ಭೂಕಂಪವಾಗುತ್ತದೆಂದು ತಜ್ಞರು ಹೇಳುತ್ತಿದ್ದಾರೆ. ಆಗ ದೇವಸ್ಥಾನಗಳೆಲ್ಲಾ ಹಾಳಾಗುತ್ತವೆ. ಶ್ರವಣಬೆಳಗೊಳ, ಬಿಳಿಗಿರಿರಂಗನಬೆಟ್ಟ, ದೇವದುರ್ಗ ರಾಮದುರ್ಗ ಇವೇ ಮುಂತಾದ ಬೆರಳೆಣಿಕೆಯಷ್ಟು ದೇವಸ್ಥಾನಗಳು ಈ ಕಲ್ಲುಗಳ ನಾಶದಿಂದ ಹಾಳಾಗುತ್ತವೆ ಇಲ್ಲವೇ ಆ ದೇವಸ್ಥಾನಗಳು ಬರಿ ಚಿತ್ರಗಳಾಗುತ್ತವೆ. ಇಂದು ಈ ಕೆಲಸಕ್ಕೆ ಕೈಹಾಕಿ ಅಂದು ನಾವು ಎಂಥ ತಪ್ಪುಕೆಲಸವನ್ನು ಮಾಡಿದ್ದೇವೆಂದು ಪಶ್ಚಾತ್ತಾಪ ಪಡುತ್ತೀರಿ. ಕಳೆದ ೮-೧೦ ವರ್ಷಗಳಿಂದ ಸಾರಾಸಗಟಾಗಿ ಹೊರ ರಾಷ್ಟ್ರಗಳಿಗೆ ಈ ಕಲ್ಲುಗಳನ್ನು ಸಾಗಿಸಿದ್ದಾರೆ. ಈ ರಾಜ್ಯದವರು ಹಾಗೂ ಈ ರಾಷ್ಟ್ರದವರು ಈ ಕಲ್ಲುಗಳಿಂದ ಶೋಕಿ ಮಾಡಿಲ್ಲ. ಇದನ್ನು ಹಾಕಿಸಿಕೊಳ್ಳತಕ್ಕಂಥ ಶಕ್ತಿ ಕೆಲವೇ ಜನರಿಗೆ ಇರುವುದು. ಅದು ಎಲ್ಲರಿಗೂ ಸಾಧ್ಯವಿರುವುದಿಲ್ಲ. ಹೊರ ರಾಷ್ಟ್ರದವರು ನಮ್ಮಿಂದ ಕಲ್ಲುಗಳನ್ನು ತೆಗೆದುಕೊಂಡುಹೋಗಿ ಗೋರಿ ಮಾಡಿಸಿಕೊಂಡರು. ಹೀಗೆ ನಮ್ಮ ನೈಸರ್ಗಿಕ ಸಂಪತ್ತನ್ನು ನಾಶ ಮಾಡುತ್ತಿದ್ದಾರೆ. ಈ ಪಾಪದ ಕೂಸು ನಿಮ್ಮದಲ್ಲ. ಆದ್ದರಿಂದ ಇದರಲ್ಲಿ ನೀವು ತಗಲಾಕಿಕೊಳ್ಳುವುದಕ್ಕಿಂತ ಮೊದಲೇ ಒಂದು ತೀರ್ಮಾನ ತೆಗೆದುಕೊಂಡು ಈ ಬಗ್ಗೆ ಪುನರ್ ವಿಮರ್ಶೆ ಮಾಡಿ ಅದನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತಿದ್ದೇನೆ. ಒಂದು ಕಡೆ ಮರಗಿಡಗಳನ್ನು ಕಡಿದು ಕಾಡನ್ನು ನಾಶ ಮಾಡಿದ್ದರಿಂದ ಮಳೆ ಹೋಯಿತೆಂದು ಹೇಳುತ್ತೀರಿ. ಆದರೆ ಇವತ್ತು ಇವತ್ತಿನ ದಿವಸ ಎತ್ತರದಲ್ಲಿರತಕ್ಕಂಥ ಕರಿಕಲ್ಲನ್ನು ನಾಶ ಮಾಡಿದರೆ ಸಂಪೂರ್ಣವಾಗಿ ಮಳೆ ನಾಶವಾಗುತ್ತದೆ ಎನ್ನುವ ಸೂಚನೆ ಇದೆ. ತಾವು ಯಾರಾದರು ತಜ್ಞರಿಗೆ ಬರೆದು ಸರ್ಕಾರದ ಪರು ವರದಿಯನ್ನು ತರಿಸಿಕೊಳ್ಳಬಹುದು. ಈಗಾಗಲೇ ರಾಜ್ಯದಲ್ಲಿ ಮಳೆ ಇಲ್ಲದೆ ತತ್ತರಿಸಿ ಕಣ್ಣುಬಾಯಿ ಬಿಡತಕ್ಕಂಥ ಪರಿಸ್ಥಿತಿಯಲ್ಲೀ ಬೇಕಾದರೆ ಮತ್ತೆ ಈ ಒಂದು ಕಲ್ಲನ್ನು ಮಾರಾಟ ಮಾಡಿ ದುಡ್ಡನ್ನು ಗಳಿಸಬೇಕೆಂದು ಹೊರಟಿದ್ದೀರಿ. ನಿಜವಾಗಿಯೂ ಇದರಿಂದ ಸರ್ಕಾರಕ್ಕೆ ದುಡ್ಡು ಬರುತ್ತದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಮುಂದೆ ಏನು ಅನಾಹುತ ಆಗುತ್ತದೆ ಎನ್ನುವುದನ್ನು ನೋಡಬೇಕು. ಲಕ್ಷಾಂತರ ರೂಪಾಯಿಗಳನ್ನು ಅರಣ್ಯ ಇಲಾಖೆಗೆ ಖರ್ಚು ಮಾಡಿ ಮರಗಿಡಗಳನ್ನು ಬೆಳೆಸೋಣ, ಅದರಿಂದ ಮಳೆ ಬರುತ್ತದೆ ಎನ್ನತಕ್ಕಂಥ ಘೋಷಣೆ ಒಂದು ಕಡೆಯಾದರೆ ಮತ್ತೊಂದು ಕಡೆ ಕಲ್ಲು ಮಾರಿಕೊಂಡು ಹೋದರೆ ಇರತಕ್ಕಂಥ ನಿಸರ್ಗವನ್ನು ನಾಶ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಮರು ಚಿಂತನೆ ಆಗಲಿ.

ಇದಕ್ಕೋಸ್ಕರವಾಗಿ ಒಂದು ಸದನದ ಕಮಿಟಿಯನ್ನು ಮಾಡಿ. ಈಗ ಮಾಡಿರುವ ನಿಮ್ಮ ಪಾಲಿಸಿಯನ್ನು ಕೈಬಿಡಿ. ನಿಮ್ಮ ಪಾಲಿಸಿ ತಪ್ಪು ಎಂದು ನಾನು ಹೇಳುವುದಿಲ್ಲ. ನಿಸರ್ಗ ನಾಶವಾದರೆ ಮತ್ತೆ ನಿಸರ್ಗ ಸಿಗುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರು ಅವರದೇ ಆದ ಒಂದು ಶೈಲಿಯಲ್ಲಿ ಹೇಳಿದರು. ಬೇವಿನ ಸೊಪ್ಪನ್ನು ಕಟ್ಟಿಕೊಂಡು ನರ್ತನ ಮಾಡಿದರೂ ಈ ನಿಸರ್ಗ ಮತ್ತೆ ಬರುವುದಿಲ್ಲವೆಂದು ಹೇಳಿದ ಅವರ ಮಾತನ್ನು ಬೆಂಬಲಿಸುತ್ತೇನೆ. ಒಟ್ಟಿನಲ್ಲಿ ಇದನ್ನು ತಡೆಹಿಡಿಯಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷಿಣಿಯವರು.—ಅರ್ಧ ಗಂಟೆ ಆಯಿತು, ಬೇಗ ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳುತ್ತೇನೆ. ತಮಗೆ ವಿರುದ್ಧವಾಗಿ ಹೇಳತಕ್ಕ ಶಕ್ತಿ ಇಲ್ಲ. ರಾಜ್ಯದ ನಿಸರ್ಗದ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಇನ್ನು ೧೦ ನಿಮಿಷ ಕೊಡಿ, ಮುಗಿಸುತ್ತೇನೆ. ಭೂ ಕಂಪದ ದುರಂತವಾಗಲಿ, ಮಳೆ ಕಡಿಮೆಯಾಗುವ ದುರಂತವಾಗಲಿ, ಮತ್ತೊಂದಾಗಲಿ ಈ ದುರಂತದ ಛಾಯೆ ಇದ್ದೇ ಇದೆ. ಈ ಭಯ ಇರುವುದರಿಂದ ಇದನ್ನು ಕೂಡಲೇ ತಡೆಹಿಡಿಯಬೇಕೆಂದು ಹೇಳುತ್ತೇನೆ. ಇನ್ನೊಂದು ಮಾತನ್ನು ಹೇಳುತ್ತೇನೆ. ಶ್ರೀಮಂತಿ ಮೋಟಮ್ಮನವರು ತಾವು ಬ್ರಹ್ಮಚಾರಿಗಳು ಎಂದು ಚೆನ್ನಾಗಿ ಹೇಳಿದರು. ನನಗೆ ಆ ವಿಚಾರ ಗೊತ್ತಿರಲಿಲ್ಲ. ತಾವು ಫ್ಯಾಮಿಲಿ ಪ್ಲಾನ್ ಮಾಡಿಲ್ಲವೆಂದು ತಿಳಿದಿದ್ದೆ. ನಿಜ ಸ್ಥಿತಿ ಈಗಲೇ ನನಗೇ ತಿಳಿದಿದ್ದು. ಇವೊತ್ತು ಒಂದೊಂದು ಬಂಡೆಗೂ ಕಥೆ ಇದೆ. ಇದಕ್ಕೆ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಮೊನ್ನೆ ಚುಂಚನಗಿರಿಗೆ ಹೋಗಿದ್ದೆ. ಅಲ್ಲಿ ಗ್ರಾಮಾಂತರ ಪ್ರದೇಶದ ಒಂದು ಆಸ್ಪತ್ರೆಯ ಉದ್ಘಾಟನೆಯಾಯಿತು. ಅದನ್ನು ಮಾಡಿ ಬಂದೆವು. ಅಲ್ಲಿನ ರಸ್ತೆ ನೇರ ಮಾಡುವುದಕ್ಕೆ ಸ್ವಾಮೀಜಿಯವರು ಜಿಲ್ಲಾ ಪರಿಷತ್ತಿನವರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ನಾನು ಜೊತೆಯಲ್ಲಿ ಇಂಜಿನಿಯರ್‌ಗಳನ್ನು ಕರೆದುಕೊಂಡು ಹೋಗಿದ್ದೆ. ಅಲ್ಲಿ ಒಂದು ದೊಡ್ಡ ಬಂಡೆ, ರೌಂಡ್ ಕಲ್ಲು ಇತ್ತು. ಆ ಕಲ್ಲನ್ನು ತೆಗೆದರೆ ಇವರಿಗೆ ನೇರವಾದ ರಸ್ತೆ ಆಗುತ್ತದೇದು ಹೇಳಿದರು. ಆಗ ಸ್ವಾಮೀಜಿಯವರು ಹೇಳಿದರು, ಇದು ಗಾಳಿ ಕಲ್ಲು, ಇದನ್ನು ತೆಗೆದರೆ ಇದಕ್ಕಿಂತ ದೊಡ್ಡ ಅನಾಹುತ ಮತ್ತೊಂದು ಇಲ್ಲ ಎಂದರು. ಈ ರಾಜ್ಯದ ಕಲ್ಲುಗಳಿಗೆ ದೇಶದಲ್ಲಿರತಕ್ಕ ಕಲ್ಲುಗಳಿಗೆ, ಒಂದೊಂದು ಬಂಡೆಗೂ ಒಂದೊಂದು ಕಥೆ ಇದೆ. ಆದ್ದರಿಂದ ಈ ಸದನದಲ್ಲಿ ವಿನಂತಿಸುತ್ತೇನೆ. ಈ ಕಲ್ಲುಗಳಿಗೆ ಸರ್ಕಾರ ಕೈಹಾಕುವುದು ಬೇಡ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿ, ಕೊನೆಯದಾಗಿ ಚಿನ್ನಪ್ಪ ರೆಡ್ಡಿಯವರ ಆಯೋಗದ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಜ: ಚಿನ್ನಪ್ಪ ರೆಡ್ಡಿಯವರ ಆಯೋಗವನ್ನು ಮನ್ನಿಸಿದ್ದೀರಿ, ಆದರೆ ಇದರ ಬಗ್ಗೆ ಖಾರವಾಗಿ ಹೇಳಬೇಕಾಗುತ್ತದೆ. ಜ. ಚಿನ್ನಪ್ಪರೆಡ್ಡಿಯವರ ಆಯೋಗ ವೀರೇಂದ್ರಪಾಟೀಲರ ಸರ್ಕಾರದ ಪಾಪದ ಕೂಸಲ್ಲ. ಇದು ಸಿಂಧ್ಯರವರ ಸರ್ಕಾರದ ಪಾಪದ ಕೂಸು ಇದರ ಬಗ್ಗೆ ದೊಡ್ಡ ಹಿನ್ನೆಲೆ ಇದೆ. ಅದನ್ನು ಹೇಳದೆ ಇದ್ದರೆ ವಿಧಿ ಇಲ್ಲ. ಏತಕ್ಕೋಸ್ಕರ ಚಿನ್ನಪ್ಪ ರೆಡ್ಡಿ ಆಯೋಗವನ್ನು ತಂದರು ಎಂದು ಗೊತ್ತೇ ಇದೆ. ಚಿನ್ನಪ್ಪ ರೆಡ್ಡಿಯವರು ಈ ದೇಶದ ನ್ಯಾಯಪೀಠದ ನ್ಯಾಯಾಧೀಶರು. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ನ್ಯಾಯಾಧೀಶರ ಬಗ್ಗೆ ಅಗೌರವದಿಂದ ಮಾತನಾಡುವುದು ಅಲ್ಲ. ಯಾರು ತಪ್ಪು ಮಾಡಿದ್ದಾರೆಂದು ಪರಿಶೀಲನೆ ಮಾಡದೆ ಹೋದರೆ ನಾವು ಅನಾಹುತಕ್ಕೆ ಒಳಗಾಗುತ್ತೇವೆ. ವೆಂಕಟಸ್ವಾಮಿಯವರ ಆಯೋಗಕ್ಕೆ ಆದ ಗತಿ ಈ ಚಿನ್ನಪ್ಪ ರೆಡ್ಡಿಯವರ ಆಯೋಗಕ್ಕೂ ಆಗುತ್ತದೆ ಎಂದು ರಾಣಿಯವರು ಮಾತನಾಡುತ್ತಾ ಹೇಳಿದರು. ನಮ್ಮ ಒಂದು ಅಸ್ತಿತ್ವ ಹೋಗುವಾಗ ಅದಕ್ಕೆ ಒಂದು ಗಾದೆ ಹೇಳುತ್ತಾರೆ, ಈಗ ಅದನ್ನು ಹೇಳುವುದು ಬೇಡ. ಒಂದು ಮಾತು ಮಾತ್ರ ಹೇಳುತ್ತೇನೆ. ಚಿನ್ನಪ್ಪ ರೆಡ್ಡಿಯವರ ಆಯೋಗ ಏತಕ್ಕೆ ಬಂತು ಎಂದು ತಿಳಿದುಕೊಳ್ಳಬೇಕಾಗುತ್ತದೆ. ಹಿಂದೆ ಬಾಟ್ಲಿಂಗ್ ಪ್ರಕರಣ ಈ ರಾಜ್ಯದಲ್ಲಿ ನಡೆದಿತ್ತು. ಆ ಸಂದರ್ಭದಲ್ಲಿ ಹೈಕೋರ್ಟಿನಲ್ಲಿ ತೀರ್ಪನ್ನು ಕೊಟ್ಟಾಗ ಅಂದರೆ ಮುಖ್ಯ ಮಂತ್ರಿಗಳು ನೇರವಾಗಿ ಈ ವಿಚಾರದಲ್ಲಿ ಶಾಮೀಲಾಗಿದ್ದಾರೆಂಬ ವಿಚಾರವನ್ನು ಹೈಕೋರ್ಟ್‌ನವರು ಹೇಳಿದಾಗ ಸುಪ್ರೀಂ ಕೋರ್ಟಿಗೆ ಅಪೀಲು ಹೋದರು. ಇಲ್ಲಿ ಮುಖ್ಯ ಮಂತ್ರಿಗಳ ನೇರವಾದ ಕೈವಾಡ ಇಲ್ಲವೆಂದು ಅವರು ನ್ಯಾಯಮೂರ್ತಿಗಳಾಗಿ ತೀರ್ಪು ಕೊಟ್ಟರು ಹಿಂದೆ ಅಧಿಕಾರ ನಡೆಸಿದವರು ಸಹಾಯ ಮಾಡಿದವರ ಋಣ ತೀರಿಸಬೇಕೆಂದು ಲೋಕಾಯುಕ್ತವನ್ನು ತಂದರು. ಇಂದಿರಾಗಾಂಧಿಯವರ ವಿರುದ್ಧ ತೀರ್ಪು ಕೊಟ್ಟವರನ್ನು ಲೋಕಾಯುಕ್ತಕ್ಕೆ ತಂದು ಮುಖ್ಯ ಅಧಿಪತಿಯಾಗಿ ಮಾಡಿದರು. ಹೈಕೋರ್ಟಿನಲ್ಲಿ ತೀರ್ಪು ಕೊಟ್ಟವರು ಮುಖ್ಯ ನ್ಯಾಯಾಧೀಶರಾಗಿ ತೀರ್ಪು ಕೊಟ್ಟರು. ಜ. ಚಿನ್ನಪ್ಪ ರೆಡ್ಡಿಯವರು ರಿಟೈರ್ ಆದಮೇಲೆ ಅವರನ್ನು ಈ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದರು.

೪.೩೦ ಪಿ. ಎಂ.

ಉಪಾಧ್ಯಕ್ಷರು.— ತಾವು ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನಾನು ಮುಗಿಸುತ್ತೇನೆ.

ಉಪಾಧ್ಯಕ್ಷರು.— ಬೇರೆಯವರಿಗೆ ಮಾತನಾಡುವುದಕ್ಕೆ ನಾನು ಕರೆಯುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಉಪಾಧ್ಯಕ್ಷರೆ, ಬಹಳ ಮುಖ್ಯವಾದ ವಿಚಾರ ಇದು. ಯಾರ ಪಾಪದ ಕೂಸು ಎಂದರು. ಚಿನ್ನಪ್ಪರೆಡ್ಡಿ ಆಯೋಗದ ಬಗ್ಗೆ ಸದನದ ವ್ಯಾಪ್ತಿಯಲ್ಲಿ ಹೇಳುವ ಹಕ್ಕು ಮಾನ್ಯ ಸದಸ್ಯರಿಗೆ ನನಗೆ ಇರುವ ಹಾಗೆಯೇ ಅವರಿಗೂ ಇದೆ. ಅವರು ಹೇಳುತ್ತಾ ಇರತಕ್ಕ ಮಾತಿನಿಂದ ಬರತಕ್ಕ ಅರ್ಥ ಏನು ಎಂದರೆ, ರಾಮಕೃಷ್ಣ ಹೆಗಡೆ ಅವರ ವಿಚಾರದಲ್ಲಿ...

ಶ್ರೀ ಎಲ್. ಆರ್. ಶಿವರಾಮೇಗೌಡ.— ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ಏತಕ್ಕೆ ನೋಡಿಕೊಳ್ಳುತ್ತೀರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ನಿಮ್ಮ ಬಾಯಿಗೆ ಬಾಯಿ ಕೊಡುವಷ್ಟು ಮಟ್ಟಕ್ಕೆ ನನಗೆ ಸಾಧ್ಯವಿಲ್ಲ. ನಾನು ಜವಾಬ್ದಾರಿ ಸ್ಥಾನದಲ್ಲಿದ್ದೇನೆ. ಆದ್ದರಿಂದ ಜವಾಬ್ದಾರಿಯಿಂದ ಮಾತನಾಡುತ್ತೇನೆ. ನಿಮ್ಮ ಮಟ್ಟಕ್ಕೆ ಇಳಿಯುವುದಕ್ಕಾಗುವುದಿಲ್ಲ. ನನಗೆ ಒಂದು ಮಟ್ಟ ಇದೆ. ಮಾನ್ಯ ಉಪಾಧ್ಯಕ್ಷರೇ, ಬಾಟ್ಲಿಂಗ್ ಪ್ರಕರಣದ ಬಗ್ಗೆ ಒಂದು ಜಡ್ಜ್‌ಮೆಂಟ್ ಹೈಕೋರ್ಟಿನಲ್ಲಿ ಬಂತು. ಅದರ ಮೇಲೆ ಅಪೀಲ್ ಹೋದಾಗ ಜಸ್ಟೀಸ್ ಚಿನ್ನಪ್ಪರೆಡ್ಡಿ ಅವರ ವಿಚಾರ ಹೇಳಿದರು. ಅವರನ್ನು ಫೇವರ್ ಮಾಡಲಿಕ್ಕೆ ಮಾನ್ಯ ರಾಮಕೃಷ್ಣ ಹೆಗಡೆಯವರು ಅವರನ್ನು ಆಯೋಗದ ಅಧ್ಯಕ್ಷರನ್ನಾಗಿ ಮಾಡಿದ್ದರು ಎಂದು ಹೇಳಿದರು. ಈಗ ಅವರ ವರದಿ ಬಗ್ಗೆ ಚರ್ಚೆ ಮಾಡುವಂಥ ಹಕ್ಕು ನಮಗೆ ಇದೆ. ಚರ್ಚೆ ಮಾಡೋಣ. ಅವರ ತೀರ್ಮಾನ ಸರ್ಕಾರಕ್ಕೆ ಸಂಬಂಧಪಟ್ಟ ಹಾಗೆ ಏನಿದೆ ಅದನ್ನು ಚರ್ಚೆ ಮಾಡೋಣ. ಚಿನ್ನಪ್ಪರೆಡ್ಡಿ ಅವರು ಆ ಕಮಿಷನ್ ಹೆಡ್. ಅವರ ಬಗ್ಗೆ ಮಾತನಾಡುವಾಗ casting aspersions ಅವರ ಬಗ್ಗೆ ಏನಿದೆ ಅದು ಸರಿಯೇ ? ಅದು ಸದನಕ್ಕೆ ಗೌರವ ತರುತ್ತದೆಯೇ ಎಂಬುದನ್ನು ತಾವು ಯೋಚನೆ ಮಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಸಭಾಧ್ಯಕ್ಷರೆ, ನಮ್ಮ ಹಿರಿಯ ಸ್ನೇಹಿತರು ಸಲಹೆ ಕೊಟ್ಟಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.— We want a ruling. ಹಾಗಲ್ಲ ಉಪಾಧ್ಯಕ್ಷರೆ, ಏನು ಬೇಕಾದರೂ ಹೇಳಿಬಿಟ್ಟು ಹೋಗಬಹುದಾ ಇಲ್ಲಿ ?

MADAM DY. SPEAKER.— He wants to say something,

SRI P.G.R. SINDHIA.— It will go on record. You cannot allow this.

ಶ್ರೀ ಎಚ್. ಏಕಾಂತಯ್ಯ.— ಅವರ ಋಣ ತೀರಿಸುವುದಕ್ಕೆ ಮಾಡಿದ್ದಾರೆ ಎಂದರೆ ಅದು ಸರಿಯಲ್ಲ. ಆ ಹಂತಕ್ಕೆ ಅವರು ಹೋಗಬಾರದು.

(Interruptions)

SRI H. EKANTHAIAH.— I am on a point of order. Is it parliamentary ? He is casting aspersions.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.— ಅನ್‌ಪಾರ್ಲಿಮೆಂಟರಿ ಬಗ್ಗೆ ಯಾರೂ ಯೋಚನೆ ಮಾಡಬೇಕಾಗಿಲ್ಲ. ಆ ಜಡ್ಜಸ್ ಬಗ್ಗೆ ನನಗೆ ಗೌರವ ಇದೆ. ಚಿನ್ನಪ್ಪರೆಡ್ಡಿ ಅವರ ಬಗ್ಗೆ ನಾನು ಮಾತನಾಡುತ್ತಿಲ್ಲ.

ಶ್ರೀ ಎಚ್. ಏಕಾಂತಯ್ಯ.— ತೀರ್ಪನ್ನು ಕೊಟ್ಟಂಥ ನ್ಯಾಯಾಧೀಶರ ಋಣವನ್ನು ತೀರಿಸುವುದಕ್ಕೆ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದ್ದಾರೆ ಎಂದು ಹೇಳಿದರು. ಅದು ಸರಿಯಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಇವರು ತೀರಿಸುವುದಕ್ಕೆ, ನಿಮ್ಮವರು ತೀರಿಸುವುದಕ್ಕೆ.

ಶ್ರೀ ಎಚ್. ಏಕಾಂತಯ್ಯ.— ಅದನ್ನು ಕಡತದಿಂದ ತೆಗೆದುಹಾಕಬೇಕು. ಇದು ನಮ್ಮ ಮನವಿ.

AN HON MEMBER.— It is a remark on the judiciary.

ಉಪಾಧ್ಯಕ್ಷರು.— ನೀವು ಏನಾದರೂ ಹೇಳುತ್ತೀರಾ ?

ಶ್ರೀ ಎಲ್. ಆರ್. ಶಿವರಾಮೇಗೌಡ.— ಅದರ ಬಗ್ಗೆಯೇ ಹೇಳುವುದಕ್ಕೆ ಹೊರಟಿದ್ದೇನೆ. ಈಗ ನಾನು ಸ್ಟಾರ್ಟ್ ಮಾಡಿದ್ದೇನೆ.

ಉಪಾಧ್ಯಕ್ಷರು.— ತಾವು ಆಗಲೇ ಆ ಮಾತನ್ನು ಹೇಳಿದ್ದೀರಿ. ಅದರ ಬಗ್ಗೆ ನಮ್ಮ ಮಾನ್ಯ ಉಪನಾಯಕರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ಕಡತ ತರಿಸಿ ನೋಡಿ ಅವೇಲಿಂದ ತೆಗೆದುಹಾಕುವ ಹಾಗಿದ್ದರೆ ಖಂಡಿತ ತೆಗೆದುಹಾಕುತ್ತೇನೆ. ನೀವು ಮುಗಿಸಬೇಕು. ಮೂರು ಸಾರಿ ಬೆಲ್ ಹೊಡೆದರೂ ಮುಗಿಸಿಲ್ಲ. ಈಗ ಮುಗಿಸದಿದ್ದಾಗ ಬೇರೆಯವರನ್ನು ಕರೆಯಬೇಕಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇಂಥ ಒಂದು ದೊಡ್ಡ ಇಲಾಖೆ ಮೇಲೆ ಜಾಗ್ರತೆ ಮುಗಿಸು ಎಂದರೆ ಆಗುವುದಿಲ್ಲ. ಈಗ ಕೊನೆಗೆ ಬಂದಿದ್ದೇನೆ.

ಉಪಾಧ್ಯಕ್ಷರು.— ಇಲ್ಲ ಬೇರೆಯವರನ್ನು ಕರೆಯುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಇವತ್ತು ಸನ್ಮಾನ್ಯ ಹಿರಿಯ ಸಹೋದ್ಯೋಗಿಗಳಾದ ಸನ್ಮಾನ್ಯ ಉಪನಾಯಕರು ಹೇಳಿದರು. ಅವರಿಗೆ ಹೇಳುವುದಕ್ಕೆ ಹಕ್ಕಿದೆ. ಅವರು ಹೇಳುವುದನ್ನು ತಪ್ಪು ಎಂದು ಹೇಳುವುದಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ. ನಾವು ಯಾವಾಗ ಸಾಮಾಜಿಕ ಚಿಂತನೆ ಮಾಡುತ್ತೇವೋ ಆಗ ಆರ್ಥಿಕ ಚಿಂತನೆಯನ್ನೂ ಮಾಡಬೇಕಾಗುತ್ತದೆ. ಯಾವು ದಾದರೂ ವಿಚಾರ ಮಾತನಾಡುವುದಕ್ಕೆ ಹೊರಟಾಗ ಅದರ ಹಿನ್ನೆಲೆಯನ್ನು ತಿಳಿದುಕೊಳ್ಳುವುದರಲ್ಲಿ ತಪ್ಪಿಲ್ಲ. ಆ ಬಗ್ಗೆ ಹೇಳಿದರೆ ತಪ್ಪು ಎಂದು ಅವರು ತಿಳಿದುಕೊಳ್ಳಬಾರದು. ಇದು ನಡೆದು ಹೋಗಿರುವ ವಿಚಾರ. ಚಿನ್ನಪ್ಪರೆಡ್ಡಿಯವರ ಬಗ್ಗೆ ನನಗೆ ಗೌರವ ಇದೆ. ಚಿನ್ನಪ್ಪರೆಡ್ಡಿ ಅವರು ನ್ಯಾಯಾಧೀಶರು. ಅವರ ಬಗ್ಗೆ ಎರಡನೆಯ ಮಾತಿಲ್ಲ. ಇವರು ಮಾಡಿಸಿಕೊಂಡ ಸಹಾಯ ಏನಿದೆ... ಪಾಪ ಅವರು ನ್ಯಾಯಾಧೀಶರಾಗಿ ಕೆಲಸ ಮಾಡಿದರು. ಅವರು ಇವರ ಪರ ಮಾಡಲಿಲ್ಲ ಅಂತ ಅಲ್ಲ. ಅವರು ಮಾಡಿದ ಪಾಪದ ಫಲ ತೀರಿಸುವುದಕ್ಕೆ ಇವರು ಹೊರಟರಲ್ಲ ಎಂಬುದು ವಾದ ಅಲ್ವಾ ? ಸಿಂಧ್ಯ ಅವರಿಗೆ, ನಮ್ಮ ಸ್ನೇಹಿತರಿಗೆ ನೋವಿಲ್ಲ. ದಯವಿಟ್ಟು ಅವಕಾಶ ಕೊಡಬೇಕು. ನಮ್ಮದು ತಪ್ಪಿದ್ದರೆ ಕೇಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಚಿನ್ನಪ್ಪರೆಡ್ಡಿ ಆಯೋಗದ ಶೀರ್ಷಿಕೆ ಬಗ್ಗೆ ಮಾತಾನಾಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ.

ಶ್ರೀ ಎಚ್. ಏಕಾಂತಯ್ಯ.— ಇದು ಅಗೌರವ ತರುವ ವಿಷಯ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.— ಏನು ಬೇಕಾದರೂ ಹೇಳಲಿ. ಆದರೆ ಅದೇ ಹೇಳುತ್ತಾ ಇದ್ದರೆ ? ತಾವು ರೂಲಿಂಗ್ ಕೊಡುತ್ತೇವೆಂದು ಹೇಳಿದ್ದೀರಿ. ಆದರೂ ಅವರು ಅದನ್ನೇ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು.— ಇದರ ಬಗ್ಗೆ ಈಗಾಗಲೇ ಮಾತನಾಡಿದ್ದೀರಿ. ಕಡತದಿಂದ ತೆಗೆಸಿಹಾಕುವ ಬಗ್ಗೆ ನೋಡಿ ಹೇಳುತ್ತೇನೆ, ಈಗ ತಾವು ತಮ್ಮ ಭಾಷಣವನ್ನು ಮುಗಿಸಿಬಿಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನಿಮ್ಮ ಮೇಲೆ ನನಗೆ ಗೌರವ ಇದೆ. ನೀವು ಹೇಳುವ ಮಾತಿನ ಬಗ್ಗೆ ಚಕಾರ ಇಲ್ಲ. ಆದರೆ ಕಡತದಿಂದ ತೆಗೆದುಹಾಕುತ್ತೇನೆಂಬರೆ ಯಾವ ಕಾರಣಕ್ಕೋಸ್ಕರ ಎಂದು ತಾವು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು.— ನಾನು ನೋಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನೋಡುವಾಗ ನನ್ನನ್ನೂ ಸಹ ಕರೆಯಿರಿ. ಕಡತಕ್ಕೆ ಹೋಗಬಾರದಂತಹ ಮಾತನ್ನು ಹೇಳಿದ್ದರೆ ನೀವು ತೆಗೆದುಹಾಕಿ. ಆದರೆ ಏಕ್‌ದಮ್ ತೆಗೆದುಹಾಕಿದರೆ ಸಾಧುವಲ್ಲವೆಂದು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು.— ಇನ್ನೂ ತಮಗೆ ನಾನು ಟೈಮ್ ಕೊಡುವುದಕ್ಕಾಗುವುದಿಲ್ಲ. ಈಗ ಕರಿಯಣ್ಣನವರೇ, ನೀವು ಮಾತನಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನಾನು ಇನ್ನು ೧೦ ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು.— ಈಗ ಕರಿಯಣ್ಣನವರು ಮಾತನಾಡಬೇಕು. ನಿಮಗೆ ಎಷ್ಟು ಸಲ ಛಾನ್ಸ್ ಕೊಡುವುದು ?

ಶ್ರೀ ಎಲ್. ಆರ್. ಶಿವರಾಮೇಗೌಡ.— ನಾನು ಒಂದು ಮಾತು ಹೇಳಿ ಮುಗಿಸುತ್ತೇನೆ.

ಉಪಾಧ್ಯಕ್ಷರು.— ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನನಗೆ ತಮ್ಮ ಬಗ್ಗೆ ಸಾಕಷ್ಟು ಗೌರವ ಇದೆ. ನಾವು ಪ್ರಶ್ನೋತ್ತರ ಕಾಲದಲ್ಲಿ ಉಪಪ್ರಶ್ನೆ ಕೇಳಬೇಕೆಂದರೆ ಬೇಡಿಕೆಗಳ ಬಗ್ಗೆ ಚರ್ಚೆ ಬಂದಾಗ ಮಾತನಾಡಿ ಎಂದು ಹೇಳುತ್ತೀರಿ.

ಉಪಾಧ್ಯಕ್ಷರು.— ೪೦ ನಿಮಿಷ ತಾವು ತೆಗೆದುಕೊಂಡಿದ್ದೀರಿ. ಕೊನೆಯದಾಗಿ ಎಂದು ತಾವು ಎಷ್ಟು ಸಲ ಶುರು ಮಾಡುತ್ತೀರಿ ?

ಶ್ರೀ ಕರಿಯಣ್ಣ.— ಮಾನ್ಯ ಉಪಾಧ್ಯಕ್ಷರೇ, ನಾನು...

ಶ್ರೀ ಎಲ್. ಆರ್. ಶಿವರಾಮೇಗೌಡ.— ನಾನು ಇಂತಹ ಅನ್ಯಾಯ ಏನು ಆಗಿದೆ ಎಂಬ ಬಗ್ಗೆ ಹೇಳುತ್ತಿದ್ದೆ. ಚಿನ್ನಪ್ಪರೆಡ್ಡಿಯವರ ಆಯೋಗ ಅಸ್ತಿತ್ವಕ್ಕೆ ಬಂದಿದ್ದೇ ಪಾಪದ ಕೂಸೂ ಎಂದು ಹೇಳಿದ್ದೇನೆ.

ಉಪಾಧ್ಯಕ್ಷರು.—ತಾವು ಕುಳಿತುಕೊಳ್ಳಿ. ತಾವು ೪೦ ನಿಮಿಷ ಮಾತನಾಡಿದ್ದೀರಿ. ಪದೇ ಪದೇ ಅದನ್ನೇ ಹೇಳಿಕೊಂಡು ಮುಂದುವರಿಯುವುದಾದರೆ ಖಂಡಿತಾ ಇನ್ನು ಮುಂದೆ ನೀವು ಮಾತನಾಡುವುದು ಬೇಡ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನಾನು ಮುಂದಕ್ಕೆ ಹೋಗುತ್ತೇನೆ.

ಉಪಾಧ್ಯಕ್ಷರು.— ಮುಂದಕ್ಕೆ ಹೋಗುವುದಕ್ಕೆ ಟೈಮ್ ಇಲ್ಲ. ಒಂದೇ ಒಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕೊನೆಯದಾಗಿ ನಾನು ಮಾತನಾಡಬೇಕಾಗುತ್ತದೆ. ತಾವು ನನಗೆ ಅವಕಾಶ ಕೊಡಿ.

ಉಪಾಧ್ಯಕ್ಷರು.—೫ ಗಂಟೆಗೆ ರಿಪ್ಲೈ ಪ್ರಾರಂಭ ಮಾಡಬೇಕಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕುಳಿತುಕೊಳ್ರೀ ಕರಿಯಣ್ಣನವರೇ, ಉಪಾಧ್ಯಕ್ಷರೇ, ಆ ಸ್ಥಾನದಲ್ಲಿ ಅಧ್ಯಕ್ಷರು ಅಲಂಕೃತರಿದ್ದಾಗ ಜುಲ್‌ಜುಲ್‌ಕಿರಾಮ್‌ರಾಮ್ ಕೆಲಸ ಮಾಡಬೇಡಿ ಎಂದು ಹೇಳಿದೆವು. ದಯಮಾಡಿ ನಮಗೆ ಅವಕಾಶ ಮಾಡಿಕೊಡಬೇಕು. ನಮಗೆ ಇರತಕ್ಕ ಹಕ್ಕನ್ನು ತಾವು ಮೊಟಕುಗೊಳಿಸಬಾರದು. ನಮಗೆ ಮಾತನಾಡಲು ಇರುವ ಅವಕಾಶವನ್ನು ಕೊಡದೇ ಹೋದರೆ ಹೇಗೆ ? ನಾನು ಹೇಳಿದ್ದು ರೆಕಾರ್ಡ್‌ಗೆ ಹೋಗುವುದಕ್ಕೆ ವಿರುದ್ಧವಾಗಿದ್ದರೆ ತಾವು ಪರಿಶೀಲನೆ ಮಾಡಿ ತೆಗೆದು ಹಾಕಿ.

ಉಪಾಧ್ಯಕ್ಷರು.—ತಾವು ತಮ್ಮ ಭಾಷಣ ಮುಗಿಸುತ್ತೀರಾ ?

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ಮುಗಿಸುತ್ತೇನೆ. ಚಿನ್ನಪ್ಪರೆಡ್ಡಿಯವರ ಆಯೋಗಕ್ಕೆ ವೆಂಕಟಸ್ವಾಮಿಯವರ ಆಯೋಗದಲ್ಲಿ ಆದಂತಹ ಅನಾಹುತವೇ ಆಗುತ್ತದೆ. ಆಗ ಕೂಡಾ ಈ ರಾಜ್ಯದಲ್ಲಿ ಈ ಹಿಂದುಳಿದ ಜನಾಂಗದವರು ಬೀದಿಗೆ ಇಳಿಯುವ ಪರಿಸ್ಥಿತಿ ಬಂತು. ಅದೇ ಪರಿಸ್ಥಿತಿ ಈಗಲೂ ಬರುತ್ತದೆ. ವೆಂಕಟಸ್ವಾಮಿ ಆಯೋಗದಲ್ಲಿ ಅದನ್ನು ನಾವು ನೋಡಿದ್ದೇವೆ. ಆಗ ರಾಷ್ಟ್ರೀಯ ಹೆದ್ದಾರಿಯನ್ನು ವಾರಗಟ್ಟಲೆ ಅಡ್ಡಗಟ್ಟಿ ಅನೇಕ ಅನಾಹುತಗಳಾದವು. ಅದಕ್ಕೆ ಈ ಸರ್ಕಾರ ಮತ್ತೆ ಅವಕಾಶ ಕೊಡಬಾರದು. ಈ ಪಾಪದ ಕೂಸು ನಿಮ್ಮದಲ್ಲ. ಇದು ಹಿಂದಿನ ಸರ್ಕಾರದ್ದು. ಚಿನ್ನಪ್ಪರೆಡ್ಡಿಯವರು ನ್ಯಾಯಾಧೀಶರಾಗಿದ್ದಾಗ ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ ಎಲ್ಲಾ ವರ್ಗದ, ಹಿಂದುಳಿದ ವರ್ಗದ ಜನರನ್ನು ಸೇರಿಸಿ ೩ ಸದಸ್ಯರ ಆಯೋಗ ಮಾಡಬೇಕೆಂದು ಇದರಿಂದ ಅವರ ರಕ್ಷಣೆಯಾಗುತ್ತದೆಂದು ಅವರೇ ಹೇಳಿದ್ದಾರೆ.

ಶ್ರೀ ಪ್ರಭಾಕರ ರಾಣೆ.—ಸರ್ಕಾರಕ್ಕೆ ಅವರು ಬೆದರಿಕೆ ಹಾಕಿ...

(ಗೊಂದಲ)

ಉಪಾಧ್ಯಕ್ಷರು.—ಕರಿಯಣ್ಣನವರೇ, ತಾವು ಮಾತನಾಡಿ. ಅವರು ಮುಗಿಸುವ ಹಾಗೆ ಕಾಣುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾವು ಈ ಮನೆಯ ಸದಸ್ಯರು. ಈ ಮನೆಯ ಸದಸ್ಯರ ಗೌರವವನ್ನು ಕಾಪಾಡುವ ಸಂಪೂರ್ಣ ಜವಾಬ್ದಾರಿ ತಮ್ಮ ಮೇಲೆ ಇದೆ ನಾನೂ ಒಬ್ಬ ಈ ಮನೆಯ ಸದಸ್ಯನೆಂಬುದು ತಮಗೆ ಜ್ಞಾಪಕ ಇರಬೇಕು.

ಉಪಾಧ್ಯಕ್ಷರು.—ತಮಗೆ ಇನ್ನು ಎಷ್ಟು ಅವಕಾಶ ಕೊಡುವುದು ?

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ವಿಚಾರದಲ್ಲಿ ನಾನು ಮೂಲಭೂತವಾಗಿ ಪ್ರಶ್ನೆ ಮಾಡುತ್ತಿದ್ದೇನೆ. ಅವರು ವರದಿಯನ್ನು ಒಪ್ಪಿಸಿದ್ದಾರೆ. ಇದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟ ಮೇಲೆ ಸುದೀರ್ಘವಾಗಿ ಚರ್ಚೆ ಮಾಡೋಣ. ಆದರೆ ಅದಕ್ಕೆ ಮುಂಚೆ ಮಂತ್ರಿ ಮಂಡಲ ಈ ವಿಷಯವನ್ನು ಚರ್ಚೆ ಮಾಡಿ ಒಂದು ನಿರ್ಣಯವನ್ನು ಒಂದು ತೀರ್ಮಾನವನ್ನು ತೆಗೆದುಕೊಳ್ಳಲಿ. ಈ ವಿಷಯದ ಬಗ್ಗೆ ಹೊರಗೆ ಆಗುವ ಅನಾಹುತಗಳನ್ನು ನೋಡಿ ಆ ನಂತರ ಚರ್ಚೆ ಮಾಡುವುದು ಬೇಡ. ಆದ್ದರಿಂದ ಸರ್ಕಾರ ವರದಿಯನ್ನು ಪುನರ್ ಪರಿಶೀಲನೆ ಮಾಡಬೇಕು. ಪುನರ್ ಪರಿಶೀಲನೆಗೆ ಸರ್ಕಾರ ಅವಕಾಶ ಮಾಡಿಕೊಡಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕರಿಯಣ್ಣ (ಹೊಳೆಹೊನ್ನೂರು).—ಮಾನ್ಯ ಉಪಾಧ್ಯಕ್ಷಿಣೀಯವರೆ, ಇವತ್ತು ಸಮಾಜ ಕಲ್ಯಾಣ ಇಲಾಖೆ ಬೇಡಿಕೆಗಳನ್ನು ಏನು ಮಾನ್ಯ ಮಂತ್ರಿಗಳು ಮಂಡಿಸಿದ್ದಾರೆ, ಅವುಗಳನ್ನು ನಾನು ಅನುಮೋದಿಸುತ್ತಾ ಈ ಬೇಡಿಕೆಗಳ ಬಗ್ಗೆ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಿಂಧ್ಯಾರವರು ಈ ಇಲಾಖೆಯ ಮಂತ್ರಿಗಳಾಗಿದ್ದವರು ಅವರು ಬಹಳ ಚೆನ್ನಾಗಿ ಈ ಇಲಾಖೆಯ ಬಗ್ಗೆ ಏನು ಮಾತನಾಡಿದ್ದಾರೆ, ಅದನ್ನು ಮೆಚ್ಚಬೇಕಾಗಿದೆ. ಅದರ ಜೊತೆಗೆ ಅವರು ಮತ್ತೊಂದು ಸಲಹೆ ನೀಡಿದ್ದಾರೆ. ಅವರು ಮಾತನಾಡುವಾಗ ಈ ಇಲಾಖೆಗೆ ಬಹುತೇಕ ಹರಿಜನರನ್ನೇ ಮಂತ್ರಿಗಳನ್ನಾಗಿ ಮಾಡುತ್ತಿದ್ದಾರೆ. ಇದು ಸಮರ್ಪಕವಾದುದಲ್ಲವೆಂದೂ ಬೇರೆ ಜನಾಂಗದವರು ಮಂತ್ರಿಗಳಾಗಿರಬೇಕೆಂದು ಹೇಳಿದ್ದಾರೆ. ನಾನು ಹೇಳುತ್ತೇನೆ, ಈ ಇಲಾಖೆಗೆ ಹರಿಜನರೇ ಮಂತ್ರಿಗಳಾಗಿರಬೇಕು. ಇದಕ್ಕೆ ಕಾರಣ ಇಷ್ಟೆ, ಅವರು ಈ ಜನಾಂಗದಲ್ಲಿ ಹುಟ್ಟಿ ಅವರ ಕಷ್ಟ ನಷ್ಟ ನೋವು ನಲಿವು ಇವುಗಳಲ್ಲಿ ಬೆಂದು ನೊಂದು ಅವರಿಗೆ ಏನು ಬೇಕು ಏನು ಬೇಡವೆನ್ನುವುದು ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಈ ಜನರಿಗೆ ಇರತಕ್ಕ ಕಷ್ಟಗಳನ್ನು ಸಹ ಅವರು ಅನುಭವಿಸಿರುತ್ತಾರೆ. ಹರಿಜನ ಗಿರಿಜನರು ಪ್ರಗತಿ ಹೊಂದಬೇಕಾದರೆ ಏನೇನು ಕಾರ್ಯಕ್ರಮಗಳನ್ನು ಸೃಷ್ಟಿ ಮಾಡಿಕೊಳ್ಳಬೇಕಾಗಿದೆ, ಅದನ್ನು ಅವರೇ ಸೃಷ್ಟಿ ಮಾಡಿಕೊಳ್ಳುವುದು ಒಳ್ಳೆಯದು. ಬೇರೆಯವರ ಹಾಗೆ ಇವರು ಇರಬೇಕೆಂದು ಹೇಳುವುದು ಸಹಜವಾದುದು. ಬೇರೆಯವರು ಇವರ ಮೇಲೆ ಬಹಳಷ್ಟು ವರ್ಷಗಳಿಂದ ಸವಾರಿ ಮಾಡಿದ್ದಾರೆ. ಈ ಜನಾಂಗದವರ ಕಲ್ಯಾಣಕ್ಕೋಸ್ಕರ ಇರತಕ್ಕ ಇಲಾಖೆಯಲ್ಲಿ ಬಹಳಷ್ಟು ವರ್ಷಗಳಿಂದ ಹಿಂದುಳಿದಿರತಕ್ಕ ಇವರು ಇವರ ಕೈಯಲ್ಲಿಯೇ ಈ ಇಲಾಖೆ ಇರತಕ್ಕದ್ದು ಸರಿ ಎಂದು ನನ್ನ ಅಭಿಪ್ರಾಯ. ಮಾನ್ಯ ಮುಖ್ಯಮಂತ್ರಿಗಳು ಈ ಇಲಾಖೆಯನ್ನು ಈ ಜನಾಂಗದ ಯೋಗ್ಯರಾದವರಿಗೆ ಕೊಟ್ಟಿರುವುದು ಸರಿಯಾದುದಾಗಿದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಿಂಧ್ಯಾರವರು ಈ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದಾಗ ಅವರು ಈ ಇಲಾಖೆಯ ಬಗ್ಗೆ ನಡೆದುಕೊಂಡಿರತಕ್ಕ ರೀತಿ ಮತ್ತು ವೈಖರಿಯನ್ನು ನೋಡಿ ನನಗೆ ಈ ಇಲಾಖೆಯನ್ನು ಇವರಿಗೆ ಏತಕ್ಕೆ ಕೊಟ್ಟಿದ್ದಾರೋ ಎನ್ನುವ ಅನುಮಾನ ಇತ್ತು. ಏಕೆಂದರೆ ಈ ಇಲಾಖೆಗೆ ಬಹಳ ದೊಡ್ಡ ದೊಡ್ಡ ಅಧಿಕಾರಿಗಳನ್ನು ಅವರು ನೇಮಕ ಮಾಡಿದ್ದಲ್ಲದೆ ಸಾಕಷ್ಟು ಅಧಿಕಾರಿಗಳನ್ನು ತುಂಬಿ, ಅವರಿಗೆ ಯಾವುದೇ ವಿಧವಾದ ಅಧಿಕಾರವನ್ನು ಕೊಡದ ಕಾರಣದಿಂದ ಈ ಇಲಾಖೆಯಲ್ಲಿ ಯಾವುದೇ ರೀತಿಯ ಪ್ರಗತಿಪರ ಕೆಲಸ ಕಾರ್ಯಗಳು ಆಗುತ್ತಿರಲಿಲ್ಲ. ಹರಿಜನ ಗಿರಿಜನರಿಗೋಸ್ಕರವೇ ಈಗ ಒಬ್ಬರು ಮಂತ್ರಿಗಳಿದ್ದಾರೆ ಇದೊಂದು ದೊಡ್ಡ ಇಲಾಖೆ ಆಗಿದೆ. ಇವರಿಗಾಗಿ ಸಾಕಷ್ಟು ಹಣವನ್ನು ವ್ಯಯ ಮಾಡುತ್ತಿದ್ದೇವೆ ಆದರೂ ಏನೂ ಅಭಿವೃದ್ಧಿಯಾಗಿಲ್ಲವೆಂದು ಪ್ರಚಾರ ಮಾಡಿದರು. ಇವರಿಗಾಗಿ ಬಹಳಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತಿದ್ದರು. ಆದರೆ ಈ ಜನಾಂಗದವರು ಇವತ್ತು ಸಹ ಸಾಕಷ್ಟು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಉದಾಹರಣೆಗಾಗಿ ಹೇಳುತ್ತಿದ್ದೇನೆ ಈವೊಂದು ಇಲಾಖೆಯಲ್ಲಿ ಉದ್ಯೋಗಗಳನ್ನು ಸೃಷ್ಟಿ ಮಾಡುವುದಾಗಲೀ ಅಥವಾ ಸಾರ್ವಜನಿಕ ಉದ್ದಿಮೆಗಳಲ್ಲಿ, ಸಹಕಾರ ಸಂಸ್ಥೆಗಳಲ್ಲಿ ಹರಿಜನ ಗಿರಿಜನರಿಗಾಗಿ ಮೀಸಲಾಗಿಟ್ಟಿರತಕ್ಕ

ಉದ್ಯೋಗಗಳನ್ನು ಇವರಿಗೆ ಕೊಡದಿದ್ದರೆ ಅದನ್ನು ಪರಿಶೀಲನೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ಅಧಿಕಾರ ಈ ಇಲಾಖೆಗೆ ಇಲ್ಲ. ಇಷ್ಟು ವರ್ಷಗಳಾದರೂ ಸೃಷ್ಟಿ ಮಾಡಿರತಕ್ಕ ಉದ್ಯೋಗಗಳನ್ನು ಪಡೆದು ಈ ಜನರು ಬದುಕಲಿಕ್ಕೆ ಸಾಧ್ಯವಾಗದೇ ಇರತಕ್ಕ ಪರಿಸ್ಥಿತಿ ಇದೆ. ಇವರಿಗಾಗಿ ಇರತಕ್ಕ ಉದ್ಯೋಗಗಳೇ ಇವರಿಗೆ ಸಿಗುವುದಿಲ್ಲ. ಈ ಜನಾಂಗದವರು ಬದುಕಲಿಕ್ಕೆ ಒಂದು ಮನೆ ಕಟ್ಟಿಕೊಳ್ಳಲಿಕ್ಕೆ ಬೇಕಾದ ನಿವೇಶನವನ್ನು ಕೊಡುವ ಅಧಿಕಾರ ಸಹ ಈ ಇಲಾಖೆಗೆ ಇಲ್ಲ. ಮಾನ್ಯ ಸಿಂಧ್ಯಾರವರು ಮಾತನಾಡುತ್ತಾ ಬೆಂಕಿ ಅಪಘಾತದಲ್ಲಿ ಗುಡಿಸಲುಗಳು ಸುಟ್ಟರೆ ಪರಿಹಾರ ಕೊಡಲು ೧ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿಟ್ಟಿದ್ದಾರೆಂದು ಹೇಳಿದರು. ಇದನ್ನು ಹೆಚ್ಚು ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ವಿಶೇಷ ಘಟಕ ಯೋಜನೆ ಅಡಿಯಲ್ಲಿ ಅನೇಕ ಇಲಾಖೆಗಳನ್ನು ಇವರಿಗೆ ಸೇರಿಸಿದ್ದಾರೆ. ತೋಟಗಾರಿಕೆ ಇಲಾಖೆ. ಕೈಗಾರಿಕೆ ಇಲಾಖೆ ವ್ಯವಸಾಯ ಇಲಾಖೆ. ವಿದ್ಯಾ ಇಲಾಖೆ. ಹೀಗೆ ಯಾವುದೇ ಇಲಾಖೆ ಇರಬಹುದು. ಈ ತರಹ ಅನೇಕ ಇಲಾಖೆಗಳನ್ನು ಸೇರಿಸಿ ಈ ಎಲ್ಲ ಇಲಾಖೆಗಳನ್ನು ಆಯಾ ಇಲಾಖೆಗಳ ಅಧಿಕಾರ ವರ್ಗದವರೇ ಇದನ್ನು ನೋಡಿಕೊಳ್ಳುತ್ತಿದ್ದಾರೆ. ವಿನಹ ಸಮಾಜ ಕಲ್ಯಾಣ ಇಲಾಖೆಯವರಿಗೆ ಯಾವುದೇ ವಿಧವಾದ ಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳತಕ್ಕ ಅಧಿಕಾರವಿಲ್ಲ. ಏನಾದರೂ ಲೋಪ ದೋಷಗಳಾಗಿದ್ದರೆ ಅದನ್ನು ಸಹ ಪರಿಶೀಲನೆ ಮಾಡುವ ಅಧಿಕಾರ ಇವರಿಗೆ ಇಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮೊದಲೇ ಅಧಿಕಾರವಿಲ್ಲ. ಹಾಗಾದರೆ ಯಾವುದೇ ಅಧಿಕಾರವಿಲ್ಲದ ಈ ಇಲಾಖೆ ಏತಕ್ಕೆ ಇರಬೇಕು ? ಯಾವುದೇ ಅಧಿಕಾರ ಈ ಇಲಾಖೆಯ ಮಂತ್ರಿಗಳಿಗೂ ಇಲ್ಲವೆಂದು ನನಗೆ ಅನಿಸುತ್ತದೆ. ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಎಲ್ಲ ಖಾತೆಗಳ ಮಂತ್ರಿಗಳ ಹತ್ತಿರ ಭಿಕ್ಷೆ ಬೇಡಬೇಕಾಗಿದೆ. ಈ ಯೋಜನೆ ಅಡಿಯಲ್ಲಿ ರಸ್ತೆ ಮಾಡಿಸಬೇಕಾದರೆ ಲೋಕೋಪಯೋಗಿ ಮಂತ್ರಿಗಳಾದ ಮಾನ್ಯ ಪುಟ್ಟಸ್ವಾಮಿ ಗೌಡರನ್ನು ಕೇಳಬೇಕಾಗಿದೆ. ಅದೇ ರೀತಿ ಬೀಜ, ಗೊಬ್ಬರ, ಕೃಷಿ ಉಪಕರಣ ಇವುಗಳು ಬೇಕಾದರೆ ವ್ಯವಸಾಯ ಮಂತ್ರಿಗಳಾದ ಮಾನ್ಯ ಬಂಗಾರಪ್ಪನವರನ್ನು ಕೇಳಬೇಕಾಗಿದೆ.

ಎಲ್ಲಿಯಾದರೂ ಒಂದು ಎಕರೆ, ಎರಡು ಎಕರೆ ಜಮೀನು ಕೊಡಬೇಕೆಂದರೆ ರೆವಿನ್ಯೂ ಇಲಾಖೆಯನ್ನು ಹೊತ್ತಿರತಕ್ಕಂಥ ಶ್ರೀ ಕೆ. ಎಚ್. ಪಾಟೀಲರನ್ನು ಕೇಳಬೇಕು. ಈ ತರಹದಲ್ಲಿ ಶ್ರೀ ಶಿವಣ್ಣನವರದ್ದು ಏನು ಗತಿಯಾಗಿದೆ ಎಂದರೆ ಎಲ್ಲರ ಹತ್ತಿರ ಬಿಕ್ಷೆ ಬೇಡತಕ್ಕಂಥ ಪರಿಸ್ಥಿತಿ ಆಗಿದೆ. ಇದು ಯಾವುದೇ ಸರ್ಕಾರ ಇರಬಹುದು. ಕಳೆದ ನಲವತ್ತು ವರ್ಷಗಳಿಂದ ಆಳುತ್ತಿರುವ ಯಾವುದೇ ಸರ್ಕಾರ ಇರಲಿ. ಸುಮ್ಮನೆ ಹರಿಜನರ ಅಭಿವೃದ್ಧಿಗಾಗಿ ಮಾತನಾಡುವುದು ಆಗಿದೆಯೇ ವಿನಹ ಯಾವುದೇ ದಕ್ಷ ಅಧಿಕಾರಿಯನ್ನು ಈ ಇಲಾಖೆಗೆ ಹಾಕಿ ಈ ಇಲಾಖೆಯ ಕಾರ್ಯ ಚಟುವಟಿಕೆಗಳನ್ನು ಚುರುಕುಗೊಳಿಸುವ ಬಗ್ಗೆ ಸಮರ್ಪಕವಾದ ಹಾಗೂ ಸೂಕ್ತವಾದ ವ್ಯವಸ್ಥೆಯನ್ನು ಇದುವರೆಗೂ ಮಾಡಿಲ್ಲ. ಇದನ್ನು ಮಾಡತಕ್ಕಂಥ ದಿಟ್ಟ ನಿಲುವನ್ನು ಶ್ರೀ ಶಿವಣ್ಣನವರು ತೆಗೆದುಕೊಳ್ಳುತ್ತಾರೋ ಏನೋ, ಅಕಸ್ಮಾತ್ ಅಂತಹ ಒಂದು ಕಾರ್ಯಕ್ರಮಗಳು ಸಿಗದೇ ಹೋದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಶ್ರೀ ಶಿವಣ್ಣನವರು ಪ್ರತಿಭಟನೆ ವ್ಯಕ್ತಪಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇದಲ್ಲದೆ ನಮ್ಮಲ್ಲಿ ೧೮ ಪರ್ಸೆಂಟ್ ಹಣ ನಗರಸಭೆ ಮತ್ತು ಪುರ ಸಭೆಗಳಲ್ಲಿ ಮತ್ತು ಇತರ ಇಲಾಖೆಗಳಲ್ಲಿ ಸಹಿತ ಇದೆ. ಇದನ್ನು ಯಾರು ಪರಿಶೀಲನೆ ಮಾಡಬೇಕು? ೧೮ ಪರ್ಸೆಂಟ್ ಹಣ ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಇಟ್ಟಿರುವುದು ಸರಿಯಾಗಿ ಖರ್ಚಾಗಿದೆಯೇ ಎಂದು ಯಾರು ಪರಿಶೀಲನೆ ಮಾಡಬೇಕು? ಇದನ್ನು ಪರಿಶೀಲನೆ ಮಾಡಿ ಒಂದು ಪಕ್ಷ ಆ ಹಣ ಖರ್ಚು ಮಾಡದಿದ್ದರೆ ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥ ನಿಯಮ ಕೂಡ ಈ ಇಲಾಖೆಯಲ್ಲಿ ಇಲ್ಲ, ಹೀಗಾಗಿ ಈ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ. ಯಾವ ರೀತಿ ನಾವು ಕೆಲಸ ತೆಗೆದುಕೊಳ್ಳಬೇಕು ಎನ್ನತಕ್ಕದ್ದು ನಮಗೆ ತಿಳಿಯದಂತೆ ಆಗಿದೆ. ಇದಲ್ಲದೆ ಬಹಳ ಮಹತ್ತರವಾದ ವಿಚಾರ ಎಂದರೆ, ಬೇರೆ ಯಾರ್ಯಾರು ಈ ಜನಾಂಗಕ್ಕೆ ಸೇರುತ್ತಾರೆ ಎಂದು ಪರಿಶೀಲನೆ ಮಾಡಿ ಪಟ್ಟಿ ತಯಾರು ಮಾಡತಕ್ಕಂಥ ಅಧಿಕಾರ ಈ ಇಲಾಖೆಗೆ ಇದೆ. ನಾನು ಮೊನ್ನೆ ತಾನೆ ಈ ಬಗ್ಗೆ ಒಂದು ಪ್ರಶ್ನೆ ಕೇಳಿದ್ದೆ ಈ ಇಲಾಖೆಗೆ ಜಾತಿ ಸರ್ಟಿಫಿಕೇಟ್ ಕೊಡುವ ಅಧಿಕಾರ ಸಹ ಇಲ್ಲ. ಒಬ್ಬ ತಹಸೀಲ್ದಾರ್ ಈ ಸರ್ಟಿಫಿಕೇಟ್ ಕೊಡಬಹುದಂತೆ. ತಹಸೀಲ್ದಾರಗಿಂತ ಮೇಲೆ ಇರತಕ್ಕಂಥ ಐ.ಎ.ಎಸ್. ದರ್ಜೆಯ ಅಧಿಕಾರಿ ಅನ್ನು ಡೈರೆಕ್ಟರ್ ಆಗಿ ಮಾಡಿದ್ದರೂ ಸಹ ಅವರಿಗೂ ಸಹ ಈ ಜಾತಿ ಸರ್ಟಿಫಿಕೇಟ್ ಕೊಡುವ ಅಧಿಕಾರ ಇಲ್ಲ. ನಾವು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯನ್ನು ಕ್ಲಾಸ್-೧ ಅಧಿಕಾರಿ ಎಂದು ಮಾಡಿದ್ದೇವೆ ಆದರೆ ಆ ಕ್ಲಾಸ್-೧ ಅಧಿಕಾರಿಗೆ ಜಾತಿ ಸರ್ಟಿಫಿಕೇಟ್ ಕೊಡತಕ್ಕಂಥ ಅಧಿಕಾರ ಇಲ್ಲ. ಈ ರೀತಿಯಾದ ವ್ಯವಸ್ಥೆಯಲ್ಲಿ ಈ ಸಮಾಜ ಕಲ್ಯಾಣ ಇಲಾಖೆಯನ್ನು ಇಟ್ಟುಕೊಂಡು ಹರಿಜನ ಗಿರಿಜನರ ಉದ್ಧಾರ ಮಾಡಿ ಎಂದರೆ ಯಾವ ರೀತಿ ಉದ್ಧಾರವಾಗುತ್ತದೆ ಎಂದು ತಾವು ಯೋಚನೆ ಮಾಡಬೇಕಾಗುತ್ತದೆ. ಇದೂ ಅಲ್ಲದೆ ಅನೇಕ ಉದ್ಯಮಗಳನ್ನು ಸೃಷ್ಟಿ ಮಾಡಿಕೊಳ್ಳುವುದಕ್ಕೆ ಸಾರ್ವಜನಿಕರು ಅನೇಕ

ಕೈಗಾರಿಕೆಗಳನ್ನು ಸ್ಥಾಪನೆ ಮಾಡಿಕೊಳ್ಳುತ್ತಾರೆ. ಸರ್ಕಾರದಿಂದ ಬರತಕ್ಕಂಥ, ಉತ್ಪಾದನೆಯಾಗದಂಥ ಕೈಗಾರಿಕೆಗಳ ಏಜೆನ್ಸಿಯನ್ನು ತೆಗೆದುಕೊಳ್ಳುತ್ತಾರೆ ಅಥವಾ ಸರ್ಕಾರದಿಂದ ಉತ್ಪಾದನೆಯಾಗತಕ್ಕಂಥ ಫುಡ್‌ಪ್ರಾಡಕ್ಟ್ಸ್‌ಗಳ ಏಜೆನ್ಸಿಯನ್ನು ತೆಗೆದುಕೊಳ್ಳುತ್ತಾರೆ. ಆದರೆ ಹರಿಜನ ಗಿರಿಜನರಿಗಾಗಿ ಅಲ್ಲಿ ಲಾಭ ಸಿಗತಕ್ಕಂಥ ಯಾವುದೇ ವಿಧವಾದ ಸರ್ಕಾರದ ಏಜೆನ್ಸಿಯನ್ನು ಕೊಡಿಸತಕ್ಕಂಥ ನಿಯಮಾವಳಿಗಳನ್ನು ಸಹಿತ ಇವರು ಮಾಡಿಲ್ಲ. ಅದಕ್ಕಾಗಿ ಮೈನ್ಸ್ ಅಂಡ್ ಜ್ಯುಯಾಲಜಿ ಬಗ್ಗೆ ಕೆಲವರು ಕೇಳುತ್ತಿದ್ದರು ಏನೆಂದರೆ ಹರಿಜನ ಗಿರಿಜನರಿಗೆ ಮೈನ್ಸ್ ತೆಗೆಯುವುದಕ್ಕೆ ಗುತ್ತಿಗೆ ಕೊಡುತ್ತೀರಾ ಎಂದು ಇವರಲ್ಲಿ ಅನೇಕರಿಗೆ ಬಂಡವಾಳ ಇಲ್ಲವೆಂದು ತಾವು ಹೇಳಬಹುದು. ಇಲ್ಲವೇ ಅವರಿಗೆ ಜ್ಞಾನ ಇಲ್ಲವೆಂದು ತಾವು ಹೇಳಬಹುದು. ತಮಗೆ ಗೊತ್ತಿರುವಂತೆ ಹರಿಜನ ಗಿರಿಜನರಲ್ಲಿ ಶ್ರೀಮಂತ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಈ ರಾಜ್ಯದಲ್ಲಿ ಇಲ್ಲ. ಆದ್ದರಿಂದ ಸರ್ಕಾರವೇ ಒಂದು ಮೂಲ ಬಂಡವಾಳ ಕೊಟ್ಟು ಅವರು ಕೈಗಾರಿಕೆಗಳನ್ನು ನಡೆಸಲು ಏಕೆ ಅವಕಾಶ ಮಾಡಿ ಕೊಡಬಾರದು ಎಂದು ನಾನು ತಮ್ಮಲ್ಲಿ ಕೇಳಬಯಸುತ್ತೇನೆ. ಇನ್ನು ಅನೇಕ ವರ್ಷಗಳಿಂದ ಹರಿಜನ–ಗಿರಿಜನರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಾಸ್ಟೇಲ್‌ಗಳನ್ನು ತೆರೆಯುವುದರ ಮೂಲಕ ಪ್ರೋತ್ಸಾಹ ನೀಡಿದ್ದೀರಿ, ಇಲ್ಲ ಅಂತ ಅಲ್ಲ. ಆದರೆ ೧೯೭೪–೭೫ರಲ್ಲಿ ಹಾಸ್ಟೇಲ್‌ಗಳು ಸ್ಥಾಪನೆಯಾಗಿ ಅಲ್ಲಿ ನೂರು ಹುಡುಗರಿಗೆ ಮಾತ್ರ ಸೀಮಿತ ಎಂದು ನಿಗದಿ ಮಾಡಿದ್ದರೆ. ೭೫ರಿಂದ ೯೦ರವರೆಗೆ ಕೂಡ ಆ ನೂರು ಜನ ಹುಡುಗರನ್ನೇ ಅಲ್ಲಿ ಇಟ್ಟುಕೊಂಡಿದ್ದೀರಿ. ಇವತ್ತು ಜನಸಂಖ್ಯೆ ಎಷ್ಟು ಹೆಚ್ಚಾಗಿದೆ. ಆ ಜನಸಂಖ್ಯೆಯ ಆಧಾರದ ಮೇಲೆ ಆ ಮಕ್ಕಳ ಅಭಿವೃದ್ಧಿಗಾಗಿ ಅಷ್ಟೇ ಪ್ರಮಾಣದಲ್ಲಿ ಹಾಸ್ಟೇಲ್‌ಗಳನ್ನು ಹೆಚ್ಚು ಮಾಡಬೇಕಾಗಿತ್ತು. ವಿದ್ಯಾಭ್ಯಾಸ ಬಗ್ಗೆ ಎಷ್ಟು ಸವಲತ್ತು ಕೊಡಬೇಕಿತ್ತೋ ಅಷ್ಟು ತಾವು ಕೊಟ್ಟಿಲ್ಲ. ಅದೂ ಅಲ್ಲದೆ ಅನೇಕ ಉನ್ನತವಾದ ವಿದ್ಯಾ ಸಂಸ್ಥೆಗಳಲ್ಲಿ ಹರಿಜನ-ಗಿರಿಜನ ಮಕ್ಕಳನ್ನು ಸೇರಿಸುವುದಿಲ್ಲ. ಆದರೆ ಅವುಗಳನ್ನು ಸ್ಥಾಪನೆ ಮಾಡುವುದಕ್ಕೆ ಮಾತ್ರ ಸರ್ಕಾರದ ಪರ್ಮಿಶನ್ ಅನ್ನು ಅವರು ತೆಗೆದುಕೊಳ್ಳುತ್ತಾರೆ. ಕಡೇ ಪಕ್ಷ ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ೧೮ ಮಕ್ಕಳಿಗಾದರೂ ಈ ಎಜುಕೇಷನ್ ಸಂಸ್ಥೆಗಳಲ್ಲಿ ಅಡ್ಮಿಷನ್ ಮಾಡಿದ್ದಾರೆಯೋ ಎಂಬುದನ್ನು ತಾವು ನೋಡಬೇಕು. ಬೆಂಗಳೂರಿನಲ್ಲಿರತಕ್ಕ ವಿದ್ಯಾ ಸಂಸ್ಥೆಗಳಲ್ಲಿ ಈ ರೀತಿ ಮಾಡಿದ್ದಾರೆಯೋ? ಒಂದು ವೇಳೆ ಮಾಡದೇ ಇದ್ದರೆ ಏಕೆ ಮಾಡಲಿಲ್ಲ ಎಂಬುದನ್ನು ಪರಿಶೀಲನೆ ಮಾಡುವ ಅಧಿಕಾರ ನಿಮಗಿದೆಯೇ? ಇಲ್ಲದಿದ್ದರೆ ಆ ಅಧಿಕಾರವನ್ನು ತೆಗೆದುಕೊಳ್ಳುವ ಧೈರ್ಯವನ್ನು ತಾವು ಮಾಡಬೇಕು. ಇದರಿಂದ ಅನೇಕ ಮಕ್ಕಳಿಗೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವೆಲ್ಲಕ್ಕೂ ಕೂಡ ಸರ್ಕಾರ ಭದ್ರತೆ ಕೊಡದೇ ಹೋದರೆ, ನಿಜವಾಗಿಯೂ ಹರಿಜನರ ಉದ್ಧಾರವಾಗುವುದಿಲ್ಲ. ಸರ್ಕಾರ ಯಾವ ರೀತಿಯಲ್ಲಿ ಅನ್ಯಾಯ ಮಾಡುತ್ತಾ ಹೋಗುತ್ತಿದೆ ಎಂದರೆ, ಇವತ್ತು ಅನೇಕ ಟೆಕ್ನಿಕಲ್ ವಿದ್ಯಾ ಸಂಸ್ಥೆಗಳನ್ನು ತೆರೆಯಲು ಖಾಸಗಿಯವರಿಗೆ ಅನುಮತಿ ಕೊಡುತ್ತಿದೆ. ಟೆಕ್ನಿಕಲ್ ಅಂದರೆ ಅದು ಎಂ.ಬಿ.ಬಿ.ಎಸ್. ಆಗಿರಬಹುದು ಇಂಜಿನಿಯರಿಂಗ್ ಆಗಿರಬಹುದು ಅಥವಾ ಅನೇಕ ಟೆಕ್ನಿಕಲ್ ಕಂಪ್ಯೂಟರ್ ಸಿಸ್ಟಂ ಆಗಿರಬಹುದು. ಇವೆಲ್ಲವನ್ನೂ ತೆರೆಯಲು ಖಾಸಗಿಯವರಿಗೇ ಅನುಮತಿ ಕೊಡುವಾಗ ಹರಿಜನರಿಗೆ ೧೮ ಪರ್ಸೆಂಟ್ ಕೊಡಬೇಕೆಂಬ ನಿಯಮಾವಳಿಗಳನ್ನು ಹಾಕಿ ಏಕೆ ಕೊಟ್ಟಿಲ್ಲ? ಆ ರೀತಿ ಕೊಡದೇ ಇರುವುದರಿಂದ, ಈ ಮಕ್ಕಳು ಇಷ್ಟು ವರ್ಷಗಳಾದರೂ ಅಭಿವೃದ್ಧಿಯಾಗದೇ ಇರುವುದಕ್ಕೆ ಕಾರಣವಾಗಿದೆ. ಈ ನ್ಯೂನತೆಗಳನ್ನು ಮಾನ್ಯ ಮಂತ್ರಿಗಳು ಸರಿಪಡಿಸುವುದಕ್ಕೆ ದಿಟ್ಟ ಹೆಜ್ಜೆ ಇಡುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ವಿದ್ಯಾ ಇಲಾಖೆಯಲ್ಲಿ ಸರ್ಕಾರ ಒಂದು ಆರ್ಡರನ್ನು ಹೊರಡಿಸಿದೆ. ಎಲ್ಲೆಲ್ಲಿ ನೌಕರರನ್ನು ತೆಗೆದುಕೊಳ್ಳಬೇಕೋ ಅಲ್ಲಿ ರೋಸ್ಟರ್ ಸಿಸ್ಟಂ ಅನುಸರಿಸಬೇಕು. ಮೊದಲನೇ ಉದ್ಯೋಗವನ್ನು ಹರಿಜನ ಗಿರಿಜನರಿಗೆ ಮೀಸಲಾಗಿಡಬೇಕೆಂದು ಹೇಳಿದ್ದಾರೆ. ಆದರೆ, ಅವರು ಮುಂದಿನ ಉದ್ಯೋಗವನ್ನು ಹರಿಜನ ಗಿರಿಜನರಿಗೆ ಕೊಡುತ್ತೇವೆಂದು ಹೇಳಿ, ಎಲ್ಲಾ ಉದ್ಯೋಗಗಳನ್ನೂ ಬೇರೆ ಜನರಿಗೆ ಕೊಟ್ಟು ತುಂಬಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೆ ಅಧಿಕಾರ ಇದೆಯೇ? ಇಲ್ಲದೇ ಹೋದರೆ, ಇದರ ಅಧಿಕಾರವನ್ನೂ ವಿದ್ಯಾ ಇಲಾಖೆಗೆ ಕೊಟ್ಟು ಬಿಟ್ಟಿದ್ದೀರಾ? ಈ ಬಗ್ಗೆ ತನಿಖೆ ಮಾಡುವುದಕ್ಕೆ ಅಥವಾ ಇದರ ಬಗ್ಗೆ ಕೇಸ್ ರಿಜಿಸ್ಟರ್ ಮಾಡುವುದಕ್ಕೆ ನಿಯಮಾವಳಿಗಳು ನಿಮ್ಮಲ್ಲಿ ಇವೆಯೇ? ಇಲ್ಲದಿದ್ದರೆ ಆ ಅಧಿಕಾರವನ್ನು ತೆಗೆದುಕೊಂಡು ರೋಸ್ಟರ್ ಪ್ರಕಾರ ಹರಿಜನ ಗಿರಿಜನರನ್ನು ಈ ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ತುಂಬಿಕೊಳ್ಳುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇದಲ್ಲದೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡತಕ್ಕ ವ್ಯವಸ್ಥೆ ಸರ್ಕಾರದಲ್ಲಿ ಇದೆ. ಹಾಸ್ಟಲಿನಲ್ಲಿ ಓದುವವರಿಗೆ ಹಾಸ್ಟಲ್ ವಿದ್ಯಾರ್ಥಿ ವೇತನ, ಮನೆಯಲ್ಲಿ ಓದುವವರಿಗೆ ಬೇರೆ ರೀತಿ ವಿದ್ಯಾರ್ಥಿ ವೇತನ ಸಿಗುತ್ತಿದೆ. ಎಂದರೆ, ಹಾಸ್ಟಲಿನಲ್ಲಿ ಸೀಟು ಸಿಕ್ಕಿ, ಓದತಕ್ಕ ವಿದ್ಯಾರ್ಥಿಗಳಿಗೆ ೨೫೦ ರೂಪಾಯಿಗಳನ್ನು ಕೊಟ್ಟರೆ

ಅದೇ ಹಳ್ಳಿಯಿಂದ ಬಂದು, ಪಟ್ಟಣದಲ್ಲಿ ರೂಮ್ ಮಾಡಿಕೊಂಡು, ಸ್ವತಃ ಅಡಿಗೆ ಮಾಡಿಕೊಂಡು ಓದುವವರಿಗೆ ೧೨೫ ರೂಪಾಯಿಗಳನ್ನು ಕೊಟ್ಟರೆ ತೊಂದರೆ ಆಗುತ್ತದೆ. ಆದ್ದರಿಂದ ಈ ಮಕ್ಕಳನ್ನೂ ಹಾಸ್ಟಲ್ ಹುಡುಗರೆಂದು ತೀರ್ಮಾನಿಸಿ ಹಾಸ್ಟಲ್ ಹುಡುಗರಿಗೆ ಕೊಡುವಂತೆ, ಅಷ್ಟೇ ಸ್ಕಾಲರ್‌ಷಿಪ್‌ನ್ನು ಇವರಿಗೂ ಕೊಡಬೇಕು. ತನ್ಮೂಲಕ ನಗರದಲ್ಲಿ ಹಾಸ್ಟಲ್ ಅವಕಾಶ ಸಿಕ್ಕದೇ ಇರುವವರಿಗೂ ತಾವು ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಇನ್ನು ಅನೇಕ ಸ್ವಯಂ ಉದ್ಯೋಗಿಗಳಿಗೆ ಟೆಕ್ನಿಕಲ್ ತರಬೇತಿಯನ್ನು ಕೊಡುವುದಕ್ಕೆ ಕೆಲವು ತರಬೇತಿ ಕೇಂದ್ರಗಳನ್ನು ತೆರೆದಿದ್ದೀರಿ. ಇದು ಸ್ವಾಗತಾರ್ಹವಾದರೂ, ಇವುಗಳ ಸಂಖ್ಯೆ ಪ್ರಮಾಣ ಬಹಳ ಕಡಿಮೆ ಇದೆ. ಅಪ್ರೆಂಟಿಸ್‌ಷಿಪ್ ಕೇಂದ್ರಗಳನ್ನು ಹೆಚ್ಚು ಮಾಡಿ, ಉದ್ಯೋಗಕ್ಕೆ ಅರ್ಹವಾದ ತರಬೇತಿ ಕೇಂದ್ರಗಳಿಗೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ಈ ಎರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ, ಜೈಹಿಂದ್.

† ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಉಪಾಧ್ಯಕ್ಷಣಿಯವರೇ, ಸಮಾಜಕಲ್ಯಾಣ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯನ್ನು ಕುರಿತು ಎರಡು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ. ಮುಖ್ಯವಾಗಿ ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದವರ್ಗಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಕುರಿತುಹೇಳುತ್ತೇನೆ, ಹಲವಾರು ಹಾಸ್ಟೆಲ್‌ಗಳಲ್ಲಿರುವಂತಹ ವಿದ್ಯಾರ್ಥಿ ವಿದ್ಯಾರ್ಥಿನಿಯರ ದಿನನಿತ್ಯದ ಊಟದ ವೆಚ್ಚಕ್ಕೆ ಕೊಡುವ ಹಣವನ್ನು ನೋಡಿದರೆ ಬಹುಶಃ ಇದು ಬಹಳ ಹಿಂದೆ ನಿಗದಿ ಮಾಡಿರುವಂತಹ ಹಣ ಎಂದು ಕಾಣುತ್ತದೆ. ಇದು ಅವರ ಒಂದು ಹೊತ್ತಿನ ಊಟದ ವೆಚ್ಚಕ್ಕೂ ಸಾಲದಷ್ಟು ಮಟ್ಟದಲ್ಲಿದೆ. ಒಬ್ಬ ವಿದ್ಯಾರ್ಥಿಗೆ ಎರಡು ಹೊತ್ತಿನ ಊಟ ಕೊಡಬೇಕಾಗಿದ್ದು, ವಾರಕ್ಕೆ ಒಂದು ತೆಂಗಿನಕಾಯಿಯನ್ನು ಉಪಯೋಗಿಸಬೇಕೆಂದು ನಿಗದಿಪಡಿಸಿರುವುದನ್ನು ನೋಡಿದರೆ ಬಹುಶಃ ಈ ಮಕ್ಕಳನ್ನು ನಾವು ಇನ್ನು ಸಹ ಶೋಷಣೆಗೆ ಒಳಪಡಿಸಿದಂತಾಗುತ್ತದೆಂದು ತಿಳಿದುಕೊಳ್ಳ ಬೇಕಾಗುತ್ತದೆ. ಅದೇ ರೀತಿ ಹಾಸ್ಟೆಲ್‌ಗಳಲ್ಲಿ ಕಳೆದ ಹತ್ತು ವರ್ಷಗಳಿಂದ ಮೇಲ್ವಿಚಾರಕರನ್ನು, ವಾರ್ಡನ್ಸ್‌ಗಳನ್ನು, ಅಡಿಗೆ ಸಹಾಯಕರನ್ನು ಜವಾನರನ್ನು ನೇಮಿಸಿರುವಂತೆ ಕಾಣುತ್ತಿಲ್ಲ. ಹಾಸ್ಟಲ್‌ಗಳಲ್ಲಿ ಹಿಂದೆ ಮಂಜೂರಾತಿ ಕೊಟ್ಟಿದ್ದಂತಹ ಸಂಖ್ಯೆಗೆ ಇನ್ನೂ ಹೆಚ್ಚಿನ ಸಂಖ್ಯೆಯನ್ನು ಮಂಜೂರಾತಿ ಮಾಡಲಾಗಿದೆ. ಹಾಸ್ಟೆಲ್ ಕಟ್ಟಡಗಳ ಪರಿಮಿತಿ ಹಿಂದೆ ಇದ್ದಷ್ಟೇ ಇದ್ದು, ಮಕ್ಕಳ ಸಂಖ್ಯೆಯನ್ನು ಮಾತ್ರ ಜಾಸ್ತಿ ಮಂಜೂರು ಮಾಡಲಾಗಿದೆ. ಇದರಿಂದಾಗಿ ಹಾಸ್ಟಲ್‌ಗಳಲ್ಲಿ ಮಕ್ಕಳನ್ನು ಹಟ್ಟಿಯಲ್ಲಿ ತುಂಬಿರುವಂತೆ ಸೇರಿಸಿರುವುದನ್ನು ಕಾಣಬಹುದು. ಅದೇ ರೀತಿ ಅವರಿಗೆ ನೀಡುತ್ತಿರುವ ದಿನನಿತ್ಯದ ಊಟ ಉಪಹಾರದ ವೆಚ್ಚ ಕೇವಲ ಒಬ್ಬ ವಿದ್ಯಾರ್ಥಿಗೆ ೨.೫ ಪೈಸೆ ಇದ್ದು, ಇಷ್ಟನ್ನು ಕೊಟ್ಟರೆ ಖಂಡಿತವಾಗಿ ನಾವು ಈ ಸಮಾಜದ ಕಲ್ಯಾಣವನ್ನು ಮಾಡುವುದಕ್ಕೆ ಆಗುವುದಿಲ್ಲ. ಹರಿಜನ ಗಿರಿಜನರ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆಗಳಲ್ಲಿ ಹಲವಾರು ಯೋಜನೆಗಳಲ್ಲಿ ಕೊಡುವ ಹಣ ಅಧಿಕಾರಿಗಳ ಮಟ್ಟದಲ್ಲಿ ಪೋಲಾಗುವುದನ್ನು ಮತ್ತು ಸೋರಿಹೋಗುವುದನ್ನು ಕಾಣುತ್ತಿದ್ದೇವೆ. ಈ ಮಕ್ಕಳಿಗೆ ಕೊಡುವ ವಿದ್ಯಾರ್ಥಿವೇತನ ಹಾಗೂ ದಿನದಿತ್ಯ ಕೊಡುವ ಊಟದ ಖರ್ಚನ್ನು ನೋಡಿದರೆ ಇದು ಬಹಳ ಕೆಳಮಟ್ಟದಲ್ಲಿದ್ದು, ಬಹಳ ಹಿಂದೆ ಮಂಜೂರಾತಿ ಮಾಡಿದ ಹಣವನ್ನೇ, ಅದೇ ಸವಲತ್ತನ್ನೇ ನಾವು ಕೊಡುತ್ತಿದ್ದೇವೆ. ಕಳೆದ ಹತ್ತು ವರ್ಷಗಳಿಂದ ಹಾಸ್ಟೆಲ್ ವಾರ್ಡನ್ ನೇಮಕ ಮಾಡಿಲ್ಲ, ಜವಾನರನ್ನು ನೇಮಕ ಮಾಡಿಲ್ಲ. ರಾತ್ರಿ ರಕ್ಷಣೆಗೆ ಕಾವಲುಗಾರರನ್ನು ನೇಮಿಸಿಲ್ಲ, ಅಡಿಗೆ ಸಹಾಯಕರನ್ನು ನೇಮಿಸಿಲ್ಲ. ಆಯಾ ಹಾಸ್ಟಲ್ ವಿದ್ಯಾರ್ಥಿ ವಿದ್ಯಾರ್ಥಿನಿಯರೇ ಅಡಿಗೆ ಮಾಡಿ ಊಟ ಮಾಡುವಂತಹ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಪೋಸ್ಟ್ ಮ್ಯಾಟ್ರಿಕ್ ಮತ್ತು ಪ್ರಿಮ್ಯಾಟ್ರಿಕ್ ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳಿಗೆ ಕೊಡುವಂತಹ ಸೌಲಭ್ಯಗಳನ್ನು ನೋಡಿದರೆ, ಪೋಸ್ಟ್ ಮ್ಯಾಟ್ರಿಕ್ ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳು ಕೆಲವು ಸೌಲಭ್ಯಗಳಿಂದ ವಂಚಿತರಾಗಿರುವುದನ್ನು ನಾನು ನೋಡಬಹುದು. ಪ್ರಿಮ್ಯಾಟ್ರಿಕ್ ಹಾಸ್ಟೆಲ್‌ನಲ್ಲಿರುವ ಬಾಲಕ ಬಾಲಕಿಯರಿಗೆ ಸಾಬೂನು, ತಲೆಗೆ ಹಾಕುವ ಎಣ್ಣೆ ಇನ್ನಿತರ ವಸ್ತುಗಳನ್ನು ನೀಡುತ್ತಿದ್ದಾರೆ. ಪೋಸ್ಟ್ ಮ್ಯಾಟ್ರಿಕ್ ಹಾಸ್ಟೆಲ್‌ಗಳಲ್ಲಿ ಈ ಒಂದು ನಿಯಮವನ್ನು ಸಡಿಲಗೊಳಿಸಿದ್ದಾರೆ. ಇವುಗಳನ್ನು ಕೊಡುತ್ತಿಲ್ಲ. ಕೇರಳದಲ್ಲಿ ನೋಡಿದರೆ ಈ ಹಾಸ್ಟೆಲ್‌ಗಳಲ್ಲಿರುವಂತಹ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾಕೆಟ್ ಮನಿ ಕೊಡುವಂತಹ ಕಾರ್ಯಕ್ರಮ ಕೂಡಾ ಇದೆ. ಆದ್ದರಿಂದ ಇಂತಹ ಸವಲತ್ತುಗಳನ್ನು ನೀಡಿದಾಗ ಮಾತ್ರ ಸಮಾಜದ ದುರ್ಬಲ ವರ್ಗಗಳ ವಿದ್ಯಾರ್ಥಿಗಳ ಹಿತರಕ್ಷಣೆ ಮಾಡಿದಂತಾಗುತ್ತದೆ. ಇದೇ ರೀತಿ ತಾಲ್ಲೂಕು ಮಟ್ಟದಲ್ಲಿ ಐ. ಟಿ. ಡಿ. ಪಿ. ಯೋಜನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಇಡತಕ್ಕಂಥ ವ್ಯವಸ್ಥೆ ಇದ್ದರೂ ಕೂಡಾ ಹಲವಾರು ಕಡೆಗಳಲ್ಲಿ ಹರಿಜನ ಪರಿವೀಕ್ಷಕ

ರಾಗಲೀ ಗಿರಿಜನ ಪರಿವೀಕ್ಷಕರಾಗಲೀ ತಾಲ್ಲೂಕು ಮಟ್ಟದಲ್ಲಿ ನೇಮಕವಾಗಿಲ್ಲ. ಅಲ್ಲ ಹುದ್ದೆಗಳು ಮಂಜೂರಾಗಿದ್ದರೂ ಕೂಡಾ, ಬಹುತೇಕ ಕಡೆಗಳಲ್ಲಿ ಹುದ್ದೆಗಳು ಖಾಲಿ ಇವೆ. ಇವತ್ತು ಅಧಿಕಾರಿಗಳನ್ನು ನೇಮಿಸಿದ್ದರೂ ಕೂಡಾ ಅಂತಹ ಕಡೆಗಳಿಗೆ ಜವಾನರನ್ನು ಸರಕಾರ ಕೊಟ್ಟಿರುವುದಿಲ್ಲ. ಅದೇ ರೀತಿ ಗಿರಿಜನ ಉಪಯೋಜನೆ ಅಂದರೆ ಐ. ಟಿ. ಡಿ. ಪಿ. ಯೋಜನೆ ತೆಗೆದುಕೊಂಡರೆ ಉಪ ವಿಭಾಗ ಮಟ್ಟದಲ್ಲಿ ಐ. ಟಿ. ಡಿ. ಪಿ. ಅಧಿಕಾರಿಗಳನ್ನು ನೇಮಕ ಮಾಡಿರುತ್ತಾರೆ. ಇಂತಹ ಉಪ ವಿಭಾಗಗಳಲ್ಲಿ ಹರಿಜನ ಗಿರಿಜನ ಕಲ್ಯಾಣ ಅಧಿಕಾರಿಗಳನ್ನು ಸರಕಾರ ಇಷ್ಟರವರೆಗೆ ನೇಮಿಸಿರುವುದಿಲ್ಲ. ಇಂತಹ ಒಂದು ನ್ಯೂನತೆಗಳನ್ನು ಹೋಗಲಾಡಿಸಿದರೆ, ಈ ಶೋಷಿತ ವರ್ಗದವರ ಕಲ್ಯಾಣಕ್ಕೆ ಇನ್ನೂ ಹೆಚ್ಚಿನ ಅನುಕೂಲ ಆಗಬಹುದೆಂದು ಹೇಳುತ್ತೇನೆ. ಸರಕಾರ ಸೇಂದಿ ಹರಾಜು ಮತ್ತು ಮಾರಾಟವನ್ನು ನಿಲ್ಲಿಸಿದೆ. ಇದು ಸಂತೋಷದ ವಿಷಯ. ಆದರೆ ಹಿಂದಿನ ಸರಕಾರ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳ ಬಳಿಯಲ್ಲಿ, ಹರಿಜನ ಗಿರಿಜನರ ಕಾಲೋನಿಗಳ ಬಳಿಯಲ್ಲಿ ಬಹಳಷ್ಟು ಸಾರಾಯಿ ಅಂಗಡಿಗಳನ್ನು ತೆರೆದಿತ್ತು. ಶಾಲೆಗಳ ಪಕ್ಕದಲ್ಲೂ ಈ ಶರಾಬು ಅಂಗಡಿಗಳು ಇದ್ದವು. ಇಂತಹ ಶರಾಬು ಅಂಗಡಿಗಳನ್ನು ರದ್ದು ಪಡಿಸುವಂತಹ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹಿಂದಿನ ಸರಕಾರವನ್ನು ಪದೇ ಪದೇ ಒತ್ತಾಯ ಪಡಿಸಿದ್ದರೂ ಕೂಡಾ ಹಿಂದಿನ ಸರಕಾರ ಇಂತಹ ನಿಯಮಗಳನ್ನು ಜಾರಿಗೆ ತರಲು ಕ್ರಮ ಕೈಗೊಂಡಂತೆ ಕಾಣಲಿಲ್ಲ.

೫-೦೦ ಪಿ. ಎಂ.

ಇಂತಹ ಕಾರ್ಯಕ್ರಮಗಳನ್ನು ಕೈಗೊಂಡರೆ ಮಾತ್ರ ಇವರ ಏಳಿಗೆ ಆಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಹಾಸ್ಟೆಲ್‌ಗಳಲ್ಲಿ ವಿದ್ಯಾಭ್ಯಾಸ ಪಡೆಯದೆ ಇರುವ ವಿದ್ಯಾರ್ಥಿಗಳು ಸಹ ಇದ್ದಾರೆ. ಇಂತಹವರು ವಿದ್ಯಾರ್ಥಿ ವೇತನ ಪಡೆಯುವುದರಲ್ಲಿ ಸಹ ಸ್ವಲ್ಪ ತಾರತಮ್ಯ ಇದೆ. ಬಹುಶಃ ಹರಿಜನ ಮತ್ತು ಗಿರಿಜನರು ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳಲ್ಲಿ ಕೊಡುವ ಊಟದಲ್ಲೂ ಸಹ ವ್ಯತ್ಯಾಸವಿದೆ. ಹರಿಜನ ಮತ್ತು ಗಿರಿಜನರಿಗೆ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸೇರಿದಂತೆ ತಾಲ್ಲೂಕು ಕೇಂದ್ರದಲ್ಲಿ ಮತ್ತು ಮಂಡಲ ಪಂಚಾಯತಿಗಳ ಮಟ್ಟದಲ್ಲಿ ಹಾಸ್ಟೆಲ್‌ಗಳನ್ನು ತೆರೆಯುವುದು ಒಳ್ಳೆಯದು. ಅಲ್ಲಿ ಅವರ ಜನಸಂಖ್ಯೆಗೆ ಅನುಸಾರವಾಗಿ ಪ್ರವೇಶಾವಕಾಶ ಇರಬೇಕು. ಇದರಿಂದ ಈ ವರ್ಗದಿಂದ ಬರುವಂತಹ ಮಕ್ಕಳ ಬಗ್ಗೆ ಇರುವಂತಹ ಕೀಳುಮಟ್ಟದ ಭಾವನೆಯನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅಂತಹ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸಿಕೊಟ್ಟರೆ ಇವರ ಶೋಷಣೆಯನ್ನು ತಪ್ಪಿಸಿ ಇವರು ಸಹ ಮುಂದೆ ಉತ್ತಮವಾದ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆಂದು ಹೇಳುತ್ತೇನೆ. ಇವತ್ತು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ಜನರಿಗೆ ಹಲವಾರು ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಅನೇಕ ರೀತಿಯ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಹರಿಜನ ಮತ್ತು ಗಿರಿಜನರಿಗೆ ಉಪ ಕಸಬುಗಳಿಗೆ ಆದ್ಯತೆ ನೀಡಿ ಹೆಚ್ಚಿನ ಸೌಲಭ್ಯ ಕಲ್ಪಿಸಿಕೊಡುವುದನ್ನು ನಾವು ನೋಡುತ್ತಿದ್ದೇವೆ. ಇದರ ಜೊತೆಗೆ ಹರಿಜನ ಮತ್ತು ಗಿರಿಜನರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಲ್ಪಿಸಿ ಕೊಡಲು ಮಾನ್ಯ ಮಂತ್ರಿಗಳು ಪ್ರವಾಸ ಕೈಗೊಳ್ಳಬೇಕು. ಇದರಿಂದ ಅವರ ತೊಂದರೆಗಳನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆ. ಇನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ದೊರೆಯುವ ಎಲ್ಲಾ ರೀತಿಯ ಸೌಲಭ್ಯಗಳು ಕೆಲವರಿಗೇ ದೊರೆಯುತ್ತಿವೆ. ಯಾರನ್ನು ಒಂದು ಸಾರಿ ಗುರುತಿಸಿರುತ್ತಾರೋ ಅವರನ್ನೇ ಮತ್ತೆ ೧೦ ವರ್ಷಗಳ ನಂತರವೂ ಗುರುತಿಸುತ್ತಾರೆ. ಇದರಿಂದ ಇನ್ನುಳಿದ ಹೊಸ ಫಲಾನುಭವಿಗಳಿಗೆ ಅನುಕೂಲವಾಗುವುದಿಲ್ಲ. ಹೊಸ ಫಲಾನುಭವಿಗಳ ಗುರುತಿಸುವ ಬಗ್ಗೆ ಸರ್ಕಾರ ಯಾವ ಒಂದು ಕಾರ್ಯಕ್ರಮವನ್ನು ಸಹ ತೆಗೆದುಕೊಂಡಿಲ್ಲ. ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಇಂತಹ ಫಲಾನುಭವಿಗಳು ಎಷ್ಟು ಜನ ಇದ್ದಾರೆ ಎನ್ನುವ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಹಾಗೂ ಸರಿಯಾದ ಅಂಕಿಸಂಖ್ಯೆಗಳು ಸಹ ಅವರಲ್ಲಿ ಇಲ್ಲ. ನಾವು ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಸಹ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಹಾಗೂ ಒತ್ತಡ ತಂದಿದ್ದೇವೆ. ಆದರೂ ಸಹ ಸಮಾಜ ಕಲ್ಯಾಣ ಇಲಾಖಾ ಅಧಿಕಾರಿಗಳಾಗಲೀ ಅಥವಾ ಹಿಂದುಳಿದ ವರ್ಗಗಳ ಜಿಲ್ಲಾ ಮಟ್ಟದ ಅಧಿಕಾರಿಗಳಾಗಲೀ, ನಮಗೆ ಈ ವಿವರಗಳನ್ನು ಒದಗಿಸಿಕೊಡುತ್ತೇವೆಂದು ಹೇಳುತ್ತಾರೆ ಹೊರತು ಕಳೆದ ಎರಡು ವರ್ಷಗಳಿಂದ ಅಂಕಿಅಂಶಗಳನ್ನು ನಮಗೆ ಒದಗಿಸಿಲ್ಲ. ಇನ್ನು ಮುಖ್ಯವಾದ ಒಂದು ವಿಚಾರವನ್ನು ನಾನು ಹೇಳುವುದಾದರೆ ಎಲ್ಲಾ ವರ್ಗಗಳಲ್ಲಿ ಆಯೋಗಗಳನ್ನು ನೇಮಕ ಮಾಡುತ್ತಾರೆ. ಅದೇ ರೀತಿಯಲ್ಲಿ ಈ ವರ್ಗದ ಜನರಿಗೆ ಸಂಬಂಧಪಟ್ಟಂತೆ ಒಂದು ಆಯೋಗ ರಚನೆ ಮಾಡಿದರೆ ಅದರಿಂದ ಈ ಜನ ಅನುಭವಿಸುತ್ತಿರುವ ಶೋಷಣೆ ತಪ್ಪಿಸಬಹುದು. ಈ ರೀತಿ ಮಾಡದಿದ್ದರೆ ಈ ವರ್ಗದ ಜನ

ಮುಂದೆ ಬರುವುದಕ್ಕೆ ಸಾಧ್ಯ ಇಲ್ಲ. ಆದ್ದರಿಂದ ಕೂಡಲೇ ಒಂದು ಆಯೋಗ ನೇಮಕ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಕಡೆ ಮನೆ ನಿವೇಶನಗಳನ್ನು ಕೊಡುವುದರಲ್ಲಿ ಮತ್ತು ಭೂ ಮಂಜೂರಾತಿ ಮಾಡುವುದರಲ್ಲಿ ಸಹ ಅನ್ಯಾಯವಾಗಿದೆ. ಅದರಲ್ಲೂ ಹರಿಜನ ಮತ್ತು ಗಿರಿಜನ ಹಾಗೂ ಹಿಂದುಳಿದ ವರ್ಗಗಳಿಗೆ. ಭೂಮಿ ಮಂಜೂರಾತಿ ಮಾಡಲು ಸ್ಥಳ ಇಲ್ಲದಿದ್ದರೂ ಸಹ ಗೃಹ ನಿವೇಶನಗಳಿಗೆ ಮಾತ್ರ ೫ ಸೆಂಟ್ಸ್ ಜಾಗ ಮಂಜೂರು ಮಾಡುವಾಗ ಆ ಜಾಗಕ್ಕೆ ಸಹ ಹಣ ಕೊಡಬೇಕೆನ್ನುವುದನ್ನು ನಾವು ಇತ್ತೀಚೆಗೆ ಕಾಣುತ್ತಿದ್ದೇವೆ. ಇವು ನಿಜವಾಗಿಯೂ ಉಚಿತವಾಗಿ ಮಂಜೂರು ಮಾಡುವ ನಿವೇಶನಗಳು. ಆದರೆ ಇವತ್ತು ಉಚಿತವಾಗಿ ಮನೆ ನಿವೇಶನಗಳು ಸಿಗುವಂತಹ ಪರಿಸ್ಥಿತಿ ಇಲ್ಲ. ಈ ಒಂದು ನೀತಿಯನ್ನು ಸರ್ಕಾರದವರು ಸ್ವಲ್ಪ ಸಡಿಲ ಮಾಡಿ ಹರಿಜನ ಮತ್ತು ಗಿರಿಜನರಿಗೆ ಸಹ ಉಚಿತವಾಗಿ ಮನೆ ನಿವೇಶನ ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು.—೫-೩೦ಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುವವರಿದ್ದಾರೆ. ನೀವು ಬೇಗ ಮುಗಿಸಿ.

ಶ್ರೀ ಕೆ. ಕುಶಾಲ.—ಮಂಡಲ ಪಂಚಾಯಿತಿಗಳಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದವರಿಗೆ ಅಭಿವೃದ್ಧಿಗಾಗಿ ಮೀಸಲಾಗಿರುವ ಶೇಕಡ ೧೮ ರಿಂದ ೨೦ರಷ್ಟು ಹಣವನ್ನು ಸರಿಯಾಗಿ ಖರ್ಚು ಮಾಡುತ್ತಿಲ್ಲ, ಈ ಮಂಡಲ್ ಪಂಚಾಯತಿಗಳಲ್ಲಿ ಈ ಹಣವನ್ನು ವ್ಯವಸ್ಥಿತವಾಗಿ ಖರ್ಚು ಮಾಡುವ ಕಾರ್ಯಕ್ರಮ ಇರುವುದಿಲ್ಲ. ಇದರಲ್ಲಿಯೂ ಅವ್ಯವಹಾರ ಮುಂತಾದವುಗಳು ನಡೆಯುತ್ತಿದೆ. ಉದಾಹರಣೆಗೆ ನಮ್ಮ ಸೂಳ್ಯ ಮಂಡಲ್‌ನಲ್ಲಿ ಇನ್ನೂ ಕೂಡ ೮೯-೯೦ರಲ್ಲಿ ಇಟ್ಟಿದ್ದ ಶೇಕಡ ೨೦ ರಷ್ಟು ಹಣವನ್ನು ವಿತರಣೆ ಮಾಡದೇ ಇರುವುದರಿಂದ ಈ ವರ್ಗದ ಜನರಿಗೆ ಯಾವ ರೀತಿಯ ಸವಲತ್ತುಗಳೂ ಸಿಕ್ಕಿಲ್ಲ. ಕೆಲವು ಮಂಡಲ್ ಪಂಚಾಯತಿಗಳಲ್ಲಿ ಒಂದು ಲಕ್ಷ ರೂಪಾಯಿ ವರೆಗೆ ಇಂತಹ ಹಣವನ್ನು ಬಾಕಿ ಇಟ್ಟುಕೊಂಡಿರುವ ನಿದರ್ಶನಗಳು ಇವೆ, ಇದೇ ರೀತಿ ಈ ರಾಜ್ಯದಲ್ಲಿ ಹಲವಾರು ಕಡೆಗಳಲ್ಲಿ ಈ ವರ್ಗದ ಜನರಿಗೆ ಮೀಸಲಾಗಿರುವ ಹಣವನ್ನು ಖರ್ಚು ಮಾಡಿಲ್ಲ ಈ ವಿಷಯದಲ್ಲಿ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಸಹ ಕಳುಹಿಸಿದೆ. ಆದರೆ ಅವಕ್ಕೆ ಇನ್ನೂ ಉತ್ತರ ಬಂದಿಲ್ಲ. ಇಂತಹ ಒಂದು ಸಮಸ್ಯೆಯನ್ನು ಮಾನ್ಯ ಸಚಿವರು ಜಿಲ್ಲಾ ಪ್ರವಾಸ ಕೈಕೊಂಡಾಗ ಬಗೆಹರಿಸಲು ಸಾಧ್ಯವಿದೆ ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ಭಡ್ತಿಯಲ್ಲಿ ಆಗತಕ್ಕ ಅನ್ಯಾಯವನ್ನು ಸರ್ಕಾರ ಪೂರ್ಣವಾಗಿ ಕೂಡಲೆ ಸರಿಪಡಿಸಬೇಕು. ಗ್ರೇಡೇಷನ್ ಲಿಸ್ಟ್ ತಯಾರು ಮಾಡುವಾಗ ಈ ಪಂಗಡದವರಿಗೆ ಸೇರಿದವರನ್ನು ಕೈಬಿಟ್ಟು ಅವರಿಗೆ ಬಡ್ತಿಯಲ್ಲಿ ತೊಂದರೆಯನ್ನು ಕೊಡುತ್ತಿದ್ದಾರೆ. ಅದೇ ರೀತಿ ಪರಿಶಿಷ್ಟ ಜಾತಿ ಮತ್ತು ವರ್ಗದವರು ಧೃಡೀಕರಣ ಪತ್ರಗಳನ್ನು ಪಡೆಯುವಲ್ಲಿಯು ಕೂಡ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಬೇರೆ ಜಾತಿಯವರು ಸುಳ್ಳು ದಾಖಲೆಗಳನ್ನು ನೀಡಿ ಪರಿಶಿಷ್ಟ ಜಾತಿ ಪಂಗಡಗಳೆಂದು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಈ ವರ್ಗದ ಜನರಿಗೆ ದೊರೆಕಬೇಕಾದ ಸವಲತ್ತುಗಳನ್ನು ಕಸಿದುಕೊಳ್ಳುತ್ತಿದ್ದಾರೆ. ಈ ರೀತಿ ತಪ್ಪು ಪ್ರಮಾಣ ಪತ್ರವನ್ನು ಪಡೆದಂತಹವರ ಮೇಲೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು. ಇದುವರೆಗೆ ಇಂತಹವರ ಬಗ್ಗೆ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಇದರ ಜೊತೆಗೆ ಪ್ರತಿಯೊಂದು ಸಂಘ ಸಂಸ್ಥೆಗಳಲ್ಲಿಯೂ ರೋಸ್ಟರ್ ಸಿಸ್ಟಂ ಅನ್ನು ಅನುಸರಿಸಬೇಕು. ಇವತ್ತು ಸಹಕಾರಿ ಸಂಸ್ಥೆಗಳ ನಿಯಮ ೧೦ (ಬಿ) ಮತ್ತು ೧೪ (ಬಿ) ಪ್ರಕಾರ ರೋಸ್ಟರ್ ಸಿಸ್ಟಂ ಮೂಲಕ ಹುದ್ದೆಗಳನ್ನು ಭರ್ತಿ ಮಾಡಬೇಕು. ಏಕೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರಿಗೆ ಈ ಸಹಕಾರ ಸಂಸ್ಥೆಗಳಲ್ಲಿ ದೊರಕಬೇಕಾದಷ್ಟು ಹುದ್ದೆಗಳು ದೊರಕಿಲ್ಲ. ಹಿಂದಿನ ಸರ್ಕಾರ ಇದ್ದಾಗ ಈ ಸಹಕಾರ ಸಂಸ್ಥೆಗಳಲ್ಲಿ ರೋಸ್ಟರ್ ಸಿಸ್ಟಂ ಜಾರಿ ಮಾಡಬೇಕೆಂದು ಕೇಳಿಕೊಂಡಾಗ. ಈ ಬಗ್ಗೆ ನಿಯಮವಿದೆ, ಅದರಂತೆ ಭರ್ತಿಮಾಡುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಏನೂ ಕ್ರಮ ಕೈಗೊಂಡಿಲ್ಲ. ಮಾನ್ಯ ಸಚಿವರು ಇದರ ಕಡೆಗೆ ಹೆಚ್ಚಿನ ಆಸಕ್ತಿ ತೋರಿಸಿ ಈ ವರ್ಗದ ಜನರಿಗೆ ಆಗುತ್ತಿರುವ ಅನ್ಯಾಯವನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಇವತ್ತು ಖಾಸಗೀ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸೀಟುಗಳಲ್ಲಿ ಮೀಸಲಾತಿಯನ್ನು ಸರಿಯಾಗಿ ನೀಡುತ್ತಿಲ್ಲ. ಕೆಲವು ಕಾಲೇಜುಗಳಲ್ಲಿ ಈ ವರ್ಗದ ವಿದ್ಯಾರ್ಥಿಗಳಿಗೆ ಸೀಟು ಕೊಟ್ಟ ಮೇಲೆ ಮುಂದೆ ಆ ಸಂಸ್ಥೆಯ ವ್ಯವಸ್ಥಾಪಕರು ನಾನಾ ರೀತಿಯ ತೊಂದರೆಗಳನ್ನು ಕೊಡುತ್ತಿದ್ದಾರೆ. ಹಾಗೂ ಅವರಿಗೆ ಬರತಕ್ಕ ವಿದ್ಯಾರ್ಥಿ ವೇತನಗಳನ್ನು ಕಡಿತಗೊಳಿಸುತ್ತಿರುವ ಪ್ರಸಂಗಗಳು ಸಹ ಇವೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಮಾನ್ಯ ಸಿಂಧ್ಯರವರು ಸರ್ಕಾರ ಇದ್ದಾಗ ಬೆಂಡಿಗೇರಿಯಲ್ಲಿ ಮಲ ತಿನ್ನಿಸುವ ಪ್ರಕರಣ ನಡೆದು, ಇದಕ್ಕೆ ಸಂಬಂಧಪಟ್ಟವರನ್ನು ಈ ರಾಜ್ಯದಿಂದ ಗಡಿಪಾರು ಮಾಡುವಂತಹ ಕಾರ್ಯಕ್ರಮವನ್ನು ಅವರ

ಸರ್ಕಾರ ಕೈಗೊಂಡಿತ್ತು. ಈಗ ಆ ಕಾರ್ಯಕ್ರಮ ಯಾವ ಹಂತವನ್ನು ತಲುಪಿದೆ ಎಂಬುದನ್ನು ಹೇಳಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಸನ್ಮಾನ್ಯ ಉಪಾಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಹದೇವ್ (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

† ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಉಪಾಧ್ಯಕ್ಷಿಣಿಯವರೇ, ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳ ಬಗ್ಗೆ ಸರ್ಕಾರಕ್ಕೆ ಬೆಳಕು ಚೆಲ್ಲಬೇಕೆಂಬ ಆಶೆ ಇಟ್ಟುಕೊಂಡಿದ್ದೇನೆ. ಶತಮಾನಗಳಿಂದ ತುಳಿಯಲ್ಪಟ್ಟ ಈ ದಲಿತ ವರ್ಗದವರ ಸ್ಥಿತಿಗತಿ ನಮಗೆ ಸ್ವಾತಂತ್ರ್ಯ ಬಂದು 42 ವರ್ಷವಾದರೂ ಕೂಡ ಸುಧಾರಿಸಲಿಲ್ಲ. ಅಧಿಕಾರಕ್ಕೆ ಬಂದ ಅನೇಕ ಸರ್ಕಾರಗಳು ಕಳೆದಿವೆ ಅನೇಕ ಕಾರ್ಯಕ್ರಮಗಳನ್ನು ಹಾಕಿವೆ. ಆದರೆ ಅವರ ಸ್ಥಿತಿಗತಿ ಎಷ್ಟು ಮಟ್ಟಿಗೆ ಸುಧಾರಿಸಿದೆ ಎಂದು ಹೇಳುವುದು ಕಷ್ಟ. ನಾವು ಪಂಚವಾರ್ಷಿಕ ಯೋಜನೆಗಳನ್ನು ಮಾಡುತ್ತೇವೆ. ಅದರಿಂದ ಇವರ ಪ್ರಗತಿ ಶತಾಂಶದಲ್ಲಿ ಎಷ್ಟು ಉತ್ತಮವಾಗಿದೆ ಎಂದು ಯಾರಿಗೂ ಗೊತ್ತಿಲ್ಲ. ಬರೀ ಕಣ್ಣೊರೆಸುವ ಕಾರ್ಯಕ್ರಮಗಳಿವೆಯೇ ಹೊರತು ಅವರ ಜೀವನಮಟ್ಟ ಮಾತ್ರ ಸುಧಾರಿಸಲಿಲ್ಲ. ರಾಜಕೀಯವಾಗಿ ಎಲ್ಲ ಪಕ್ಷಗಳೂ ಒಟ್ಟಿಗಾಗಿ ಇವರ ಬಗ್ಗೆ ಅನುಕಂಪ ತೋರಿಸುತ್ತಾರೆ. ಆದರೆ ಆಡಳಿತ ಮಾಡುವ ಕಾಲದಲ್ಲಿ ದಲಿತರನ್ನು ಮರೆಯುತ್ತಾರೆ. ಇದು ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಸಮಾಜದಲ್ಲಿ ಅನೇಕ ದೌರ್ಜನ್ಯಗಳಾಗಿವೆ, ಇದನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತೇವೆ. ಇದನ್ನು ತಪ್ಪಿಸಲು ಸರ್ಕಾರ ಕಾನೂನು ಮಾಡಿದೆ. ಆದರೆ ಅದನ್ನು ಅನುಷ್ಠಾನಕ್ಕೆ ತರುವ ಅಧಿಕಾರಿಗಳು ಮತ್ತು ಕೋರ್ಟ್‌ಗಳು ದಲಿತರ ಸಹಾಯಕ್ಕೆ ಬರುತ್ತಿಲ್ಲ. ಸಿಆರ್‌ಸಿ ಸೆಲ್ ಎಂದು ಇದೆ. ಎಲ್ಲೆಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆದಿದೆಯೋ ಅಂತಹ ಕಡೆಯಲ್ಲಾ ಕೇಸ್ ಹಾಕಲಾಗಿದೆ. ಆದರೆ ಅವು ಕೋರ್ಟಿನಲ್ಲಿ ಬಿದ್ದು ಹೋಗುತ್ತವೆ. ಏಕೆಂದರೆ ಕೋರ್ಟಿನ ಮುಂದೆ ಮಾಹಿತಿಗಳನ್ನು ಸರಿಯಾಗಿ ಒದಗಿಸುವುದಿಲ್ಲ, ಈ ಸಿಆರ್‌ಸಿ ಸೆಲ್ ಮೂಲಕ ಎಷ್ಟು ಜನಕ್ಕೆ ಶಿಕ್ಷೆಯಾಗಿದೆ ಎಂಬುದನ್ನು ಮಂತ್ರಿಗಳು ಉತ್ತರದಲ್ಲಿ ಹೇಳಬೇಕು, ಈ ಜನಗಳ ಸ್ಥಿತಿಗತಿಯನ್ನು ಬೇರೆಯವರು ಅರಿತು ಸಮಾಜ ಕೂಡ ಅವರ ಅಭಿವೃದ್ಧಿಗಾಗಿ ಪ್ರಯತ್ನಿಸಬೇಕು, ಇಲ್ಲದಿದ್ದರೆ ರಾಷ್ಟ್ರದ್ರೋಹ ಎಸಗಿದಂತಾಗುತ್ತದೆ. ಏಕೆಂದರೆ ಒಂದು ದೇಶದ ಅಭಿವೃದ್ಧಿ ಎಂದರೆ ಅದರ ಎಲ್ಲ ಪ್ರಜೆಗಳ ಅಭಿವೃದ್ಧಿ ಎಂದರ್ಥ. ಕೆಲವರು ಬಡವರು, ಇನ್ನೂ ಕೆಲವರು ಶ್ರೀಮಂತರಿದ್ದರೆ ಆ ದೇಶ ಶ್ರೀಮಂತವಾಗುವುದಿಲ್ಲ. ಆದ್ದರಿಂದ ಈ ಹೊಣೆಗಾರಿಕೆ ಬರೀ ಸರ್ಕಾರದ ಮೇಲೆ ಇಲ್ಲ, ಪ್ರತಿಯೊಬ್ಬರ ಮೇಲೂ ಇದೆ. ಸಮಾಜದ ಮೇಲೂ ಇದೆ. ಆದ್ದರಿಂದ ಎಲ್ಲರೂ ಈ ಜನರ ಅಭಿವೃದ್ಧಿಗೆ ಸಹಕಾರ ನೀಡಬೇಕು. ಇವತ್ತು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರೀ ದಲಿತವರ್ಗದ ವಿದ್ಯಾಭ್ಯಾಸಕ್ಕೆ ಅವಕಾಶವಿದ್ದಹಾಗೆ ಕಾಣುತ್ತದೆ. ಹಿಂದೆ ನಾನಾ ಕ್ಷೇತ್ರಗಳಲ್ಲಿ ಈ ಇಲಾಖೆಯ ಪಾತ್ರವಿತ್ತು. ಈಗ ಬರೀ ಸ್ಕಾಲರ್‌ಶಿಪ್ ಕೊಡುವುದು ಹಾಸ್ಟೆಲ್‌ಗಳನ್ನು ನಡೆಸುವುದು ಇಷ್ಟೇ ಆಗಿದೆ. ಈ ಹಾಸ್ಟೆಲ್‌ಗಳಾದರೂ ಬಹಳ ದುಸ್ಥಿತಿಯಲ್ಲಿವೆ ಹರಿಜನರ ಹಾಸ್ಟೆಲ್ ಎಂದರೆ ಜಾತಿ ಸೂಚಕವಾಗುವುದೆಂದು ಕೆಲವು ವರ್ಷಗಳ ಹಿಂದೆ ಅದನ್ನು ಸಾರ್ವಜನಿಕ ಹಾಸ್ಟೆಲ್ ಎಂದು ಮಾಡಿದರು. ಆದರೆ ಇವತ್ತಿಗೂ ಎಲ್ಲ ಜನರೂ ಈ ಹಾಸ್ಟೆಲ್‌ಗಳನ್ನು ಹರಿಜನರ ಹಾಸ್ಟೆಲ್‌ಗಳೆಂದೇ ಕರೆಯುವರು. ಈ ಹಾಸ್ಟೆಲ್‌ಗಳಿಗೆ ಕೊಡುವ ಹಣದ ಬಹುಪಾಲು ಮೇಲ್ವಿಚಾರಣೆ ಮಾಡುವ ಅಧಿಕಾರಿಗಳಿಗೇ ಹಂಚಿಹೋಗುತ್ತಿದೆ ಇದು ಆಗಬಾರದು. ಹಾಸ್ಟೆಲಿಗೆ ಬರುವ ವಿದ್ಯಾರ್ಥಿಗಳು ದುಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲ. ಅಷ್ಟು ಬಡವರಂತೆ ಕಾಣುತ್ತಾರೆ ಸರ್ಕಾರದ ಖರ್ಚಿನಿಂದ ಇವರು ಓದಿದರೂ ಈ ಜನಗಳು ಬಡತನದ ರೇಖೆಯಿಂದ ಮೇಲೇಳಲಾಗಿಲ್ಲ. ಆದ್ದರಿಂದ ಮಾನ್ಯ ಶಿವಣ್ಣನವರು ಹಾಸ್ಟೆಲ್‌ಗಳ ಆಡಳಿತ ಮತ್ತು ಅವುಗಳ ಸ್ಥಿತಿಯನ್ನು ಎಷ್ಟು ಬಿಗಿ ಮಾಡುತ್ತಾರೋ ಅಷ್ಟು ಹರಿಜನರ ಹಿಂದುಳಿದವರ ಅಲ್ಪಸಂಖ್ಯಾತರ ವಿದ್ಯಾಪ್ರಗತಿಯಾಗುತ್ತದೆ. ಒಳ್ಳೆಯ ಫಲಿತಾಂಶ ತರುತ್ತಾರೆ. ಸರ್ಕಾರ ಹಣ ಒದಗಿಸಿಕೊಡುತ್ತದೆ. ಹಾಸ್ಟೆಲ್‌ಗೆ ಅನುಕೂಲ ಇದೆ. ಆದರೆ ವಿದ್ಯಾರ್ಥಿಗಳ ರಿಸಲ್ಟ್ ಮಾತ್ರ ನಿಲ್. ಈ ರೀತಿ ಆಗಬಾರದು. ನಾವು ಏನು ಖರ್ಚು ಮಾಡುತ್ತೇವೆಯೋ ಅದಕ್ಕೆ ತಕ್ಕ ಪ್ರತಿಫಲ ಬಂತೋ ಇಲ್ಲವೋ ಎಂದು ವಿಚಾರ ಮಾಡಬೇಕು. ಇಲ್ಲದಿದ್ದರೆ ಈ ಹಾಸ್ಟೆಲ್‌ಗಳಿದ್ದು ಪ್ರಯೋಜನ ಏನು ? ಇದನ್ನು ತಾವು ವಿಚಾರ ಮಾಡಬೇಕು.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು ನೇಮಕಾತಿಯಲ್ಲಿ ಶೇಕಡ 18 ರಷ್ಟು ದಲಿತವರ್ಗಕ್ಕೆ ಅವಕಾಶ ಕೊಡಬೇಕೆಂದು ಸರ್ಕಾರದ ಕಾನೂನು ಇದೆ. ಆದರೆ ಅನೇಕ ಇಲಾಖೆಗಳಲ್ಲಿ ಆ ರೀತಿ ನೇಮಕವಾಗಿಲ್ಲ. ಹಾಗೆಯೇ ಸೇವೆಯ ಬಡ್ತಿಯಲ್ಲೂ ಮೀಸಲಾತಿ ಇರಬೇಕೆಂದು ಹಿಂದಿನ ಸರ್ಕಾರ ನಿಯಮ ಮಾಡಿತು. ಆದರೆ ಇದರಲ್ಲೂ

ಆ ವರ್ಗದ ಸಿಬ್ಬಂದಿಗೆ ನ್ಯಾಯ ಸಿಕ್ಕಿಲ್ಲ. ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ೪೦೦ ಜನ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳಿದ್ದು ಅವರಲ್ಲಿ ಬರೀ ೧೨ ಜನ ಎಸ್‌ಸಿಗಳಿದ್ದಾರೆ; ೩೮೮ ಎ.ಇ.ಇ.ಗಳ ಪೈಕಿ ೬ ಜನ ಎಸ್.ಸಿ. ಗಳಿದ್ದಾರೆ. ಹೀಗಾದರೆ ಹರಿಜನರಿಗೆ ಏನು ಒಳ್ಳೆಯದಾಗುತ್ತದೆಂದು ತಾವು ವಿಚಾರ ಮಾಡಬೇಕು. ಬರೀ ಲೋಕೋಪಯೋಗಿ ಇಲಾಖೆಯಲ್ಲಿ ಮಾತ್ರ ಹೀಗಾಗಿಲ್ಲ, ಎಲ್ಲಾ ಇಲಾಖೆಗಳಲ್ಲೂ ಇದೇ ರೀತಿ ನಡೆದಿದೆ. ಇಂಥಾ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಬಗ್ಗೆ ಇಲ್ಲಿ ಬರೀ ಮಾತನಾಡಿ ಏನೂ ಕಾರ್ಯಗತವಾಗದಿದ್ದರೆ, ಅದು ಆ ಜನಕ್ಕೆ ಬಗೆದ ದ್ರೋಹವಾಗುತ್ತದೆ. ಅನಂತರ ಟ್ರಾನ್ಸ್‌ಫರ್ ಮಾಡುವಾಗ ಕಾಂಗ್ರೆಸ್ ಸರ್ಕಾರವೇ ಇರಲಿ ಅಥವಾ ಇನ್ಯಾವ ಸರ್ಕಾರವೇ ಇರಲಿ, ಎಲ್ಲಾ ಮಾಡುವುದು ಒಂದೇ ಆಗಿದೆ. ಎಸ್‌ಸಿ ಅಧಿಕಾರಿ ಎಂದರೆ ಅವನಿಗೆ ಜಿಲ್ಲಾ ಕೇಂದ್ರಗಳಲ್ಲಿ ಪ್ರಮುಖ ಸ್ಥಾನವನ್ನು ಕೊಡುವುದಿಲ್ಲ, ಪೋಲಿಸ್ ಇಲಾಖೆ ರೆವಿನ್ಯೂ ಇಲಾಖೆ ಹೀಗೆ ಯಾವುದರಲ್ಲಿಯೂ ಕೊಡುವುದಿಲ್ಲ. ಇವತ್ತು ಈ ಜನಾಂಗದವರ ಪೈಕಿ ಒಬ್ಬ ಜಿಲ್ಲಾಧಿಕಾರಿಯಿಲ್ಲ ಒಬ್ಬ ಎಸ್ ಪಿ. ಇಲ್ಲ; ಒಬ್ಬ ಡಿ.ಐ.ಜಿ. ಇಲ್ಲ ಈ ಸ್ಥಾನಕ್ಕೆ ಅರ್ಹರಾದವರು ಇದ್ದರೂ ಕೊಟ್ಟಿಲ್ಲ. ಈ ಹಿಂದಿನವರು ಈ ಕೆಲಸ ಮಾಡಲಿಲ್ಲ ಎಂದು ಹೇಳುವುದಕ್ಕೆ ಮೊದಲು ಈಗ ನಾವು ಮಾಡಿದ್ದೇವೆಯೋ ಎಂದರೆ ಇಲ್ಲ. ಒಂದು ಇಲಾಖೆಯಲ್ಲಿ ಒಬ್ಬನಿಗೆ ಜಾಗ ಕೊಡುವುದಕ್ಕೋಸ್ಕರ ೩ ಜನ ಅಧಿಕಾರಿಗಳನ್ನು ವರ್ಗ ಮಾಡಿದರು. ಆ ಅಧಿಕಾರಿ ಬಡ್ತಿ ಹೊಂದಿ ಒಂದು ಜಾಗಕ್ಕೆ ಹಾಕಿದರೂ. ಅಲ್ಲಿಗೆ ಆತ ಹೋಗಲಿಲ್ಲ. ಎರಡೂವರೆ ತಿಂಗಳು ರಜೆಯಲ್ಲಿ ಉಳಿದ. ಅವನಿಗೆ ಜಾಗಕೊಡುವುದಕ್ಕಾಗಿ ಮೂರು ಜನ ಎಸ್.ಸಿ. ಅಧಿಕಾರಿಗಳನ್ನು ಎತ್ತಂಗಡಿ ಮಾಡಿ ಆತನಿಗೆ ಜಾಗ ಕೊಟ್ಟರು.

ಇದು ಯಾವ ರೂಲ್ಸ್‌ನಲ್ಲಿದೆ? ಅಥವಾ ನಮ್ಮ ಗೈಡ್‌ಲೈನ್ಸ್‌ನಲ್ಲಿ ಇದೆಯೋ? ಅಥವಾ ನಿಮ ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ನಿಮಗೆ ಅಡ್ಡಿ ಬರಲಿಲ್ಲವೋ ಇದನ್ನು ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇವೆ. ಸುಮಾರು ೧೫ ಜನ ಶಾಸಕರು ಇದನ್ನು ಅವರ ಗಮನಕ್ಕೆ ತಂದಿದ್ದೇವೆ. ಆದರೂ ಇದನ್ನು ಇನ್ನು ಕಾರ್ಯಗತ ಮಾಡಲಿಲ್ಲ. ಈ ರೀತಿಯ ಅನಿಷ್ಟಗಳನ್ನು ನಾವು ಎದುರಿಸಬೇಕಾಗಿದೆ. ನಾವು ಅಸ್ಪೃಶ್ಯತೆ ಎನ್ನತಕ್ಕಂಥದ್ದನ್ನು ಮೂಢ ನಂಬಿಕೆ ಎಂದು ಕರೆದರೂ ಇವತ್ತು ಎಷ್ಟು ರೀತಿಯಾಗಿ ಅಸ್ಪೃಶ್ಯತೆಯನ್ನು ಹೀನಾಯವಾಗಿ ಜನರ ಮನಸ್ಸಿನಲ್ಲಿದೆ ಎನ್ನತಕ್ಕಂಥದ್ದು ಇಂಥ ಉದಾಹರಣೆಗಳಿಂದ ಗೊತ್ತಾಗುತ್ತದೆ. ಈ ಅಸ್ಪೃಶ್ಯತೆ ಇಲ್ಲ ಎಂದು ಯಾರಾದರೂ ಇವತ್ತು ಹೇಳಿದರೆ ಅದನ್ನು ನಂಬತಕ್ಕಂಥ ಮಾತಲ್ಲ. ಯಾರಾದರೂ ಒಬ್ಬ ಹರಿಜನ ಮನುಷ್ಯ ಮನೆಯನ್ನು ಬಾಡಿಗೆಗೆ ಕೇಳಲಿಕ್ಕೆ ಬೆಂಗಳೂರು ನಗರದಲ್ಲಾಗಲೀ ಅಥವಾ ಮೈಸೂರು ನಗರದಲ್ಲಾಗಲೀ ಕೇಳಲಿಕ್ಕೆ ಹೊರಟರೆ ಅವನಿಗೆ ಮನೆಯನ್ನು ಕೊಡುವುದಿಲ್ಲ. ನಮ್ಮ ನೆಂಟರು ಬರುತ್ತಾರೆ, ಅವರು ಬರುತ್ತಾರೆ, ಇವರು ಬರುತ್ತಾರೆ ಎಂದು ಹೇಳುತ್ತಾರೆ. ಹರಿಜನರುಗಳಿಗೆ ಈ ರೀತಿಯಾದರೆ ಅವರಿಗೂ ಆತ್ಮಗೌರವ ಇರುವುದಿಲ್ಲವೆ? ತಾನು ಕೂಡಾ ಮನುಷ್ಯ, ತಾನು ಯಾವ ರೀತಿಯಲ್ಲಿ ಬದುಕಬೇಕು. ಮುಂದೆ ತಾನು ಬದುಕಬೇಕೇ ಅಥವಾ ಬೇಡವೇ ಎಂಬತಕ್ಕಂಥ ಒಂದು ನೋವನ್ನು ಅನುಭವಿಸುತ್ತಾರೆ. ಆದುದರಿಂದ ಈ ಹರಿಜನರು ಇಷ್ಟೊಂದು ಜನಸಂಖ್ಯೆ ಇರುವುದರಿಂದ ಅವರನ್ನು ರಾಜಕೀಯವಾಗಿ ಓಟಿಗೆ ಉಪಯೋಗಿಸಿಕೊಳ್ಳುವುದಕ್ಕಾಗಿ ಈ ಅನುಕಂಪವನ್ನು ತೋರಿಸುತ್ತಿದ್ದಾರೆಯೋ ಹೊರತು ಈ ದೇಶದಲ್ಲಿ ಅವರು ಉದ್ಧಾರವಾಗುವ ಪರಿಸ್ಥಿತಿಯಲ್ಲಿಲ್ಲ. ಈ ಅಸ್ಪೃಶ್ಯತೆ ಎನ್ನುವುದು ಈ ದೇಶದಲ್ಲಿ ತೊಲಗುವುದಿಲ್ಲ. ಎಲ್ಲಿಯವರೆಗೆ ಈ ಸನಾತನ ಧರ್ಮವನ್ನು ಮತ್ತು ಮೂಢ ನಂಬಿಕೆಯನ್ನು ನಮ್ಮ ದೇಶದಲ್ಲಿ ಬುದ್ಧಿವಂತರಾದವರು ವಿದ್ಯಾವಂತರಾದವರು ಹಾಗೂ ದೊಡ್ಡ ಪದವಿಯಲ್ಲಿ ಇರತಕ್ಕಂಥವರು ಎಲ್ಲಿಯವರೆಗೆ ಇದನ್ನು ಇಟ್ಟುಕೊಂಡು ಆಚರಿಸುತ್ತಾರೋ ಅಲ್ಲಿಯವರೆಗೂ ಕೂಡಾ ಈ ದೇಶದಲ್ಲಿ ಅಸ್ಪೃಶ್ಯತೆ ಹೋಗಲಾರದು. ಆರ್ಥಿಕವಾಗಿಯಾದರೂ ಅವರನ್ನು ಅಭಿವೃದ್ಧಿ ಪಡಿಸುವುದಕ್ಕೆ ತಾವೆಲ್ಲಾ ಸಹಾಯ ಮಾಡಬೇಕು. ಈ ಸರ್ಕಾರ ಜೀತ ಪದ್ಧತಿಯನ್ನು ತೆಗೆದಿದ್ದೇವೆ ಎಂದು ನಾವು ಬೆನ್ನು ತಟ್ಟಿಕೊಳ್ಳುತ್ತಿದ್ದೇವೆ, ನಿಜ, ಆದರೆ ಜೀತ ಪದ್ಧತಿ ಇನ್ನೂ ಹೋಗಲಿಲ್ಲ. ಆರ್ಥಿಕ ದುಸ್ಥಿತಿಯಲ್ಲಿರತಕ್ಕಂಥವರನ್ನು ಆಳುಗಳೆಂದು ಕರೆಯುತ್ತಾರೆಯೋ ಹೊರತು ಅವರು ಕೂಲಿಗಳು, ಅವರು ಕೇಳುವಷ್ಟು ಕೂಲಿಯನ್ನು ನಾವು ಕೊಡಬೇಕು ಇಲ್ಲವೇ ಸರ್ಕಾರ ನಿಗದಿ ಮಾಡಿದಷ್ಟು ಕೂಲಿಯನ್ನು ಕೊಡಬೇಕೆಂಬುದು ಯಾರ ಮನಸ್ಸಿನಲ್ಲೂ ಇಲ್ಲ. ಹರಿಜನ ಗಿರಿಜನರ ಬಗ್ಗೆ ಅನುಕಂಪ ಬೇಡ. ಸಮಾನತೆ ಬೇಕು. ಬಡವರಾಗಲಿ, ಬಲ್ಲಿದರಾಗಲಿ, ದುಡಿಮೆ ಇರಲಿ ಇಲ್ಲದೇ ಇರಲಿ, ಅವರೂ ಮನುಷ್ಯ ಎಂದು ಗುರುತು ಮಾಡುವಂಥದ್ದನ್ನು ಎಲ್ಲರೂ ಕಲಿಯಬೇಕು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮತ್ತೆ ಇವತ್ತು ಆರ್ಥಿಕ ಕಾರ್ಯಕ್ರಮ ಸಮಾಜಕಲ್ಯಾಣ ಇಲಾಖೆಯಲ್ಲಿ ಏನೇನೂ ಇಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್. ಹಿಂದುಳಿದ ವರ್ಗದ ಕಾರ್ಪೊರೇಷನ್‌ನ್ನು ಮಾಡಿದ್ದಾರೆ. ಆದರೆ ಅದಕ್ಕೆ ಕೊಟ್ಟಿರತಕ್ಕಂಥ ಹಣ ಎಷ್ಟು? ಬಹಳ ಕಡಿಮೆ. ಈ ಹಣದಲ್ಲಿ ಲಕ್ಷಗಟ್ಟಲೇ ಇರತಕ್ಕಂಥ ಜನರಿಗೆ ಯಾವ ರೀತಿ ಉಪಯೋಗವಾಗುತ್ತದೆ? ಅದಲ್ಲದೆ ಒಂದು

ಮಿತಿಯನ್ನು ಕೂಡಾ ಮಾಡಿದ್ದಾರೆ. ಅದು ಮೂರು ಸಾವಿರ ಎಂದು ಏನೊ ಇದೆ. ಇಷ್ಟು ದುಡ್ಡನ್ನು ಅವರು ಒಬ್ಬ ಅರ್ಜಿದಾರರಿಗೆ ಕೊಡಬಹುದು. ನಂತರ ಬ್ಯಾಂಕ್‌ಗೆ ರೆಕಮೆಂಡ್ ಮಾಡುತ್ತೇವೆ ಇನ್ನುಳಿದ ಹಣವನ್ನು ಬ್ಯಾಂಕ್‌ನವರಿಂದ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಅನೇಕ ಬ್ಯಾಂಕ್‌ನವರು ಇದನ್ನು ಒಪ್ಪುವುದಿಲ್ಲ. ಆದರೆ ಇವರು ಕೊಡತಕ್ಕಂಥ ಹಣ ಒಬ್ಬ ಹಿಂದುಳಿದ ವರ್ಗದವರಿಗಾಗಲೀ, ಅಲ್ಪ ಸಂಖ್ಯಾತರಿಗೆ ಆಗಲೀ, ಹರಿಜನ ಗಿರಿಜನರಿಗೆ ಆಗಲೀ ಸಾಕಾಗುವುದಿಲ್ಲ. ಅವನು ಒಂದು ಸಣ್ಣ ಕೈಗಾರಿಕೆಯನ್ನು ಹಾಕುತ್ತೇನೆ ಎಂದು ಯೋಚಿಸಿದರೆ ಅವನಿಗೆ ೨೦–೩೦ ಸಾವಿರ ರೂಪಾಯಿ ಬೇಕು ಎಂದು ಹೇಳಿದರೆ ಇವರು ಮೂರು ಸಾವಿರ ರೂಪಾಯಿ ಕೊಟ್ಟಾಕ್ಷಣ ಆ ಕೆಲಸ ಆಗುವುದಿಲ್ಲ. ಒಂದು ಕೈಗಾರಿಕೆಗೆ ೫೦ ಸಾವಿರ ರೂಪಾಯಿ ಒಂದು ಲಕ್ಷ ರೂಪಾಯಿ, ಹತ್ತು ಲಕ್ಷ ರೂಪಾಯಿ, ಹತ್ತು ಕೋಟಿ ರೂಪಾಯಿಗಳನ್ನು ಹಾಕಬೇಕಾಗುತ್ತದೆ. ಹಾಕಬಾರದು ಎಂದೇನೂ ನಿಯಮ ಇಲ್ಲ. ಆದರೆ ಅವನಿಗೆ ಎಷ್ಟು ಹಣ ಬೇಕೋ ಅಷ್ಟನ್ನು ಕೊಡಿಸತಕ್ಕಂಥ ವ್ಯವಸ್ಥೆ ಸರ್ಕಾರ ಮಾಡದಿದ್ದರೆ ಆರ್ಥಿಕವಾಗಿ ಈ ಜನರನ್ನು ಹೇಗೆ ಉದ್ಧಾರ ಮಾಡುವುದಕ್ಕಾಗುತ್ತದೆ? ನಿಜ. ನಮ್ಮಲ್ಲಿ ಬಡವರು ಜಾಸ್ತಿ ಇದ್ದಾರೆ ಎಲ್ಲರೂ ಕೂಡಾ ಉದ್ಧಾರವಾಗಬೇಕು. ನಮ್ಮ ಜನರ ಉದ್ಧಾರ ಆಗಬೇಕು. ನೀವು ಕೊಡುವ ಮೂರು ಸಾವಿರ–ಐದು ಸಾವಿರ ರೂಪಾಯಿಯಲ್ಲಿ ಅವರು ಉದ್ಧಾರವಾಗುವುದಿಲ್ಲ.

ಇದರಲ್ಲಿ ಯಾರಾದರೂ ನಂಬಿಕೆಯನ್ನಿಟ್ಟಿದ್ದರೆ ಈ ತರಹ ಉದ್ಧಾರವಾಗಬಹುದು ಎಂದು ಹೇಳಲಿ. ಅದರಿಂದ ಯಾರೇ ಆಗಲಿ, ಆರ್ಥಿಕವಾಗಿ ಅಭಿವೃದ್ಧಿಯಾಗದಿದ್ದರೆ ಅವರ ಸ್ಥಿತಿ ಸುಧಾರಿಸುವುದಿಲ್ಲ. ಆದ್ದರಿಂದ ಆರ್ಥಿಕ ಕಾರ್ಯಕ್ರಮಗಳನ್ನು ಹೊಸದಾಗಿ ಹಾಕಬೇಕು. ಅವರು ಕೂಡಾ ಜನರು, ಮತ್ತೆ ಇನ್ನೊಂದು ಸಾರಿ ಅವರ ಬಡತನ ರೇಖೆಯ ಕೆಳಗಡೆ ಬರಬಾರದು, ಅಂಥ ಆರ್ಥಿಕ ಕಾರ್ಯಕ್ರಮಗಳನ್ನು ಹಾಕಿ ಅವರನ್ನು ಉದ್ಧಾರ ಮಾಡಬೇಕೆಂದು ಹೇಳುತ್ತೇನೆ. ಏನೋ ಸುಮ್ಮನೆ ನೆಪಕ್ಕಾಗಿ ಕೆಲವು ಕಾರ್ಯಕ್ರಮಗಳನ್ನು ಹಾಕಿ ಅವರಿಗೆ ಒಂದು ಎತ್ತನ್ನು, ಒಂದು ಹಸುವನ್ನು ಅಥವಾ ಒಂದು ಕೋಳಿಯನ್ನು ಕೊಡುವುದರಿಂದ ಅಥವಾ ಕುರಿಯನ್ನು ಕೊಡುವುದರಿಂದ ಅವರ ಬಡತನ ನೀಗಲು ಆಗುವುದಿಲ್ಲ. ಬಡತನ ನೀಗುವಂತ ಕಾರ್ಯಕ್ರಮ ಹಾಕಿಕೊಂಡು ಒಂದೇ ಸಾರಿ ಬಡತನ ಹೋಗಲಾಡಿಸಬೇಕು. ಮತ್ತೆ ಬಡತನ ಬರಬಾರದು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ ಮತ್ತೆ ಈ ಸಮಾಜ ಕಲ್ಯಾಣ ಇಲಾಖೆಯ ಬಹಳ ಜವಾಬ್ದಾರಿಯನ್ನು ಕಳಚಿ ಬಿಟ್ಟಿದ್ದೀರಿ. ಈಗ ಎಲ್ಲಾ ಇಲಾಖೆಗಳಲ್ಲಿ ೧೮ ಪರ್ಸೆಂಟ್ ಹರಿಜನ ಗಿರಿಜನರಿಗಾಗಿ ಮುಟ್ಟಿಗೆ ಉಪಯೋಗಿಸಬೇಕು ಎಂದು ಮಾಡಿದ್ದೀರಿ. ಆದರೆ ಪ್ರತಿಯೊಂದು ಜಿಲ್ಲಾ ಪರಿಷತ್‌ನಲ್ಲಿ ಆಗಲಿ, ಮಂಡಲ್ ಪಂಚಾಯತ್‌ನಲ್ಲಿ ಆಗಲಿ ಒಂದು ಇಲಾಖೆಯಲ್ಲಿ ಆಗಲಿ ಅಥವಾ ಮತ್ತೊಂದರಲ್ಲಿ ಆಗಲಿ ಅವರವರದೇ ಕೆಲಸ ಮಾಡುವಾಗ ಈ ಯೋಜನೆಗಳು ಕಾರ್ಯಗತ ಆಗುತ್ತಿದೆಯೋ ಅಥವಾ ಇಲ್ಲವೇ ಎಂದು ಯಾರೂ ಚೆಕ್ ಮಾಡುವುದಿಲ್ಲ ಆದ್ದರಿಂದ ಎಲ್ಲಾ ಇಲಾಖೆಗಳ ಮೀಸಲು ಹಣವಾದ ೧೮ ಪರ್ಸೆಂಟ್‌ನ್ನು ಕೇಂದ್ರೀಕರಣಗೊಳಿಸಿ ಸಮಾಜ ಕಲ್ಯಾಣ ಇಲಾಖೆಯ ಮುಖಾಂತರ ಖರ್ಚಾಗುವ ಹಾಗೆ ಮಾಡಬೇಕು ಮತ್ತು ಅದರ ಖರ್ಚು ವೆಚ್ಚ ಸರಿಯಾಗಿ ಆಗಿದೆಯೋ ಅಥವಾ ಇಲ್ಲವೇ ಎಂಬುದರ ಮೇಲ್ವಿಚಾರಣೆಯ ವ್ಯವಸ್ಥೆ ಆಗಬೇಕು. ಆದು ಆಗದೇ ಇದ್ದರೆ ಯಾವ ಪರ್ಸೆಂಟೇಜ್ ಕೊಡಿ, ೧೮ ಇಲ್ಲವೇ ೫೦ ಪರ್ಸೆಂಟೇಜ್ ಕೊಟ್ಟರೂ ಕೂಡ ಅದು ಈ ಜನರಿಗೆ ಮುಟ್ಟುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಏತಕ್ಕೆ ಹೇಳುತ್ತಿದ್ದೇನೆ ಅಂದರೆ ನನ್ನ ಅನುಭವಕ್ಕೆ ಬಂದಿರುವ ವಿಚಾರದಲ್ಲಿ ಎಸ್ ಸಿ ಎಸ್ ಟಿ ಜನಾಂಗಕ್ಕೆ ಖರ್ಚು ಆಗತಕ್ಕ ಹಣ ರಸ್ತೆಗೆ ಅಥವಾ ಅವರು ಹೋಗುವ ಕೇವಲ ರಸ್ತೆ ಇರಬಹುದು ಯಾವುದೋ ಮೋರಿ ಇರಬಹುದು, ಸಾರ್ವಜನಿಕ ರಸ್ತೆ ಮೋರಿ ಮುಂತಾದುದಕ್ಕೆ ಕೊಡುತ್ತಿದ್ದಾರೆ. ಅದು ಹರಿಜನರಿಗೆ ಅಲ್ಲ ಹರಿಜನರಿಗೆ ರಸ್ತೆ ಮಾಡುತ್ತೇವೆ, ಮೋರಿ ಕೊಡುತ್ತೇವೆ ಎನ್ನುತ್ತಾರೆ. ಅದು ಹರಿಜನ ಕಾಲೋನಿಗೆ ಹೋಗುವುದಾದರೆ ನಾವು ಒಪ್ಪಿಕೊಳ್ಳುತ್ತೇವೆ ಆದರೆ ಊರಿಗೆ ಹೋಗುವ ರಸ್ತೆಯಲ್ಲಿ 'ಹರಿಜನ ವಾಡಾ' ಎಂಬ ಹೆಸರು ಇಡುತ್ತಾರೆ. ಇಂತಹ ಅವ್ಯವಹಾರಗಳನ್ನು ನಡೆಯುತ್ತವೆ. ಇದನ್ನು ಚೆಕ್ ಮಾಡುವುದಕ್ಕೆ ಸರ್ಕಾರ ಸಮಾಜ ಕಲ್ಯಾಣ ಇಲಾಖೆಗೆ ಹೆಚ್ಚು ಶಕ್ತಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಭಾಗ್ಯ ಜ್ಯೋತಿ, ಗಂಗಾ ಕಲ್ಯಾಣ ಯೋಜನೆ ಇವೆಲ್ಲಾ ಮಾಡಿದ್ದಾರೆ. ಇದು ಕೇಳುವುದಕ್ಕೆ ಇಂಪಾಗಿರುತ್ತದೆ. ಹೆಸರು ಬಹಳ ಚೆನ್ನಾಗಿವೆ. ಆದರೆ ಎಷ್ಟು ಗಂಗಾ ಕಲ್ಯಾಣ ಯೋಜನೆಗಳು ಫಲಪ್ರದವಾಗಿವೆ ಎಷ್ಟು ಗಂಗಾ ಕಲ್ಯಾಣ ಯೋಜನೆಗಳು ಮಂಜೂರಾಗಿವೆ, ಅದರಲ್ಲಿ ಎಷ್ಟು ಎಕರೆ ಪ್ರದೇಶ ಇವೊತ್ತು ನೀರು ಪಡೆಯುತ್ತಿದೆ, ಇದಕ್ಕೆ ವೆಚ್ಚ ಮಾಡುವ ದುಡ್ಡು ಎಷ್ಟು? ಎಷ್ಟು ಯೋಜನೆಗಳಲ್ಲಿ ಎಷ್ಟು ಬಾವಿಗಳಲ್ಲಿ ನೀರು ಬರುತ್ತದೆ ಇದಕ್ಕೆ ಏನಾದರೂ ಸಮಾಜ ಕಲ್ಯಾಣ ಇಲಾಖೆಯವರು ಉತ್ತರ ಹೇಳುತ್ತಾರೊ ಅಥವಾ ಜಿಲ್ಲಾ ಪರಿಷತ್‌ನವರು ಉತ್ತರ ಹೇಳುತ್ತಾರಾ? ಈ ಬಗ್ಗೆ ಜಿಲ್ಲಾ ಪರಿಷತ್‌ನವರು ಏನು ಹೇಳುತ್ತಾರೆಂದರೆ ಸರ್ಕಾರದ

ಯೋಜನೆ ಆದ ಗಂಗಾ ಕಲ್ಯಾಣ ಯೋಜನೆ ಅನ್ನು ಕಾರ್ಯಗತಗೊಳಿಸಲು ಯಾರಿಗೋ ಕಂಟ್ರಾಕ್ಟರ್ ಕೊಡುತ್ತಾರೆ. ಅವನು ಒಂದು ಬಾವಿ ರೆಡಿ ಮಾಡಿ, ವಿದ್ಯುತ್ ಮೋಟಾರ್ ಇಟ್ಟು ಹೊರಟು ಹೋಗುತ್ತಾನೆ. ಒಂದು ಪಕ್ಷ ಅದು ಕೆಟ್ಟು ಹೋದರೆ ಜಿಲ್ಲಾ ಪರಿಷತ್‌ನಲ್ಲಿ ರಿಪೇರಿ ಮಾಡಲು ಹಣ ಇಲ್ಲ. ಅದು ಹಾಗೆಯೇ ಬಿದ್ದಿರುತ್ತದೆ. ಕಂಟ್ರಾಕ್ಟರ್ ಸರಿಯಾಗಿ ಬಾವಿ ಮಾಡಿದ್ದಾನೋ ಅಥವಾ ಬಿಟ್ಟಿದ್ದಾನೋ ಗೊತ್ತಿಲ್ಲ. ಒಂದು ಸಲ ಆತ ಅದನ್ನು ಚಾಲೂ ಮಾಡಿ ಹೊರಟು ಹೋದರೆ ಮುಗಿಯಿತು. ಈ ರೀತಿ ಗಂಗಾ ಕಲ್ಯಾಣ ಯೋಜನೆ ವಿಫಲವಾಗಿದೆ. ಎರಡನೆಯದಾಗಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಏನಾಗಿದೆ ಅಂದರೆ ಹರಿಜನರಿಗೆ ಒಂದೇ ಕಡೆ ಭೂಮಿ ಕೊಟ್ಟಿಲ್ಲ ಮತ್ತು ಅನೇಕ ಕಡೆ ಕೊಟ್ಟಿರುತ್ತಾರೆ. ಇವರ ಮಧ್ಯೆ ಬೇರೆ ಯಾರೋ ಸೇರಿಕೊಂಡಿದ್ದಾರೆ. ಗಂಗಾ ಕಲ್ಯಾಣ ಯೋಜನೆಯ ಫಲ ಪಡೆಯಲು ಸೆಂಟ್ ಪರ್ಸೆಂಟ್ ಹರಿಜನರ ಭೂಮಿ ಇರಬೇಕು ಎಂದು ನಿಯಮವಿದೆ ಅಷ್ಟೊಂದು ಭೂಮಿ ಕೊಡಲು ನಮ್ಮ ಭಾಗದಲ್ಲಿ ಭೂಮಿಯೇ ಇಲ್ಲ. ಬೇರೆ ಯಾವ ಕಡೆ ಕೊಟ್ಟಿದ್ದಾರೆ ಗೊತ್ತಿಲ್ಲ. ಹರಿಜನರಿಗೆ ಒಂದೊಂದು ಭಾಗದಲ್ಲಿ ಒಟ್ಟಿಗೆ ೧೫,೨೦,೩೦,೫೦ ಎಕರೆ ಎಲ್ಲೂ ಕೊಟ್ಟಿಲ್ಲ. ೪ ಎಕರೆ ಒಂದು ಕಡೆ ೫ ಎಕರೆ ಇನ್ನೊಂದು ಕಡೆ ಕೊಟ್ಟಿರುತ್ತಾರೆ. ಇನ್ನೊಂದು ಕಡೆ ಎರಡು ಎಕರೆ ಕೊಟ್ಟಿರಬಹುದು ನಾಲು ಎಕರೆ ೧೦ ಜನಕ್ಕೆ ಕೊಟ್ಟಿರಬಹುದು. ಮಧ್ಯೆದಲ್ಲಿ ಒಬ್ಬರು ಅಥವಾ ಇಬ್ಬರು, ಬೇರೆ ಜನಾಂಗದವರು ಇದ್ದರೆ ಈ ಸ್ಕೀಮ್‌ನಿಂದ ಉಪಯೋಗ ಆಗುವುದಿಲ್ಲ ಇವೊತ್ತಿನ ಕಾನೂನು ಪ್ರಕಾರ ಅದು ಆಗುವುದಿಲ್ಲ. ಮಧ್ಯದದಲ್ಲಿ. ಯಾರೊ ಒಬ್ಬ ಬೇರೆಯವರು ಇದ್ದಾರೆ ಉಳಿದ ಇನ್ನು ಮಿಕ್ಕ ೮-೯ ಜನ ಹರಿಜನರಿಗೆ ನೀರು ಕೊಡುವಂತಹ ವ್ಯವಸ್ಥೆ ಮಾಡಬೇಕು.

೫-೩೦ ಪಿ. ಎಂ.

ಹಾಗೆ ಮಾಡದೇ ಹೋದರೆ ಈ ಗಂಗಾಕಲ್ಯಾಣ ಯೋಜನೆಯಿಂದ ಹರಿಜನರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಮತ್ತೆ ಭಾಗ್ಯಜ್ಯೋತಿ ಯೋಜನೆ ಬರುತ್ತದೆ ಎಂದು ಇವತ್ತು ಬಹಳ ಜನ ನೆಚ್ಚಿಕೊಂಡಿದ್ದಾರೆ. ಭಾಗ್ಯಜ್ಯೋತಿ ಯೋಜನೆಗೆ ಬೇಕಾಗಿರತಕ್ಕಂಥ ಎಲೆಕ್ಟ್ರಿಕ್ ಮೆಟೀರಿಯಲ್ಸ್ ಇಲ್ಲದೆ ಅನೇಕ ಕಡೆಗಳಲ್ಲಿ ದೀಪಗಳನ್ನು ಹಾಕಿಸಲಿಲ್ಲ. ಅನೇಕ ಊರುಗಳಿಗೆ ವಿದ್ಯುಚ್ಛಕ್ತಿ ಲೈನನ್ನು ಎಳೆದಿದ್ದಾರೆ. ನನಗೆ ಗೊತ್ತಿರುವ ಹಾಗೆ ಬಹುತೇಕ ಹರಿಜನ ಕಾಲೋನಿಗಳಿಗೆ ವಿದ್ಯುಚ್ಛಕ್ತಿ ದೀಪಗಳನ್ನು ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲ ಎಂದು ಕೇಳಿದರೆ ಅದು ಊರಲ್ಲ ಊರಿನಿಂದ ಹೊರಗಡೆ ಇದೆ, ದೂರದಲ್ಲಿದೆ, ಈ ಯೋಜನೆ ಕೆಳಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಈ ರೀತಿ ನೆಪಮಾಡಿ ಬಹುತೇಕ ಹರಿಜನ ಕಾಲೋನಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ, ಇದು ಬಹಳ ಅನ್ಯಾಯ. ಇದನ್ನು ಸಂಬಂಧಪಟ್ಟ ಮಂತ್ರಿಗಳು ನೋಡಬೇಕು. ಒಂದು ಊರು ಅಂದರೆ ಹರಿಜನ ಕಾಲೋನಿ ಇದ್ದೇ ಇರುತ್ತದೆ, ಹರಿಜನ ಕಾಲೋನಿ ಊರು ಅಲ್ಲವೆ ? ಅವರಿಗೆ ಊರಿನಲ್ಲಿ ಜಮೀನು ಇಲ್ಲವೇ. ಅವರ ಅಪ್ಪ ಅಜ್ಜನ ಕಾಲದಿಂದ ಬದುಕಿಲ್ಲವೇ ? ಯಾರೋ ಒಬ್ಬ ಅಧಿಕಾರಿ ಹೇಳುತ್ತಾನೆ, ಇದು ಊರಲ್ಲ ದೂರದಲ್ಲಿ ಇದೆ ಎಂದು ಈ ರೀತಿ ಅನ್ಯಾಯಗಳನ್ನು, ಮೋಸಗಳನ್ನು ಅಧಿಕಾರಿಗಳು ಮಾಡುತ್ತಾರೆ. ಇಂತಹ ದೂರು ಬಂದಾಗ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಕಠಿಣವಾದ ಕ್ರಮವನ್ನು ತೆಗೆದುಕೊಂಡರೆ ಹರಿಜನರಿಗೆ ಏನಾದರೂ ಒಂದು ಉಪಯೋಗವಾಗುತ್ತದೆ. ಮತ್ತೆ ಶಿಶುವಿಹಾರ, ಆಶ್ರಮ ಶಾಲೆಗಳನ್ನು ಮಾಡಿದ್ದೀರಿ ಅದನ್ನು ಇನ್ನೂ ಜಾಸ್ತಿ ಮಾಡಿ. ಮತ್ತೆ ಟೈಲರಿಂಗ್ ಟ್ರೈನಿಂಗ್ ಎಂದು ಮಾಡಿದಿರಿ, ಈ ಟೈಲರಿಂಗ್‌ನಿಂದ ಯಾರಿಗೆ ಉಪಯೋಗ ? ಹರಿಜನ ಗಿರಿಜನ ಹೆಣ್ಣುಮಕ್ಕಳು ಏನಾದರೂ ಇದನ್ನು ಕಲಿತು ಹೊಲಿಯಲಿಕ್ಕೆ ಆಗುತ್ತದೆಯೇ. ನೀವು ಕೊಡುವ ಒಂದು ವರ್ಷದ ಟ್ರೈನಿಂಗ್‌ನಿಂದ ಹೊಲಿಯಲಿಕ್ಕೆ ಆಗುತ್ತದೆಯೇ. ಪಾಲಿಟೆಕ್ನಿಕ್‌ನಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ ಎರಡು ವರ್ಷ ಟ್ರೈನಿಂಗ್ ಕೊಡುತ್ತಾರೆ ನೀವು ಅಲ್ಪ ವಿದ್ಯಾವಂತರಾದ ಹರಿಜನ ಹೆಣ್ಣುಮಕ್ಕಳಿಗೆ ಒಂದು ವರ್ಷ ಟ್ರೈನಿಂಗ್ ಕೊಡುತ್ತೀರಿ ಇದನ್ನು ಏಕೆ ಕೊಡುತ್ತಿದ್ದೀರಿ. ಸರ್ಕಾರಕೆ ದುಡ್ಡು ಹೆಚ್ಚಾಗಿದೆಯೇ? ನೀವು ಟ್ರೈನಿಂಗ್ ಕೊಡುವುದಿದ್ದರೆ ೨-೩ ವರ್ಷ ಟ್ರೈನಿಂಗ್ ಕೊಟ್ಟು ಸ್ಟೈಫಂಡ್ ಕೊಟ್ಟು ಕೊಡಿ. ೨-೩ ವರ್ಷ ಟ್ರೈನಿಂಗ್ ಕೊಟ್ಟರೆ ಕನಿಷ್ಟಪಕ್ಷ ಅವರ ಬಟ್ಟೆಗಳನ್ನಾದರೂ ಅವರು ಹೊಲಿದು ಕೊಳ್ಳಲಿಕ್ಕೆ ಅವರಿಗೆ ಶಕ್ತಿ ಬರುತ್ತದೆ. ಒಂದು ವರ್ಷ ಟ್ರೈನಿಂಗ್ ಕೊಟ್ಟರೆ ಅವರಿಗೆ ಕತ್ತರಿಸಲಿಕ್ಕೆ ಬರುವುದಿಲ್ಲ ಮತ್ತು ಹೊಲಿಯಲಿಕ್ಕೆ ಬರುವುದಿಲ್ಲ. ಯಾರೋ ಒಬ್ಬರು ಟೀಚರ್ ಬರುತ್ತಾರೆ ಆಕೆಗೆ ಸಂಬಳ ಬೇಕು ಹೇಳಿಕೊಡಬೇಕು ಎನ್ನುವ ಮನಸ್ಸಿಲ್ಲದೆ ಹೇಳಿಕೊಡಬಹುದು. ಇದುವರೆಗೆ ಯಾರೂ ಅದನ್ನು ಚೆಕ್ ಮಾಡಿಲ್ಲ. ಈ ಟೈಲರಿಂಗ್ ಪಾಸಾದವರು ಎಷ್ಟು ಜನ ಉದ್ಯೋಗ ಹೊಂದಿದ್ದಾರೆ, ಸ್ವಂತ ಉದ್ಯೋಗ ಇಟ್ಟುಕೊಂಡು ಅವರ ಜೀವನ ಎಷ್ಟರಮಟ್ಟಿಗೆ ನಡೆಯುತ್ತದೆ ಎಂದು ಯಾರೊ ನೋಡಿಲ್ಲ. ಸರ್ಕಾರ ಪ್ರತಿವರ್ಷ ಮಿಷಿನ್‌ಗಳಿಗೆ ಆರ್ಡರ್ ಕೊಡುತ್ತದೆ, ಮಿಷಿನ್‌ಗಳನ್ನು ತಂದು ಕೊಡುತ್ತಾರೆ; ಅವರಿಗೆ ಹಂಚುತ್ತಾರೆ, ಆದರೆ ಮಿಷಿನ್ ಎಲ್ಲಿ ಹೋಯಿತು, ಆ ಮಿಷಿನ್ ಹೋಗಲೇಬೇಕು. ಏಕೆಂದರೆ ನೀವು

ಕೊಟ್ಟಿರುವ ಟ್ರೈನಿಂಗ್ ಕಾಲ ಸಾಲದು ಆದ್ದರಿಂದ ಮಿಷಿನ್ ಏಕೆ ಇರುತ್ತದೆ. ಆದ್ದರಿಂದ ಕನಿಷ್ಟ ೨ ವರ್ಷ ಮೂರು ವರ್ಷ ಅವರಿಗೆ ಟ್ರೈನಿಂಗ್‌ನ್ನು ಒಳ್ಳೆಯ ತರಬೇತಿಯಾದಂಥವರಿಂದ ಕೊಡಿಸಬೇಕು. ಈ ರೀತಿ ಕೊಡಿಸುವುದರಿಂದ ಕೆಲವು ಹೆಣ್ಣು ಮಕ್ಕಳಿಗೆ ಉದ್ಯೋಗ ದೊರಕುತ್ತದೆ, ಸ್ವಯಂ ಉದ್ಯೋಗ ಮಾಡಿಕೊಳ್ಳುವುದರಿಂದ ಅವರ ಜೀವನಮಟ್ಟ ಉತ್ತಮವಾಗುತ್ತದೆಂದು ಹೇಳುತ್ತೇನೆ.

ಇನ್ನು ಉದ್ಯೋಗ ಅವಕಾಶಗಳು ಈ ಗ್ರಾಮಾಂತರ ಪ್ರದೇಶದಲ್ಲಿ ರೋಜ್‌ಗಾರ್ ಯೋಜನೆ ಎಂದು ಸರ್ಕಾರ ಹೊಸ ಯೋಜನೆಯನ್ನು ಜಾರಿಗೆ ತಂದಿದೆ. ಇದರಿಂದ ಅನೇಕ ಉದ್ಯೋಗಗಳು ದೊರೆಯುತ್ತವೆ. ಆದರೆ ಅದು ಕೇವಲ ೧೦೦ ದಿವಸ ಎಂದು ಸರ್ಕಾರ ನಿಗದಿ ಮಾಡಿದೆ. ಈ ಉದ್ಯೋಗಾವಕಾಶವನ್ನು ಜಾಸ್ತಿ ಮಾಡದೇ ಇದ್ದರೆ, ಖಾಯಂ ಉದ್ಯೋಗಗಳನ್ನು ದೊರಕಿಸಿಕೊಡದೇ ಹೋದರೆ ಬಡವರ ಸ್ಥಿತಿ ಸುಧಾರಿಸುವುದು ಕಷ್ಟವಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಬೇಕಾಗಿರತಕ್ಕಂಥಾದ್ದು ನಿವೇಶನ ಮತ್ತು ವಾಸದ ಮನೆ. ಮೊದಲು ಒಂದೊಂದು ತಾಲ್ಲೂಕಿನಲ್ಲಿ ೫೦೦, ೬೦೦, ೭೦೦ ಜನತಾ ಮನೆಗಳನ್ನು ಕಟ್ಟುತ್ತಿದ್ದರು. ಕಳೆದ ಸರ್ಕಾರ ಅದನ್ನು ಬಹಳ ರೆಡ್ಯೂಸ್ ಮಾಡಿತು. ಈಗ ಮಂಡಲ ಪಂಚಾಯಿತಿಗೆ ಜನತಾ ಮನೆಗಳನ್ನು ಹಂಚುವ ವ್ಯವಸ್ಥೆ ಕೊಟ್ಟಿದ್ದೀರಿ, ಇದು ಸರಿಯಲ್ಲ. ಹರಿಜನ ಗಿರಿಜನರಿಗೆ ಜನತಾ ಮನೆಗಳ ಕಾರ್ಯಕ್ರಮವನ್ನು ಹಾಕದೇ ಇದ್ದರೂ ಸಮಾಜ ಕಲ್ಯಾಣ ಇಲಾಖೆಯಿಂದ ಬೇರೆ ವ್ಯವಸ್ಥೆ ಮಾಡಿ ಹರಿಜನ ಗಿರಿಜನರಿಗೆ ಮನೆಗಳನ್ನು ಕೊಡುವುದಕ್ಕೆ ಮತ್ತು ನಿವೇಶನಗಳನ್ನು ಒದಗಿಸುವುದಕ್ಕೆ ನೀವು ಪ್ರಯತ್ನ ಮಾಡಬೇಕು, ಇದು ಸರ್ಕಾರದ ಆದ್ಯ ಕರ್ತವ್ಯ. ಕೋನೇಪಕ್ಷ ಅವರು ಈ ರಾಜ್ಯದಲ್ಲಿ ಹುಟ್ಟಿದ್ದಕ್ಕೆ, ಈ ನೆಲದಲ್ಲಿ ಹುಟ್ಟಿದ್ದಕ್ಕೆ ಒಂದು ನಿವೇಶನ ಬೇಕು, ಒಂದು ಮನೆ ಅಗತ್ಯ. ಈ ಕನಿಷ್ಟ ಅಗತ್ಯಗಳನ್ನು ಪೂರೈಸುವುದಕ್ಕೆ ಆಗದೇ ಹೋದರೆ ನಾವು ಏಕೆ ಇರಬೇಕು ? ನಿಜ ಸರ್ಕಾರದಲ್ಲಿ ಹಣ ಕಡಿಮೆ ಇರಬಹುದು. ಆದರೆ ಇದ್ದಂಥ ಕಾರ್ಯಕ್ರಮಗಳನ್ನು ಮೊಟಕು ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ. ಆದ್ದರಿಂದ ಜನತಾ ಮನೆಗಳನ್ನು ಹೆಚ್ಚಿಗೆ ಕಟ್ಟಿಸಿ ಹರಿಜನ ಮತ್ತು ಗಿರಿಜನರಿಗೆ ಹಂಚಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಿ. ನಂಜಪ್ಪ.—

(ಸದಸ್ಯರು ಗೈರು ಹಾಜರಾಗಿದ್ದರು)

ಶ್ರೀ ಲಮಾಣಿ.—

(ಮೇಲಿನಂತೆ)

† ಶ್ರೀ ಅಲಂ ವೀರಭದ್ರಪ್ಪ (ಬಳ್ಳಾರಿ).—ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ, ಹಾಗೂ ಗಣಿ ಭೂ ವಿಜ್ಞಾನ ಇಲಾಖೆಯ ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಅನೇಕ ಜನ ಸದಸ್ಯರು ಈಗಾಗಲೇ ಮಾತನಾಡಿ ಬೆಳಕು ಚೆಲ್ಲಿದ್ದಾರೆ. ಮಾನ್ಯ ಸದಸ್ಯರಾದ ಮೋಟಮ್ಮನವರು ಮಹಿಳಾ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ವಿದ್ಯಾರ್ಥಿನಿಲಯಗಳ ಬಗ್ಗೆ ಸಾಕಷ್ಟು ಹೇಳಿದ್ದಾರೆ ಇವತ್ತು ಯಾವುದೇ ಹಾಸ್ಟೆಲ್ ತೆಗೆದುಕೊಂಡರೂ ಅಲ್ಲಿ ಶಿಸ್ತು ಇಲ್ಲ, ಸರಿಯಾದ ವ್ಯವಸ್ಥೆ ಇಲ್ಲ. ಅಲ್ಲಿರತಕ್ಕ ಹುಡುಗರು ಸರಿಯಾಗಿ ಪಾಠ ಕಲಿತಿದ್ದಾರೆಯೆ ? ಇಲ್ಲವೇ ಎಂದು ನೋಡುವಂಥ ಮೇಲ್ವಿಚಾರಣೆ ಇಲ್ಲ. ಇದು ಸತ್ಯವಾದ ಮಾತು. ಇದರ ಕಡೆ ಮಂತ್ರಿಯವರು ತಮ್ಮ ಗಮನ ಹರಿಸಬೇಕೆಂದು ಹೇಳುತ್ತೇನೆ. ಮಾನ್ಯ ವಿರೋಧಪಕ್ಷದ ಉಪ ನಾಯಕರಾದ ಸಿಂಧ್ಯಾರವರು ಹೇಳಿದಂತೆ ವಿಶೇಷ ಘಟಕ ಯೋಜನೆಯಲ್ಲಿ ಸಾಲ ಕೊಡುತ್ತಿದ್ದಾರೆ. ಐ. ಆರ್. ಡಿ. ಪಿ. ಲೋನ್ ಆಗಲಿ ಸ್ಪೆಷಲ್ ಕಾಂಪೊನೆಂಟ್ ಲೋನ್ ಆಗಲಿ ಇವುಗಳು ಕಾಮನ್ ಆಗಿವೆ. ಆದ್ದರಿಂದ ಇದರ ಬಗ್ಗೆ ಒಂದು ರೀಸರ್ಚ್ ಮಾಡಿ ಅವರ ಅನುಕೂಲಕ್ಕೆ ತಕ್ಕಂತೆ ಸಾಲ ಕೊಡಬೇಕು. ಕಳೆದ ೧೦–೨೦ ವರ್ಷಗಳಿಂದಲೂ ದನಕರುಗಳನ್ನು ಕುರಿಗಳನ್ನು ಈ ಯೋಜನೆಯಲ್ಲಿ ಕೊಡುತ್ತಾ ಬಂದಿದ್ದಾರೆ. ಆದರೆ ಈಗ ಕಾಲ ಬದಲಾಗಿದೆ ನಮ್ಮ ಬಳ್ಳಾರಿಯಲ್ಲಿ ಈ ಯೋಜನೆಯ ಮೂಲಕ ಸಾಲ ಪಡೆದು ರಿಕ್ಷಾಗಾಡಿ ತುಳಿಯುತ್ತಿದ್ದರು ಈಗ ಆ ಗಾಡಿಗಳಿಗೆ ಡೀಸೆಲ್ ಇಂಜಿನ್ ಜೋಡಿಸಿ ಕೊಟ್ಟಿದ್ದಾರೆ. ಆದ್ದರಿಂದ ಈ ತರಹ ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ಒಂದು ಖಾಯಂ ಪರಿಹಾರವನ್ನು ಒದಗಿಸಿದರೆ ಈ ಜನಗಳಿಗೆ ಅನುಕೂಲವಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಹರಿಜನ ಗಿರಿಜನರನ್ನು ಸೇರಿಸಿ ಸೊಸೈಟಿಗಳನ್ನು ಮಾಡಿಸಿ ಆ ಸೊಸೈಟಿಗಳಿಗೆ ಟ್ರಾಕ್ಟರ್ ಕೊಡಿಸಿದರೆ ಅವರು ಅದನ್ನು ರೆಂಟಿಗೆ ಕೊಟ್ಟು ಹಣ ಸಂಪಾದನೆ ಮಾಡಲು ಅನುಕೂಲವಾಗುತ್ತದೆ. ಮತ್ತೆ ಇತ್ತೀಚೆಗೆ ಕಣ ಮಾಡುವ ಮಿಷನ್‌ಗಳು ಬಂದಿವೆ, ಅವುಗಳನ್ನು ಕೂಡ ಸಾಲದ ರೂಪದಲ್ಲಿ ಅವರಿಗೆ ಕೊಡಿಸಿದರೆ ಅದನ್ನು ಸಹ ಅವರು ಬಾಡಿಗೆಗೆ ಕೊಟ್ಟು ಲಾಭ ಸಂಪಾದನೆ ಮಾಡ

ಬಹುದೆಂದು ಹೇಳುತ್ತೇನೆ. ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳಿಗೆ ಡಿಪ್ಲೋಮಾ ಟ್ರೈನಿಂಗ್ ಬದಲು, ಜಿಲ್ಲಾ ಮಟ್ಟದಲ್ಲಿ ಹೈಲೆವೆಲ್ ಟ್ರೈನಿಂಗ್ ಕೋರ್ಸ್ ಪ್ರಾರಂಭ ಮಾಡಿದರೆ ತುಂಬಾ ಅನುಕೂಲವಾಗುತ್ತವೆಂದು ಮಾನ್ಯ ಶಿವಪೂರ್ತಿಯವರು ಬಹಳ ಚೆನ್ನಾಗಿ ಹೇಳಿದರು. ಈ ಒಂದು ಟ್ರೈನಿಂಗ್‌ನಲ್ಲಿ ನಾನಾ ರೀತಿಯ ಕೋರ್ಸ್‌ಗಳಿಗೆ ತರಬೇತಿ ಕೊಟ್ಟು ಮುಂದೆ ತರಬೇತಿ ಹೊಂದಿದವರಿಗೆ ನೇರವಾಗಿ ಉದ್ಯೋಗ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರ ಅಗತ್ಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಇನ್ನು ವಿಶೇಷ ಘಟಕ ಯೋಜನೆಅಡಿಯ ನೂರು ಬಾವಿಗಳ ಬಗ್ಗೆ ಮತ್ತೆ ಗಂಗಾಕಲ್ಯಾಣ ಯೋಜನೆಯಲ್ಲಿ ಬಂದಿರತಕ್ಕ ಅರ್ಜಿಗಳನ್ನು ಮೂರುನಾಲ್ಕು ವರ್ಷಗಳಿಂದರೂ ಇತ್ಯರ್ಥಪಡಿಸದೇ ಹಾಗೆ ಇಟ್ಟುಕೊಂಡಿರುತ್ತಾರೆ. ಹಳ್ಳಿಯಿಂದ ಬಡವರು ನಗರಗಳಿಗೆ ೩-೪ ಸಾರಿ ಬಂದು ಹೋಗುವುದಕ್ಕೆ ಕಷ್ಟ ಇದೆ. ಅವರ ಹತ್ತಿರ ಹಣ ಇರುವುದಿಲ್ಲ. ಒಂದು ಸಾರಿ ಬಂದು ಹೋದರೂ ಅವರ ಕೆಲಸ ಆಗುವುದಿಲ್ಲ. ಭೂ ವಿಜ್ಞಾನ ಇಲಾಖೆಯಿಂದ ಸರ್ಟಿಫಿಕೇಟ್ ತರಬೇಕು ಬಿ. ಡಿ. ಓ. ನಿಂದ ಸರ್ಟಿಫಿಕೇಟ್ ತರಬೇಕು ಬ್ಯಾಂಕ್‌ನಿಂದ ಸರ್ಟಿಫಿಕೇಟ್ ತರಬೇಕೆಂದು ಹೇಳುತ್ತಾರೆ. ಇಷ್ಟೆಲ್ಲಾ ಮಾಡಿ ಕೊನೆಗೆ ಆಗ್ರೋ ಇಂಡಸ್ಟ್ರೀಸ್‌ನವರು ಬೋರ್ ಹಾಕಿದ ಮೇಲೆ ಅಲ್ಲಿ ನೀರು ಇಲ್ಲ ಎಂದು ಹೇಳಿದರೆ ಅವರು ನಿರುತ್ಸಾಹಗೊಳ್ಳುತ್ತಾರೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸಲಹೆ ಮಾಡುವುದೇನೆಂದರೆ ಮಾನ್ಯ ಮಂತ್ರಿಗಳು ಸಿಂಗಲ್‌ವಿಂಡೋ ಕೆಳಗೆ ಈ ಕೆಲಸವನ್ನು ಖಾಸಗಿಯವರಿಗೆ ಇಲ್ಲವೇ ಆಗ್ರೋ ಇಂಡಸ್ಟ್ರೀಸ್‌ನವರಿಗೆ ವಹಿಸಬೇಕು. ಅವರೇ ಬಾವಿಯಲ್ಲಿ ನೀರು ಬರುವವರೆಗೆ ಎಲ್ಲ ಕೆಲಸ ಮಾಡಬೇಕು ಈ ಕೆಲಸ ಮಾಡದೇ ಹೋದರೆ, ಬಡವರು ಉದ್ಧಾರವಾಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ಇನ್ನು ದೇವದಾಸಿ ಸಮಸ್ಯೆ ಬಗ್ಗೆ ಮಾನ್ಯ ಜೋಷಿ ಅವರು ಹೇಳಿದಂತೆ ಸವದತ್ತಿಯಲ್ಲಿ ಪೋಲೀಸಿನವರ ಒಂದು ಭಯದಿಂದ ಈ ಪದ್ಧತಿ ಕಡಿಮೆಯಾದರೂ ಸಹ ಮತ್ತೆ ತಮ್ಮ ತಮ್ಮ ಊರುಗಳಲ್ಲಿ ಮತ್ತು ಗುರುಗಳ ಮುಂದೆ ಈ ಪದ್ಧತಿಯನ್ನು ಮುಂದುವರಿಸುತ್ತಿದ್ದಾರೆಂದು ತಿಳಿದು ಬಂದಿದೆ. ಈ ಒಂದು ವ್ಯವಸ್ಥೆಗೆ ಪ್ರಚೋದನೆ ಮಾಡತಕ್ಕವರನ್ನು ಮತ್ತು ಇದಕ್ಕೆ ಬೆಂಬಲ ಕೊಡತಕ್ಕವರನ್ನು ಅರೆಸ್ಟ್ ಮಾಡಿದರೆ, ಇದು ಕಡಿಮೆಯಾಗುತ್ತದೆಂದು ಹೇಳುತ್ತೇನೆ. ಇದಕ್ಕೆ ಸಾಕಷ್ಟು ಪ್ರಚಾರ ಆಗಬೇಕು. ಇಲ್ಲದಿದ್ದರೆ ಈ ಪದ್ಧತಿ ಮೊದಲಿನಂತೆಯೇ ಜಾರಿಯಲ್ಲಿ ಬರುತ್ತದೆ.

ಆದಕಾರಣ, ಇದಕ್ಕೆ ಗವರ್ನ್‌ಮೆಂಟ್‌ನವರು ಬಲವಾದ ಅಮೆಂಡ್‌ಮೆಂಟ್ ಮಾಡಿ ಇದನ್ನು ರದ್ದುಗೊಳಿಸಲಿಕ್ಕೆ ಏನು ಮಾಡಬೇಕೋ ಆ ಕಾರ್ಯಕ್ರಮ ಮಾಡಬೇಕೆಂದು ಹೇಳಬಯಸುತ್ತೇನೆ. ಈ ದಿವಸ ನಾವೆಲ್ಲ ಡಾ. ಅಂಬೇಡ್ಕರ್‌ರವರ ನೂರನೇ ಬರ್ತ್‌ಡೇ ಸೆಂಚುರಿ ಮಾಡತಕ್ಕ ಕಾಲದಲ್ಲಿ ಅಪಾಯಿಂಟ್‌ಮೆಂಟ್‌ಗಳ ಬಗ್ಗೆ ರೋಸ್ಟರ್ ಸಿಸ್ಟಮ್‌ನಲ್ಲಿ ಯಾವುದು ಖಾಲಿ ಇದೆ ಅವುಗಳನ್ನೆಲ್ಲಾ ಭರ್ತಿ ಮಾಡಿ ಕರ್ನಾಟಕ ರಾಜ್ಯ ಭಾರತ ದೇಶದಲ್ಲಿ ಒಂದು ಉದಾಹರಣೆಯ ರಾಜ್ಯವಾಗಲಿ. ಈ ಒಂದು ರಾಷ್ಟ್ರದಲ್ಲಿಯೇ ಒಂದು ಪ್ರೋಗ್ರೆಸ್ಸೀವ್ ರಾಜ್ಯವಾಗಲಿ ಎಂದು ಹೇಳಬಯಸುತ್ತೇನೆ. ಇನ್ನು ಗಣಿ ಮತ್ತು ವಿಜ್ಞಾನದ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜು ಮತ್ತು ಶಿವರಾಮೇಗೌಡರು ಮಾತನಾಡುತ್ತಾ ಮುಖ್ಯವಾಗಿ ಈ ಗ್ರಾನೈಟ್ ಬಗ್ಗೆ ಬಹಳಷ್ಟು ಬೆಳಕು ಚೆಲ್ಲಿದ್ದಾರೆ. ಇದನ್ನು ರಾಷ್ಟ್ರೀಕರಣ ಮಾಡಬೇಕೋ ಅಥವಾ ಮಾಡಬಾರದೋ ಎನ್ನುವುದು ಗವರ್ನ್‌ಮೆಂಟಿಗೆ ಬಿಟ್ಟಿದ್ದು. ಒಂದುವೇಳೆ ನ್ಯಾಷನಲೈಸ್ ಮಾಡಬೇಕಾದರೆ ಈ ಫ್ಯಾಕ್ಟರಿಗಳನ್ನು ಮಾಡಬೇಕೆಂದು ಈಗ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅದು ನಿಜವಾಗಿ ಸಾಧ್ಯವಾಗದ ಮಾತು. ಈಗಿನ ಸರ್ಕಾರದ ಮೂಲ ಉದ್ದೇಶ ಏನೆಂದರೆ, ಸಣ್ಣ ಸಣ್ಣ ಕ್ವಾರಿ ಓನರ್ಸ್‌ಗೆ ಲೀಸ್ ಕೊಟ್ಟರೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶ ಇದೆ. ಆದ್ದರಿಂದ ನಮ್ಮ ಮಾನ್ಯ ಸ್ನೇಹಿತರು ಹರಿಜನ ಗಿರಿಜನರಿಗೆ ಸಹ ಇದನ್ನು ಏತಕ್ಕೆ ಲೀಸ್‌ಮೇಲೆ ಕೊಡಬಾರದು ಎಂದು ಹೇಳಿದ್ದಾರೆ, ಈ ಸಮಯದಲ್ಲಿ ಅವರು ಫ್ಯಾಕ್ಟರಿ ಮಾಡುವುದರಿಂದ ಅವರಿಗೆ ಅನುಕೂಲವಾಗುವುದಿಲ್ಲ. ಈ ರಿಸ್ಟ್ರಿಕ್ಷನ್ ಪಾಯಿಂಟ್ ಇಲ್ಲದೆ ಒಂದುವೇಳೆ ಲೀಸ್ ಕೊಟ್ಟರೆ ಅವರು ನಡೆಸಲು ಸಾಧ್ಯವಾಗುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ಸಲಹೆ ಮಾಡಬೇಕೆಂದರೆ, ಈಗ ಅಪ್ಲಿಕೇಷನ್ ಹಾಕಿದಂಥ ಸಂದರ್ಭದಲ್ಲಿ ೧೦-೧೫ ಎಕರೆಗೆ ರಿಸ್ಟ್ರಿಕ್ಷನ್ ಮಾಡದ ಹಾಗೆ, ಮೂರು ನಾಲ್ಕು ಎಕರೆ ಹಾಕಿದರೆ ಪರವಾಯಿಲ್ಲ. ಈ ರೀತಿ ಮಾಡಿದರೆ ಸರ್ಕಾರಕ್ಕೂ ಲಾಭ ಬರುತ್ತದೆ. ರಿಸ್ಟ್ರಿಕ್ಷನ್ ಕೂಡ ಮಾಡಿದಹಾಗೆ ಆಗುತ್ತದೆ. ದೊಡ್ಡ ದೊಡ್ಡ ಫರಮ್‌ಗಳಿಗೆ ಕೊಡತಕ್ಕಂಥಾದ್ದು ಏನಿದೆ ಅದನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ. ಇದು ಒಂದು ಸಲಹೆ ಎಂದು ನಾನು ತಿಳಿದಿದ್ದೇನೆ. ಇನ್ನು ಇಂತಹ ಗ್ರಾನೈಟ್ ಗಳಿಗೆ ಪರ್‌ಮಿಷನ್ ಕೊಡುತ್ತಾ ಹೋದರೆ ನಮ್ಮ ದೇಶದಲ್ಲಿರತಕ್ಕಂಥ ಕಲ್ಲುಗಳು ಮುಂದೆ ಇರಲಿಕ್ಕಿಲ್ಲ. ಮನೆಗಳನ್ನು ಕಟ್ಟಲಿಕ್ಕೆ ಬಹಳ ತೊಂದರೆಯಾಗುತ್ತದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಇದು ನಮ್ಮ ರಾಜ್ಯದ ನಿರ್ಧಾರವಲ್ಲ. ಕೇಂದ್ರ ಸರ್ಕಾರದ ನಿರ್ಧಾರ. ಇದರ ಬಗ್ಗೆ ಕೇಂದ್ರಸರ್ಕಾರದ ಜಾಯಿಂಟ್ ಸೆಕ್ರಟರಿ ಆಫ್ ಮೈನ್ಸ್ ಅವರು ಪರಿಶೀಲನೆ ಮಾಡಿ ಇದರಲ್ಲಿ ಕ್ಲೀನ್ ಆಗಿ ಹೇಳಿದ್ದಾರೆ ಏನೆಂದರೆ

"In his opinion/remarks the Joint Secretary, Mines, stated that the exploitation of extensive deposits of granites should be accelerated to catch with the export market and the policies of the States should be oriented to achieve this objective. The representatives of the Departments of Industry and Development stated that they have received approval and all these things but it was clarified that granite deposits were in such abundence that only a small portion of their occurance has been so far exploited" ಎಂದು :

ಆದಕಾರಣ ಇವೊತ್ತು ನಾವು ಇದು ಬೇಡ ಅಂದರೆ, ನಮ್ಮ ಪಕ್ಕದ ರಾಜ್ಯಗಳಾದ ತಮಿಳುನಾಡು, ಮತ್ತು ಆಂಧ್ರದವರು ಇದಕ್ಕೆ ಪರ್‌ಮಿಷನ್ ಕೊಟ್ಟು ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ. ಇವೊತ್ತು ಅವರು ಮಾರ್ಕೆಟ್ ಸಹ ಮಾಡುತ್ತಿದ್ದಾರೆ. ಆದರೆ ಇಲ್ಲಿ ನಾವು ಇದನ್ನು ಬ್ಯಾನ್ ಮಾಡಿದರೆ ನಮಗೆ ನಷ್ಟ ಆಗುತ್ತದೆ. ಏಕೆಂದರೆ ಆಫ್ರಿಕ, ಯೂರೋಪಿಯನ್ ಕಂಟ್ರೀಸ್ ಹಾಗೂ ನ್ಯೂಜಿಲೆಂಡ್ ದೇಶದವರು ಮಾರ್ಕೆಟ್‌ನಲ್ಲಿ ಕಾಂಪಿಟೇಷನ್ ಮಾಡುತ್ತಿದ್ದಾರೆ. ನಾವು ಮಾರ್ಕೆಟ್‌ಗೆ ಹೋಗದೆ ಇದ್ದರೆ ಕಷ್ಟವಾಗುತ್ತದೆ. ಫಾರಿನ್ ಬಯ್ಯರ್ಸ್ ೧೦–೧೫ ವರ್ಷಗಳ ಲಾಂಗ್ ಕಂಟ್ರ್ಯಾಕ್ಟ್ ಮಾಡುತ್ತಿರುತ್ತಾರೆ. ನಮ್ಮ ಗವರ್ನ್‌ಮೆಂಟ್ ಪಾಲಿಸಿ ಸರಿಯಿಲ್ಲದಿದ್ದರೆ, ನಾವು ಮಾರ್ಕೆಟ್ ಮಾಡಲಿಕ್ಕೆ ಬರುವುದಿಲ್ಲ. ಆ ಮೇಲೆ ನಮಗೆ ಮಾರ್ಕೆಟ್ ಕ್ಯಾಚ್ ಮಾಡಬೇಕಾದರೆ ಆಗುವುದಿಲ್ಲ. ೧೯೫೦–೫೫ರ ಕಾಲಕ್ಕೆ ಮ್ಯಾಂಗನೀಸ್ ಬಗ್ಗೆ ಅಮೆರಿಕಾ ಸರ್ಕಾರದವರು ಬರಿದುಕೊಳ್ಳುತ್ತಿದ್ದರು. ಆದರೆ ಆಗ ನಮ್ಮ ಗೌರ್ನ್‌ಮೆಂಟ್ ಪಾಲಿಸಿ ಚೇಂಜ್ ಆಗಿ, ಅದನ್ನು ಬ್ಯಾನ್ ಮಾಡಿದಮೇಲೆ ಇವೊತ್ತಿನ ದಿವಸದವರೆಗೆ ಮಾರ್ಕೆಟ್ ರೇಟ್ ಮ್ಯಾಂಗನೀಸ್‌ಗೆ ಇಲ್ಲ. ಆದಕಾರಣ ನಾವು ಇದನ್ನು ಏನು ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ ಅದು ಬಿಟ್ಟುಹೋದರೆ ಮತ್ತೆ ಅದನ್ನು ನಾವು ತೆಗೆದುಂಕೊಳ್ಳುವುದು ಕಷ್ಟ ಇದೆ. ಈಗ ತಾವು ದೊಡ್ಡದೊಡ್ಡವರಿಗೇ ಕೊಡುವುದು ಬೇಡ. ಮೂರು ಎಕರೆಗಳಷ್ಟು ಮಾತ್ರ ಯಾರು ನೇಟೀವ್ ಇರುತ್ತಾರೆ, ಲೋಕಲ್ ಡಿಸ್ಟ್ರಿಕ್ಟ್‌ನವರು ಇರುತ್ತಾರೆ ಅವರಿಗೇ ಕೊಡಿ. ಫಾರಿನರ್ಸ್‌ಗೆ ಬೇರೆ ರಾಜ್ಯದವರಿಗೆ ಎನ್‌ಕರೇಜ್ ಕೊಡುವುದು ಬೇಡ. ಲೋಕಲ್ ಯಾರು ಇರುತ್ತಾರೆ ಅವರಿಗೆ ಕೊಡಿ. ಈ ಪರಿಶೀಲನೆ ಬಗ್ಗೆ ನಾವು ಆಲೋಚನೆ ಮಾಡಬೇಕು. ಇನ್ನು ರೆವಿನ್ಯೂ ಬಗ್ಗೆ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಸರ್ಕಾರಕ್ಕೆ ಅದರಿಂದ ಲಾಸ್ ಆಗಬಹುದು ಅಥವಾ ಪ್ರಾಫಿಟ್ ಆಗಬಹುದು. ಆದರೆ ಇದರಿಂದ ಲೋಕಲ್ ಎಂಪ್ಲಾಯ್‌ಮೆಂಟ್ ಸಿಕ್ಕುತ್ತದೆ. ಇನ್ನು ಫ್ಯಾಕ್ಟರಿಗಳ ಬಗ್ಗೆ ಅದು ಆಗುಂವುದಿಲ್ಲ. ಏಕೆಂದರೆ ಫ್ಯಾಕ್ಟರಿ ಮಾಡಬೇಕೆಂದರೆ ೧೦ ರಿಂದ ೫೦ ಲಕ್ಷ ರೂಪಾಯಿಗಳವರೆಗೆ ಬೇಕಾಗುತ್ತದೆ. ಆದ್ದರಿಂದ, ಅವರಿಗೆ ಮೂರು ವರ್ಷ ಟೈಮ್ ಕೊಟ್ಟು ಅನಂತರ ಮಾಡಿದರೆ ಅದು ಮಾಡಲಿಕ್ಕೆ ಸಾಧ್ಯ. ಇದರ ಬಗ್ಗೆ ಪರಿಶೀಲನೆ ಮಾಡತಕ್ಕದ್ದು ಸರ್ಕಾರಕ್ಕೆ ಬಿಟ್ಟದ್ದು ಎಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಮಾಜ ಕಲ್ಯಾಣ ಸಚಿವರು ತಮ್ಮ ಬೇಡಿಕೆಗಳನ್ನು ಏನು ಇಟ್ಟಿದ್ದಾರೆ ಅದರ ಬಗ್ಗೆ ನನ್ನ ಕೆಲವು ಸಲಹೆಗಳನ್ನು ಕೊಡುತ್ತೇನೆ. ಎಸ್.ಸಿ., ಎಸ್.ಟಿ., ವಿದ್ಯಾರ್ಥಿಗಳಿಗೆ ೧೫೦ ರೂಪಾಯಿ ವಿದ್ಯಾರ್ಥಿ ವೇತನವನ್ನು ಏನು ಕೊಡುತ್ತಿದ್ದಾರೆ, ಇದು ಬಹಳ ಕಡಿಮೆಯಾಗಿದೆ. ಇದು ಒಂದು ಹೊತ್ತಿನ ಊಟಕ್ಕೂ ಕೂಡ ಬಹಳ ಕಡಿಮೆಯಾಗುತ್ತದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಎಲ್ಲಾ ಮಾನ್ಯ ಸದಸ್ಯರೂ ಕೂಡ ಇದನ್ನು ೩೦೦ ರೂಪಾಯಿಗಳಿಗೆ ಏರಿಸಬೇಕೆಂದು ಕೇಳಿದ್ದಕ್ಕೆ ೧೩ ಕೋಟಿ ರೂಪಾಯಿ ಹೆಚ್ಚಿಗೆ ಹೊರೆ ಸರಕಾರಕ್ಕೆ ಬೀಳುತ್ತದೆ ಎಂದು ಹಣಕಾಸಿನ ಸಚಿವರು ಹೇಳಿದರು. ೧೩ ಕೋಟಿ ರೂಪಾಯಿಗಳು ಸರಕಾರಕ್ಕೆ ಅಂತ ಹೆಚ್ಚು ಹೊರೆ ಏನೂ ಅಲ್ಲವಾದ್ದರಿಂದ ಅದನ್ನು ಮಾಡಬೇಕೆಂದು ಒತ್ತಾಯಿಸುತ್ತೇನೆ. ಇನ್ನು ಹರಿಜನ ಗಿರಿಜನ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಲ್ಲಿ ವಾರ್ಡನ್, ವಾಚ್‌ಮನ್‌ಗಳು ಇರುವುದಿಲ್ಲ. ಇದರಿಂದಾಗಿ ಎಷ್ಟೋ ಕಡೆಗಳಲ್ಲಿ ಗಲಭೆಯಾಗಿ ಎಷ್ಟೋ ಜನ ಸತ್ತಿರುವುದನ್ನು ಪತ್ರಿಕೆಯಲ್ಲಿ ನೋಡಿದ್ದೇವೆ. ಸರಕಾರ ಇದರ ಬಗ್ಗೆ ಕೂಡ ಗಮನವನ್ನು ಹರಿಸಿರಬೇಕು. ಇನ್ನು

ಎಸ್.ಸಿ., ಎಸ್.ಟಿ., ಕಾರ್ಪೊರೇಷನ್ ಇದೆ, ಇದರಲ್ಲಿ ಹರಿಜನ ಗಿರಿಜನರಿಗೆ ಸಾಲ ಕೊಡುತ್ತಾರೆಂಬ ಬಗ್ಗೆ ಈ ಜನಾಂಗಕ್ಕೆ ಪ್ರಚಾರವಾಗುತ್ತಿಲ್ಲ. ಆ ಕಾರ್ಪೊರೇಷನ್ನಿಗೆ ಹೋದಾಗ ಮಾತ್ರ ಅದು ಗೊತ್ತಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಹೋದಾಗ ನಮಗೆ ಖಾಸಗಿ ಬ್ಯಾಂಕ್‌ಗಳಲ್ಲಿ ಸಾಲ ಕೊಡಿಸಿ ಎಂದು ಹೇಳುತ್ತಾರೆಯೋ ಹೊರತು ಕಾರ್ಪೊರೇಷನ್ನಿನಿಂದ ಸಾಲ ಕೊಡಿಸಿ ಎಂದು ಹೇಳುವುದಿಲ್ಲ. ಆದರ ಅರ್ಜಿಗಳು ಎಲ್ಲಿ ಸಿಗುತ್ತವೆಂಬುದೂ ಕೂಡ ಅವರಿಗೆ ಗೊತ್ತಿಲ್ಲ. ಇದು ಸರಿಯಾಗಿ ಪ್ರಚಾರವಾಗದೇ ಅವರಿಗೆ ತೊಂದರೆಯಾಗಿದೆ. ಆದ್ದರಿಂದ ಸಾಲ ಸಿಗುವ ಬಗ್ಗೆ ಸರಿಯಾದಂತಹ ಪ್ರಚಾರವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಮಹಿಳಾ ಕಲ್ಯಾಣದ ಬಗ್ಗೆ ಹೇಳುವುದಾದರೆ, ಶಿಶುವಿಹಾರಗಳಲ್ಲಿ ಇರುವ ಮಕ್ಕಳು ಬೆಳಗಿನಿಂದ ಸಂಜೆಯವರೆಗೂ ಇರುತ್ತಾರೆ ಅವುಗಳ ವಯಸ್ಸು ೩ರಿಂದ ೬ ವರ್ಷದ ಒಳಗಿರುತ್ತವೆ. ಇಂತಹ ಮಕ್ಕಳಿಗೆ ಒಂದು ದಿನಕ್ಕೆ ೬ ಪೈಸೆಯಂತೆ ಒಂದು ಮಗುವಿಗೆ ಕೊಡುತ್ತಿದ್ದಾರೆ. ಇದು ಏನೇನೂ ಸಾಲದು. ಒಂದು ಕೋಳಿ ಮೊಟ್ಟೆಯನ್ನು ಕೊಡುತ್ತಾರೆ ಇದು ಏನೇನೂ ಸಾಲುವುದಿಲ್ಲ. ಆದ್ದರಿಂದ ಇವರಿಗೆ ಕನಿಷ್ಠ ೨ ರೂಪಾಯಿಯನ್ನಾದರೂ ನೀಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಹಿಂದಿನ ಸರಕಾರ ಅಂಗವಿಕಲರ ಕಲ್ಯಾಣ ಯೋಜನೆ ಎಂದು ಮಾಡಿತ್ತು. ಮಾನ್ಯ ಸಿದ್ಧರವರು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ಇದನ್ನು ಮಾಡಿದರು. ಆದರೆ ಬಡ್ಜೆಟ್ಟಿನಲ್ಲಿ ೧೬ ಕೋಟಿ ಹಣವನ್ನು ಇದರಲ್ಲಿ ಇಟ್ಟಿದ್ದೀರಿ. ಇದರಲ್ಲಿ ಅಂಗವಿಕಲರಿಗೆ ಮಾಸಾಶನ ಕೊಡುವುದಕ್ಕೇ ಹೆಚ್ಚು ಕಡಿಮೆ ೧೪ ಕೋಟಿ ರೂಪಾಯಿಯಾಗುತ್ತದೆ. ಈ ಇಲಾಖೆಯ ಕಾರ್ಯದರ್ಶಿಗಳು ಮತ್ತು ಹೊಸದಾಗಿ ಬಂದಂತಹ ನಿರ್ದೇಶಕರು ಹೆಚ್ಚಿಗೆ ಜವಾಬ್ದಾರಿಯನ್ನು ತೆಗೆದುಕೊಂಡು ಒಳ್ಳೆಯ ಕಾರ್ಯಕ್ರಮವನ್ನು ನಿರೂಪಿಸಿದ್ದಾರೆ. ಹೊಂಬೆಳಕು ಎಂಬ ಪುಸ್ತಕವನ್ನು ಬಿಡುಗಡೆ ಮಾಡುವ ಮೂಲಕ ಕುತೂಹಲದಿಂದ ಕೆಲಸ ಮಾಡಿದ್ದಾರೆ. ಇಂತಹ ಇಲಾಖೆಗೆ ಸರಕಾರದವರು ಪ್ರೋತ್ಸಾಹವನ್ನು ಕೊಟ್ಟಿಲ್ಲ. ಬರೀ ೧೬ ಕೋಟಿಯನ್ನು ಕೊಟ್ಟು ಅದರಲ್ಲಿ ೧೪ ಕೋಟಿಯನ್ನು ಅಂಗವಿಕಲರಿಗೆ ಮಾಸಾಶನ ಕೊಡುವುದಕ್ಕೆ ಖರ್ಚಾಗುತ್ತದೆ. ಇನ್ನುಳಿದ ೨ ಕೋಟಿ ರೂಪಾಯಿಗಳಲ್ಲಿ ಎಲ್ಲಾ ಕಡೆಗಳಲ್ಲಿ ಕೇಂದ್ರಗಳನ್ನು ತೆರೆಯುವಂತಹ ಯೋಜನೆಯನ್ನು ಏನು ಇಟ್ಟುಕೊಂಡಿದ್ದಾರೆ, ಅದಕ್ಕೆ ಇದು ಸಾಲುವುದಿಲ್ಲ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಚೇರಿಗಳನ್ನು ತೆರೆಯಬೇಕೆಂದು ಹೇಳಿದ್ದಾರೆ, ಅದಕ್ಕೂ ಕೂಡ ಹಣ ಸಾಲುವುದಿಲ್ಲ. ಇನ್ನು ಡೈರೆಕ್ಟೋರೇಟ್ ಮಾಡಿದ್ದಾರೆ, ಅದಕ್ಕೆ ತಕ್ಕಂತಹ ಸಿಬ್ಬಂದಿ ಇಲ್ಲ. ಹೀಗಾಗಿ ಈ ಅಂಗವಿಕಲರಿಗೆ ಸರಿಯಾದಂತಹ ಪ್ರೋತ್ಸಾಹ ಸಿಗುತ್ತಿಲ್ಲ.

ಅಂಗವಿಕಲರಿಗೆ ಉದ್ಯೋಗದಲ್ಲಿ ಏನು ೩ ಪರ್ಸೆಂಟ್ ರಿಸರ್ವೇಷನ್‌ನ್ನು ಇಟ್ಟಿದ್ದೀರಿ, ಅದೇ ರೀತಿ ಉಚ್ಚ ಶಿಕ್ಷಣ ಅಂದರೆ ಬಿ.ಇ; ಎಂ.ಬಿ.ಬಿ.ಎಸ್, ಬಿ.ಎಸ್‌ಸಿ. (ಅಗ್ರಿ) ಹಾಗೂ ಪಾಲಿಟೆಕ್ನಿಕ್‌ಗಳಲ್ಲೂ ೩ ಪರ್ಸೆಂಟ್ ರಿಸರ್ವೇಷನ್‌ನ್ನು ಇಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅಂಗವಿಕಲರಲ್ಲಿ ಅದರಲ್ಲೂ ಅಂಧರು, ಕಿವುಡರು, ಬುದ್ಧಿಮಾಂದ್ಯರು ಮುಂತಾದ ಮಕ್ಕಳಿಗೋಸ್ಕರ ಇರತಕ್ಕ ಶಾಲೆಗಳು ಬಹಳ ಕಡಿಮೆ ಇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂಥವು ಸುಮಾರು ೨-೩ ಮಾತ್ರ ಇರಬಹುದು. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಪ್ರತಿಯೊಂದು ಜಿಲ್ಲೆಗಳಲ್ಲೂ ಇಂಥ ಶಾಲೆಗಳನ್ನು ತೆರೆಯಬೇಕೆಂದು ನಾನು ಒತ್ತಾಯದಿಂದ ಕೇಳಿಕೊಳ್ಳುತ್ತೇನೆ. ಸರ್ಕಾರ ಈ ಅಂಗವಿಕಲರಿಗೋಸ್ಕರ ಒಂದು ಕಲ್ಯಾಣ ನಿಧಿಯನ್ನು ಮಾಡಿದರೆ ಬಹಳ ಸೂಕ್ತವೆನಿಸುತ್ತದೆ. ಏಕೆಂದರೆ ಅನೇಕ ಸಂಘಸಂಸ್ಥೆಗಳು ಹಣವನ್ನು ಕೊಡಲು ಮುಂದೆ ಬಂದಿದ್ದಾರೆ. ರಾಜ್ಯಸರ್ಕಾರದಲ್ಲಿ ಈ ಕೆಲಸವನ್ನು ಮೊದಲು ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದವರು ನಮ್ಮ ರಾಜ್ಯದಲ್ಲಿ ಅದರಲ್ಲೂ ಮೈಸೂರು ಜಿಲ್ಲೆಯ ಟಿ. ನರಸೀಪುರದಲ್ಲಿ ಅಂಗವಿಕಲರಿಗಾಗಿ ಒಂದು ಸ್ವಯಂಸೇವಾ ಸಂಸ್ಥೆಯನ್ನು ಮಾಡಿದ್ದಾರೆ. ಇದು ಬಹಳ ಜನರಿಗೆ ಅನುಕೂಲವಾಗಿದೆ. ಇದೇರೀತಿ ಸರ್ಕಾರವೇ ಎಲ್ಲ ಜಿಲ್ಲೆಗಳಲ್ಲೂ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

(ಮಾನ್ಯ ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಅಂಗವಿಕಲರ ಡೈರೆಕ್ಟೊರೇಟ್‌ನ್ನು ಮಾಡಿದಮೇಲೆ ಹಲವಾರು ಖಾಸಗಿಯವರು ಸಂಘಸಂಸ್ಥೆಗಳನ್ನು ಸ್ಥಾಪನೆ ಮಾಡಿದ್ದಾರೆ. ಅವುಗಳಿಗೆ ಕೇಂದ್ರ ಸರ್ಕಾರದ ನೆರವು ಸಿಕ್ಕುತ್ತಿದೆ, ಅಷ್ಟೇ ಅಲ್ಲ ವಿದೇಶೀ ನೆರವೂ ಕೂಡ ಸಿಕ್ಕುತ್ತಿದೆ. ಆದರೆ ಆ ಹಣವೆಲ್ಲಾ ದುರುಪಯೋಗವಾಗುತ್ತಿದೆ. ನಿಮ್ಮ ಇಲಾಖೆಯ ವತಿಯಿಂದ ಇದರ ಬಗ್ಗೆ ವ್ಯವಸ್ಥಿತವಾದ ಒಂದು ಇನ್‌ಸ್ಪೆಕ್ಷನ್‌ನನ್ನು ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಇದಕ್ಕಾಗಿ ಡೈರೆಕ್ಟೊರೇಟ್‌ನವರಿಗೆ ತಾವು ಸಂಪೂರ್ಣ ಅಧಿಕಾರವನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಅಂಗವಿಕಲರಿಗೆ ತಾವು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀರಿ. ಈಗ ಇಟ್ಟಿರತಕ್ಕ ಹಣ ಸಾಲದು. ಇನ್ನೂ ೧೦ ಕೋಟಿ ರೂಪಾಯಿಗಳನ್ನು ಅಂಗವಿಕಲರ ಕಲ್ಯಾಣಕ್ಕಾಗಿ ಈ ಇಲಾಖೆಗೆ ಕೊಡಬೇಕು. ಇಲಾಖೆಯ ಕಾರ್ಯದರ್ಶಿಯವರು,

ಡೈರೆಕ್ಟರ್‌ರವರೂ ಬಹಳ ಉತ್ಸಾಹಿಗಳಾಗಿ ಕೆಲಸ ಮಾಡಿದ್ದಾರೆ. ತಾವೂ ಕೂಡ ಮಾಡಿದ್ದೀರಿ. ಆದ್ದರಿಂದ ತಾವು ಇನ್ನೂ ಹೆಚ್ಚಿಗೆ ಹಣವನ್ನು ಈ ಅಂಗವಿಕಲರ ಕಲ್ಯಾಣಕ್ಕಾಗಿ ನೀಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಬಗ್ಗೆ ಹೇಳುವುದಾದರೆ, ೧೯೭೮ ರಿಂದ ರಾಷ್ಟ್ರೀಕರಣವಾಗಿದ್ದಂಥ ಕರಿ ಕಲ್ಲು, ಮಲ್ಟಿಕಲರ್ ಕಲ್ಲು ಮತ್ತಿತರ ಕಲ್ಲುಗಳಿಗೆ ಸಂಬಂಧಪಟ್ಟಂತೆ ಇದ್ದ ನೀತಿಯನ್ನು ಈ ಸರ್ಕಾರ ಅಧಿಕಾರಕ್ಕೆ ಬಂದ ಕೇವಲ ೬ ತಿಂಗಳಲ್ಲಿ ಸಡಿಲ ಮಾಡಿದ್ದಾರೆ. ಮೊದಲನೆಯದಾಗಿ ಇವರು ಏನು ಹೇಳುತ್ತಿದ್ದಾರೆಂದರೆ, ಯಾರು ಫ್ಯಾಕ್ಟರಿ ಇಟ್ಟಿದ್ದಾರೆ ಅವರಿಗೆ ಮೊದಲನೆ ಆದ್ಯತೆ ಕೊಡುತ್ತೇವೆ, ಯಾರು ಫ್ಯಾಕ್ಟರಿ ಇಡುತ್ತೇವೆಂದು ನಡವಳಿಕೆಯನ್ನು ಮಾಡಿದ್ದಾರೆ ಅವರಿಗೆ ಎರಡನೆಯ ಆದ್ಯತೆಯನ್ನು ಕೊಡುತ್ತೇವೆ, ಮತ್ತು ಯಾರು ಫ್ಯಾಕ್ಟರಿಯನ್ನು ೧೨ ತಿಂಗಳಲ್ಲಿ ಮಾಡುತ್ತೇವೆಂದು ಒಂದು ಅಗ್ರಿಮೆಂಟನ್ನು ಮಾಡಿಕೊಡುತ್ತಾರೆ, ಅವರಿಗೆ ಮೂರನೇ ಆದ್ಯತೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈ ಫ್ಯಾಕ್ಟರಿಯನ್ನು ಮಾಡಬೇಕಾದರೆ ಸುಮಾರು ೫-೬ ಲಕ್ಷ ರೂಪಾಯಿ ಬೇಕಾಗುತ್ತದೆ. ಈ ೫ ಲಕ್ಷ ರೂಪಾಯಿಯ ಬಂಡವಾಳದ ಒಂದು ಫ್ಯಾಕ್ಟರಿಯನ್ನು ಮಾಡಬೇಕಾದರೂ ಕನಿಷ್ಠ ೫ ಎಕರೆ ಜಾಗವನ್ನು ತೆಗೆದುಕೊಂಡರೂ ಸಾಧ್ಯವಾಗುವುದಿಲ್ಲ. ಇವರು ರಾ ಮೆಟೀರಿಯಲ್ಸ್ ಎಕ್ಸ್‌ಪೋರ್ಟ್ ಮಾಡುತ್ತೇವೆ ಎಂದು ಇದರಲ್ಲಿ ಹೇಳಿದ್ದಾರೆ. ತಮಿಳ್ನಾಡಿನಲ್ಲಿ ಈಗಾಗಲೇ ಮಾರ್ಕೆಟ್ ಮಾಡುತ್ತಿದ್ದಾರೆ, ಅವರು ರಾ ಮೆಟೀರಿಯಲ್ಸ್ ಎಕ್ಸ್‌ಪೋರ್ಟ್‌ನ್ನು ಬ್ಯಾನ್ ಮಾಡಿಲ್ಲ. ಅವರು ಕಳುಹಿಸಿಕೊಡುತ್ತಿದ್ದಾರೆ. ಕರ್ನಾಟಕ ಸರ್ಕಾರದವರು ಇದನ್ನು ಇಂಡಸ್ಟ್ರೀಸ್‌ಗೆ ಕೊಡುವುದರ ಬದಲು ಇದನ್ನು ಹರಾಜಿಗೆ ಹಾಕಿದರೆ ನಮ್ಮ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿ ಸಿಕ್ಕುತ್ತದೆ. ಇವರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಒಬ್ಬ ಒಳ್ಳೆಯ ಡೈರೆಕ್ಟರ್‌ನ್ನು ಹಾಕಿದ್ದಾರೆ. ಆದರೆ ಈ ಇಲಾಖೆ ಚೆನ್ನಾಗಿ ನಡೆಯಬೇಕೆಂಬ ಆಸೆ ಇರತಕ್ಕ ಆ ಡೈರೆಕ್ಟರ್‌ಗೆ ಇದ್ದಂಥ ಎಲ್ಲ ಅಧಿಕಾರಗಳನ್ನೂ ಕಿತ್ತುಕೊಂಡಿದ್ದಾರೆ. ಇವರು ೩ ಜನರ ಒಂದು ಸಮಿತಿಯನ್ನು ಮಾಡಿದ್ದಾರೆ. ಅದರಲ್ಲಿ ಒಬ್ಬರು ಇಂಡಸ್ಟ್ರೀಸ್ ಇಲಾಖೆಯ ಡೈರೆಕ್ಟರ್, ಇನ್ನೊಬ್ಬರು ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಯ ಡೆಪ್ಯುಟಿ ಡೈರೆಕ್ಟರ್‌ರವರು ಮತ್ತೊಬ್ಬರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಡೈರೆಕ್ಟರ್‌ರವರು ಇದ್ದಾರೆ. ಹೀಗೆ ೩ ಜನರನ್ನು ಆ ಸಮಿತಿಯಲ್ಲಿ ಇವರು ಏನು ಹಾಕಿದ್ದಾರೆ, ಈ ೩ ಜನರಿಗೂ ಈ ಕಲ್ಲಿನ ಬಗ್ಗೆ ಏನೇನೂ ಗೊತ್ತಿಲ್ಲ. ಟೆಕ್ನಿಕಲ್ ಆಗಿರುವ ಆ ಇಲಾಖೆಯವರೊಬ್ಬರನ್ನು ಈ ಸಮಿತಿಯಲ್ಲಿ ನೇಮಿಸಲಿಲ್ಲ. ಈಗ ಆ ಗಣಿ ನಿರ್ದೇಶಕರು ಐ.ಎ.ಎಸ್. ಆಫೀಸರ್. ಇಂಡಸ್ಟ್ರೀಸ್ ಅಂಡ್ ಕಾಮರ್ಸ್‌ನವರು ಐ.ಎ.ಎಸ್. ಆಫೀಸರ್. ಡೆಪ್ಯುಟಿ ಸೆಕ್ರೆಟರಿಯವರು ಐ.ಎ.ಎಸ್. ಆಫೀಸರ್. ಈ ಮೂರು ಜನಕ್ಕೆ ಯಾವ ಕಲ್ಲನ್ನು ಯಾವ ಕ್ವಾರಿಯಲ್ಲಿ ಎಷ್ಟು ತೆಗೆಯಬೇಕು ಎನ್ನುವ ಮಾಹಿತಿ ಗೊತ್ತಾಗುವುದಿಲ್ಲ. ಇಂಥ ಮೂರು ಜನರ ಸಮಿತಿಯನ್ನು ಮಾಡಿಕೊಂಡಿರುತ್ತೀರಿ. ಟೆಕ್ನಿಕಲ್ ಆಗಿ ಈ ಕಲ್ಲುಗಳ ಬಗ್ಗೆ ಗೊತ್ತಿರುವ ಇಲಾಖೆಯವರನ್ನು ಈ ಸಮಿತಿಯಲ್ಲಿ ಹಾಕಬೇಕಾಗಿತ್ತು. ಮತ್ತೆ ಆ ಗಣಿ ಇಲಾಖೆಯ ನಿರ್ದೇಶನಾಲಯಕ್ಕೆ ಸರ್ಕಾರ ಏನು ಆದೇಶ ಕೊಟ್ಟಿತ್ತೋ ಅದನ್ನೂ ಸಹ ಕಿತ್ತುಕೊಂಡಿರುತ್ತಾರೆ. ಅವರ ಮೇಲೆ ಸಂಪೂರ್ಣ ನಂಬಿಕೆ ಇಲ್ಲ. ಸ್ವಾಮಿ ಈ ಮೂರು ಜನರ ಸಮಿತಿ ಬೇಕಾಗಿರಲಿಲ್ಲ. ಇವರ ಸರ್ಕಾರ ಯಾರಿಗೆ ಕೊಡಬೇಕು, ಯಾರಿಗೆ ಮಾರಬೇಕು ಎನ್ನುವ ಉದ್ದೇಶದಿಂದಲೇ ಇವರು ಈ ರೀತಿ ಮಾಡಿದ್ದಾರೆನ್ನುವುದು ಸಂಪೂರ್ಣವಾಗಿ ಮನವರಿಕೆಯಾಗುತ್ತದೆ. ಇದುವರೆಗೂ ಎಲ್ಲ ಶಾಸಕರೂ ಈ ಬಗ್ಗೆ ಮನಬಿಚ್ಚಿ ಮಾತನಾಡಿದ್ದಾರೆ. ನಿಮ್ಮ ಸರ್ಕಾರ ಮಾಡಿದ ರಾಷ್ಟ್ರೀಕರಣವನ್ನು ವಿತ್‌ಡ್ರಾ ಮಾಡಿದ್ದೇವೆಂದು ಸನ್ಮಾನ್ಯ ಮಂತ್ರಿಗಳು ಹೇಳುತ್ತಿದ್ದರು. ಬಹುಶಃ ಈ ಸದನದಲ್ಲಿ ಹೇಳಬೇಕಾಗುತ್ತದೆ. ಮಂತ್ರಿಗಳಿಗೆ ಈ ಗ್ರಾನೈಟ್ ಆರ್ಡರ್ ಮಾಡಿದವರು ಯಾರು ಎಂಬುದೇ ಗೊತ್ತಿಲ್ಲವೋ ಏನೋ ಎಂದು ಇದನ್ನು ಬೇರೆಯವರು ಮಾಡಿರಬಹುದು. ಅಧಿಕಾರಿಗಳು ಈ ಕಾನೂನನ್ನು ಅವರಿಗೆ ಬೇಕಾದ ರೀತಿಯಲ್ಲಿ ಮಾಡಿಕೊಂಡು ಮಂತ್ರಿಗಳ ಹತ್ತಿರ ಸಹಿ ಹಾಕಿಸಿಕೊಂಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಬೇಕಾಗುತ್ತದೆ ಏಕೆಂದರೆ ಇದರಲ್ಲಿಯೂ ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಇಡಬೇಕೆಂದು ಅವರು ಸಲಹೆಯನ್ನು ಕಳುಹಿಸಿ ಕೊಟ್ಟಿದ್ದರು. ಆದರೆ ಈ ಹಿಂದೆ ಸಹ ದೇವರಾಜ ಅರಸ್‌ರವರ ಕಾಲದಲ್ಲಿ ಈ ಕಲ್ಲು ಗಣಿಯಿಂದ ಕಲ್ಲನ್ನು ತೆಗೆಯಲು ಯಾರು ಪರಿಶಿಷ್ಟ ಜಾತಿ ಮತ್ತು ವರ್ಗದವರು ಸೊಸೈಟಿ ಮಾಡಿಕೊಂಡಿರುತ್ತಾರೆ, ಅವರು ಅರ್ಜಿ ಹಾಕಿದರೆ, ಅವರಿಗೆ ಮೊದಲ ಆದ್ಯತೆಯನ್ನು ಕೊಡಬೇಕೆಂದು ಆದೇಶ ಮಾಡಿದ್ದಾರೆ. ಅದಾದ ಮೇಲೆ ಮಾನ್ಯ ಗುಂಡೂರಾಯರ ಸರ್ಕಾರ ಬಂದಾಗಲೂ ಸಹ ಈ ಬಗ್ಗೆ ಸಹ ನ್ಯಾಯಾಂಗ ಇಲಾಖೆಯ ಒಪ್ಪಿಗೆ ಕೇಳಿದಾಗ ಅವರು ಕೊಡುವುದಕ್ಕಾಗುವುದಿಲ್ಲವೆಂದು ತಿರಸ್ಕಾರ ಮಾಡಿದ್ದರು. ಆದರೆ ಮಾನ್ಯ ಗುಂಡೂರಾಯರು ದಿಟ್ಟ ಹೆಜ್ಜೆಯನ್ನು ತೆಗೆದುಕೊಂಡು ಈ ಪರಿಶಿಷ್ಟ ವರ್ಗದ ಜನರ

ಅಭಿವೃದ್ಧಿ ಮಾಡಬೇಕೆಂದು ಹೇಳಿ ಈ ಬಗ್ಗೆ ಒಂದು ಆರ್ಡರನ್ನು ಹೊರಡಿಸಿದರು. ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಸಂಘಸಂಸ್ಥೆಗಳವರು ಯಾರೇ ಆಗಲಿ, ಅರ್ಜಿಯನ್ನು ಹಾಕಿದರೆ ಮೊದಲು ಅವರಿಗೆ ಆದ್ಯತೆ ಕೊಡಬೇಕೆಂದು ಮಾಡಿದ್ದಾರೆ. ಈ ಬಗ್ಗೆ ಈ ಆರ್ಡರ್ ನೋಡಿದಾಗ ನಮಗೆ ಏನೂ ಗೊತ್ತಾಗುವುದಿಲ್ಲ. ಬಹುಶಃ ಅಧಿಕಾರಿಗಳನ್ನು ಈ ಬಗ್ಗೆ ಕೇಳಿದಾಗ ಆ ಆರ್ಡರ್ ಹಾಗೆಯೇ ಇದೆ, ಇಂಪ್ಲಿಮೆಂಟ್ ಆಗುತ್ತದೆಂದು ಹೇಳುತ್ತಾರೆ. ಆದರೆ ಅದನ್ನು ಮಂಜೂರಾತಿ ಮಾಡುವ ಟೈಮ್‌ನಲ್ಲಿ ಅದನ್ನು ಉಲ್ಲಂಘನೆ ಮಾಡುತ್ತಾರೋ ಏನೋ ಎನ್ನುವುದು ನನಗೆ ಸರಿಯಾಗಿ ಗೊತ್ತಿಲ್ಲ. ಆದ್ದರಿಂದ ಸನ್ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಏನೆಂದರೆ; ದೇವರಾಜ್ ಅರಸ್‌ರವರ ಕಾಲದಲ್ಲಿ ಪರಿಶಿಷ್ಟ ಜಾತಿ ಜನರ ಬಗ್ಗೆ ಏನು ಆರ್ಡರ್ ಮಾಡಿದ ರು ಮತ್ತು ಮಾನ್ಯ ಗುಂಡೂರಾಯರ ಕಾಲದಲ್ಲಿ ಏನು ಆರ್ಡರ್ ಮಾಡಿದ್ದರು, ಅದರಂತೆ ಈ ಜನರಿಗೆ ಆದ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಹಿಂದಿನ ಸರ್ಕಾರದ ಎಲ್ಲ ವಿಚಾರಗಳನ್ನು ಹೇಳಿದಿರಿ. ನಿಮ್ಮ ಸರ್ಕಾರ ದಲ್ಲಿ ಕಲ್ಲು ಲೂಟಿಯಾಗುತ್ತಿದೆ; ಕಲ್ಲು ಕಾನೂನು ಬಾಹಿರವಾಗಿ ಹೊರ ಹೋಗುತ್ತಿದೆ ಅದನ್ನೆಲ್ಲ ಹಿಡಿಯಬೇಕು. ಅವರ ಮೇಲೆ ಕೇಸ್ ಹಾಕಬೇಕು ಎಂದೆಲ್ಲಾ ಹೇಳಿದಿರಿ. ಇದಕ್ಕೆ ಏಕೆ ಇಷ್ಟು ಆತುರ, ನೋಟಿಫಿಕೇಷನ್ ಅನ್ನು ಏತಕ್ಕೆ ಸಡಿಲಗೊಳಿಸಿದಿರಿ ? ಸರ್ಕಾರದ ಜಾಗದಲ್ಲಿರತಕ್ಕಂಥ ಕಲ್ಲುಗಣಿಗಳ ಪಕ್ಕದಲ್ಲಿರುವ ಖಾಸಗಿ ಜಮೀನನ್ನು ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ತೆಗೆದು ಕೊಂಡು ಆ ಕಲ್ಲುಗಳನ್ನು ಹೊರತೆಗೆದು ಖಾಸಗಿ ಜಾಗದಲ್ಲಿ ಹಾಕಿಕೊಂಡು ಮಾಡುತ್ತಿದ್ದಾರೆ. ಈ ಗಣಿ ಇಲಾಖೆಯ ಅಧಿಕಾರಿಗಳನ್ನು ಹಾಗೂ ಹಿಂದೆ ದೇವಮುಖ್‌ರವರು ಇದ್ದಂಥ ಕಾಲದಲ್ಲಿ ಆ ಮಂತ್ರಿಗಳನ್ನೇ ಇದನ್ನು ನೋಡಲು ಒಳಕ್ಕೆ ಬಿಡಲಿಲ್ಲ; ಬಹುಶಃ ಪೋಲೀಸ್‌ನವರನ್ನು ಕರೆದು ಕೊಂಡು ಹೋದರೂ ಸಹ ಆ ಜಾಗವನ್ನು ನೋಡಲಿಕ್ಕೆ ಬಿಡಲಿಲ್ಲ. ಇಂಥವರ ಮೇಲೆ ನೀವು ಕ್ರಮ ತೆಗೆದುಕೊಳ್ಳದೆ ಬಹುಶಃ ಈ ಅಮೆಂಡ್‌ಮೆಂಟ್ಸ್ ತರದೆ. ಅದನ್ನೆಲ್ಲ ಪರಿಶೀಲನೆ ಮಾಡಿದ್ದರೆ, ಅವರ ಮೇಲೆ ಕ್ರಮತೆಗೆದುಕೊಂಡು ಲಕ್ಷಾಂತರ ರೂಪಾಯಿ ಫೆನಾಲ್ಟಿ ಹಾಕಬಹುದಾಗಿತ್ತು. ಇವತ್ತು ಈ ಹೊಸ ಆರ್ಡರ್ ಪ್ರಕಾರ ಕೊಟ್ಟರೆ ಅರ್ಜಿ ಹಾಕುತ್ತಾರೆ. ಆಗ ಯಾರು ಕಳ್ಳತನ ಮಾಡಿದರು ಅಥವಾ ಏನು ಮಾಡಿದರೆಂಬುದು ನಮಗೆ ಗೊತ್ತಾಗುವುದಿಲ್ಲ. ಇಲ್ಲಿಯವರೆಗೆ ಯಾರು ಯಾರು ಲಕ್ಷಾಂತರ ರೂಪಾಯಿ ಲೂಟಿ ಮಾಡಿದ್ದಾರೆ, ಅಂತಹವರಿಗೆ ನೀವು ಸಹಕಾರ ನೀಡಿದಂತೆ ಆಗುತ್ತದೆ. ಹಾಗೂ ಉತ್ತೇಜನ ಮಾಡಿಕೊಟ್ಟಂತೆ ಆಗುತ್ತದೆಂದು ಹೇಳಿ, ಖಂಡಿತವಾಗಿ ನೀವು ಈ ರೀತಿ ಮುಂದೆ ಮಾಡಬೇಡಿ ಎಂದು ಹೇಳುತ್ತೇನೆ. ಇದರ ಬಗ್ಗೆ ಎರಡು ದಿವಸ ಬೇಕಾದರೂ ಮಾತನಾಡಬಹುದು ಆದರೆ ಸಮಯವಿಲ್ಲ.

ಉಪಾಧ್ಯಕ್ಷರು.— ನೀವು ಜಾಗ್ರತೆ ಮುಗಿಸಿ.

ಶ್ರೀ ಬಿ. ಕೆ. ಶಿವಕುಮಾರ್.— ಗಣಿ ಸಂಘದ ಅಧ್ಯಕ್ಷರು ನೀವೇ ಆಗಿದ್ದೀರಿ. ಆದ್ದರಿಂದ ನೀವೇ ಎಲ್ಲವನ್ನೂ ಹೇಳಬೇಕು.

ಶ್ರೀ ಎಂ.ಪಿ. ವೆಂಕಟೇಶ್.— ಮಾನ್ಯ ಶಿವಕುಮಾರ್‌ರವರು ಹೇಳುತ್ತಿದ್ದಾರೆ, ತಾವು ಅಪ್ಪಣೆ ಕೊಡಿ, ಇದರಲ್ಲಿ ಯಾರು ಯಾರು ಶಾಮೀಲಾಗಿದ್ದಾರೆ ಅವರ ಹೆಸರನ್ನೆಲ್ಲ ಹೇಳುತ್ತೇನೆ. ತಾವು ಅಪ್ಪಣೆ ಕೊಟ್ಟರೆ ಯಾರು ಇದರಲ್ಲಿ ಶಾಮೀಲಾಗಿದ್ದಾರೆ, ಯಾರು ಅಮೆಂಡ್‌ಮೆಂಟ್ ಮಾಡಿದ್ದಾರೆ, ಯಾರು ಯಾರು ಇದರಲ್ಲಿ ಭಾಗಿಯಾಗಿದ್ದಾರೆನ್ನುವುದನ್ನೆಲ್ಲ ಹೇಳುತ್ತೇನೆ. ಅವರ ಹೆಸರು ಏನು, ಸೂಟ್‌ಕೇಸ್‌ನಲ್ಲಿ ನಲ್ಲಿ ಎಷ್ಟು ಹಣ ಬರುತ್ತಿತ್ತು ಎಂಬುದನ್ನೆಲ್ಲಾ ತಾವು ಅಪ್ಪಣೆ ಕೊಟ್ಟರೆ ಹೇಳುತ್ತೇನೆ.

(ಗೊಂದಲ)

೬-೦೦ ಪಿ. ಎಂ.

ಶ್ರೀ ಕೆ. ಹೆಚ್. ಪಾಟೀಲ್.—ಕರಪ್ಟ್ ಪ್ರಾಕ್ಟೀಸ್ ಇದೆ ಎಂದು ಹೇಳಿದರೆ ಸಾಲದು, ಅದನ್ನು ಬರೆದುಕೊಡಬೇಕು. ಇಂಥವರು ಇಷ್ಟು ತೆಗೆದುಕೊಂಡಿದ್ದಾರೆಂದು ಬರೆದುಕೊಟ್ಟರೆ ಸಾಕು, ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ, Why do you throw the responsibility on the Speaker. If you have guts, you must say that so and so has given and so and so has taken.

ಶ್ರೀ ಎಂ. ಪಿ. ವೆಂಕಟೇಶ್.—ಇದು ಚೆಕ್ ಮೂಲಕ ನಡೆಯುವುದಿಲ್ಲ. ಸೂಟ್ ಕೇಸ್ ಮೂಲಕ ನಡೆಯುತ್ತದೆ. ಚೆಕ್ ಡೇಟ್ ಫೋಟೋ, ಕ್ಯಾಮರಾ ಇದೆಲ್ಲಾ ಟೇಪ್‌ರೆಕಾರ್ಡ್ ಆಗುವುದಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ಟೇಪ್ ರೆಕಾರ್ಡ್ ಬೇಡ, ಸೂಟ್ ಕೇಸ್ ಇದೆಯೋ ಅಥವಾ ಯಾವುದಿದೆ ಎಂದು ಹೇಳಿದರೆ ಸಾಕು, ಎಕ್ಸಾಮಿನ್ ಮಾಡುತ್ತೇವೆ.

ಶ್ರೀ ಎಂ. ಪಿ. ವೆಂಕಟೇಶ್.—ನಾಳೆ ದಿವಸ ನೀವು ಕ್ಯಾಮರಾ ಇದೆಯೋ, ಟೇಪ್ ಇದೆಯೋ ಪ್ರೂಫ್ ಇದೆಯೋ ಎಂದು ಕೇಳುತ್ತೀರಿ.

ಶ್ರೀ ಕೆ. ಹೆಚ್. ಪಾಟೀಲ್.—ನಿಮ್ಮ ಬಾಯಿಂದ ಬಂದುದಕ್ಕೆ ಹೇಳುತ್ತಿದ್ದೇನೆ. ಯಾವುದೇ ಮನುಷ್ಯರ ಮೇಲೆ ಅಲಿಗೇಷನ್ ಮಾಡುವಾಗ ರೆಸ್ಪಾನ್ಸಿಬಲ್ ಆಗಿ ಮಾಡಬೇಕು. You must be cautious about it. It is not good. You are an honourable member. You are making the statement with full responsibility. You cannot make allegations like this. I am challenging you. Common, give evidence.

ಶ್ರೀ ಎಂ. ಪಿ. ವೆಂಕಟೇಶ್.—ನಾನು ರೆಸ್ಪಾನ್ಸಿಬಲ್ ಆಗಿಯೇ ಹೇಳುತ್ತಿದ್ದೇನೆ. ಈ ನೋಟಿಫಿಕೇಷನ್ ಹಿಂದೆ ಯಾರಿದ್ದಾರೆ ಎಂಬುದನ್ನು ಸಂಪೂರ್ಣವಾಗಿ ಹೇಳುತ್ತೇನೆ.

SRI K. H. PATIL.—I hope the Speaker has no objection if he has given evidence.

ಶ್ರೀ ಆರ್. ಎಸ್. ಶಿವರಾಮೇಗೌಡ.—ಮಾನ್ಯ ಸದಸ್ಯರು ಎತ್ತಿರತಕ್ಕ ವಿಚಾರದಲ್ಲಿ ಪಾಟೀಲರು ಉತ್ತರಿಸಿದ್ದಾರೆ. ಇನ್ನೊಂದು ವಿಚಾರ ಕೇಳುತ್ತೇನೆ. ಈ ಕಡೆ ಸದಸ್ಯರು ಆ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಅಲ್ಲಿ ಯಾರ್ಯಾರು ಅರ್ಜಿ ಹಾಕಿದ್ದಾರೆಂದು ಬೆಳಕು ಚೆಲ್ಲಲಿ ಎಂದು ಹೇಳುತ್ತೇನೆ.

ಉಪಾಧ್ಯಕ್ಷಿಣಿಯವರು.—ಅಲಿಗೇಷನ್ ಮಾಡಬೇಕಾದರೆ ಸ್ಪಷ್ಟವಾಗಿ ಬರೆದು ಕಳುಹಿಸಬೇಕು. ಏನಾದರೂ ಅದರ ಬಗ್ಗೆ ರೆಕಾರ್ಡ್ಸ್ ತಮ್ಮ ಹತ್ತಿರ ಇದ್ದರೆ ನನಗೆ ಕಳುಹಿಸಿದರೆ ವಿಚಾರ ಮಾಡುತ್ತೇನೆ. ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಂ. ಪಿ. ವೆಂಕಟೇಶ್.—ಅರ್ಜಿ ಹಾಕುವ ಬಗ್ಗೆ ಪ್ರಶ್ನೆ ಹಾಕಿದ್ದೆ. ಅದು ಅನ್‌ಸ್ಟಾರ್ಡ್ ಆಗಿ ಉತ್ತರ ಬಂದಿದೆ.

ಉಪಾಧ್ಯಕ್ಷಿಣಿಯವರು.—ತಾವು ಬರೆದು ಕಳುಹಿಸಿ. ಈಗ ೬ ಗಂಟೆ ಆಗಿದೆ. ಇವತ್ತು ಮಧ್ಯಾಹ್ನ ಒಂದು ಗಂಟೆ ಊಟಕ್ಕೆ ಕೂಡ ಬ್ರೇಕ್ ಮಾಡಲಿಲ್ಲ. ದಯಮಾಡಿ ಮುಗಿಸಬೇಕು.

ಶ್ರೀ ಪಿ ಜಿ. ಆರ್. ಸಿಂಧ್ಯ.—ಈಗ ವೆಂಕಟೇಶ್ ಅವರು ಈ ಸದನದ ಯಾರಾದರು ಸದಸ್ಯರ ಬಗ್ಗೆ ಚಾರ್ಜಸ್ ಇದ್ದರೆ ಬರೆದುಕೊಡಬೇಕಾಗುತ್ತದೆ. ಆದರೆ ಬೇರೆಯವರ ಬಗ್ಗೆ ಸ್ಪೆಸಿಫಿಕ್ ಆಗಿ ಚಾರ್ಜಸ್ ಇದ್ದರೆ ಅವನ್ನು ಹೇಳಲು ಬರೆದು ಕೊಡುವ ಅವಶ್ಯಕತೆ ಇಲ್ಲ. ಅವನ್ನು ಹೇಳಲು ತಾವು ಅನುಮತಿ ಕೊಡಬಹುದು.

ಶ್ರೀ ಎಂ. ಪಿ. ವೆಂಕಟೇಶ್.—ಇದರಿಂದ ಏನು ತೊಂದರೆಯಾಗುವುದಿಲ್ಲ. ಬಹಿರಂಗವಾಗಿ ಎಲ್ಲವೂ ಹೊರಬರುತ್ತದೆ. ಯಾವಾಗ ಬರುತ್ತದೆಂದು ಸೂಚ್ಯವಾಗಿ ಸ್ವಲ್ಪ ಹೇಳುತ್ತೇನೆ. ಕ್ವಾರಿ ಓನರ್ಸ್ ಎಲ್ಲ ಸೇರಿದ್ದಾರೆ. ಸೇರಿದಾಗ ಅವರು ಹೇಳುತ್ತಾರೆ, ಅಮೆಂಡ್‌ಮೆಂಟ್ಸ್ ಮಾಡಬೇಕಾದರೆ ಇಷ್ಟು ಲಕ್ಷ ದುಡ್ಡು ಬೇಕು, ಇಷ್ಟು ಲಕ್ಷ ಕೊಟ್ಟರೆ......

ಉಪಾಧ್ಯಕ್ಷಿಣಿಯವರು.—ಅದರ ಬಗ್ಗೆ ಬರೆದು ಕಳುಹಿಸಿದರೆ ನಾನು ನೋಡುತ್ತೇನೆಂದು ಹೇಳಿದ್ದೇನೆ. ಸುಮ್ಮನೆ ಯಾರ ಮೇಲೂ ಅಪವಾದ ಹೊರಿಸುವುದು ಬೇಡ.

(ಗೊಂದಲ)

ಶ್ರೀ ಬಿ. ಕೆ. ಶಿವಕುಮಾರ್.—ಯಾರ್ಯಾರು ಅರ್ಜಿ ಹಾಕುವುದಕ್ಕೆ ಹೋಗಿದ್ದರು. ಯಾರ್ಯಾರು ಸಂಘದ ಸದಸ್ಯರು ಅರ್ಜಿ ಹಾಕಿದರು ಎಂದು ನಾವೂ ಸಹ ಹೇಳುತ್ತೇವೆ. ನೀವು ಹೇಳಿದರೆ ಅದಕ್ಕೆ ಉತ್ತರ ಕೊಡಲು ನಾವೂ ಸಹ ತಯಾರಾಗಿದ್ದೇವೆ.

ಶ್ರೀ ಎಂ. ಪಿ. ವೆಂಕಟೇಶ್.—ನಿರ್ದಿಷ್ಟವಾಗಿ ಹೇಳಿ ಎಂದರೆ ಹೇಳುತ್ತೇನೆ. ಹೆಸರು ಕಳುಹಿಸಿ ಎಂದರೆ ಕಳುಹಿಸುತ್ತೇನೆ. ವಿವರವಾಗಿ ಈಗ ಸ್ವಲ್ಪ ಹೇಳುತ್ತೇನೆ.

ಶ್ರೀ ಆರ್. ದಯಾನಂದ ರಾವ್.—ಬ್ಯಾಗ್ ಯಾರಿಗೆ ಹೋಗಿದೆ ಹೇಳಿ. ಅದಕ್ಕೆ ಅನುಮತಿ ಏತಕ್ಕೆ ಬೇಕು ? You should not just talk like that being a Member. (interruptions) What statement you are making ?

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಹಿಂದಿನ ಸರ್ಕಾರದವರು ಫ್ಯಾಕ್ಟರಿಯನ್ನು ಮಾಡಿ, ನಾವು ಅನುಮತಿ ಕೊಡುತ್ತೇವೆಂದು ಹೇಳಿದ್ದರು, ಈ ಸರ್ಕಾರ ಬಂದಮೇಲೆ ಈಗ ಎಲ್ಲಾ ಕ್ವಾರಿ ಓನರ್ಸ್ ಕುಳಿತುಕೊಂಡು ಒಂದು ಚರ್ಚೆ ಮಾಡಿದ್ದಾರೆ.

ಉಪಾಧ್ಯಕ್ಷಿಣಿಯವರು.—ಈ ರೀತಿ ವೇಗ್ ಆಗಿ ಹೇಳಿದರೆ ಹೇಗೆ ? ನಾವು ಎಲ್ಲಾ ಕ್ವಾರಿ ಓನರ್ಸ್ ಯಾವಾಗಲೋ ಚರ್ಚೆ ಮಾಡಿದ್ದರು. ಯಾರೋ ಮಾಡಿದರು, ಯಾರೋ ಹೇಳಿದರು ಎಂದು ಹೇಳುವುದು ಸರಿಯಲ್ಲ. ನೀವು ಸರಿಯಾಗಿ ಬರೆದು ಕಳುಹಿಸಿ, ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ತಾವು ಹೆಸರು ಹೇಳುವುದಕ್ಕೆ ಅನುಮತಿ ಕೊಟ್ಟರೆ ಹೇಳುತ್ತೇನೆ.

ಉಪಾಧ್ಯಕ್ಷರು.—ತಾವು ಅದನ್ನು ಬರೆದು ಕಳುಹಿಸಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಬರೆದು ಕಳುಹಿಸಲೇ ? ಆಗಲಿ, ನಾನು ಬರೆದು ಕಳುಹಿಸುತ್ತೇನೆ. ಈ ಹಿಂದಿನ ಸರ್ಕಾರ ೧೯೭೮ರಲ್ಲಿ ಇದನ್ನು ರಾಷ್ಟ್ರೀಕರಣಮಾಡಿತ್ತು. ಆದರೆ ಈ ಗ್ರಾನೈಟ್ ವಿಚಾರದಲ್ಲಿ ಈ ಸರ್ಕಾರದವರು ಅಧಿಕಾರಕ್ಕೆ ಬಂದ ೬ ತಿಂಗಳ ಒಳಗೆ ಇಂಥಹರಾಷ್ಟ್ರೀಕರಣವನ್ನು ಸಡಿಲ ಮಾಡಿದರು. ಮಾನ್ಯರಾಜ್ಯಪಾಲರು ಈ ಸದನದಲ್ಲಿ ಭಾಷಣ ಮಾಡಿ ೬ ತಿಂಗಳು ಇನ್ನೂ ಆಗಿಲ್ಲ, ಆಗಲೇ ಸಡಿಲ ಎಂದು ಹೇಳಿದರೆ ಅದೂ ರಾಜ್ಯದಲ್ಲಿ ಹರಿಜನಗಿರಿಜನ ಕಲ್ಯಾಣ ಕಾರ್ಯಕ್ರಮಗಳು ಬೇಕಾದಷ್ಟು ಇದ್ದರೂ ಕೂಡಾ ಅದರ ಕಡೆಗೆ ಗಮನ ಕೊಡದೆ ಇದರ ಬಗ್ಗೆ ಬಹಳ ತುರ್ತಾಗಿ ೬ ತಿಂಗಳಲ್ಲಿ ವಿಶೇಷವಾದ ಒಂದು ಕಾನೂನನ್ನು ಹೊರಡಿಸಿ ಈ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳ ಅಧಿಕಾರವನ್ನು ಸಹ ಕಿತ್ತುಕೊಂಡು ಈ ಮೂರು ಜನರ ಸಮಿತಿಯನ್ನು ನೇಮಕ ಮಾಡಿ, ಸರ್ಕಾರದವರು ಯಾರಿಗೆ ಇನ್‌ಫ್ಲೂಯೆನ್ಸ್ ಮಾಡಿ ಲೈಸನ್ಸ್ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ ? ಸಂಪೂರ್ಣವಾಗಿ ಇದರಲ್ಲಿ ಹಣ ಪಡೆದಿದ್ದಾರೆ. ತಾವು ಇದಕ್ಕೆ ನೋಟಿಫಿಕೇಷನ್ ಕ್ಯಾನ್ಸಲ್ ಮಾಡಿ......

(ಗೊಂದಲ)

ಈ ಸರ್ಕಾರಕ್ಕೆ ಎಲ್ಲಿಂದ ಒತ್ತಾಯ ಬಂದಿದೆ ? ಇನ್ನು ೬ ತಿಂಗಳಲ್ಲಿ ಈ ನೋಟಿಫಿಕೇಷನ್ ಕೊಡೋದಿಲ್ಲ ಎಂದು ಒಂದು ಮಾತು ಹೇಳಿದರೆ......

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ, ಏನೆಂದರೆ. ಮಾನ್ಯ ಸದಸ್ಯರು ಮಾತನಾಡುತ್ತಾ ಸರ್ಕಾರದವರು ಈ ವಿಷಯದಲ್ಲಿ ನೋಟಿಫಿಕೇಷನ್ ತೆಗೆಯುವುದರಲ್ಲಿ ಹಣವನ್ನು ತಿಂದಿದ್ದಾರೆ, ಎತ್ತಿಹಾಕಿದ್ದಾರೆಂದು ಆಪಾದನೆ ಮಾಡಿದ್ದಾರೆ, ಈ ಆಪಾದನೆ ನಿಜವಾಗಿದ್ದರೆ ಅದಕ್ಕೆ ಸಂಬಂಧಪಟ್ಟವರಾಗಲೀ ಅಥವಾ ಇಡೀ ಸರ್ಕಾರ ಆಗಿದ್ದರೆ ಈ ಸರ್ಕಾರ ಅಧಿಕಾರದಲ್ಲಿ ಇರುವುದಕ್ಕೆ ಲಾಯಕ್ಕಿಲ್ಲ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಆರೋಪವನ್ನು ಮಾಡುವಾಗ ತಮ್ಮ ಹೊಣೆಗಾರಿಕೆಯನ್ನು ಅರಿತು ಮಾಡಬೇಕಾಗುತ್ತದೆ. ಅವರು ತಮ್ಮ ಹೊಣೆಗಾರಿಕೆಯಲ್ಲಿ ವಿಫಲರಾದರೆ ಎವಿಡೆನ್ಸ್ ಕೊಡುವುದಕ್ಕೆ ತಪ್ಪಿದರೆ ಅವರು ನಿಜಕ್ಕೂ ತಮ್ಮ ಸದಸ್ಯತ್ವದ ಹೊಣೆಗಾರಿಕೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಉಪಾಧ್ಯಕ್ಷರು ಅನೇಕ ಸಲ ಹೇಳಿದರು, ಬರೆದು ಕಳುಹಿಸಿ ಎಂದು. ಆದರೂ ಕೂಡಾ ಅವರು ಜವಾಬ್ದಾರಿ ಅರಿತೇ ಹಣವನ್ನು ತೆಗೆದುಕೊಂಡಿದ್ದಾರೆ. ನನಗೆ ಗೊತ್ತಿದೆ, ಹೆಸರನ್ನು ಹೇಳಿ ಎಂದರೆ ಹೇಳುತ್ತೇನೆಂದು ಹೇಳಿದ್ದಾರೆ. ಇದು ರೆಕಾರ್ಡ್‌ನಲ್ಲಿ ಹೋಗಿದೆ. ಇದು ಗೊತ್ತಿದ್ದೂ ಹೇಳದೇ ಇದ್ದರೆ ಅಕ್ಷಮ್ಯ ಅಪರಾಧವಾಗುತ್ತದೆ. ಈ ಸದನದ ಸದಸ್ಯರೆಲ್ಲರೂ ಗೌರವಾನ್ವಿತರು. ಈ ಗೌರವಾನ್ವಿತ ಸದಸ್ಯರು ಸರ್ಕಾರದ ವಿಚಾರದಲ್ಲಿ ಆಗಲಿ, ಸಾರ್ವಜನಿಕರ ವಿಚಾರದಲ್ಲಿ ಆಗಲಿ ಲಂಚದ ವಿವರಣೆ ತಮಗೆ ತಿಳಿದಾಗ ಅದನ್ನು ಈ ಸದನದ ಎದುರಿಗೆ ಸ್ಪಷ್ಟಪಡಿಸುವುದು ಅತ್ಯಂತ ಅವಶ್ಯಕ. ಆ ರೀತಿಯಲ್ಲಿ ಅವರು ಸ್ಪಷ್ಟಪಡಿಸಬೇಕಾಗುತ್ತದೆ. ಸರ್ಕಾರ ಎಂದರೆ ಎಲ್ಲಾ ಮಂತ್ರಿಗಳು ಒಳಗೊಂಡಿರುತ್ತಾರೆ. ಇದರಿಂದ ಎಲ್ಲಾ ಮಂತ್ರಿಗಳು ಅಪಾದನೆ ಅಂಶವನ್ನು ಹೊತ್ತಂತಾಗುತ್ತದೆಂದು ಹೇಳುತ್ತೇನೆ. ಇವತ್ತು ಮಾನ್ಯ ಸದಸ್ಯರು ಸ್ಪಷ್ಟವಾದ ನಿಲುವನ್ನು ವ್ಯಕ್ತ ಮಾಡಬೇಕು. ಯಾರು ತಪ್ಪು ಮಾಡಿದ್ದಾರೆಂದು ಹೇಳಬೇಕು. ಮತ್ತು ಅದನ್ನು ಸಾಬೀತು ಮಾಡುವುದಕ್ಕೆ ಅವರು ತಯಾರು ಇರಬೇಕಾಗುತ್ತದೆ. ಇಲ್ಲದಿದ್ದರೆ ಇಂತಹ ವಿಷಯಗಳನ್ನು ಅವರು ಎತ್ತಬಾರದು. ಒಂದು

ವೇಳೆ ಅವರಲ್ಲಿ ಅದು ಯಾವುದೂ ಇಲ್ಲದಿದ್ದರೆ ಮೊದಲನೇ ಸಲ ಇದನ್ನು ಅವರು ಎತ್ತಿರುವುದರಿಂದ ತಾವು ಕಡತದಿಂದ ಸಂಪೂರ್ಣವಾಗಿ ಅದನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಕೆ. ಹೆಚ್. ಪಾಟೀಲರು ಬಹಳ ಮಹತ್ತರವಾದ ವಿಚಾರವನ್ನು ಹೇಳಿದ್ದಾರೆ. ಮಾನ್ಯ ವೆಂಕಟೇಶ್ ಅವರಾದರೂ ಹೇಳಿರುವುದೇನು ? ಈ ನೋಟಿಫಿಕೇಷನ್ ಏನು ಆಗಿದೆ, ಅದರ ಹಿಂದೆ ಅನೇಕ ಇಂಟೆಂಷನ್ಸ್ ಇದೆ ಎಂದು ಹೇಳಿದ್ದಾರೆ. ಇಂಟೆನ್‌ಷನ್ಸ್ ಎಂದರೆ ಬ್ಯಾಡ್ ಇಂಟೆಂಷನ್ಸ್, ಮೋಟಿವೇಷನ್ಸ್......

ಶ್ರೀ ಕೆ. ಹೆಚ್. ಪಾಟೀಲ್.—ಬ್ಯಾಗ್ ಒಳಗೆ ಕ್ಯಾರಿ ಮಾಡಿದ್ದಾರೆಂದು ಹೇಳಿದರು,

ಶ್ರೀ ಪಿ. ಜಿ. ಆರ್. ಸಿಂಧ್ಯ.—ಏನು ಮಾತನಾಡಿದ್ದಾರೆಂದು ರೆಕಾರ್ಡ್ಸ್‌ನಲ್ಲಿ ಇದೆ. ನಾವೂ ಕೂಡಾ ಕೇಳಿಸಿಕೊಂಡಿದ್ದೇವೆ. ಅದರ ಬಗ್ಗೆ ವಿವರಣೆಗೆ ಹೋಗುವುದಿಲ್ಲ. ನಾನು ಹೇಳುವುದು ಏನು? ಇವತ್ತು ಈ ನೋಟಿಫಿಕೇಷನ್ ಮಾಡಿರತಕ್ಕ ವಿಚಾರದಲ್ಲಿ ಜನರು ಬಹಳ ಲಘುವಾಗಿ ಮಾತನಾಡುತ್ತಿದ್ದಾರೆ. ಅದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ, ನಾನು ಈ ಬೇಡಿಕೆ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ತಾವು ಇರಲಿಲ್ಲ. ಮಾನ್ಯ ಮಂತ್ರಿಗಳಿದ್ದರು, ನಾನು ಏನು ಹೇಳಿದೆ ? ಇದಕ್ಕೆ ಸದನ ಸಮಿತಿ ಮಾಡಿ, ಈ ನೋಟಿಫಿಕೇಷನ್ ಏನು ಇದೆ ಅದನ್ನು ಇಂಪ್ಲಿಮೆಂಟ್ ಮಾಡಬೇಡಿ, ವಿತ್‌ಹೆಲ್ಡ್ ಮಾಡಿ ಎಂದು ಹೇಳಿದೆ ಹೆಚ್ಚು ಕಡಿಮೆ ಇನ್ನೂ ಒಂದು ತಿಂಗಳು ಎಂದರೆ ಜುಲೈ ೧೪ರವರೆಗೆ ಈ ಸದನ ಇರುತ್ತದೆ. ಅಷ್ಟರೊಳಗೆ ನಮ್ಮ ಸದನದ ಸಮಿತಿ ಇದರ ರೆಕಾರ್ಡ್ಸ್ ಇಂಟೆನ್‌ಷನ್ ಎಲ್ಲ ನೋಡಿ ತನ್ನ ತೀರ್ಮಾನವನ್ನು ಕೊಡಲಿ.

ಆ ಉತ್ತರವನ್ನು ಸರ್ಕಾರದಿಂದ ನಾವು ನಿರೀಕ್ಷೆ ಮಾಡುತ್ತೇವೆ. ವೆಂಕಟೇಶ್ ಅವರಿಗೆ ಇರತಕ್ಕ ನೋವೇನಿದೆ ? ನಮ್ಮ ಸರ್ಕಾರದ, ನಮ್ಮ ರಾಜ್ಯದ ನಿಸರ್ಗ ಸಂಪತ್ತು ಲೂಟಿಯಾಗುತ್ತಿದೆ ಎಂದು ಮಾತನಾಡುತ್ತಿರತಕ್ಕದ್ದು ನಿಜ. ಇದರಲ್ಲಿ ಯಾವುದೇ ರೀತಿಯ ಸಂಶಯ ಇಟ್ಟುಕೊಳ್ಳಬೇಡಿ. ನಾವು ವಿರೋಧಪಕ್ಷದವರು ಯಾವರೀತಿಯಿಂದ ಸೂಟ್‌ಕೇಸ್ ಬಂತು, ಹೇಗೆ ಹೋಯಿತು ಅದನ್ನೆಲ್ಲಾ ಪ್ರೂವ್ ಮಾಡುವುದು ಕಷ್ಟ ಇದೆಯೆಂಬುದು ತಮಗೆಲ್ಲಾ ಗೊತ್ತಿರುವ ವಿಚಾರ. ಸದನದ ಸಮಿತಿ ಮಾಡಿ ಆಗ ತಮಗೆ ಗೊತ್ತಾಗುತ್ತದೆ. ಅದನ್ನೇ ನಾನು ಸರ್ಕಾರವನ್ನು ಒತ್ತಾಯ ಮಾಡತಕ್ಕದ್ದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ವೆಂಕಟೇಶ್ ಅವರು ಮಾತನಾಡಿದ್ದಾರೆ. ಇಲ್ಲಿ ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಬೇಕು ಎಂದು ಮಾನ್ಯ ಹಿರಿಯ ಸಚಿವರು ಹೇಳಿದ್ದಾರೆ. ನಿಜ. ಈ ಸಭೆಯಲ್ಲಿ ಪ್ರತಿಯೊಂದನ್ನು ಹೇಳುವಾಗಲೂ ನಾವು ಎಲ್ಲ ಡಾಕ್ಯುಮೆಂಟ್ಸನ್ನು ಇಟ್ಟುಕೊಂಡು ನ್ಯಾಯಾಲಯದ ತರಹ......

ಶ್ರೀ ಕೆ.ಎಚ್. ಪಾಟೀಲ್.—ನಾನು ಹೇಳಿಲ್ಲ ಡಾಕ್ಯುಮೆಂಟ್ಸ್ ತರಬೇಕೆಂದು.

ಶ್ರೀ ವಾಟಾಳ್ ನಾಗರಾಜ್.—ಆ ಪರಿಸ್ಥಿತಿ ಸಹ ಬರುತ್ತದೆ. ಈ ಸಭೆ ಒಳ್ಳೆಯ ಸಾರ್ವಭೌಮತ್ವದ ಸಭೆ. ಇದಕ್ಕೆ ಬಹಳ ಜವಾಬ್ದಾರಿ ಇದೆ. ಒಬ್ಬ ಸದಸ್ಯನಾಗಿ ಇಲ್ಲಿಗೆ ಬಂದಿರುವವರಿಗೂ ಜವಾಬ್ದಾರಿ ಇದೆ. ಕಲ್ಲಿನ ಬಗ್ಗೆ ಅವರು ಮಾತನಾಡಿರಬಹುದು. ನಾವೂ ಪ್ರಾಮಾಣಿಕವಾದ ಅಭಿಪ್ರಾಯವನ್ನು ಹೇಳಿದ್ದೇವೆ. ನಾನಾಗಲೀ, ಸಿಂಧ್ಯಾ ಅವರಿಗಾಗಲೀ, ರೈತ ಸಂಘದವರಿಗಾಗಲೀ ಒಂದು ನಿರ್ಧಾರ ಇದೆ. ಕಲ್ಲನ್ನು ತೆಗೆಯಲೇಬಾರದು ಎಂಬುದು ನಮ್ಮ ನಿರ್ಧಾರ. ಇದಕ್ಕೆ ಅನುಮತಿ ಕೊಡಲೇಬಾರದು ಎಂಬುದು ೧೦೦ಕ್ಕೆ ೧೦೦ರಷ್ಟು ನಮ್ಮ ಅಭಿಪ್ರಾಯ. ಇವತ್ತು ತರಾತುರಿಯಿಂದ ಸರ್ಕಾರಕ್ಕೆ ೨೦ಕೋಟಿ ರೂಪಾಯಿ ಆದಾಯ ಬರುತ್ತದೆಂದು ಅವರು ಹೇಳುತ್ತಿದ್ದಾರೆ. ನಾನು ೧೦೦೦ ಕೋಟಿ ರೂಪಾಯಿ ಬರುತ್ತದೆಂದು ಹೇಳುತ್ತಿದ್ದೇನೆ. ಕೇವಲ ೨೦ ಕೋಟಿ ರೂಪಾಯಿನ ಆಸೆಗೆ ನೀವು ಈ ಅಮೂಲ್ಯವಾದ ಕಲ್ಲುಗಳನ್ನು ಕೊಡುತ್ತಿದ್ದೀರಿ. ನಾವೆಲ್ಲಾ ಏನು ಹೇಳುತ್ತೇವೆ ಎಂದರೆ ಕಲ್ಲನ್ನು ಕೊಡಲೇಬಾರದು ಎಂದು ಸಮಗ್ರವಾಗಿ ರಾಷ್ಟ್ರೀಕರಣ ಆಗಬೇಕು, ನಿಸರ್ಗಸಂಪತ್ತು ಉಳಿಯಬೇಕು ಎಂಬುದು ನಮ್ಮ ಅಭಿಪ್ರಾಯ. ತಮ್ಮ ಮನಸ್ಸಿನಲ್ಲೂ ಬಹುಶಃ ಅದೇ ಇದೆ ಎಂದು ತಿಳಿದುಕೊಂಡಿದ್ದೇನೆ.

ಉಪಾಧ್ಯಕ್ಷರು.—ನೀವು ಭಾಷಣವನ್ನೇ ಷುರು ಮಾಡುತ್ತಿದ್ದೀರಲ್ಲ,

ಶ್ರೀ ವಾಟಾಳ್ ನಾಗರಾಜ್.—ಮುಂದೆ ಮಾತನಾಡುತ್ತೇನೆ. ತಮಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ತರಾತುರಿಯಿಂದ ಈ ಸರ್ಕಾರಿ ಆಜ್ಞೆ ಬರುವುದರ ಹಿಂದೆ ಏನಿರಬಹುದು ಎಂಬ ವಿಚಾರವನ್ನು ವೆಂಕಟೇಶ್ ಅವರು ಹೇಳುತ್ತಿದ್ದಾರೆ, ನಿಜ, ಸೂಟ್‌ಕೇಸ್ ಎಂದರೆ ಏನು? ದೇಶದಲ್ಲಿ ಇಲ್ಲವೆ ಅದು ? ಸರ್ಕಾರಗಳನ್ನು ಉರುಳಿಸುವುದಕ್ಕೆ ಸೂಟ್‌ಕೇಸ್ ಉಪಯೋಗಿಸಿಲ್ಲವೇ ?

ಒಬ್ಬೊಬ್ಬ ಸದಸ್ಯರನ್ನು ಕೊಂಡುಕೊಳ್ಳುವುದಕ್ಕೆ ಇದೇ ಸದನದಲ್ಲಿ ಎರಡು ಲಕ್ಷ ರೂಪಾಯಿ ಕೊಟ್ಟ ವಿಚಾರ ಚರ್ಚೆಗೆ ಬರಲಿಲ್ಲವೇನು ? ಈ ಸಭೆಗೆ ಎರಡು ಲಕ್ಷದ ಕಂತೆ ತರಲಿಲ್ಲವೇನು ?

(ಗೊಂದಲ)

ಉಪಾಧ್ಯಕ್ಷರು.—ಇದು ಯಾವ ಕ್ರಿಯಾಲೋಪಾರಿ ?

ಶ್ರೀ ವಾಟಾಳ್ ನಾಗರಾಜ್.—ಅದು ಗೊತ್ತಿದೆ. ವೆಂಕಟೇಶ್ ಅವರಿಗೆ ಮಾತನಾಡುವುದಕ್ಕೆ ಹೇಳಿ.

ಉಪಾಧ್ಯಕ್ಷರು.—ಎಲ್ಲರೂ ಮಾತನಾಡಿದ್ದೀರಿ. ದಯವಿಟ್ಟು ಈಗ ಕುಳಿತುಕೊಳ್ಳಬೇಕು.

ಶ್ರೀ ಎಂ.ಪಿ.ವೆಂಕಟೇಶ್.— ಸಚಿವರು ಅನೇಕ ಬಾರಿ ಶಾಸನಸಭೆಯಲ್ಲಿ ಹೇಳಿದ್ದಾರೆ.

ಶ್ರೀ ಕರಿಯಣ್ಣ.—ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ.

ಉಪಾಧ್ಯಕ್ಷರು.—ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ತಾವುಕುಳಿತುಕೊಳ್ಳಿ.

ಶ್ರೀ ಎಂ.ಪಿ.ವೆಂಕಟೇಶ್.—ಅವರದಾಯಿತು. ಇವರದಾಯಿತು......

ಶ್ರೀ ಕರಿಯಣ್ಣ.—ಉಪಾಧ್ಯಕ್ಷರೆ. ತಾವು ಹೇಳಿದ್ದೀರಿ ಸ್ಪಷ್ಟವಾಗಿ ಬರೆದುಕೊಡಬೇಕು ಎಂದು.

ಶ್ರೀ ವಾಟಾಳ್ ನಾಗರಾಜ್.—ಇದು ಪೋಲೀಸ್ ಸ್ಟೇಷನ್ ಅಲ್ಲ.

ಶ್ರೀ ಕರಿಯಣ್ಣ.—ಅಧ್ಯಕ್ಷರು ನನಗೆ ಕಾಲಾವಕಾಶ ಕೊಟ್ಟಿದ್ದಾರೆ. ನಾನು ಮಾತನಾಡುವುದು ಬೇಡವೆ? ಪ್ರತಿಸಾರಿ ನೀವೇ ಮಾತನಾಡುತ್ತೀರಿ. ತಾವು ಕೂತ್ಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಉಪಾಧ್ಯಕ್ಷರೆ. ಕೂತ್ಕೊಳ್ಳಿ ಅಂತ ನೀವು ಹೇಳಬೇಕೋ. ಅಥವಾ ಅವರು ಹೇಳಬೇಕೋ?

ಉಪಾಧ್ಯಕ್ಷರು.—ನಾನು ಹೇಳುತ್ತಿದ್ದೇನೆ ಕೂತ್ಕೊಳ್ಳಿ.

ಶ್ರೀ ಕರಿಯಣ್ಣ.—ತಾವು ಅನೇಕ ಸಾರಿ ಸದಸ್ಯರಿಗೆ ಹೇಳಿದ್ದೀರಿ.
ವಿರೋಧಪಕ್ಷದ ಉಪನಾಯಕರೂ ಕೂಡ ತಮಗೆ ಬರವಣಿಗೆಯಲ್ಲಿ ಬರೆದುಕೊಟ್ಟು ನಂತರ ಹೇಳಬೇಕು ಎಂದು ಹೇಳಿದರೂ ಮೇಲಿಂದ ಮೇಲೆ ಮಾನ್ಯ ಸದಸ್ಯರು ಸರ್ಕಾರದವರು ಹಣ ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಹಣ ತೆಗೆದುಕೊಂಡಿದ್ದಾರೆ ಎಂದು ಹೇಳಿರತಕ್ಕದ್ದನ್ನು ತಾವು ಕಡತದಿಂದ ತೆಗೆದುಹಾಕಬೇಕು.

ಒಬ್ಬ ಮಾನ್ಯ ಸದಸ್ಯರು.—ಅವರು ಹೇಳಿದ್ದಾರೆ. ಅದು ರೆಕಾರ್ಡ್‌ನಲ್ಲಿದೆ.

ಉಪಾಧ್ಯಕ್ಷರು.—ಯಾವುದೇ ಅಲಿಗೇಷನ್ ಮಾಡಬೇಕಾದರೂ You should give me notice and then make the allegations......

ಶ್ರೀ ವಾಟಾಳ್ ನಾಗರಾಜ್.—ಹಾಗಿದ್ದರೆ ಇವರು ಆಯೋಗ ರಚನೆ ಮಾಡುತ್ತಾರಾ? ಸದನದ ಸಮಿತಿ ಮಾಡಲಿ. ಪ್ರತಿಯೊಂದನ್ನೂ ನಾವು ಕೊಡುತ್ತೇವೆ. ಸರ್ಕಾರಕ್ಕೆ ತಾಕತ್ತು ಇದೆಯೆ? ಧೈರ್ಯ ಇದೆಯೋ ಹೇಳಲಿ.

ಶ್ರೀ ಎಂ. ಪಿ. ವೆಂಕಟೇಶ್.—ನಾವು ಹೊಸದಾಗಿ ಬಂದವರೆಂದು ಅಧ್ಯಕ್ಷರು ಹಲವಾರು ಬಾರಿ ಹೇಳಿದ್ದಾರೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮಾತ್ರ ಕೆಲವು ವಿಷಯಗಳನ್ನು ಹೇಳಿ ಬಾಕಿಯುದನ್ನು ಬಡ್ಜೆಟ್ ಭಾಷಣವನ್ನು ಮುಂದೆ ಮಾಡುವಾಗ ಹೇಳುತ್ತೇನೆ, ಹೆಗ್ಗಡ ದೇವನ ಕೋಟೆಗೆ ಸೇರಿದಂತಹ ನನ್ನ ಕ್ಷೇತ್ರದ ಒಂದು ಇಲಾಖೆಗೆ ೩೧ನೇ ತಾರೀಖಿನವರೆಗೆ ಒಬ್ಬ ಅಧಿಕಾರಿಯನ್ನೂ ವರ್ಗ ಮಾಡಿರಲಿಲ್ಲ. ಆದರೆ ಇವತ್ತು ೩೧ನೇ ತಾರೀಖಿನ ಡೇಟ್ ಹಾಕಿ ಅಲ್ಲಿಗೆ ಒಬ್ಬ ಅಧಿಕಾರಿಯನ್ನು ವರ್ಗ ಮಾಡಿದ್ದಾರೆ. ೩೧ನೇ ತಾರೀಖು ಎಲ್ಲಿ ಇದೆ ಇವತ್ತು ೧೮ ನೇ ತಾರೀಖಾಗಿದೆ. ಈ ರೀತಿ ಮಾಡಿದರೆ ಯಾವ ತರಹದಲ್ಲಿ ಹೇಳಬೇಕು. ಶಾಮೀಲಾಗಿದ್ದಾರೆಂದು ಹೇಳಬೇಕೇ ಅಥವಾ ಇನ್ನಾವ ಭಾಷೆಯಲ್ಲಿ ಹೇಳಬೇಕು.

ಶ್ರೀ ಕೆ.ಹೆಚ್. ಪಾಟೀಲ್.—ಈಗಲೂ ವರ್ಗ ಮಾಡುತ್ತೇವೆ ಅದು ನಿಮ್ಮದಲ್ಲ. ಆ ನಿಯಮ ನಮಗೆ.

ಶ್ರೀ ಎಂ. ಪಿ. ವೆಂಕಟೇಶ್.—೩೧ನೇ ತಾರೀಖು ಎಂದು ಕಟ್ಟು ಪಾಡು ಏಕೆ ಮಾಡಿದ್ದೀರಿ,

ಶ್ರೀ ಕೆ. ಹೆಚ್. ಪಾಟೀಲ್,—ನಾಳೆ ಬೆಳಿಗ್ಗೆ ಕೂಡ ಮಾಡುತ್ತೇವೆ. ಅಲ್ಲಿರುವ ಅಧಿಕಾರಿ ಅಯೋಗ್ಯ ಇದ್ದರೆ ನಾಳೆಯೇ ವರ್ಗ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಆಡಳಿತದ ಬಗ್ಗೆ ಈ. ಸಭೆಯಲ್ಲಿ ಚರ್ಚೆ ಮಾಡುವುದು ಸರಿಯಲ್ಲ.

ಉಪಾಧ್ಯಕ್ಷರು.—ವರ್ಗಾವಣೆಗಳ ಬಗ್ಗೆ ಆಗಲೇ ರೂಲಿಂಗ್ ಕೊಟ್ಟಿದೆ. ಅದನ್ನು ಮತ್ತೆ ಹೇಳುವುದರಲ್ಲಿ ಅರ್ಥವಿಲ್ಲ. ಮಾನ್ಯ ವೆಂಕಟೇಶ್‌ರವರೇ, ತಾವು ಮಾತನಾಡುವ ಸಮಯ ಮುಗಿಯಿತು. ೫-೪೫ ಕ್ಕೆ ಪ್ರಾರಂಭ ಮಾಡಿದ್ದೀರಿ.

ಶ್ರೀ ಎಂ.ಪಿ. ವೆಂಕಟೇಶ್.—ನಾನು ಮಾತನಾಡಲು ಪ್ರಾರಂಭ ಮಾಡಿ ಹತ್ತು ನಿಮಿಷ ಕೂಡ ಆಗಿಲ್ಲ.

ಉಪಾಧ್ಯಕ್ಷರು.—ಹತ್ತು ನಿಮಿಷ ಕೊಡುವುದಕ್ಕಾಗುವುದಿಲ್ಲ. ಜಾಗ್ರತೆ ಮುಗಿಸಿ,

ಶ್ರೀ ಎಂ. ಪಿ. ವೆಂಕಟೇಶ್.—೧೯೭೮ ನೇ ಇಸವಿಯಲ್ಲಿ ಚಾಮರಾಜನಗರದಲ್ಲಿರುವ ಒಂದು ಸಂಸ್ಥೆಗೆ ನಾನು ಸಂಬಂಧಪಟ್ಟವನಾಗಿದೆ ಈ ಕ್ವಾರಿಗಳ ಮಾಲೀಕರೆಲ್ಲರೂ ಸೇರಿ ಒಂದು ಸಭೆ ಕರೆದು ಈ ಒಂದು ವಿಚಾರದ ಬಗ್ಗೆ ಚರ್ಚೆ ಮಾಡಿದರು. ಈ ತರಹದ ನೋಟಿಫಿಕೇಷನ್ ಮಾಡಬೇಕಾದರೆ ಮೊದಲನೆಯದಾಗಿ ೫ ಲಕ್ಷ ರೂಪಾಯಿಗಳನ್ನು ನಾವು ಕೊಡಬೇಕು, ಮಂಜೂರಾತಿಯಾದ ಮೇಲೆ ಮತ್ತು ೨೫ ಲಕ್ಷ ರೂಪಾಯಿ ಕೊಡಬೇಕೆಂದು ಅಲ್ಲಿ ಹೇಳಿದರು. ಅವರು ಯಾರು ಎಂದು ನಾನು ಹೇಳುವುದಿಲ್ಲ. ನಾನೂ ಕೂಡ ಅಲ್ಲಿಯೇ ಇದ್ದೆ. ಅಲ್ಲಿ ಆಗಿದ್ದನ್ನು ಹೇಳುತ್ತಿದ್ದೇನೆ ನಾನೂ ಸಹ ಈ ಚರ್ಚೆಯಲ್ಲಿ ಭಾಗವಹಿಸಿದ್ದೆ.

(ಗೊಂದಲ)

ಶ್ರೀ ಬಿ.ಕೆ. ಶಿವಕುಮಾರ್.—ಇದರಲ್ಲಿ ಅವರೂ ಕೂಡ ಸೇರಿಕೊಂಡಿದ್ದಾರೆ, ಶಾಮೀಲಾಗಿದ್ದಾರೆ.

(ಗೊಂದಲ)

ಶ್ರೀ ಎಂ. ಪಿ.—ವೆಂಕಟೇಶ್.—ನಾವು ಇಲಿಗಳು ಅಲ್ಲ ಹುಲಿಗಳು.

(ಗೊಂದಲ)

ಉಪಾಧ್ಯಕ್ಷರು,—ಈಗ ವಿದ್ಯಾಮಂತ್ರಿಗಳು ಏನೋ ಹೇಳುತ್ತಾರೆ. ತಾವೆಲ್ಲರೂ ಕುಳಿತುಕೊಳ್ಳಿ

ಶ್ರೀ ಕೆ.ಹೆಚ್, ರಂಗನಾಥ್.—ಮಾನ್ಯ ಸದಸ್ಯರು ಏನಾದರು ಈ ಸಭೆಯಲ್ಲಿ ಹೇಳುವುದಕ್ಕೆ ಅವರಿಗೆ ಹಕ್ಕು ಇದೆ. ಆದರೆ ಹೇಳುವುದಕ್ಕೆ ಒಂದು ಪ್ರೊಸೀಜರ್ ಇದೆ. ಆದರೆ ಅವರು 5 ಲಕ್ಷ ರೂಪಾಯಿ, ನೋಟಿಫಿಕೇಷನ್ ಎಂದು ಹೇಳುತ್ತಿದ್ದಾರೆ, ಆದರೆ ಯಾರು ಏನು ಎಂದು ಹೇಳಲಿಲ್ಲ. ಅವರು ತಮಗೆ ನೋಟೀಸ್ ಕೊಡಬೇಕು. ಆಗ ತಾವು ಆ ಸದಸ್ಯರನ್ನು ಕುರಿತು ನಿಮ್ಮ ಮೇಲೆ ನೋಟೀಸ್ ಕೊಟ್ಟಿದ್ದಾರೆ ನೀವು ಅದನ್ನು ಸಮರ್ಥನೆ ಮಾಡಿಕೊಳ್ಳುತ್ತೀರಾ ಎಂದು ಆ ಸದಸ್ಯರನ್ನು ಕೇಳಬೇಕಾಗುತ್ತದೆ. ಈಗ ಪ್ರಶ್ನೆ ಎತ್ತಿರತಕ್ಕಂತಹ ಸದಸ್ಯರು ಬಹಳ ಯುವಕರಿದ್ದಾರೆ. ಅವರ ಗಂಟಲು ಜಬರ್‌ದಸ್ತಾಗಿದೆ. ಗಂಟಲು ಚೆನ್ನಾಗಿ ಇದೆ. ನಾವು ಧಡೂತಿಯಿಂದ ಇದ್ದೇವೆಂದು ನಮ್ಮಂತಹ ಬಡಪಾಯಿಯನ್ನು ಕೂರಿಸಿದರೆ ಆಗುತ್ತದೆಯೆ ? ದಯವಿಟ್ಟು ಅವರು ಬರೆದು ಕಳಿಸಬೇಕು. ಅದನ್ನು ಬಿಟ್ಟು ನೀವು ಈ ರೀತಿ ಏನೋ ಒಂದು ಹೇಳಿದರೆ ಇಲ್ಲಿರುವ ವರದಿಗಾರರು ಬರೆದುಕೊಳ್ಳುವುದು ಕಷ್ಟವಾಗುತ್ತದೆ. ನೀವು ಈ ರೀತಿ ಹೇಳಿದರೆ ಅವರು ಏನೆಂದು ಬರೆದುಕೊಳ್ಳಬೇಕು ಅವರು ಏನೋ ಒಂದು ಎಂದು ಬರೆದುಕೊಳ್ಳುತ್ತಾರೆ. ನಿಯಮಾವಳಿಯನ್ನು ನಾವೆಲ್ಲರೂ ಕೂಡ ಪಾಲನೆ ಮಾಡತಕ್ಕಂಥಾದ್ದು ಒಳ್ಳೆಯದು. ಮಾನ್ಯ ಸದಸ್ಯರಿಗೆ ತಾವು ಆ ರೀತಿಯ ಆದೇಶವನ್ನು ಕೊಡಬೇಕೆಂದು ನನ್ನ ವಿನಂತಿ.

ಉಪಾಧ್ಯಕ್ಷರು.—ಆಗಿನಿಂದ ೨-೩ ಸಲ ಹೇಳಿದ್ದಾಯಿತು. ಇದರ ಬಗ್ಗೆ ನಿಮ್ಮಲ್ಲಿ ವಿವರಗಳು ಇದ್ದರೆ ನೋಟೀಸ್ ಕೊಡಿ ಮುಂದೆ ಆ ಬಗ್ಗೆ ವಿಚಾರ ಮಾಡೋಣ, ಮತ್ತೆ ಮತ್ತೆ ಅದೇ ವಿಷಯವನ್ನು ಎತ್ತಿ ಮಾತನಾಡುತ್ತಿದ್ದೀರೀ. ಅದು ಸರಿಯಲ್ಲ, ಬೇಡಿಕೆ ಬಗ್ಗೆ ಸಾಕಷ್ಟು ಸಮಯವನ್ನು ತೆಗೆದುಕೊಂಡು ಮಾತನಾಡಿದ್ದೀರಿ. ಈಗ ನಿಮ್ಮದು ಮುಗಿದಿದೆ ಎಂದು ತಿಳಿದುಕೊಂಡು ಮುಂದಿನ ಹೆಜ್ಜೆಗೆ ಹೋಗುತ್ತೇನೆ. ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡಬೇಕು.

ಶ್ರೀ ಎಂ. ಪಿ. ವೆಂಕಟೇಶ್.—೫ ನಿಮಿಷ ಮತ್ತೆ ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ.

ಉಪಾಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳು ಬೇಡಿಕೆ ಮೇಲಿನ ಚರ್ಚೆಗೆ ಉತ್ತರ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:–ಬೆಳಿಗ್ಗೆ ೧೧ಗಂಟೆಯಿಂದ ಕುಳಿತಿದ್ದೇವೆ. ಮಧ್ಯಾಹ್ನ ಊಟ ಸಹ ಮಾಡಲಿಲ್ಲ. ಸಚಿವರು ಒಂದುಗಂಟೆಕಾಲ ಉತ್ತರ ಕೊಟ್ಟು ನಂತರ ಕ್ಲಾರಿಫಿಕೇಶನ್ ಕೇಳಬೇಕು ಎಂದರೆ ಬಹಳಷ್ಟು ವೇಳೆಯಾಗುತ್ತದೆ, ರಾತ್ರಿ ಒಂಭತ್ತು ಗಂಟೆಯವರೆಗೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಾವು ನೀವು ಹಿಂದೆ ಕೂಡಿ ೬–೭ ವರ್ಷಗಳ ಕಾಲ ಕೆಲಸ ಮಾಡಿದ್ದೇವೆ. ಮುಂಜಾನೆ ಎಂಟು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೆ ನಾವು ವಿರೋಧಪಕ್ಷದಲ್ಲಿದ್ದಾಗ ಸಭೆ ನಡೆಯಲಿಕ್ಕೆ ನಿಮಗೆ ಅನುಕೂಲ ಮಾಡಿಕೊಟ್ಟಿದ್ದೇವೆ. ಈಗ ಮಂತ್ರಿಗಳಿಗೆ ಉತ್ತರ ಕೊಡಲಿಕ್ಕೆ ಒಂದು ಗಂಟೆ ಬೇಕಾಗಬಹುದು ಅಷ್ಟೆ.

ಉಪಾಧ್ಯಕ್ಷರು.—ಅವರು ನಾಳೆ ದಿವಸ ಪರದೇಶಕ್ಕೆ ಹೋಗುತ್ತಿರುವುದರಿಂದ ಹಾಗೂ ಈ ಒಂದು ದೃಷ್ಟಿಯಿಂದ ಈ ಬೇಡಿಕೆಗಳನ್ನು ಇಂದೇ ಮುಗಿಸಿಬಿಡೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ.—ಬೆಳಿಗ್ಗೆ ೧೧ ಗಂಟೆಯಿಂದ ರಾತ್ರಿ ಏಳು ಗಂಟೆವರೆಗೆ ಕುಳಿತುಕೊಳ್ಳುವ ಮಹತ್ವ ಏನಿದೆ? ಬೆಳಿಗ್ಗೆ ಒಂಭತು ಗಂಟೆಗೆ ಬೇಕಾದರೆ ಸೇರೋಣ.

ಉಪಾಧ್ಯಕ್ಷರು.—ಸಭೆ ಒಪ್ಪಿಕೊಂಡರೆ ಆಗಬಹುದು...

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಕೆಲವೊಮ್ಮೆ ನಾವು ರಾತ್ರಿ ೧೧ ಗಂಟೆಯವರೆಗೂ ಕುಳಿತುಕೊಂಡಿದ್ದೇವೆ. ಮಂತ್ರಿಗಳು ನಾಳೆ ವಿದೇಶಕ್ಕೆ ಹೋಗುತ್ತಿದ್ದಾರೆ. ಅವರಿಗೊಬ್ಬರಿಗೆ ಮಾತ್ರ ಅವಕಾಶ ಕೊಡೋಣ.

(ಗೊಂದಲ)

ಉಪಾಧ್ಯಕ್ಷರು.—ಈಗ ಸಭೆಯು ಮುಂದೂಡಲ್ಪಟ್ಟಿದ್ದು ನಾಳೆ ಬೆಳಿಗ್ಗೆ ಒಂಭತ್ತು ಗಂಟೆಗೆ ಪುನಃ ಸೇರುತ್ತದೆ.

(ಸದನವು ೬ ಗಂಟೆ ೨೨ ನಿಮಿಷಕ್ಕೆ ಮುಕ್ತಾಯವಾಗಿ, ಪುನಃ, ದಿನಾಂಕ ೧೯ನೇ ಜೂನ್ ಮಾಹೆ ೧೯೮೦ರ ಮಂಗಳವಾರದಂದು ೯ ಗಂಟೆಗೆ ಸೇರಲು ನಿಶ್ಚಯಿಸಲಾಯಿತು)

---

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.